ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ



ಪ್ರಜ್ಞಾನಂದಗೆ ಟಿಕೆಟ್

ಭಾರತದ ಗ್ರ್ಯಾಂಡ್‌ಮಾಸ್ಟರ್ ಆರ್.ಪ್ರಜ್ಞಾನಂದ ಅವರು ಮುಂದಿನ ಮಾರ್ಚ್–ಏಪ್ರಿಲ್‌ನಲ್ಲಿ ನಡೆಯಲಿರುವ ಫಿಡೆ ಕ್ಯಾಂಡಿಡೇಟ್ಸ್ ಟೂರ್ನಿಗೆ ಅರ್ಹತೆ ಪಡೆದಿದ್ದಾರೆ



ಪ್ರತಿಭಟನೆ

ಆನೆ ಸವಾರಿ ಮತ್ತು ಪ್ರಾಣಿ ಹಿಂಸೆಯನ್ನು ಖಂಡಿಸಿ ಪ್ರಾಣಿ ದಯಾ ಸಂಘ 'ಪೆಟಾ' ಬೆಂಬಲಿಗರು ಆನೆ ವೇಷ ಧರಿಸಿ ದೆಹಲಿಯಲ್ಲಿ ಪ್ರತಿಭಟನೆ ನಡೆಸಿದರು

ಸೆನ್ಸೆಕ್ಸ್ 84,666 | ನಿಫ್ಟಿ 25,839 | \$/₹ 89.87 | ಚಿನ್ನ (Std. 10g) ₹1,34,000 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1,92,000 (ಬೆಂಗಳೂರು)

ಮುಟ್ಟಿನ ರಜೆ ನಿರಾಕರಿಸಿದರೆ ದಂಡ

ಮಸೂದೆ ಸಿದ್ಧ • ಮೇ 28ಕ್ಕೆ 'ಮುಟ್ಟಿನ ನೈರ್ಮಲ್ಯ ದಿನ' ಆಚರಣೆಗೆ ನಿರ್ಧಾರ

• ರಾಜೇಶ್ ರೈ ಚಟ್ಲ

ಬೆಳಗಾವಿ (ಸುವರ್ಣ ವಿಧಾನಸೌಧ): ಸರ್ಕಾರಿ ಹಾಗೂ ಖಾಸಗಿ ಸಂಸ್ಥೆಗಳ ಮಹಿಳಾ ನೌಕರರಿಗೆ ಪ್ರತಿ ತಿಂಗಳು ಒಂದು ದಿನದ ವೇತನಸಹಿತ ಮುಟ್ಟಿನ ರಜೆ ನೀಡುವುದನ್ನು ಉದ್ದೇಶಪೂರ್ವಕವಾಗಿ ನಿರಾಕರಿಸುವ, ಮುಟ್ಟು ಆದವರನ್ನು ಕೆಟ್ಟದಾಗಿ ನಡೆಸಿಕೊಳ್ಳುವ, ತಾರತಮ್ಯ ಮಾಡುವ ಅಥವಾ ಅಸ್ಪೃಶ್ಯ ಎಂದು ಪರಿಗಣಿಸುವವರಿಗೆ ₹5 ಸಾವಿರದವರೆಗೆ ದಂಡ ವಿಧಿಸಲು ಅವಕಾಶ ಕಲ್ಪಿಸುವ ಕಾಯ್ದೆ ಜಾರಿಗೊಳಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ಈ ಉದ್ದೇಶದಿಂದ 'ಕರ್ನಾಟಕ ಮಹಿಳಾ ಯೋಗಕ್ಷೇಮ ರಜೆ ಕಾಯ್ದೆ–2025'ರ ಕರಡು ಮಸೂದೆಯನ್ನು ಸರ್ಕಾರ ಸಿದ್ಧಪಡಿಸಿದೆ. ಇಲ್ಲಿ ನಡೆಯುತ್ತಿರುವ ವಿಧಾನ ಮಂಡಲ ಅಧಿವೇಶನದಲ್ಲಿ ಈ ಮಸೂದೆ ಮಂಡನೆಯಾಗುವ ಸಾಧ್ಯತೆಯಿದೆ.

'ರಾಜ್ಯ ಸರ್ಕಾರದ ಅಧೀನದ ಶಿಕ್ಷಣ ಸಂಸ್ಥೆಗಳು, ಖಾಸಗಿ ಸಂಸ್ಥೆಗಳು ಮತ್ತು ಸೇವೆಗಳಲ್ಲಿ ತೊಡಗಿರುವ ಮಹಿಳೆಯರು ಮುಟ್ಟಾದರೆ, ಆ ಅವಧಿಯಲ್ಲಿ ಪ್ರಯೋಜನಗಳನ್ನು ಒದಗಿಸುವ ಉದ್ದೇಶದಿಂದ ಈ ಮಸೂದೆಯನ್ನು ರೂಪಿಸಲಾಗಿದೆ. ಮಸೂದೆಯ ಅನ್ವಯ ಹುಡುಗಿಯರು, ಮಹಿಳೆಯರು ಮತ್ತು ಲಿಂಗತ್ವ ಅಲ್ಪಸಂಖ್ಯಾತರು ಮುಟ್ಟಿನ ರಜೆ ಪಡೆಯಲು ಅರ್ಹರು' ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವಾಲಯದ ಮೂಲಗಳು ತಿಳಿಸಿವೆ.

ಮಹಿಳಾ ನೌಕರರಿಗೆ ತಿಂಗಳಿಗೆ ಒಂದು ಮುಟ್ಟಿನ ರಜೆಯನ್ನು ಮಂಜೂರು ಮಾಡಿ ಈಗಾಗಲೇ ಸರ್ಕಾರ ಆದೇಶ ಹೊರಡಿಸಿದೆ.

▶9



ಪ್ರಯೋಜನಗಳೇನು?

- ಸರ್ಕಾರಿ ಅಥವಾ ಯಾವುದೇ ಖಾಸಗಿ ಸಂಸ್ಥೆಯಲ್ಲಿ ಮುಟ್ಟಿನ ಸಮಯದಲ್ಲಿ ತಿಂಗಳಿಗೆ ಒಂದು ದಿನ ವೇತನ ಸಹಿತ ರಜೆ ಪಡೆಯಬಹುದು ಮತ್ತು ಕೆಲಸಕ್ಕೆ ಗೈರಾಗಬಹುದು
- ಭಾನುವಾರ ಅಥವಾ ಯಾವುದೇ ಇತರ ಸಾಮಾನ್ಯ ರಜಾ ದಿನಗಳಿದ್ದಲ್ಲಿ ಮರುದಿನ ಒಂದು ದಿನದ ಮುಟ್ಟಿನ ರಜೆ ಪಡೆಯಬಹುದು
- ಇತರ ರಜೆಗಳಲ್ಲಿ (ಸಿಎಲ್, ಇಎಲ್, ಆರ್‌ಎಸ್ ಇತ್ಯಾದಿ) ದಿನಗಳಲ್ಲಿ ಮುಟ್ಟಾದರೆ, ಯಾವುದೇ ಮುಟ್ಟಿನ ರಜೆ ಪಡೆಯಲು ಅರ್ಹತೆ ಇಲ್ಲ
- ಮುಟ್ಟಿನ ರಜೆ ಪಡೆಯಲು ಬಯಸದಿದ್ದರೆ ಮನೆಯಿಂದ ಕೆಲಸ ಮಾಡಬಹುದು. ವರ್ಷದಲ್ಲಿ ಮುಟ್ಟಿನ ರಜೆ ದಿನಗಳ ಸಂಖ್ಯೆ 12 ಮೀರಬಾರದು
- ಮುಟ್ಟಿನ ರಜೆ ಪಡೆಯುವ ಅರ್ಹತೆಯು ಋತುಬಂಧವಾದಾಗ ಅಥವಾ ಉದ್ಯೋಗಿ 52 ವರ್ಷ ವಯಸ್ಸಿನವರಾದಾಗ ಯಾವುದು ಮೊದಲೋ ಆ ದಿನ ಕೊನೆಗೊಳ್ಳಲಿದೆ
- ಬಳಕೆಯಾಗದ ಮಾಸಿಕ ಮುಟ್ಟಿನ ರಜೆ ಸಂಗ್ರಹ ಆಗುವುದಿಲ್ಲ. ನಂತರದ ತಿಂಗಳುಗಳಿಗೆ ಸೇರಿಸಲು ಕೂಡಾ ಅವಕಾಶ ಇಲ್ಲ
- ವಿದ್ಯಾರ್ಥಿನಿಯರು ಮುಟ್ಟಾದರೆ ಪ್ರತಿ ತಿಂಗಳು ಎರಡು ದಿನ ರಜೆ ಮತ್ತು ಮುಟ್ಟಿನ ಸಮಸ್ಯೆಗಳಿಗೆ ಹಾಜರಾತಿಯಲ್ಲಿ ಶೇ 2ರಷ್ಟು ವಿನಾಯಿತಿ ನೀಡಬೇಕು
- ಪ್ರತ್ಯೇಕ ವಿಶ್ರಾಂತಿ ಕೊಠಡಿಗಳಲ್ಲಿ ಜೈವಿಕವಾಗಿ ಕೊಳೆಯುವ ಸ್ಯಾನಿಟರಿ ಪ್ಯಾಡ್‌ಗಳು, ಮುಟ್ಟಿನ ಕಪ್‌ಗಳು, ಸ್ಯಾನಿಟರಿ ನ್ಯಾಪ್‌ಕಿನ್‌ಗಳನ್ನು ಒದಗಿಸಬೇಕು

ಬೆಳಿಗ್ಗೆ ತಡೆ, ಮಧ್ಯಾಹ್ನ ತೆರವು

ಬೆಂಗಳೂರು: ಮಹಿಳಾ ನೌಕರರಿಗೆ ಅವರ ಋತುಚಕ್ರದ ಸಮಯದಲ್ಲಿ ತಿಂಗಳಲ್ಲಿ ಒಂದು ದಿನದ ವೇತನ ಸಹಿತ ರಜೆ ಸೌಲಭ್ಯ ಒದಗಿಸುವಂತೆ ರಾಜ್ಯ ಸರ್ಕಾರ ಹೊರಡಿಸಿರುವ ಅಧಿಸೂಚನೆಗೆ ನೀಡಿದ್ದ ತನ್ನದೇ ತಡೆಯಾಜ್ಞೆಯನ್ನು ಏಕಸದಸ್ಯ ನ್ಯಾಯಪೀಠವೊಂದು ಕೆಲವೇ ಗಂಟೆಗಳ ಅಂತರದಲ್ಲಿ ತೆರವುಗೊಳಿಸಿದ ಅಪರೂಪದ ಘಟನೆಗೆ ಕರ್ನಾಟಕ ಹೈಕೋರ್ಟ್ ಸಾಕ್ಷಿಯಾಯಿತು.

ಸರ್ಕಾರದ ಅಧಿಸೂಚನೆ ಪ್ರಶ್ನಿಸಿ, 'ಬೆಂಗಳೂರು ಹೋಟೆಲ್‌ಗಳ ಸಂಘ'ದ ಅಧ್ಯಕ್ಷ ಎಚ್.ಎಸ್.ಸುಬ್ರಹ್ಮಣ್ಯ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಜ್ಯೋತಿ ಮೂಲಿಮನಿ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ಬೆಳಗಿನ ಕಲಾಪದಲ್ಲಿ ವಿಚಾರಣೆ ನಡೆಸಿತು. ವಿಚಾರಣೆ ವೇಳೆ ಅರ್ಜಿದಾರರ ಪರ ಹೈಕೋರ್ಟ್ ವಕೀಲ ಬಿ.ಕೆ.ಪ್ರಶಾಂತ್ ಕುಮಾರ್ ಅವರ ವಾದ ಆಲಿಸಿದ ನ್ಯಾಯಪೀಠ, ಅಧಿಸೂಚನೆಗೆ ಮಧ್ಯಂತರ ತಡೆ ನೀಡಿತು. 'ರಾಜ್ಯ ಸರ್ಕಾರ ತಡೆಯಾಜ್ಞೆ ತೆರವಿಗೆ ಅರ್ಜಿ ಸಲ್ಲಿಸುವ ಸ್ವಾತಂತ್ರ್ಯ ಹೊಂದಿದೆ' ಎಂದು ಆದೇಶಿಸಿ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಿತು.

▶9



ಭಾರತದ ಅಕ್ಕಿಗೆ ಹೆಚ್ಚಿನ ತೆರಿಗೆ: ಎಚ್ಚರಿಕೆ

ನ್ಯೂಯಾರ್ಕ್ (ಪಿಟಿಐ): ಭಾರತದಿಂದ ಆಮದಾಗುವ ವಿವಿಧ ತಳಿಗಳ ಅಕ್ಕಿ ಮೇಲೆ ಹೆಚ್ಚಿನ ತೆರಿಗೆ ವಿಧಿಸುವುದಾಗಿ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎಚ್ಚರಿಕೆ ನೀಡಿದ್ದಾರೆ.

ವಿವರ ▶12



ಚಿನಕುರುಳಿ

ಪ್ರಕಾಶ್ ಶೆಟ್ಟಿ



'ಇಂಡಿಗೊ ವಿಮಾನಗಳ ಹಾರಾಟ: ಶೇ 10 ಕಡಿತ'

ಪ್ರಜಾವಾಣಿ ವಾರ್ತೆ/ಪಿಟಿಐ



ನವದೆಹಲಿ/ಮುಂಬೈ: 'ಇಂಡಿಗೊ ವಿಮಾನಯಾನ ಸಂಸ್ಥೆಯು ತನ್ನ ಒಟ್ಟು ವಿಮಾನಗಳ ಹಾರಾಟಗಳಲ್ಲಿ ಶೇ 10ರಷ್ಟು ಹಾರಾಟವನ್ನು ಕಡಿತ ಮಾಡಬೇಕು ಎಂದು ಕೇಂದ್ರ ವಿಮಾನಯಾನ ಸಚಿವ ಕೆ.ರಾಮಮೋಹನ್ ನಾಯ್ಡು ಅವರು ಮಂಗಳವಾರ ಸೂಚಿಸಿದರು.

'ಚಳಿಗಾಲದಲ್ಲಿ ಹಾರಾಟ ನಡೆಸುವ ಮಾರ್ಗಗಳಲ್ಲಿ ಶೇ 5ರಷ್ಟು ವಿಮಾನಗಳ ಹಾರಾಟವನ್ನು ಕಡಿತ ಮಾಡುವಂತೆ ನಾಗರಿಕ ವಿಮಾನಯಾನ ಮಹಾನಿರ್ದೇಶನಾಲಯವು (ಡಿಜಿಸಿಎ) ಇಂಡಿಗೊ ಸಂಸ್ಥೆಗೆ ಸೋಮವಾರ ಸೂಚನೆ ನೀಡಿತ್ತು. ವಿಮಾನಗಳ ಹಾರಾಟವನ್ನು ಕಡಿತ ಮಾಡಿದ ಬಳಿಕ, ಪರಿಷ್ಕೃತ ವೇಳಾಪಟ್ಟಿಯನ್ನು ಬುಧವಾರದ (ಡಿ.10) ಒಳಗೆ ನೀಡಬೇಕು ಎಂದೂ ಹೇಳಿತ್ತು.

▶9

ಸುವರ್ಣಸೌಧಕ್ಕೆ ಮುತ್ತಿಗೆ ಯತ್ನ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಒಂದೆಡೆ ಸುವರ್ಣ ವಿಧಾನಸೌಧಕ್ಕೆ ಮುತ್ತಿಗೆಗೆ ಬಿಜೆಪಿ ಕಾರ್ಯಕರ್ತರ ಯತ್ನ, ಇನ್ನೊಂದೆಡೆ ಸೌಧದ ಸಂಪರ್ಕ ರಸ್ತೆಯನ್ನೇ ಬಂದ್ ಮಾಡಿದ ರೈತರು. ಈ ಎರಡು ಹೋರಾಟಗಳಿಂದ ಮಂಗಳವಾರ ಚಳಿಗಾಲದ ಅಧಿವೇಶನಕ್ಕೆ ಪ್ರತಿಭಟನೆಯ ಬಿಸಿ ತಟ್ಟಿತು.

ರಾಷ್ಟ್ರೀಯ ಹೆದ್ದಾರಿಯ ಬಲಬದಿಯ ಸರ್ವಿಸ್ ರಸ್ತೆಯಲ್ಲಿ ಬಿಜೆಪಿ ಕಾರ್ಯಕರ್ತರು ಮೆರವಣಿಗೆ ನಡೆಸಿದರು. ಎಡಬದಿಯ ಸರ್ವಿಸ್ ರಸ್ತೆಯಲ್ಲಿ ರಾಜ್ಯ ರೈತ ಸಂಘದವರು ಧರಣಿ ಕುಳಿತರು. ಎರಡೂ ಸರ್ವಿಸ್ ರಸ್ತೆಗಳಲ್ಲಿ ಸಂಚಾರ ಒಂದು ಗಂಟೆಗೂ ಹೆಚ್ಚು ಕಾಲ ಬಂದ್ ಆಯಿತು. ಎರಡೂ ದಿಕ್ಕಿನಲ್ಲಿ ವಾಹನಗಳು ಕಿಲೋಮೀಟರ್‌ವರೆಗೆ ಸಾಲುಗಟ್ಟಿ ನಿಂತವು.



54 ಲಕ್ಷ ಟನ್ ಮೆಕ್ಕೆಜೋಳ, 6.5 ಲಕ್ಷ ಟನ್ ತೊಗರಿ ಬೆಳೆ ಕೇಳುವವರೇ ಇಲ್ಲ. ಯತೀಂದ್ರ ಅವರಿಗೆ ಅವರಪ್ಪ ಸಿ.ಎಂ ಆಗಿ ಉಳಿಯುವುದೇ ಮುಖ್ಯವಾಗಿದೆ

ಬಿ.ವೈ.ವಿಜಯೇಂದ್ರ, ಅಧ್ಯಕ್ಷ, ಬಿಜೆಪಿ ರಾಜ್ಯ ಘಟಕ

▶5

ಹವಾಮಾನ ಮುನ್ಸೂಚನೆ: ಬೆಳಿಗ್ಗೆ ಮಂಜು ಮುಸುಕಿದ ವಾತಾವರಣ ಇರಲಿದ್ದು, ಉಳಿದಂತೆ ಶುಭ್ರ ಆಕಾಶ ಇರಲಿದೆ

ಪಿಎಫ್ಎಆರ್: ಹೆಚ್ಚುವರಿ ಅಂತಸ್ತಿಗೆ ಅಸ್ತು

ಶೇ 60ರಷ್ಟು ಹೆಚ್ಚು ಕಟ್ಟಡಕ್ಕೆ ಅವಕಾಶ ಮಾರ್ಗಸೂಚಿಯ ಶೇ 28ರಷ್ಟು ಶುಲ್ಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಚ್ಚುವರಿ ಶುಲ್ಕ ಪಾವತಿಸುವ ಮೂಲಕ 10ರ ಬದಲು 16 ಅಂತಸ್ತು ನಿರ್ಮಿಸಿಕೊಳ್ಳುವ ಪ್ರೀಮಿಯಂ ಎಫ್ಎಆರ್ (ಫ್ಲೋರ್ ಏರಿಯಾ ರೇಷಿಯೊ) ಜಿಬಿಎ ವ್ಯಾಪ್ತಿಯ ಐದೂ ನಗರ ಪಾಲಿಕೆಗಳಲ್ಲಿ ಜಾರಿಯಾಗಿದೆ.

ಭೂ ಮಾಲೀಕರು, ಅಭಿವೃದ್ಧಿದಾರರು ಮತ್ತು ನಿರ್ಮಾಣದಾರರು ಪಿಎಫ್ಎಆರ್ ಅನ್ನು ಬಳಸಿಕೊಳ್ಳಲು ನಿವೇಶನದ ಮಾರ್ಗಸೂಚಿಯ ಶೇ 28ರಷ್ಟು ಶುಲ್ಕವನ್ನು ಪಾವತಿಸಬೇಕಾಗುತ್ತದೆ.

'ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ –2015'ರ ಸೆಕ್ಷನ್ 13–ಇಗೆ ತಿದ್ದುಪಡಿ ತರಲಾಗಿದ್ದು, ಪ್ರೀಮಿಯಂ ಎಫ್ಎಆರ್‌ಗಾಗಿ ಪರಿಷ್ಕೃತ ಮಾಸ್ಟರ್ ಪ್ಲಾನ್–2015ರ ವಲಯ ನಿಯಮಗಳಿಗೆ 11 ಅನ್ನು (ಪಿಎಫ್ಎಆರ್ ಅನುಮತಿಸಲು ಶುಲ್ಕಗಳ ವಿವರ) ಸೇರ್ಪಡೆ ಮಾಡಲಾಗಿತ್ತು. 2025ರ ಜನವರಿ 4ರಂದು ಕರಡು ಅಧಿಸೂಚನೆ ಹೊರಡಿಸಲಾಗಿತ್ತು. ಏಪ್ರಿಲ್ 4ರಂದು ಅಂತಿಮ ಅಧಿಸೂಚನೆಯನ್ನು ನಗರಾಭಿವೃದ್ಧಿ ಇಲಾಖೆ ಹೊರಡಿಸಿತ್ತು. ಆದರೆ, ನ್ಯಾಯಾಲಯದಲ್ಲಿ ಅದಕ್ಕೆ ತಡೆಯಾಗಿತ್ತು. ಹೈಕೋರ್ಟ್ ದಾವೆಯನ್ನು ಡಿ.5ರಂದು ವಜಾಗೊಳಿಸಿದ್ದು, ಜಿಬಿಎ ಪಿಎಫ್ಎಆರ್ ಅನುಷ್ಠಾನಗೊಳಿಸಿದೆ.

ಕಟ್ಟಡ ನಿರ್ಮಿಸುವವರು ನಿವೇಶನದ ಎದುರಿನ ರಸ್ತೆಯ ಆಧಾರದಲ್ಲಿ ಪಿಎಫ್ಎಆರ್ ಪಡೆದುಕೊಳ್ಳಬಹುದು. ಇದರ ಜೊತೆಗೆ ವರ್ಗಾಯಿಸಬಹುದಾದ ಅಭಿವೃದ್ಧಿ ಹಕ್ಕುಗಳನ್ನೂ (ಟಿಡಿಆರ್/ಡಿಸಿಆರ್) ಬಳಸಿಕೊಂಡು ಇನ್ನಷ್ಟು ಹೆಚ್ಚಿನ ಅಂತಸ್ತುಗಳನ್ನು ನಿರ್ಮಿಸಬಹುದಾಗಿದೆ. ನಿವೇಶನದ ವಿಸ್ತೀರ್ಣದ ಮೇರೆಗೆ ಟಿಡಿಆರ್, ಪಿಎಫ್ಎಆರ್ ನಿಗದಿಯಾಗುತ್ತದೆ.

ಪ್ರತಿ ಅಂತಸ್ತನ್ನು ಹೆಚ್ಚುವರಿಯಾಗಿ ನಿರ್ಮಿಸಲು ಶೇ 28ರಷ್ಟು ಮಾರ್ಗಸೂಚಿ ದರವನ್ನು ಶುಲ್ಕವನ್ನಾಗಿ ಪಾವತಿಸಬೇಕಾಗುತ್ತದೆ. ಕಟ್ಟಡ ನಿರ್ಮಾಣಕ್ಕೆ ಅನುಮತಿ ಕೋರಿ ಅರ್ಜಿ ಸಲ್ಲಿಸುವ ಸಂದರ್ಭದಲ್ಲೇ ಶುಲ್ಕ ಪಾವತಿಸಿ, ನಕ್ಷೆಗೆ ಮಂಜೂರಾತಿ ಪಡೆದುಕೊಳ್ಳಬೇಕು. ಈಗಾಗಲೇ ಲಭ್ಯವಿರುವ ಇಒಡಿಬಿ ತಂತ್ರಾಂಶದಲ್ಲಿ ಸ್ವಯಂಚಾಲಿತವಾಗಿ ಪ್ರಕ್ರಿಯೆಗಳು ನಡೆಯಲಿವೆ. ಈ ಮೂಲಕ ಕಟ್ಟಡದ ನಿವೇಶನದ ಅಳತೆಗೆ ನಿಗದಿಪಡಿಸಿದ ಎಫ್ಎಆರ್‌ಗಿಂತ ಹೆಚ್ಚುವರಿ ಅಂತಸ್ತುಗಳನ್ನು ನಿರ್ಮಿಸಿಕೊಳ್ಳಬಹುದು. ಕಟ್ಟಡಗಳ ನಿರ್ಮಾಣಕ್ಕೆ ಅನುಮತಿ ನೀಡುವ ಸಕ್ಷಮ ಪ್ರಾಧಿಕಾರದ ಅನುಮೋದಿತ ಮಾಸ್ಟರ್ ಪ್ಲಾನ್‌ನ ವಲಯ ನಿಯಮಗಳ ಅನ್ವಯವೇ ಪ್ರೀಮಿಯಂ ಎಫ್ಎಆರ್‌ಗೆ ಅನುಮತಿ ನೀಡಲಾಗುತ್ತದೆ.

ಮುಖ್ಯಾಂಶಗಳು

- ಪ್ರೀಮಿಯಂ ಎಫ್ಎಆರ್:ವಾರ್ಷಿಕ ₹2,000 ಕೋಟಿ ನಿರೀಕ್ಷೆ
- 60x40 ಅಡಿ ನಿವೇಶನದ ಕಟ್ಟಡ ಮಾಲೀಕರಿಗೆ ಹೆಚ್ಚಿನ ಪ್ರಯೋಜನವಿಲ್ಲ
- ಬೃಹತ್ ಕಟ್ಟಡ, ಡೆವಲಪರ್, ನಿರ್ಮಾಣದಾರರಿಗೆ ಅನುಕೂಲ

'ಹಾಲಿ ಕಟ್ಟಡಗಳಿಗೆ ಶೇ 25ರಷ್ಟು ರಿಯಾಯಿತಿ'

'ನಗರದಲ್ಲಿ ಈಗಾಗಲೇ ನಿರ್ಮಾಣವಾಗಿರುವ ಕಟ್ಟಡಗಳೂ ಪ್ರೀಮಿಯಂ ಎಫ್ಎಆರ್ ಪಡೆದುಕೊಳ್ಳಬಹುದು. ಅವರಿಗೆ ಸೆಟ್‌ಬ್ಯಾಕ್‌ನಲ್ಲಿ ಶೇ 25ರಷ್ಟು ರಿಯಾಯಿತಿ ನೀಡಲಾಗುತ್ತದೆ' ಎಂದು ಜಿಬಿಎ ನಗರ ಯೋಜನೆ ವಿಭಾಗದ ಹೆಚ್ಚುವರಿ ನಿರ್ದೇಶಕ ಗಿರೀಶ್ ತಿಳಿಸಿದರು.

'ಹೆಚ್ಚುವರಿ ಅಂತಸ್ತುಗಳನ್ನು ನಿರ್ಮಿಸಿಕೊಳ್ಳಲು ಬಯಸುವ ಕಟ್ಟಡದ ಮಾಲೀಕರು, ಅದಕ್ಕೆ ಅನುಗುಣವಾದ ಸೆಟ್‌ಬ್ಯಾಕ್ ಅನ್ನು ಹೊಂದಿರಬೇಕು. ಶೇ 25ರಷ್ಟು ರಿಯಾಯಿತಿ ನೀಡಿ ಲೆಕ್ಕಾಚಾರ ಮಾಡಿ ಅವರು ಎಷ್ಟು ಅಂತಸ್ತುಗಳನ್ನು ಪ್ರೀಮಿಯಂ ಎಫ್ಎಆರ್ ಮೂಲಕ ನಿರ್ಮಿಸಬಹುದು ಎಂಬುದನ್ನು ತಿಳಿಸಲಾಗುತ್ತದೆ. ಆದರೆ, ಪಾರ್ಕಿಂಗ್ ಸೌಲಭ್ಯ ಮಾತ್ರ ನಿಯಮಗಳಂತೆಯೇ ಇರಬೇಕು' ಎಂದು ಮಾಹಿತಿ ನೀಡಿದರು.

'16 ಅಂತಸ್ತಿನ ಮೇಲಿನ ಕಟ್ಟಡಗಳಿಗೆ ಸೆಟ್‌ಬ್ಯಾಕ್ ಒಂದೇ ರೀತಿಯಲ್ಲಿದೆ. ಪಾರ್ಕಿಂಗ್ ಸೌಲಭ್ಯ ಅಗತ್ಯಕ್ಕನುಸಾರವಾಗಿದ್ದರೆ, ಅವರು ಶೇ 60ರಷ್ಟು ಪ್ರೀಮಿಯಂ ಎಫ್ಎಆರ್ ಪಡೆದುಕೊಳ್ಳಬಹುದು' ಎಂದರು.

ಏನಿದು ಪ್ರೀಮಿಯಂ ಎಫ್ಎಆರ್?

ಒಂಬತ್ತು ಮೀಟರ್‌ನಿಂದ 12 ಮೀಟರ್‌ವರೆಗೆ ರಸ್ತೆ ಹೊಂದಿರುವ ನಿವೇಶನದಲ್ಲಿ ಐದು ಅಂತಸ್ತುಗಳನ್ನು ಕಟ್ಟಿದ್ದರೆ, ಅವರಿಗೆ ಇನ್ನೂ ಒಂದು ಅಂತಸ್ತು ಕಟ್ಟಿಕೊಳ್ಳಲು ಅವಕಾಶ ನೀಡುವುದೇ ಪ್ರೀಮಿಯಂ ಎಫ್ಎಆರ್. ಹೆಚ್ಚುವರಿ ಅಂತಸ್ತುಗಳಿಗೆ ಅನುಗುಣವಾಗಿ ಸೆಟ್‌ಬ್ಯಾಕ್, ಪಾರ್ಕಿಂಗ್ ಜಾಗ ಬಿಡಬೇಕಾಗುತ್ತದೆ. ರಸ್ತೆಯ ಅಗಲ ಹೆಚ್ಚಾಗುತ್ತಿದ್ದಂತೆಯೇ ಪ್ರೀಮಿಯಂ ಎಫ್ಎಆರ್ ಪ್ರಮಾಣವೂ ಅಧಿಕವಾಗುತ್ತದೆ.

ಯಾರಿಗೆ ಎಷ್ಟು ಪ್ರೀಮಿಯಂ ಎಫ್ಎಆರ್?

ನಿವೇಶನದ ಮುಂದಿನ ರಸ್ತೆ	ಪ್ರೀಮಿಯಂ ಎಫ್ಎಆರ್	ಡಿಸಿಆರ್/ಟಿಡಿಆರ್ ಮೂಲಕ ಹೆಚ್ಚುವರಿ ಎಫ್ಎಆರ್	ಒಟ್ಟು ಪ್ರೀಮಿಯಂ ಎಫ್ಎಆರ್
9 ಮೀ.ನಿಂದ 12 ಮೀ	ಶೇ 20	–	ಶೇ 20
12 ಮೀ.ನಿಂದ 18 ಮೀ	ಶೇ 30	ಶೇ 10	ಶೇ 40
18 ಮೀಟರ್ ಮೇಲ್ಪಟ್ಟು	ಶೇ40	ಶೇ 20	ಶೇ60

'ಪ್ರಜಾವಾಣಿ' ವಲಯ ಮಟ್ಟದ ಕ್ವಿಜ್ 15ಕ್ಕೆ

ಪ್ರಜಾವಾಣಿ ವಾರ್ತೆ

ORCHIDS The International School Presents ಪ್ರಜಾವಾಣಿ QUIZ CHAMPIONSHIP 2025

ಬೆಂಗಳೂರು: ಬೆಂಗಳೂರು ವಲಯ ಮಟ್ಟದ 'ಪ್ರಜಾವಾಣಿ–ರಸಪ್ರಶ್ನೆ ಚಾಂಪಿಯನ್‌ಶಿಪ್' ಡಿಸೆಂಬರ್ 15ರಂದು ಜಯನಗರದಲ್ಲಿರುವ ರಾಷ್ಟ್ರೀಯ ವಿದ್ಯಾಲಯದ ಆರ್.ವಿ. ಆಡಿಟೋರಿಯಂನಲ್ಲಿ ನಡೆಯಲಿದೆ. ಈ ಸ್ಪರ್ಧೆಯಲ್ಲಿ ಭಾಗವಹಿಸಲು ವಿದ್ಯಾರ್ಥಿಗಳು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ, ಹೆಸರು ನೋಂದಾಯಿಸಿಕೊಳ್ಳಬಹುದು.

ಬೆಂಗಳೂರು ನಗರ, ಗ್ರಾಮಾಂತರ, ಬೆಂಗಳೂರು ದಕ್ಷಿಣ, ಚಿಕ್ಕಬಳ್ಳಾಪುರ, ಕೋಲಾರ, ತುಮಕೂರು ಜಿಲ್ಲೆಗಳ 7ರಿಂದ 10ನೇ ತರಗತಿಯ ವಿದ್ಯಾರ್ಥಿಗಳು ಭಾಗವಹಿಸಬಹುದು.

ಇದು ಸಾಮಾನ್ಯ ಜ್ಞಾನಕ್ಕೆ ಸಂಬಂಧಿಸಿದ ರಸಪ್ರಶ್ನೆ ಸ್ಪರ್ಧೆಯಾಗಿದ್ದು, ವಿದ್ಯಾರ್ಥಿಗಳು ಶಾಲೆಗಳ ಮೂಲಕ ತಂಡವಾಗಿ ನೋಂದಾಯಿಸಿಕೊಳ್ಳಬೇಕು. ಪ್ರತಿ ತಂಡದಲ್ಲಿ ಕಡ್ಡಾಯವಾಗಿ ಇಬ್ಬರು ವಿದ್ಯಾರ್ಥಿಗಳು ಇರಬೇಕು. ಬೇರೆ ಬೇರೆ ತರಗತಿಯ ವಿದ್ಯಾರ್ಥಿಗಳೂ ತಂಡವಾಗಿ ಭಾಗವಹಿಸಬಹುದು. ಒಂದು ಶಾಲೆಯಿಂದ ಎಷ್ಟು ತಂಡಗಳು ಬೇಕಾದರೂ ಇರಬಹುದು.

ಕ್ಯೂ ಆರ್ ಕೋಡ್

ಕ್ವಿಜ್‌ಗೆ ಎಲ್ಲರಿಗೂ ಉಚಿತ ಪ್ರವೇಶವಿದೆ. ಸ್ಪರ್ಧೆ ನಡೆಯುವ ಸ್ಥಳದಲ್ಲೂ ಹೆಸರನ್ನು ನೋಂದಾಯಿಸಲು ಅವಕಾಶವಿದೆ.

ಈ ವಲಯದಲ್ಲಿ ವಿಜೇತರಾದವರು ಬೆಂಗಳೂರಿನಲ್ಲಿ ನಡೆಯುವ ರಾಜ್ಯಮಟ್ಟದ ಸ್ಪರ್ಧೆಯಲ್ಲಿ ಪಾಲ್ಗೊಳ್ಳಲು ಅರ್ಹರಾಗುತ್ತಾರೆ. ತಂಡಗಳಿಗೆ ಪ್ರಾಥಮಿಕ ಹಂತದ ಪರೀಕ್ಷೆ ನಡೆಯುತ್ತದೆ.

ಹೆಚ್ಚಿನ ಮಾಹಿತಿಗೆ ಬೆಳಿಗ್ಗೆ 10ರಿಂದ ಸಂಜೆ 5ರೊಳಗೆ ಸಂಪರ್ಕಿಸಬೇಕಾದ ದೂರವಾಣಿ: 7338018541.

6,7ನೇ ತರಗತಿ ಬೋಧಿಸಲೂ ಅವಕಾಶ

ಬೆಂಗಳೂರು: ಪ್ರಾಥಮಿಕ ಶಾಲೆಗಳಲ್ಲಿ ಒಂದರಿಂದ 5ನೇ ತರಗತಿವರೆಗೆ ಬೋಧಿಸುತ್ತಿರುವ ಶಿಕ್ಷಕರಿಗೆ 6 ಮತ್ತು 7ನೇ ತರಗತಿಗೂ ಬೋಧಿಸಲು ಅವಕಾಶ ನೀಡಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಮಂಗಳವಾರ ಆದೇಶ ಹೊರಡಿಸಿದೆ.

ಎನ್‌ಸಿಟಿಇ ಮಾರ್ಗಸೂಚಿ ಪ್ರಕಾರ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಸೂಚಿಸಿದ ಹಾಗೆ ಅಗತ್ಯ ವಿಷಯಗಳಲ್ಲಿ ಪದವಿ ಹೊಂದಿರುವ ಶಿಕ್ಷಕರು 6,7ನೇ ತರಗತಿಗೆ ಬೋಧಿಸಲು ಅರ್ಹರಾಗಿದ್ದಾರೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಈ ಸಂಬಂಧ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ಅಗತ್ಯ ತಿದ್ದುಪಡಿ ಮಾಡಲಾಗಿದೆ. ಸಾರ್ವಜನಿಕರಿಂದ ಬಂದ ಆಕ್ಷೇಪಣೆಗಳನ್ನು ಪರಿಗಣಿಸಿ, ಅಂತಿಮ ಆದೇಶ ಹೊರಡಿಸಲಾಗಿದೆ.

'ಯುವ ಜನರು ಸಂಸ್ಕೃತಿ, ಸಂಸ್ಕಾರ ಉಳಿಸಲಿ'

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿ ನಗರ: 'ಯುವ ಜನಾಂಗ ಎಚ್ಚೆತ್ತುಕೊಂಡು ನಮ್ಮ ಸಂಸ್ಕೃತಿ, ಸಂಸ್ಕಾರವನ್ನು ಉಳಿಸುವ ಕೆಲಸ ಮಾಡಬೇಕು' ಎಂದು ಗಾಯಕಿ ಅರ್ಚನಾ ಉಡುಪ ಅವರು ಕರೆ ನೀಡಿದರು.

ಮಲ್ಲತ್ತಹಳ್ಳಿಯ ಶ್ರೀ ದುರ್ಗಾ ಪರಮೇಶ್ವರಿ ಎಜುಕೇಷನ್ ಟ್ರಸ್ಟ್ ವತಿಯಿಂದ ಹಮ್ಮಿಕೊಂಡಿದ್ದ ಜೆ.ಎಸ್. ಉತ್ಸವ–2025 ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಜೆ. ಎಸ್. ಪದವಿ ಪೂರ್ವ ಕಾಲೇಜಿನ ಸಂಸ್ಥಾಪಕ ಅಧ್ಯಕ್ಷ ಡಾ. ಜಯರಾಮ ಶೆಟ್ಟಿ ಮಾತನಾಡಿರು. ನಿರ್ಮಾಣ್ ಸಮೂಹ ಶಿಕ್ಷಣ ಸಮಿತಿಯ ಅಧ್ಯಕ್ಷ ಓ.ಮೋಹನ್ ಕುಮಾರ್, ಪ್ರೊ, ಮುರಳಿದರ್ ಹೆಗಡೆ, ಸಂಸ್ಥೆಯ ಉಪಾಧ್ಯಕ್ಷೆ ಸುಮಾ ಜೆ. ಶೆಟ್ಟಿ, ಕಾರ್ಯದರ್ಶಿ ನಿತೀಶ್, ಪ್ರಾಂಶುಪಾಲೆ ವಿಜಯಲಕ್ಷ್ಮಿ ಉಪಸ್ಥಿತರಿದ್ದರು.

'ಜಮೀನು ಮಾರಾಟಕ್ಕೆ ನಿರ್ಬಂಧವಿಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದೇವನಹಳ್ಳಿ ತಾಲ್ಲೂಕಿನಲ್ಲಿ ಶಾಶ್ವತ ವಿಶೇಷ ಕೃಷಿ ವಲಯ ಎಂದು ಘೋಷಿಸಿರುವ 13 ಗ್ರಾಮಗಳ ವ್ಯಾಪ್ತಿಯ 1,777 ಎಕರೆ ಜಮೀನು ಮಾರಾಟಕ್ಕೆ ಯಾವುದೇ ನಿರ್ಬಂಧವನ್ನು ಸರ್ಕಾರ ವಿಧಿಸಿಲ್ಲ' ಎಂದು ಕೈಗಾರಿಕಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ಎಸ್.ಸೆಲ್ವಕುಮಾರ್ ಸ್ಪಷ್ಟಪಡಿಸಿದ್ದಾರೆ.

'ದೇವನಹಳ್ಳಿ ಸಮೀಪ ಏರೋಸ್ಪೇಸ್ ಪಾರ್ಕ್ ಸ್ಥಾಪಿಸಲು ಭೂಮಿಯ ಅಗತ್ಯ ಇತ್ತು. ಈ ಭಾಗದ ರೈತರು ಕೃಷಿ ಮುಂದುವರಿಸಿಕೊಂಡು ಹೋಗುವ ಅಪೇಕ್ಷೆ ವ್ಯಕ್ತಪಡಿಸಿದ ನಂತರ ಸರ್ಕಾರ ಸಕಾರಾತ್ಮಕವಾಗಿ ಸ್ಪಂದಿಸಿ ವಿಶೇಷ ಪ್ರಕರಣವೆಂದು ಪರಿಗಣಿಸಿ ಅಧಿಸೂಚನೆ ಹಿಂದಕ್ಕೆ ಪಡೆದಿದೆ. ಕೃಷಿ ಅಭಿವೃದ್ಧಿಗೆ ಅಗತ್ಯ ಮೂಲಸೌಕರ್ಯಗಳನ್ನು ಒದಗಿಸುವ ತೀರ್ಮಾನವನ್ನೂ ಪ್ರಕಟಿಸಿದೆ. ರೈತರ ಹೆಸರಿನಲ್ಲಿ ರಿಯಲ್ ಎಸ್ಟೇಟ್ ಮಾಡುವವರಿಗೆ ಕಡಿವಾಣ ಹಾಕುವುದು ಸರ್ಕಾರದ ಉದ್ದೇಶವೇ ಹೊರತು ಜಮೀನು ಮಾರಾಟ ಮಾಡುವ ರೈತರ ಹಕ್ಕನ್ನು ಕಸಿದುಕೊಂಡಿಲ್ಲ' ಎಂದು ತಿಳಿಸಿದ್ದಾರೆ.

'ರೈತರು ತಾವಾಗಿಯೇ ಸರ್ಕಾರಕ್ಕೆ ಜಮೀನು ಕೊಡಲು ಮುಂದೆ ಬಂದರೆ ಅದಕ್ಕೂ ಅವಕಾಶವಿದೆ. ಇಂತಹ ಜಮೀನುಗಳಿಗೆ ಭೂಮಿಯ ದರ ನಿರ್ಧಾರ ಸಮಿತಿಯ ತೀರ್ಮಾನದಂತೆ ಪರಿಹಾರ ಕೊಡಲಾಗುವುದು. ಆದರೆ, ಸರ್ಕಾರಕ್ಕೆ ಮಾತ್ರವೇ ಜಮೀನು ಮಾರಾಟ ಮಾಡಬೇಕು ಎಂಬ ಯಾವ ನಿರ್ಬಂಧವೂ ಇಲ್ಲ' ಎಂದು ಅವರು ಹೇಳಿದ್ದಾರೆ.

'ತಮಿಳುನಾಡು, ಛತ್ತೀಸಗಢ, ಉತ್ತರಾಖಂಡ, ಮಹಾರಾಷ್ಟ್ರ ರಾಜ್ಯಗಳಲ್ಲಿ ವಿಶೇಷ ಕೃಷಿ ವಲಯಗಳಿವೆ. ಹಾಗೆಯೇ ವಿದೇಶಗಳಲ್ಲಿಯೂ ರೂಪುಗೊಂಡಿವೆ. ಅಂತಹ ಕಡೆ ರೈತರಿಗೆ ಏನೇನು ಸೌಲಭ್ಯ ಒದಗಿಸಲಾಗುತ್ತಿದೆ ಎನ್ನುವುದನ್ನು ಅಧ್ಯಯನ ಮಾಡಲು ಒಂದು ಸಮಿತಿ ರಚಿಸಲಾಗುವುದು. ವರದಿ ಆಧರಿಸಿ ಅಲ್ಲಿ ಸಿಗುವ ಅನುಕೂಲಗಳನ್ನು ಇಲ್ಲೂ ಒದಗಿಸಲಾಗುವುದು' ಎಂದಿದ್ದಾರೆ.

ರೊಬೊಟಿಕ್: ಹೃದಯ ಕವಾಟ ಬದಲಿ ಶಸ್ತ್ರಚಿಕಿತ್ಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೊಬೊಟಿಕ್ ತಂತ್ರಜ್ಞಾನದ ನೆರವಿನಿಂದ ಅಪೊಲೊ ಆಸ್ಪತ್ರೆ ವೈದ್ಯರು 53 ವರ್ಷದ ಮಹಿಳೆಯ ಹೃದಯದ ಎರಡು ಕವಾಟಗಳ ಬದಲಿ ಶಸ್ತ್ರಚಿಕಿತ್ಸೆಯನ್ನು ಯಶಸ್ವಿಯಾಗಿ ನಡೆಸಿದ್ದಾರೆ.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಆಸ್ಪತ್ರೆಯ ಹೃದ್ರೋಗ ತಜ್ಞ ಡಾ. ಸಾತ್ಯಕಿ ನಂಬಾಲ, 'ಮಹಿಳೆಯ ಹೃದಯ ಕವಾಟಗಳಲ್ಲಿ ಸೋಂಕು (ಎಂಡೋಕಾರ್ಡಿಟಿಸ್) ಕಾಣಿಸಿಕೊಂಡಿತ್ತು. ಇದರಿಂದ ಕವಾಟಗಳು ಹಾನಿಯಾಗಿದ್ದವು. ಸಂಧಿವಾತ, ಸ್ಥೂಲಕಾಯದಂತಹ ಸಮಸ್ಯೆಯನ್ನು ಮಹಿಳೆ ಎದುರಿಸುತ್ತಿದ್ದರು. ಪಾರ್ಶ್ವವಾಯುವಿನ ಇತಿಹಾಸವನ್ನೂ ಹೊಂದಿದ್ದರಿಂದ ಸಾಂಪ್ರದಾಯಿಕ ತೆರೆದ ಹೃದಯ ಶಸ್ತ್ರಚಿಕಿತ್ಸೆ ಅಪಾಯಕಾರಿಯಾಗಿತ್ತು. ಆದ್ದರಿಂದ 'ದಿ ವಿನ್ಸಿ ಎಕ್ಸ್‌ಐ ಸರ್ಜಿಕಲ್' ವ್ಯವಸ್ಥೆ ಬಳಸಿಕೊಂಡು ಶಸ್ತ್ರಚಿಕಿತ್ಸೆ ನಡೆಸಲಾಯಿತು' ಎಂದು ಹೇಳಿದರು.

'ಎದೆಯ ಮಧ್ಯಭಾಗದಲ್ಲಿ ದೊಡ್ಡ ಗಾಯ ಮಾಡದೆ, ಚಿಕ್ಕ ರಂಧ್ರದ ನೆರವಿನಿಂದ ಶಸ್ತ್ರಚಿಕಿತ್ಸೆ ನಡೆಸಲಾಗಿದೆ. ಶಸ್ತ್ರಚಿಕಿತ್ಸೆ ನಡೆದ ಮೂರನೆ ದಿನವೇ ಆಸ್ಪತ್ರೆಯಿಂದ ಬಿಡುಗಡೆ ಮಾಡಲಾಯಿತು. ರೊಬೊಟಿಕ್ ತಂತ್ರಜ್ಞಾನದ ನೆರವಿನಿಂದ ನಿಖರ ಶಸ್ತ್ರಚಿಕಿತ್ಸೆ ಸಾಧ್ಯವಾಯಿತು' ಎಂದರು. ಹೃದ್ರೋಗ ವಿಭಾಗದ ಹಿರಿಯ ಸಲಹೆಗಾರ ಡಾ. ಗಿರೀಶ್ ಬಿ. ನವಸುಂದಿ, 'ಹೃದಯ ಶಸ್ತ್ರಚಿಕಿತ್ಸೆಯ ಸ್ವರೂಪವನ್ನು ತಂತ್ರಜ್ಞಾನ ಬದಲಾಯಿಸಿರುವುದಕ್ಕೆ ಈ ಪ್ರಕರಣ ಉದಾಹರಣೆ. ಗಾಯದ ಪ್ರಮಾಣ ಕಡಿಮೆಯಾಗುವ ಜತೆಗೆ, ರೋಗಿ ಬೇಗ ಚೇತರಿಸಿಕೊಳ್ಳುತ್ತಾರೆ. ಈ ತಂತ್ರಜ್ಞಾನವನ್ನು ಸಮರ್ಪಕವಾಗಿ ಉಪಯೋಗಿಸಿಕೊಂಡು ಶಸ್ತ್ರಚಿಕಿತ್ಸೆ ನಡೆಸಲಾಗುತ್ತಿದೆ' ಎಂದು ಹೇಳಿದರು.

ನಿಯಂತ್ರಣ ತಪ್ಪಿದಾಗ



ವಿಭಜಕ ಏರಿದ ಶಾಲಾ ಬಸ್... ಶಾಲಾ ಮಕ್ಕಳನ್ನು ಕರೆದೊಯ್ಯುತ್ತಿದ್ದ ಚೈತನ್ಯ ಟೆಕ್ನೊಗೆ ಸೇರಿದ ಬಸ್‌ವೊಂದು ನಗರದ ಹೆಣ್ಣೂರು ಮುಖ್ಯರಸ್ತೆಯ ಡಿ ಮಾರ್ಟ್ ಬಳಿ ಚಾಲಕನ ನಿಯಂತ್ರಣ ತಪ್ಪಿ ವಿಭಜಕದ ಮೇಲೆ ಹತ್ತಿತ್ತು. ಚಾಲಕನಿಗೆ ಸಣ್ಣ ಗಾಯವಾಗಿದ್ದು, ವಿದ್ಯಾರ್ಥಿಗಳು ಪಾರಾಗಿದ್ದಾರೆ



ನಿಯಂತ್ರಣ ತಪ್ಪಿದ ಬೊಲೆರೊ... ಮೈಸೂರು ರಸ್ತೆಯ ಬಾಲಗಂಗಾಧರನಾಥ ಮೇಲ್ಸೇತುವೆಯಲ್ಲಿ ಮುಂದೆ ಸಾಗುತ್ತಿದ್ದ ವಾಹನಗಳನ್ನು ಹಿಂದಿಕ್ಕುವ ವೇಳೆ ಸರ್ಕಾರಿ ಇಲಾಖೆಯ ಬೊಲೆರೊ ವಾಹನವೊಂದು ಚಾಲಕನ ನಿಯಂತ್ರಣ ತಪ್ಪಿ ರಸ್ತೆ ವಿಭಜಕ ಮೇಲೆ ಏರಿತ್ತು. ಇದರಿಂದಾಗಿ ಈ ಮಾರ್ಗದಲ್ಲಿ ಸ್ವಲ್ಪ ಸಮಯ ಸಂಚಾರಕ್ಕೆ ಅಡಚಣೆ ಉಂಟಾಗಿತ್ತು — ಪ್ರಜಾವಾಣಿ ಚಿತ್ರ/ ವಿ.ಪುಷ್ಕರ್

ಟ್ರಾಫಿಕ್ ಉದ್ಯಾನಕ್ಕೆ 'ರೆಡ್ ಸಿಗ್ನಲ್'

ಬಿರುಕು ಬಿಟ್ಟ ರಾಕ್ ಕ್ಲೈಂಬಿಂಗ್, ಆರಂಭವಾಗದ ವಿಜ್ಞಾನ ಉದ್ಯಾನ

• ಖಲೀಲಅಹ್ಮದ ಶೇಖ

ಬೆಂಗಳೂರು: ಮನರಂಜನೆಯ ಮೂಲಕ ರಸ್ತೆ ಸುರಕ್ಷತೆ ಹಾಗೂ ಸಂಚಾರ ನಿಯಮಗಳ ಬಗ್ಗೆ ಮಕ್ಕಳಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ಬಾಲ ಭವನದಲ್ಲಿದ್ದ ಟ್ರಾಫಿಕ್ ಉದ್ಯಾನವನ್ನು ಅಭಿವೃದ್ಧಿಪಡಿಸಲಾಗಿತ್ತು. ಆದರೆ, ನಿರ್ವಹಣೆ ಇಲ್ಲದ ಕಾರಣ ಅದು ಬಳಕೆ ಯಾಗುತ್ತಿಲ್ಲ. ಕೃತಕ ಬಂಡೆಗಳಿರುವ ಗೋಡೆಯಲ್ಲಿ (ರಾಕ್ ಕ್ಲೈಂಬಿಂಗ್ ಮಾದರಿ) ಬಿರುಕು ಬಿಟ್ಟ ಕಾರಣ ಅದನ್ನು ಬಂದ್ ಮಾಡಲಾಗಿದೆ.

ರಸ್ತೆ ಸುರಕ್ಷತೆ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವ ಉದ್ದೇಶದಿಂದ ಮಕ್ಕಳಿಗೆ ರಸ್ತೆ ಸಂಚಾರ ನಿಯಮಗಳ ಕುರಿತು ಅರಿವು ಮೂಡಿಸಲು ಈ ಉದ್ಯಾನ ಪ್ರಾರಂಭಿಸಲಾಗಿತ್ತು. ಮಕ್ಕಳು ಇಲ್ಲಿ ಪಠ್ಯದ ಜೊತೆಗೆ ಪ್ರಾಯೋಗಿಕವಾಗಿ ವಾಹನ ಚಲಾಯಿಸುವ ಮೂಲಕ ರಸ್ತೆ ಸಂಚಾರದ ನಿಯಮಗಳ ಕುರಿತು ಮಾಹಿತಿ ಪಡೆದು ಕೊಳ್ಳಬಹುದಿತ್ತು. ಹೆಲ್ಮೆಟ್, ಸೀಟ್ ಬೆಲ್ಟ್ ಧರಿಸುವಂತಹ ಸುರಕ್ಷತಾ ಕ್ರಮಗಳ ಬಗ್ಗೆಯೂ ಸಲಹೆ ನೀಡಲಾಗುತ್ತಿತ್ತು.

ಒಂದೂವರೆ ಎಕರೆ ಪ್ರದೇಶದಲ್ಲಿ ರುವ ಈ ಉದ್ಯಾನವನ್ನು ₹5 ಲಕ್ಷ ವೆಚ್ಚದಲ್ಲಿ ನವೀಕರಿಸಿ, ಪುನರಾರಂಭಿಸಲಾಗಿತ್ತು. ಈಗ ಮತ್ತೆ ಬಂದ್ ಮಾಡಲಾಗಿದೆ. ಇಲ್ಲಿ ಎರಡು ಕಡೆ ಟ್ರಾಫಿಕ್ ಸಿಗ್ನಲ್‌ಗಳನ್ನು ಅಳವಡಿಸಲಾ ಗಿತ್ತು. ಬಳಕೆ ಮಾಡದ ಕಾರಣ ಹಾಳಾಗಿವೆ. ರಸ್ತೆ ತಿರುವಿನ ಚಿಹ್ನೆಗಳು, ಝೀಬ್ರಾ ಕ್ರಾಸ್ ಕೂಡ ಅಳಿಸಿ ಹೋಗಿದೆ. ಎಲ್ಲೆಂದರಲ್ಲಿ ಗಿಡ-ಗಂಟಿಗಳು ಬೆಳೆದು ನಿಂತಿವೆ. ಟ್ರಾಫಿಕ್ ಉದ್ಯಾನ ನವೀಕರಿಸಿದ ನಂತರ ಇದಕ್ಕಾಗಿಯೇ 10 ಎಲೆಕ್ಟ್ರಿಕ್ ಕಾರುಗಳು, 5 ಬೈಕ್‌ಗಳು, 5 ಸೈಕಲ್‌ಗಳನ್ನು ಖರೀದಿಸಲಾಗಿತ್ತು. ಈಗ ಅವು ಸಹ ದೂಳು ತಿನ್ನುತ್ತಿವೆ.



ಬಾಲಭವನದ ಆವರಣದಲ್ಲಿನ ಟ್ರಾಫಿಕ್ ಉದ್ಯಾನದಲ್ಲಿನ ಹಾಳಾಗಿರುವ ವಾಹನ

ಚಿತ್ರಗಳು: ಪುಷ್ಕರ್ ವಿ.

ವಿಜ್ಞಾನ ಉದ್ಯಾನದ ಆವರಣದಲ್ಲಿ ಬೃಹತ್ ಮರವೊಂದು ಬಿದ್ದಿದ್ದು, ಅಲ್ಲಿರುವ ಆಟಿಕೆಗಳಿಗೆ ಹಾನಿಯಾಗಿದೆ. ಇದರಲ್ಲಿ 16 ವರ್ಷದೊಳಗಿನ ಮಕ್ಕಳು ಆಟದ ಜೊತೆಗೆ ವಿಜ್ಞಾನ ವಿಷಯಕ್ಕೆ ಸಂಬಂಧಿಸಿದ ಮಾಹಿತಿಗಳನ್ನು ಪಡೆದು ಕೊಳ್ಳಲು ಅವಕಾಶವಿತ್ತು. ಬಿದ್ದ ಮರ ವಿಲೇವಾರಿ ಮಾಡದ ಕಾರಣ ಇದನ್ನು ತಾತ್ಕಾಲಿವಾಗಿ ಬಂದ್ ಮಾಡಲಾಗಿದೆ.

'ಬಾಲಭವನದಲ್ಲಿನ ಈ ಹೊಸ ಪ್ರಯತ್ನವು ಮಕ್ಕಳಿಗೆ ಶಿಕ್ಷಣ ಮತ್ತು ನೈತಿಕ ಜೀವನ ಶೈಲಿಯನ್ನು ಒಟ್ಟುಗೂಡಿಸುವ ಒಂದು ಹೆಜ್ಜೆ ಆಗಿತ್ತು. ಪಾಲಕರು ತಮ್ಮ ಮಕ್ಕಳನ್ನು ಇಲ್ಲಿಗೆ ಕರೆತಂದು ರಸ್ತೆ ಸುರಕ್ಷತೆ, ಸಂಚಾರ ನಿಯಮಗಳ ಕುರಿತು ಪ್ರಾಯೋಗಿಕ ಅನುಭವ ನೀಡಬಹುದಿತ್ತು. ಸ್ಥಗಿತಗೊಂಡ ಟ್ರಾಫಿಕ್ ಉದ್ಯಾನವನ್ನು ಮತ್ತೆ ಪ್ರಾರಂಭಿಸಬೇಕು' ಎಂದು ಜಯನಗರದ ನಿವಾಸಿ ಸ್ನೇಹಾ ಒತ್ತಾಯಿಸಿದರು.

ಬಾಲಭವನದ ಆವರಣದಲ್ಲಿಯೇ ₹40 ಲಕ್ಷ ವೆಚ್ಚದಲ್ಲಿ 30 ಅಡಿ ಎತ್ತರದ ಹಾಗೂ 12 ಅಡಿ ಅಗಲದ ಕೃತಕ ಬಂಡೆಗಳಿರುವ ಗೋಡೆ (ರಾಕ್ ಕ್ಲೈಂಬಿಂಗ್ ಮಾದರಿ) ನಿರ್ಮಿಸಲಾ ಗಿತ್ತು. ಈಗ ಇದರ ಹಿಂಭಾಗದಲ್ಲಿ ಬಿರುಕು ಬಿಟ್ಟಿದೆ. ಮಕ್ಕಳ ಸುರಕ್ಷತೆಗೆ ಆದ್ಯತೆ ನೀಡುವ ಉದ್ದೇಶದಿಂದ ಇದನ್ನು ಬಂದ್ ಮಾಡಲಾಗಿದೆ ಎಂದು ಬಾಲಭವನದ ಅಧಿಕಾರಿಗಳು ತಿಳಿಸಿದರು.

'ಬಾಲಭವನದ ಸಮಗ್ರ ಅಭಿವೃದ್ಧಿಗೆ ಆದ್ಯತೆ'

'ಹೊಸದಾಗಿ ಖರೀದಿಸಿದ ಎಲೆಕ್ಟ್ರಿಕ್ ವಾಹನಗಳ ಗುಣಮಟ್ಟ ಸರಿಯಿಲ್ಲ. ಮಕ್ಕಳು ಆ ವಾಹನಗಳಲ್ಲಿ ಕುಳಿತು ಒಂದೆರಡು ರೌಂಡ್ ಸಂಚರಿಸಿದರೆ ಬ್ಯಾಟರಿ ಡೌನ್ ಆಗುತ್ತಿತ್ತು. ಹೀಗಾಗಿ ಸಂಚಾರದ ಬಗ್ಗೆ ಜಾಗೃತಿ ಮೂಡಿಸಲು ಸಾಧ್ಯವಾಗುತ್ತಿಲ್ಲ. ಗುಣಮಟ್ಟದ ಜೊತೆಗೆ ಸಂಚಾರದ ಬಗ್ಗೆ ಜಾಗೃತಿ ಮೂಡಿಸಲು ಸಹಾಯಕವಾಗುವ ವಾಹನಗಳನ್ನು ಖರೀದಿಸಲಾಗುವುದು. ನೂತನವಾಗಿ ವಾಲ್ ಕ್ಲೈಂಬಿಂಗ್ ರಾಕ್ ನಿರ್ಮಿಸಲು ಟೆಂಡರ್ ಕರೆಯಲಾಗಿದೆ. ವಿಜ್ಞಾನ ಉದ್ಯಾನವನ್ನು ಒಂದು ವಾರದಲ್ಲಿ ಪ್ರಾರಂಭಿಸಲಾಗುವುದು. ಬಾಲಭವನದ ಸಮಗ್ರ ಅಭಿವೃದ್ಧಿಗೆ ಆದ್ಯತೆ ನೀಡಲಾಗುವುದು' ಎಂದು ಜವಾಹರ್ ಬಾಲಭವನ ಸೊಸೈಟಿ ಅಧ್ಯಕ್ಷ ಬಿ.ಆರ್. ನಾಯ್ಡು 'ಪ್ರಜಾವಾಣಿ'ಗೆ ತಿಳಿಸಿದರು.



ಬಿ.ಆರ್. ನಾಯ್ಡು

'ಮಕ್ಕಳ ಸಮಗ್ರ ಅಭಿವೃದ್ಧಿಗೆ ಆದ್ಯತೆ ನೀಡಲಾಗುವುದು. ಮಕ್ಕಳನ್ನು ಮೊಬೈಲ್ ಗೀಳಿನಿಂದ ಹೊರತರಲು ಸೃಜನಶೀಲ ಸಾಮರ್ಥ್ಯ ಹೆಚ್ಚಿಸುವ ಭೌತಿಕ ಮತ್ತು ಮಾನಸಿಕ ಕ್ರೀಡಾ ಚಟುವಟಿಕೆಗಳನ್ನು ಬಾಲಭವನದಲ್ಲಿ ಆಯೋಜಿಸ ಲಾಗುವುದು' ಎಂದರು.



ರಾಕ್ ಕ್ಲೈಂಬಿಂಗ್‌ನ ಮಾದರಿ

2020ರಲ್ಲಿ ಗ್ರಾಮ ಪಂಚಾಯಿತಿ ಚುನಾವಣೆ ಬಹಿಷ್ಕರಿಸಿದ್ದ ಜನರು

ಪಟ್ಟಣ ಪಂಚಾಯಿತಿಯಾದ ತ್ಯಾಮಗೊಂಡ್ಲು

ಪ್ರಜಾವಾಣಿ ವಾರ್ತೆ

ದಾಬಸ್ ಪೇಟೆ: ನೆಲಮಂಗಲ ತಾಲ್ಲೂಕಿನ ತ್ಯಾಮಗೊಂಡ್ಲು ಗ್ರಾಮ ಪಂಚಾಯಿತಿಯು ಪಟ್ಟಣ ಪಂಚಾಯಿತಿಯಾಗಿ ಪರಿವರ್ತನೆಯಾಗಿದೆ.

2020ರ ಪಂಚಾಯಿತಿ ಚುನಾವಣೆಯಲ್ಲಿ ಗ್ರಾಮ ಪಂಚಾಯಿತಿಯನ್ನು ಮೇಲ್ದರ್ಜೆಗೆರಿಸಬೇಕು ಎಂದು ಆಗ್ರಹಿಸಿ ನಾಮಪತ್ರ ಸಲ್ಲಿಸದೇ ಚುನಾವಣೆಯನ್ನು ಬಹಿಷ್ಕರಿಸಿದ್ದರು. 2021ರಲ್ಲಿ ಮತ್ತೆ ಚುನಾವಣೆ ಘೋಷಣೆಯಾಯಿತು. ಆಗ ಅನಿವಾರ್ಯವಾಗಿ ಆಕಾಂಕ್ಷಿಗಳು ಸ್ಪರ್ಧೆ ಮಾಡಿ, ಚುನಾವಣೆ ನಡೆದಿತ್ತು.

ಪಂಚಾಯತ್ ರಾಜ್ ವ್ಯವಸ್ಥೆ ಜಾರಿಗೆ ಮುನ್ನ ತ್ಯಾಮಗೊಂಡ್ಲು ಪಟ್ಟಣ ಪಂಚಾಯಿತಿ ಆಗಿತ್ತು. ಕಾರಾಣಾಂತರಗಳಿಂದ ಮುಂದೆ ಗ್ರಾಮ ಪಂಚಾಯಿತಿಯಾಯಿತು. 13 ಸಾವಿರಕ್ಕೂ ಹೆಚ್ಚು ಜನಸಂಖ್ಯೆ ಇರುವ ಪಟ್ಟಣವನ್ನು ಮೇಲ್ದರ್ಜೆಗೆ ಏರಿಸ ಬೇಕು ಎಂದು ಇಲ್ಲಿನ ಜನರು ಹಾಗೂ ಹಲವು ಸಂಘಟನೆ ಗಳವರು ಸರ್ಕಾರಕ್ಕೆ ಮನವಿ ಮಾಡುತ್ತಲೇ ಬಂದಿದ್ದರು.

ಪಂಚಾಯಿತಿ ಆಡಳಿತ ಕೊನೆಗೊಳ್ಳಲು ಒಂದು ವರ್ಷ ಬಾಕಿ ಇರುವಾಗ ಸರ್ಕಾರ ಪಂಚಾಯಿತಿಯನ್ನು ಪಟ್ಟಣ ಪಂಚಾಯಿತಿಯಾಗಿ ಮೇಲ್ದರ್ಜೆಗೇರಿಸಲು ಒಪ್ಪಿಗೆ ನೀಡಿದೆ. ಈ ಗ್ರಾಮ ಪಂಚಾಯಿತಿಗೆ ಹಾಲಿ ತ್ಯಾಮ ಗೊಂಡ್ಲು ಪಟ್ಟಣ, ತಿಪ್ಪಶೆಟ್ಟಿಹಳ್ಳಿ, ಗುಂಡೇನಹಳ್ಳಿ, ಧರ್ಮೇಗೌಡನ ಪಾಳ್ಯಗಳು ಸೇರಿ ಒಟ್ಟು ಒಂಬತ್ತು ವಾರ್ಡ್‌ಗಳಿದ್ದು, 21 ಪಂಚಾಯಿತಿ ಸದಸ್ಯರು ಇದ್ದಾರೆ.

'ಪಂಚಾಯಿತಿ ಆಡಳಿತದಲ್ಲಿ ಅನುದಾನಗಳು ಕಡಿಮೆ ಇದ್ದು, ಅಭಿವೃದ್ಧಿ ಸಾಧ್ಯವಿರಲಿಲ್ಲ. ಈಗ ಪಟ್ಟಣ ಪಂಚಾಯಿತಿ ಆಗಿರುವುದರಿಂದ ಹೆಚ್ಚಿನ ಅನುದಾನ ಬರಲಿದೆ. ಇದರಿಂದ ಜನರ ಮೂಲಭೂತ ಸಮಸ್ಯೆ ಗಳನ್ನು ನಿವಾರಿಸಲು ಸಹಾಯವಾಗುತ್ತದೆ' ಎಂದು ಗ್ರಾಮ ಪಂಚಾಯಿತಿ ಸದಸ್ಯರು ಅಭಿಪ್ರಾಯಪಟ್ಟರು.

ಸ್ವಾತಂತ್ರ್ಯ ಸಂಗ್ರಾಮದಲ್ಲಿ ವೇಳೆ ಮಹಾತ್ಮ ಗಾಂಧೀಜಿ, ತ್ಯಾಮಗೊಂಡ್ಲು ಪಟ್ಟಣಕ್ಕೆ ಭೇಟಿ ನೀಡಿದ್ದರು. ಗಾಂಧೀಜಿ ಭೇಟಿ ನೀಡಿದ ಸ್ಮರಣಾರ್ಥ ಹಳೆಯ ಗ್ರಾಮ ಪಂಚಾಯಿತಿಯ ಸಮೀಪದ ವೃತ್ತಕ್ಕೆ ಮಹಾತ್ಮ ಗಾಂಧೀಜಿ ವೃತ್ತ ಎಂದು ಹೆಸರಿಸಲಾಗಿದೆ.

₹16.63 ಕೋಟಿ ದಂಡ ಸಂಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಚಾರ ನಿಯಮ ಉಲ್ಲಂಘನೆಯ ಪ್ರಕರಣಗಳಿಗೆ ಸಂಬಂಧಿಸಿದಂತೆ ಶೇ 50ರ ರಿಯಾಯಿತಿ ಅಡಿ ದಂಡ ಪಾವತಿಸಲು ರಾಜ್ಯ ಸರ್ಕಾರವು ಕಲ್ಪಿಸಿದ್ದ ಅವಕಾಶ ಬಳಸಿಕೊಂಡು, ನಗರದಲ್ಲಿ 5,88,127 ವಾಹನಗಳ ಮಾಲೀಕರು ದಂಡ ಪಾವತಿಸಿದ್ದಾರೆ.

ನ.21ರಿಂದ ಡಿ.9ರವರೆಗೆ ಎಲ್ಲ ವಿಧಾನಗಳ ಮೂಲಕ ಒಟ್ಟು ₹16.63 ಕೋಟಿ ದಂಡ ಸಂಗ್ರಹವಾಗಿದೆ ಎಂದು ಸಂಚಾರ ವಿಭಾಗದ ಮೂಲಗಳು ಹೇಳಿವೆ.

ಬಿಟಿಪಿ ಅಸ್ತ್ರಂ, ಕರ್ನಾಟಕ ರಾಜ್ಯ ಪೊಲೀಸ್(ಕೆಎಸ್ ಪಿ) ಆ್ಯಪ್, ಬೆಂಗಳೂರು ಸಂಚಾರ ಪೊಲೀಸ್ ಅಥವಾ ಕರ್ನಾಟಕ ಒನ್ ವೆಬ್‌ಸೈಟ್‌ನಲ್ಲಿ ವಾಹನದ ನೋಂದಣಿ ಸಂಖ್ಯೆ ನಮೂದಿಸಿ ಸಂಚಾರ ಉಲ್ಲಂಘನೆ ಪ್ರಕರಣಗಳನ್ನು ತಿಳಿದುಕೊಂಡು ವಾಹನ ಮಾಲೀಕರು ದಂಡ ಪಾವತಿಸಬಹುದಾಗಿದೆ. ಡಿ.12ರ ವರೆಗೆ ಈ ರಿಯಾಯಿತಿ ಅಡಿ ದಂಡ ಪಾವತಿಗೆ ಅವಕಾಶ ಇದೆ ಎಂದು ಸಂಚಾರ ಪೊಲೀಸರು ತಿಳಿಸಿದ್ದಾರೆ.

ವಿದ್ಯುತ್ ವ್ಯತ್ಯಯ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೋಮನಹಳ್ಳಿ 220/66/11 ಕೆವಿ ಉಪ ಕೇಂದ್ರದಲ್ಲಿ ತುರ್ತು ನಿರ್ವಹಣಾ ಕಾಮಗಾರಿ ಕೈಗೊಳ್ಳುವ ಕಾರಣ ಡಿ. 10ರಂದು ಬೆಳಿಗ್ಗೆ 9ರಿಂದ ಸಂಜೆ 6 ಗಂಟೆವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ-ವಾಗಲಿದೆ ಎಂದು ಬೆಸ್ಕಾಂ ಪ್ರಕಟಣೆಯಲ್ಲಿ ತಿಳಿಸಿದೆ.

ವಿದ್ಯುತ್ ವ್ಯತ್ಯಯವಾಗುವ ಸ್ಥಳಗಳು: ಐಬೆಕ್ಸ್ ಫ್ಯಾಕ್ಟರಿ, ರಾವುಗೋಡ್ಲು, ನೆಟ್ಟಿಗೆರೆ, ಗಿರಿಗೌಡನದೊಡ್ಡಿ, ಮುತ್ತುರಾಯನಪುರ, ಗೊಟ್ಟಿಗೆಹಳ್ಳಿ, ಸೋನಾರೆದೊಡ್ಡಿ, ಗಾಂಧಿನಗರ, ಪಟ್ಟರೆಡ್ಡಿಪಾಳ್ಯ, ನೌಕಲಪಾಳ್ಯ, ಗುಡಿಪಾಳ್ಯ, ನಾಗನವಕನಹಳ್ಳಿ, ಮಲ್ಲಿಪಾಳ್ಯ, ವಾಸುದೇವರಪಾಳ್ಯ, ಗೊಲ್ಲರಪಾಳ್ಯ, ನಲ್ಲಕನದೊಡ್ಡಿ, ಸಿಆರ್‌ಪಿಎಫ್ ಕ್ಯಾಂಪ್ ಗೇಟ್ 1 ಮತ್ತು 82, ಸೋಮನಹಳ್ಳಿ, ಸಾಧನಪಾಳ್ಯ, ಹೊಸದೊಡ್ಡಿ, ನೆಲಗುಳಿ, ಲಿಂಗಪ್ಪರನದೊಡ್ಡಿ, ಯೋಗವನ ಬೆಟ್ಟ, ವೀರಸಾಂದ್ರ, ಜಟ್ಟಿಪಾಳ್ಯ, 1912 ತಿಟ್ಟಹಳ್ಳಿ. ಗಂಗಕ್ಕನಗೊಡ್ಡಿ, ಬೋಕಿಪುರ, ತೋಕತಿಮ್ಮನದೊಡ್ಡಿ, ಏಡುಮಾಡು, ರಾವರದೊಡ್ಡಿ, ತಾತಗುಪ್ಪೆ, ಗಡಿಪಾಳ್ಯ, ಮುಕ್ಕೋಡ್ಲು, ಮುನಿನಗರ, ಕಗ್ಗಲೀಪುರ ಸುತ್ತಮುತ್ತ.

ನಗರದಲ್ಲಿ ಇಂದು

ಸಂಶೋಧನಾ ಸಮ್ಮೇಳನ: ಅತಿಥಿಗಳು: ಜೆ. ಶ್ರೀದೇವಿ, ಗೋಪಾಲಕೃಷ್ಣ ಪಾತ್ರ, ಶ್ಯಾಮ್ ವಾಸುದೇವ್ ರಾವ್, ಅಧ್ಯಕ್ಷತೆ: ಡಿ. ಹೇಮಚಂದ್ರ ಸಾಗರ್, ಡಿ. ಪ್ರೇಮಚಂದ್ರ ಸಾಗರ್, ಆಯೋಜನೆ ಮತ್ತು ಸ್ಥಳ: ದಯಾನಂದ ಸಾಗರ್ ಕಾಲೇಜ್ ಆಫ್ ಎಂಜಿನಿಯರಿಂಗ್, ಕುಮಾರಸ್ವಾಮಿ ಲೇಔಟ್, ಬೆಳಿಗ್ಗೆ 9.30

ಅಂತರರಾಷ್ಟ್ರೀಯ ಮಾನವ ಹಕ್ಕುಗಳ ದಿನಾಚರಣೆ: ಅತಿಥಿ: ಎಂ.ಎನ್. ರಾಮ್, ಆಯೋಜನೆ: ಪ್ರಜಾಪ್ರಭುತ್ವ ಹಕ್ಕುಗಳ ಮತ್ತು ಜಾತ್ಯತೀತತೆಯ ರಕ್ಷಣಾ ಕೇಂದ್ರ, ಸ್ಥಳ: ಸ್ವಾತಂತ್ರ್ಯ ಉದ್ಯಾನ, ಬೆಳಿಗ್ಗೆ 11

ವಿಶ್ವ ಮಾನವ ಹಕ್ಕುಗಳ ದಿನ, ಕಿರು ಪುಸ್ತಕ ಬಿಡುಗಡೆ: ಕವಿತಾ ಲಂಕೇಶ್, ಆಯೋಜನೆ: ಕೊಂದವರು ಯಾರು?, ಸ್ಥಳ: ಗಾಂಧಿ ಭವನ, ಕುಮಾರಕೃಪಾ ರಸ್ತೆ, ಮಧ್ಯಾಹ್ನ 3

ಎಂ.ಎಸ್. ರಾಮಪ್ರಸಾದ್ ನುಡಿನಮನ: ಭಾಗವಹಿಸುವವರು: ಆರ್. ಲಕ್ಷ್ಮೀನಾರಾಯಣ, ಬೈರಮಂಗಲ ರಾಮೇಗೌಡ, ಶಾಂತರಾಜು, ಚಂದ್ರಶೇಖರ್ ನಾದೂರು, ಜಿ. ಅಶ್ವತ್ಥನಾರಾಯಣ, ಬಿ.ಆರ್. ರವೀಂದ್ರನಾಥ್, ಟಿ.ಎಸ್. ರಾಧಾಕೃಷ್ಣ, ಬಿ.ಎಸ್. ಗುರುಪ್ರಸಾದ್, ಆಯೋಜನೆ ಮತ್ತು ಸ್ಥಳ: ಬಿ.ಎಂ.ಶ್ರೀ ಪ್ರತಿಷ್ಠಾನ, ಎನ್. ಆರ್. ಕಾಲೊನಿ, ಸಂಜೆ 4

ಡಾ.ಎಸ್.ಎಲ್. ಭೈರಪ್ಪ ಸಂಸ್ಮರಣೆ: ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಕಛೇರಿ: ಗಾಯನ: ಶಿವಾನಿ ಮಿರಜಕರ್ ಜೈನ್, ಹಾರ್ಮೋನಿಯಂ: ತೇಜಸ್ ಕಾತೋಟಿ, ತಬಲಾ: ಕೇಶವ ಜೋಶಿ, 'ಡಾ.ಎಸ್.ಎಲ್. ಭೈರಪ್ಪ ಅವರ ಸಾಹಿತ್ಯಕ ಕೊಡುಗೆಗಳ ವಿವಿಧ ಮುಖಗಳು-ಒಂದು ಅವಲೋಕನ': ಅಜಕ್ಕಳ ಗಿರೀಶ್ ಭಟ್, ಕೆ. ಸತ್ಯನಾರಾಯಣ, ಆಯೋಜನೆ: ಸಂಸ್ಕೃತಿ ಸಂಭ್ರಮ, ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ, ಸ್ಥಳ: ದಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಸಂಜೆ 5.30ರಿಂದ

ವಿನಾಯಕ ವಿದ್ಯಾ ಸಂಸ್ಥೆಯ ಸುವರ್ಣ ಮಹೋತ್ಸವ ವರ್ಷಾಚರಣೆ ಉದ್ಘಾಟನೆ, 50ನೇ ವರ್ಷದ ಶಾಲಾ ಕಾಲೇಜು ವಾರ್ಷಿಕೋತ್ಸವ: ಉದ್ಘಾಟನೆ: ಯು.ಬಿ. ವೆಂಕಟೇಶ್, ಅಧ್ಯಕ್ಷತೆ: ಎಂ. ನರಸಿಂಹನ್, ಅತಿಥಿಗಳು: ಬೈರಮಂಗಲ ರಾಮೇಗೌಡ, ಸಂಗಾತಿ ವೆಂಕಟೇಶ್, ಟಿ. ತಿಮ್ಮೇಗೌಡ, ಡಿ.ಎನ್. ರಮೇಶ್, ಪಿ.ಜಿ. ಮಹೇಶ, ಆಯೋಜನೆ: ಶ್ರೀ ವಿನಾಯಕ ಕನ್ನಡ ಮತ್ತು ಆಂಗ್ಲ ಮಾಧ್ಯಮ ಶಾಲೆ, ವಿ.ಎಸ್. ಕೃಷ್ಣಯ್ಯರ್ ಸಂಯುಕ್ತ ಪದವಿ ಪೂರ್ವ ಕಾಲೇಜು, ಸ್ಥಳ: ಕೆಂಪೇಗೌಡ ಆಟದ ಮೈದಾನ, ಕರುನಾಡು ಸಂಭ್ರಮದ ವೇದಿಕೆ, ಶಂಕರ್‌ನಾಗ್ ವೃತ್ತ, ಸಂಜೆ 6.30

ಸಿಜಿಕೆ-75 ರಂಗಭೂಮಿಯ ಒಡಲಾಳ ನಾಟಕೋತ್ಸವದ ಸಮಾರೋಪ, ಪ್ರಶಸ್ತಿ ಪ್ರದಾನ, ರಂಗಗೌರವ: ಅಭಿನಂದನಾ ಮಾತು: ಶ್ರೀನಿವಾಸ್ ಜಿ. ಕಪ್ಪಣ್ಣ, ಪ್ರಶಸ್ತಿ ಪ್ರದಾನ: ಎಸ್.ಜಿ. ಸಿದ್ಧರಾಮಯ್ಯ, ಅಧ್ಯಕ್ಷತೆ: ಎಂ.ಎಸ್. ಮೂರ್ತಿ, ಅತಿಥಿಗಳು: ಜಯಲಕ್ಷ್ಮಿ ಸಿಜಿಕೆ, ನಟರಾಜ್ ಹುಳಿಯಾರ್, ಕೃಷ್ಣ ರಾಯಚೂರು, 'ಸಿಜಿಕೆ ರಂಗ' ಪುರಸ್ಕಾರ ಸ್ವೀಕರಿಸುವವರು: ನಟರಾಜ ಹೊನ್ನವಳ್ಳಿ, ರಂಗಗೌರವ ಸ್ವೀಕರಿಸುವವರು: ಉಮಾಶ್ರೀ, ಕೆ.ವಿ. ನಾಗರಾಜಮೂರ್ತಿ, 'ಶೂದ್ರ ತಪಸ್ವಿ' ನಾಟಕ ಪ್ರದರ್ಶನ: ನಿರ್ದೇಶನ: ಮಧು ಎಂ., ಆಯೋಜನೆ: ಕರ್ನಾಟಕ ಬೀದಿನಾಟಕ ಅಕಾಡೆಮಿ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 6.45



ಉಮಾಶ್ರೀ





ಹಳದಿ ಮಾರ್ಗ: ಬೆಮೆಲ್‌ನಿಂದ 6 ರೈಲು

₹414 ಕೋಟಿ ವೆಚ್ಚದಲ್ಲಿ ಹೆಚ್ಚುವರಿ ರೈಲು ಕೋಚ್‌ಗಳ ನಿರ್ಮಾಣ

● ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ನಮ್ಮ ಮೆಟ್ರೊ ಹಳದಿ ಮಾರ್ಗಕ್ಕೆ ಹೆಚ್ಚುವರಿಯಾಗಿ ಆರು ರೈಲು ಕೋಚ್‌ಗಳು ಬರಲಿವೆ. ಈ ಕೋಚ್‌ಗಳನ್ನು ಬಿಇಎಂಎಲ್ ಪೂರೈಕೆ ಮಾಡಲಿದೆ.

ಸಾರ್ವಜನಿಕ ವಲಯದ ಉದ್ಯಮ (ಪಿಎಸ್‌ಯು) ಭಾರತ್ ಅರ್ಥ್ ಮೂವರ್ಸ್ ಲಿಮಿಟೆಡ್ (ಬಿಇಎಂಎಲ್) ₹414 ಕೋಟಿ ವೆಚ್ಚದಲ್ಲಿ ಕೋಚ್‌ಗಳನ್ನು (ಒಂದು ಕೋಚ್ ಅಂದರೆ ಆರು ಬೋಗಿಗಳ ಸೆಟ್) ನಿರ್ಮಿಸಲು ಒಪ್ಪಂದ ಮಾಡಿಕೊಂಡಿದೆ.

ಆರ್.ವಿ. ರಸ್ತೆ-ಡೆಲ್ಟಾ ಎಲೆಕ್ಟ್ರಾನಿಕ್ಸ್ ಬೊಮ್ಮಸಂದ್ರ ನಡುವಿನ ಹಳದಿ ಮಾರ್ಗದ ಕಾಮಗಾರಿಯು 2024ರಲ್ಲೇ ಮುಗಿದಿದ್ದರೂ ಕೋಚ್‌ಗಳು ಸಕಾಲದಲ್ಲಿ ಪೂರೈಕೆಯಾಗದೇ ಸಂಚಾರ ಒಂದು ವರ್ಷ ತಡವಾಗಿತ್ತು. ಕೊನೆಗೆ ಮೂರೇ ರೈಲು ಕೋಚ್‌ಗಳನ್ನು ಇಟ್ಟುಕೊಂಡು ಆಗಸ್ಟ್ 11ರಂದು ಸಂಚಾರ ಆರಂಭವಾಗಿತ್ತು.

ಸಂವಹನ ಆಧಾರಿತ ರೈಲು ನಿಯಂತ್ರಣ (ಸಿಬಿಟಿಸಿ) ಸಿಗ್ನಲಿಂಗ್ ವ್ಯವಸ್ಥೆಯ ಈ ಮಾರ್ಗಕ್ಕೆ ಚೀನಾ ರೈಲ್ವೆ ರೋಲಿಂಗ್ ಸ್ಟಾಕ್ ಕಾರ್ಪೊರೇಷನ್ (ಸಿಆರ್‌ಆರ್‌ಸಿ) ನಾನ್‌ಜಿಂಗ್ ಪುಜೆನ್ ಕಂಪನಿ ಲಿಮಿಟೆಡ್ ಸಂಸ್ಥೆಯು 90 ಬೋಗಿಗಳನ್ನು (15 ರೈಲು ಕೋಚ್) ಪೂರೈಸಬೇಕಿತ್ತು. ಭಾರತದಲ್ಲಿ ಬೋಗಿಗಳನ್ನು ಪೂರೈಸಲು ಪಶ್ಚಿಮ ಬಂಗಾಳದ ಟಿಟಾಘರ್ ರೈಲ್ ಸಿಸ್ಟಮ್ಸ್ ಲಿಮಿಟೆಡ್ (ಟಿಆರ್‌ಎಸ್‌ಎಲ್) ನೊಂದಿಗೆ ಸಿಆರ್‌ಆರ್‌ಸಿ ಒಪ್ಪಂದ ಮಾಡಿಕೊಂಡಿತ್ತು. ಹಳದಿ ಮಾರ್ಗಕ್ಕೆ ಟಿಟಾಘರ್‌ನಿಂದ ಇಲ್ಲಿಯವರೆಗೆ ಕೇವಲ ಆರು ರೈಲು ಕೋಚ್‌ಗಳು ರವಾನೆಯಾಗಿದ್ದು, ಐದು ರೈಲುಗಳು ಸಂಚಾರ ನಡೆಸುತ್ತಿವೆ. ಆರನೇ ರೈಲಿನ ಮೂರು ಬೋಗಿಗಳು ಹೆಬ್ಬಗೋಡಿ ಡಿಪೊ ತಲುಪಿದ್ದು, ಇನ್ನು ಮೂರು ಬೋಗಿಗಳು ಇನ್ನೆರಡು ದಿನಗಳಲ್ಲಿ ತಲುಪಲಿವೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಟಿಟಾಘರ್‌ನಿಂದ ಎಲ್ಲ 15 ರೈಲು ಕೋಚ್‌ಗಳು ತಲುಪಿದ ಮೇಲೂ ಹೆಚ್ಚುವರಿಯಾಗಿ ರೈಲುಗಳ ಅಗತ್ಯವಿದೆ. ಒಂದು ಮಾರ್ಗದಲ್ಲಿ ಕನಿಷ್ಠ ಎರಡು ರೈಲುಗಳನ್ನು ಮೀಸಲಾಗಿ ಇರಿಸಿ-ಕೊಳ್ಳಬೇಕಾಗುತ್ತದೆ. ಮಾರ್ಗಮಧ್ಯೆ ರೈಲು ಕೆಟ್ಟುಹೋದರೆ ಬದಲಿಯಾಗಿ ಇಳಿಸಲು ಮೀಸಲು ರೈಲುಗಳು ಅಗತ್ಯ. ಇದಲ್ಲದೇ ಹೆಚ್ಚುವರಿ ದಟ್ಟಣೆ ಇರುವ ಕೆಲವೇ ನಿಲ್ದಾಣಗಳ ನಡುವೆ ಮಾತ್ರ ಹೆಚ್ಚುವರಿಯಾಗಿ (ಶಾರ್ಟ್ ಲೂಪ್) ಸಂಚಾರ ವ್ಯವಸ್ಥೆ ಮಾಡಲು ರೈಲುಗಳ ಅಗತ್ಯ ಇರುತ್ತದೆ. ಅದಕ್ಕಾಗಿ ಆರು ಕೋಚ್‌ಗಳನ್ನು ತಯಾರಿಸಲು ಬಿಇಎಂಎಲ್ ಜೊತೆ ಒಪ್ಪಂದ ಮಾಡಿ-ಕೊಳ್ಳಲಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಹಳದಿ ಮಾರ್ಗವು ಎಲೆಕ್ಟ್ರಾನಿಕ್ ಸಿಟಿಯಂಥ ಐಟಿ ಹಬ್‌ಗಳನ್ನು ಹಾದು ಹೋಗುವುದರಿಂದ ಟ್ರಿಪ್ ಸಂಖ್ಯೆ ಹೆಚ್ಚಾದಂತೆ ಪ್ರಯಾಣಿಕರ ಸಂಖ್ಯೆಯೂ ಹೆಚ್ಚಾಗಲಿದೆ. ಅದಕ್ಕೆ ಸರಿಯಾಗಿ ಕೋಚ್‌ಗಳನ್ನು ಒದಗಿಸಬೇಕಿದೆ ಎಂದು ವಿವರಿಸಿದರು.



ನಮ್ಮ ಮೆಟ್ರೊ ಹಳದಿ ಮಾರ್ಗದಲ್ಲಿ ಇರುವ ಜನದಟ್ಟಣೆ (ಸಾಂದರ್ಭಿಕ ಚಿತ್ರ)



- **19.15** ಕಿ.ಮೀ. ಹಳದಿ ಮಾರ್ಗದ ಉದ್ದ
- **32** ನಿಮಿಷ ಎರಡು ಟರ್ಮಿನಲ್‌ಗಳ ನಡುವಿನ ಸಂಚಾರ ಅವಧಿ
- **5** ಸದ್ಯ ಸಂಚರಿಸುತ್ತಿರುವ ರೈಲುಗಳ ಸಂಖ್ಯೆ
- **15** ನಿಮಿಷ ಸದ್ಯ ಇರುವ ಟ್ರಿಪ್‌ಗಳ ನಡುವಿನ ಅಂತರ
- **15** ಟಿಟಾಘರ್‌ನಿಂದ ಪೂರೈಕೆಯಾಗಲಿರುವ ಒಟ್ಟು ರೈಲುಗಳ ಸಂಖ್ಯೆ
- **6** ಹೆಚ್ಚುವರಿಯಾಗಿ ಬಿಇಎಂಎಲ್‌ನಿಂದ ಪೂರೈಕೆಯಾಗಲಿರುವ ರೈಲುಗಳ ಸಂಖ್ಯೆ

ನಗರ ಪಾಲಿಕೆಯಿಂದ ತ್ಯಾಜ್ಯ ಸಂಗ್ರಹಕ್ಕೆ ನಿರ್ಲಕ್ಷ್ಯ; ಎಲ್ಲೆಂದರಲ್ಲಿದೆ ಕಸ

ಹೂಡಿಯಲ್ಲಿ ಹೆಚ್ಚಾದ 'ಬ್ಲ್ಯಾಕ್ ಸ್ಪಾಟ್'

● ಶಿವರಾಜ್ ಮೌರ್ಯ

ಕೆ.ಆರ್.ಪುರ: ಐಟಿ ಕಾರಿಡಾರ್ ಐಟಿಪಿಎಲ್ ಸಮೀಪವಿರುವ ಹೂಡಿ ಗ್ರಾಮದಲ್ಲಿ ಕಸದ ಸಮಸ್ಯೆ ತೀವ್ರವಾಗಿದ್ದು ಪ್ರಮುಖ ರಸ್ತೆಗಳು, ಸಾರ್ವಜನಿಕ ಸ್ಥಳಗಳು ಕಸದ ಬ್ಲ್ಯಾಕ್ ಸ್ಪಾಟ್‌ಗಳಾಗಿವೆ.

ನಗರ ಪಾಲಿಕೆ ವತಿಯಿಂದ ಮನೆಗಳಿಂದ ಕಸವನ್ನು ಸಮರ್ಪಕವಾಗಿ ಸಂಗ್ರಹಿಸುತ್ತಿಲ್ಲ. ಇದರಿಂದ ದೇವಸ್ಥಾನ, ಶಾಲೆ, ಆಸ್ಪತ್ರೆ, ಹೋಟೆಲು, ಖಾಲಿ ನಿವೇಶನಗಳಲ್ಲಿ ಕಸ ಎಸೆದು ಹೋಗುತ್ತಿರುವುದು ಹೆಚ್ಚಾಗುತ್ತಿದೆ.

ಮಹದೇವಪುರ ವಿಧಾನಸಭೆ ಕ್ಷೇತ್ರ- ಪೂರ್ವ ನಗರ ಪಾಲಿಕೆ ವ್ಯಾಪ್ತಿಯ ಹೂಡಿ ಗ್ರಾಮ ಸಮೀಪವೇ ಇರುವುದರಿಂದ ಇಲ್ಲಿ ಅತಿ ಹೆಚ್ಚು ಪೇಯಿಂಗ್ ಗೆಸ್ಟ್ (ಪಿಜಿ) ಕೇಂದ್ರಗಳಿವೆ. ನಿತ್ಯ ಮನೆ ಮತ್ತು ಪಿಜಿಗಳಿಂದ ಪಾಲಿಕೆಯಿಂದ ಸಂಗ್ರಹಿಸುತ್ತಿಲ್ಲ. ಸ್ಥಳೀಯ ನಿವಾಸಿಗಳ ಮನವಿಗೂ ಪಾಲಿಕೆ ಅಧಿಕಾರಿಗಳು ಗಮನಹರಿಸುತ್ತಿಲ್ಲ. ಕಸ ಸಂಗ್ರಹಿಸಲು ಆಟೊಗಳು ಬರುತ್ತಿಲ್ಲ. ಹಣ ನೀಡಿದವರ ಮನೆಯಿಂದ ಮಾತ್ರ ಪೌರ ಕಾರ್ಮಿಕರು ಕಸ ತೆಗೆದುಕೊಂಡು ಹೋಗುತ್ತಿದ್ದಾರೆ ಎಂದು ಸ್ಥಳೀಯರು ದೂರಿದರು.

'ಸಾವಿರಾರು ರೂಪಾಯಿ ಕಸ ಸಂಗ್ರಹದ ಶುಲ್ಕವನ್ನು ಪಡೆಯುತ್ತಿದ್ದರೂ, ಪಾಲಿಕೆ ವತಿಯಿಂದ ಆ ಕೆಲಸ ವಾಗುತ್ತಿಲ್ಲ. ಹೀಗಾಗಿ, ಎಲ್ಲೆಂದರಲ್ಲಿ ಕಸ ಎಸೆಯುವುದನ್ನು ಕಾಣಬಹುದು. ನಗರ ಪಾಲಿಕೆ ಆಯುಕ್ತರು ಪರಿಶೀಲನೆಗೆ ಬಂದಾಗ, ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡಿದ್ದರು. ಆದರೂ ಅಧಿಕಾರಿಗಳು ತ್ಯಾಜ್ಯ ವಿಲೇವಾರಿ ಮಾಡುತ್ತಿಲ್ಲ' ಎಂದು ಹೂಡಿ ನಿವಾಸಿ ಮುರುಳಿ ಆರೋಪಿಸಿದರು.

'ಕಸದ ನಿರ್ವಹಣೆ ಹೊಣೆ ಹೊತ್ತಿರುವ ಪಾಲಿಕೆ ಅಧಿಕಾರಿ ಎಇಇ ಜ್ಯೋತಿ ಅವರು ಕರೆ ಸ್ವೀಕರಿಸುವುದಿಲ್ಲ. ಕೆಲವೊಮ್ಮೆ ಕರೆ ಸ್ವೀಕರಿಸಿದರೂ ಮಾರ್ಷಲ್‌ಗೆ ಕರೆ ಮಾಡಿ ಎನ್ನುತ್ತಾರೆ. ಕಸದ ರಾಶಿ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ರೋಗ ರುಜಿನಗಳೂ ಹೆಚ್ಚಾಗಿವೆ' ಎಂದರು.

'ಮನೆಯ ಮುಂದಿರುವ ಬಸ್ ನಿಲ್ದಾಣದಲ್ಲೇ ಕಸ ಸುರಿಯಲಾಗುತ್ತದೆ. ಇದರಿಂದ ಎಲ್ಲರಿಗೂ ತೊಂದರೆ ಯಾಗುತ್ತಿದೆ. ಸಮರ್ಪಕವಾಗಿ ಕಸ ನಿರ್ವಹಣೆ ಮಾಡದೇ ಇರುವುದು ಸಮಸ್ಯೆಗೆ ಕಾರಣ' ಎಂದು ರಾಜಪಾಳ್ಯ ನಿವಾಸಿ ಶ್ರೀನಿವಾಸರಾಜು ಅವರು ಹೇಳಿದರು.

ಹಣ ವಸೂಲಿ: 'ಕಸ ಸಂಗ್ರಹಕ್ಕೆ ಪ್ರತ್ಯೇಕವಾಗಿ ಶುಲ್ಕ ಪಾವತಿಸುತ್ತಿದ್ದರೂ ಪೌರ ಕಾರ್ಮಿಕರಿಗೆ ಮತ್ತೆ ಹಣ ನೀಡಬೇಕು. ಪ್ರತಿ ತಿಂಗಳು 5ರಿಂದ 12ರವರೆಗೆ ಹಣ ವಸೂಲಿ ಮಾಡುತ್ತಾರೆ. ಅಧಿಕಾರಿಗಳಿಗೆ ಈ ಬಗ್ಗೆ ದೂರಿದ್ದರೂ ಯಾರೂ ಕ್ರಮ ಕೈಗೊಂಡಿಲ್ಲ' ಎಂದು ತಿಗಳರಪಾಳ್ಯದ ನಿವಾಸಿ ಚಂದ್ರು ಹೇಳಿದರು.

'ಮನೆಗಳಿಂದ ಕಸ ಸಂಗ್ರಹಿಸುವ ವಾಹನ ಬರುತ್ತಿಲ್ಲ. ಈ ಮೊದಲು ಒಂದು ವಾರಕ್ಕೆ ಒಮ್ಮೆಯಾದರೂ ಬರುತ್ತಿತ್ತು. ಈಗ ಅದೂ ಇಲ್ಲ. ಸಾರ್ವಜನಿಕರು ಎಲ್ಲೆಂದರಲ್ಲಿ ಕಸ ಸುರಿಯುವುದರಿಂದ ಮಕ್ಕಳಿಗೆ ರೋಗದ ಭೀತಿ ಉಂಟಾಗಿದೆ' ಎಂದು ಹೂಡಿಯ ಮಾರಮ್ಮ ದೇವಸ್ಥಾನದ ಬಳಿಯ ನಿವಾಸಿ ನೇತ್ರಾ ದೂರಿದರು.



ಹೂಡಿಯ ಮಾರಮ್ಮ ದೇವಸ್ಥಾನದ ಬಳಿ ಕಸ ಸುರಿದಿರುವುದು

ಕುವೆಂಪು ಕುರಿತು ವಿಚಾರಸಂಕಿರಣ 17ಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕುವೆಂಪು ವಿಶ್ವಮಾನವ ಕ್ಷೇಮಾಭಿವೃದ್ಧಿ ಟ್ರಸ್ಟ್ ಹಾಗೂ ದೆಹಲಿ ಕರ್ನಾಟಕ ಸಂಘದ ಸಹಯೋಗದಲ್ಲಿ ಇದೇ 17ರಂದು ದೆಹಲಿ ಕರ್ನಾಟಕ ಸಂಘದಲ್ಲಿ ರಾಷ್ಟ್ರಕವಿ ಕುವೆಂಪು ಅವರ ಸಾಧನೆ ಮತ್ತು ಕೊಡುಗೆ ಕುರಿತು ವಿಚಾರಸಂಕಿರಣ ಆಯೋಜಿಸಲಾಗಿದೆ.

ಮಂಗಳವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಾಹಿತಿ ಹಂ.ಪ. ನಾಗರಾಜಯ್ಯ, ಟ್ರಸ್ಟ್‌ನ ಅಧ್ಯಕ್ಷ ಎಚ್.ಕೆ.ರಾಮು, 'ಆದಿಚುಂಚನಗಿರಿ ಮಠದ ಪೀಠಾಧಿಪತಿ ನಿರ್ಮಲಾನಂದನಾಥ ಸ್ವಾಮೀಜಿ ಅವರು ವಿಚಾರಸಂಕಿರಣ ಉದ್ಘಾಟಿಸಲಿದ್ದಾರೆ. ಬೇಲಿಮಠದ ಶಿವರುದ್ರ ಸ್ವಾಮೀಜಿ, ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ನಿಶ್ಚಲಾನಂದನಾಥ ಸ್ವಾಮೀಜಿ, ರಾಷ್ಟ್ರಕವಿ ಕುವೆಂಪು ಅವರ ಭಾವಚಿತ್ರವನ್ನು ಹಾಗೂ ಹಿಂದಿ ಭಾಷೆಗೆ ಅನುವಾದಗೊಂಡಿರುವ ಕುವೆಂಪು ಅವರ 'ರಾಮಾಯಣ ದರ್ಶನಂ' ಗ್ರಂಥವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಿಡುಗಡೆ ಮಾಡಲಿದ್ದಾರೆ' ಎಂದರು.

'ಅತಿಥಿಗಳಾಗಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಶಾಸಕ ಜಿ.ಟಿ. ದೇವೇಗೌಡ, ವಿಶ್ರಾಂತ ಕುಲಪತಿ ಕೆ.ಎಸ್.ರಂಗಪ್ಪ, ದೆಹಲಿ ಕರ್ನಾಟಕದ ಸಂಘದ ಅಧ್ಯಕ್ಷ ಸಿ.ಎಂ. ನಾಗರಾಜ್ ಭಾಗವಹಿಸಲಿದ್ದಾರೆ' ಎಂದರು.



ಕನಕದಾಸರ ಪ್ರತಿಮೆಯನ್ನು ಎಸ್. ಟಿ. ಸೋಮಶೇಖರ್ ಜನಾರ್ಪಣೆ ಮಾಡಿದರು. ಈಶ್ವರಾನಂದ ಸ್ವಾಮೀಜಿ, ಆರ್. ಶಿವಮಾದಯ್ಯ ವೆಂಕಟೇಶ್ ಉಪಸ್ಥಿತರಿದ್ದರು

'ದೇಗುಲಗಳಿಗಿಂತ ವಿದ್ಯಾಲಯ ಹೆಚ್ಚಲಿ'

ರಾಜರಾಜೇಶ್ವರಿ ನಗರ: 'ದೇವಾಲಯಗಳಿಗಿಂತ ಹೆಚ್ಚಾಗಿ ವಿದ್ಯಾಲಯಗಳನ್ನು ಸ್ಥಾಪಿಸುವ ಮೂಲಕ ಸುಶಿಕ್ಷಿತರನ್ನಾಗಿ ಮಾಡುವ ಕೆಲಸದಲ್ಲಿ ಪ್ರತಿಯೊಬ್ಬರೂ ತೊಡಗಿಸಿಕೊಳ್ಳಬೇಕು' ಎಂದು ಎಂದು ಕಾಗಿನೆಲೆ ಹೊಸದುರ್ಗ ಕನಕ ಗುರು ಪೀಠಾಧ್ಯಕ್ಷ ಈಶ್ವರಾನಂದ ಸ್ವಾಮೀಜಿ ಹೇಳಿದರು.

ಎಚ್. ಗೊಲ್ಲಹಳ್ಳಿ ಬಳಿಯ ದಾಸಯ್ಯನ ಗುಟ್ಟೆ ಕನಕಗಿರಿ ಕ್ಷೇತ್ರದಲ್ಲಿ ಕುಂದೂರು ಬೀರೇಶ್ವರ ಸ್ವಾಮಿ ದೇವಸ್ಥಾನದ ಕಟ್ಟಡ ಕಾಮಗಾರಿಗೆ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದ ಅವರು, 'ಶಿಕ್ಷಣದಿಂದ ಜ್ಞಾನ, ವ್ಯಕ್ತಿತ್ವ, ಮಾನವೀಯತೆ, ಸಂಸ್ಕಾರ, ಭಕ್ತಿ ಮಾರ್ಗದಲ್ಲಿ ಸಾಗಬಹುದು' ಎಂದರು.

ಕನಕದಾಸರ ಪ್ರತಿಮೆಯನ್ನು ಜನಾರ್ಪಣೆ ಮಾಡಿದ ಶಾಸಕ ಎಸ್. ಟಿ. ಸೋಮಶೇಖರ್, 'ಇಂತಹ ಕಾರ್ಯಗಳ ಮೂಲಕ ನಮ್ಮ ಧಾರ್ಮಿಕ ಸಂಸ್ಕೃತಿ ಮತ್ತಷ್ಟು ಶ್ರೀಮಂತಗೊಳಿಸಬೇಕು' ಎಂದು ಹೇಳಿದರು.

ಬೆಂಗಳೂರು ನಗರ ಜಿಲ್ಲಾ ಕಾಂಗ್ರೆಸ್ ಮಾಜಿ ಪ್ರಧಾನ ಕಾರ್ಯದರ್ಶಿ ಆರ್. ಶಿವಮಾದಯ್ಯ ದೇವಾಲಯದ ಹೆಬ್ಬಾಗಿಲು ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿದರು. ದೇವಸ್ಥಾನದ ಅಭಿವೃದ್ಧಿ ಸಮಿತಿಯ ಅಧ್ಯಕ್ಷ ವೆಂಕಟೇಶ್ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಎಚ್. ಈರಯ್ಯ ಮತ್ತಿತರರು ಉಪಸ್ಥಿತರಿದ್ದರು.

ಸಚಿವ ಪ್ರಿಯಾಂಕ್ ಖರ್ಗೆ ಕಾರ್ಯವೈಖರಿ ಪ್ರಸ್ತಾಪಿಸಲು ಬಿಜೆಪಿ ನಿರ್ಧಾರ

ಬೆಳಗಾವಿ: ಆರ್‌ಎಸ್‌ಎಸ್ ಮತ್ತು ಬಿಜೆಪಿಯನ್ನು ಗುರಿಯಾಗಿಸಿಕೊಂಡಿರುವ ಸಚಿವ ಪ್ರಿಯಾಂಕ್ ಖರ್ಗೆ ಅವರ ಕಾರ್ಯವೈಖರಿ ಮತ್ತು ಇಲಾಖಾ ವೈಫಲ್ಯಗಳನ್ನು ವಿಧಾನ ಮಂಡಲದಲ್ಲಿ ಪ್ರಸ್ತಾಪಿಸಲು ಬಿಜೆಪಿ ಶಾಸಕಾಂಗ ಪಕ್ಷದ ಸಭೆಯಲ್ಲಿ ತೀರ್ಮಾನಿಸಲಾಗಿದೆ.

ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿರುವುದು ಮತ್ತು ಪೊಲೀಸರೇ ಅಪರಾಧ ಚಟುವಟಿಕೆಗಳಲ್ಲಿ ತೊಡಗಿರುವ ವಿಷಯವನ್ನು ಮುಂದಿನ ವಾರ ಪ್ರಸ್ತಾಪಿಸಲಿದೆ. ಅಲ್ಲದೇ, ಪರಿಶಿಷ್ಟರಿಗೆ ಮೀಸಲಾದ ಅನುದಾನದ ದುರ್ಬಳಕೆ ವಿಷಯವಾಗಿ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಲು ನಿರ್ಧರಿಸಲಾಗಿದೆ. ಸದನದಲ್ಲಿ ಎಲ್ಲರೂ ಒಗ್ಗಟ್ಟಿನಿಂದ ಸರ್ಕಾರದ ವಿರುದ್ಧ ಮುಗಿ ಬೀಳಲು ನಿರ್ಧರಿಸಲಾಯಿತು ಎಂದು ಮೂಲಗಳು ಹೇಳಿವೆ.

ಭಾರತಕ್ಕೆ ಹಸ್ತಾಂತರ: ಚೋಕ್ಸಿ ಅರ್ಜಿ ವಜಾ

ನವದೆಹಲಿ (ಪಿಟಿಐ): ತನ್ನನ್ನು ಭಾರತಕ್ಕೆ ಹಸ್ತಾಂತರಿಸುವುದನ್ನು ಪ್ರಶ್ನಿಸಿ ದೇಶಭ್ರಷ್ಟ ವಜ್ರಾಭರಣ ವ್ಯಾಪಾರಿ ಮೆಹುಲ್ ಚೋಕ್ಸಿ ಸಲ್ಲಿಸಿದ್ದ ಅರ್ಜಿಯನ್ನು ಬೆಲ್ಜಿಯಂನ ಸುಪ್ರೀಂ ಕೋರ್ಟ್ ವಜಾಗೊಳಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪಂಜಾಬ್ ನ್ಯಾಷನಲ್ ಬ್ಯಾಂಕಿಗೆ ₹13,000 ಕೋಟಿ ವಂಚಿಸಿದ ಆರೋಪವನ್ನು ಚೋಕ್ಸಿ ಎದುರಿಸುತ್ತಿದ್ದಾರೆ.

ಹಗರಣ ಪತ್ತೆಯಾಗುವ ಮುನ್ನ 2018ರ ಜನವರಿಯಲ್ಲಿ ಚೋಕ್ಸಿ ಆಂಟಿಗುವಾ, ಬಾರ್ಬುಡಾಗೆ ಪರಾರಿಯಾಗಿದ್ದರು. ಬಳಿಕ ಚಿಕಿತ್ಸೆ ಪಡೆಯುವ ನೆಪದಲ್ಲಿ ಬೆಲ್ಜಿಯಂಗೆ ತೆರಳಿದ್ದರು. ಮುಂಬೈ ವಿಶೇಷ ನ್ಯಾಯಾಲಯ ಹೊರಡಿಸಿದ ಬಂಧನದ ವಾರಂಟ್‌ಗಳ ಆಧಾರ ಮೇಲೆ ಭಾರತವು 2024ರ ಆಗಸ್ಟ್ 27ರಂದು ಚೋಕ್ಸಿಯನ್ನು ಹಸ್ತಾಂತರಿಸುವಂತೆ ಬೆಲ್ಜಿಯಂಗೆ ಮನವಿ ಮಾಡಿತ್ತು.

ಪೊಲೀಸರ ನಿಂದನೆ: ಆರೋಪಿ ಖುಲಾಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಹಾರದಲ್ಲಿ ಪೊಲೀಸರು ವ್ಯಕ್ತಿಯೊಬ್ಬನ ಮೇಲೆ ಹಲ್ಲೆ ನಡೆಸಿದ್ದ ವಿಡಿಯೊ ತುಣುಕನ್ನು ಸಾಮಾಜಿಕ ಜಾಲತಾಣದಲ್ಲಿ ಹಂಚಿ, ಅದನ್ನು ಕರ್ನಾಟಕ ಪೊಲೀಸರ ಕೃತ್ಯವೆಂದು ಲಾಕ್‌ಡೌನ್ ಸಮಯದಲ್ಲಿ ಸುಳ್ಳು ಸುದ್ದಿ ಹಬ್ಬಿಸಿ ಪೊಲೀಸರ ವಿರುದ್ಧ ಸಾರ್ವಜನಿಕರನ್ನು ಪ್ರಚೋದಿಸಿದ ಆರೋಪ ಎದುರಿಸುತ್ತಿದ್ದ ಕಾಂಗ್ರೆಸ್ ಕಾರ್ಯಕರ್ತೆ ಪದ್ಮಾ ಹರೀಶ್ ಅವರನ್ನು ನಗರದ ಎಸಿಜೆಎಂ ನ್ಯಾಯಾಲಯ ಖುಲಾಸೆಗೊಳಿಸಿದೆ.

ಈ ಕುರಿತಂತೆ ಪ್ರಕರಣದ ವಿಚಾರಣೆ ನಡೆಸಿದ 47ನೇ ಹೆಚ್ಚುವರಿ ಮುಖ್ಯ ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯದ ನ್ಯಾಯಾಧೀಶ ಬಿ.ಸಿದ್ದರಾಜು ಆರೋಪಿಯನ್ನು ಆಪಾದನೆಗಳಿಂದ ಖುಲಾಸೆಗೊಳಿಸಿ ಆದೇಶಿಸಿದ್ದಾರೆ.

ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಾಲಯ, 'ದೂರುದಾರರು ತಮ್ಮ ದೂರಿನೊಂದಿಗೆ ವಿಡಿಯೊ ಕ್ಲಿಪ್ಪಿಂಗ್ ಕೊಟ್ಟಿಲ್ಲ. ಆರೋಪಿಯ ಮೊಬೈಲ್ ನಂಬರ್ ಉಲ್ಲೇಖ ಮಾಡಿಲ್ಲ. ದೋಷಾರೋಪ ಪಟ್ಟಿಯಲ್ಲಿ ಕೊಟ್ಟ ಸ್ಕ್ರೀನ್ ಶಾಟ್ ಆರೋಪಿಯ ವಿಡಿಯೊಗೆ ಸಂಬಂಧಪಟ್ಟಿಲ್ಲ. ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ (ಎಫ್‌ಎಸ್‌ಎಲ್) ಕಳುಹಿಸಿದ ವಿಡಿಯೊದಲ್ಲಿ ಆರೋಪಿಯ ಧ್ವನಿ ಇಲ್ಲ ಎಂದು ಎಫ್‌ಎಸ್‌ಎಲ್ ವರದಿ ನೀಡಲಾಗಿದೆ. ಪೊಲೀಸರು ವಾಟ್ಸ್ ಆ್ಯಪ್ ಗ್ರೂಪಿನ ವಿವರ, ಸ್ವತಂತ್ರ ಸಾಕ್ಷಿಗಳನ್ನು ವಿಚಾರಣೆ ಮಾಡಿಲ್ಲ' ಎಂಬ ಅಭಿಪ್ರಾಯದೊಂದಿಗೆ ನ್ಯಾಯಾಲಯ ಆರೋಪ ಮುಕ್ತಗೊಳಿಸಿದೆ. ಪದ್ಮಾ ಹರೀಶ್ ಪರ ಹೈಕೋರ್ಟ್ ವಕೀಲ ಸೂರ್ಯ ಮುಕುಂದರಾಜ್ ವಾದ ಮಂಡಿಸಿದ್ದರು.

ಪ್ರಕರಣವೇನು?



ಸಿಇಎನ್ (ಸೈಬರ್, ಎಕನಾಮಿಕ್ ಅಂಡ್ ನಾರ್ಕೊಟಿಕ್ ಕ್ರೈಂ) ಪೊಲೀಸ್ ಠಾಣೆಯಲ್ಲಿ ಸಬ್ ಇನ್‌ಸ್ಪೆಕ್ಟರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದ ಅಕ್ಷತಾ ಕುರಕುಂದಿ 2021ರ ಮೇ 12ರಂದು ದೂರು ನೀಡಿ, 'ಪೊಲೀಸ್ ಸಮವಸ್ತ್ರದಲ್ಲಿದ್ದ ಕೆಲವರು ವ್ಯಕ್ತಿಯೊಬ್ಬನ ಮೇಲೆ ಹಲ್ಲೆ ನಡೆಸುತ್ತಿದ್ದ ವಿಡಿಯೊ ತುಣುಕೊಂದು ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿತ್ತು.

ಪದ್ಮಾ ಹರೀಶ್ ಎಂದು ಹೇಳಿಕೊಂಡಿದ್ದ ಮಹಿಳೆಯೊಬ್ಬರು ಅದನ್ನು ಕರ್ನಾಟಕ ಪೊಲೀಸರ ಕೃತ್ಯವೆಂದು ಬಿಂಬಿಸಿ ರಾಜ್ಯದ ಪೊಲೀಸರನ್ನು ನರಭಕ್ಷಕರೆಂದು ಕರೆದಿದ್ದರಲ್ಲದೆ, ಅವಾಚ್ಯ ಶಬ್ದಗಳಿಂದ ನಿಂದಿಸಿದ್ದರು. ಕೋವಿಡ್ ಸಂದರ್ಭದಲ್ಲಿ ಲಾಕ್‌ಡೌನ್ ನಿಯಮಗಳ ಜಾರಿಗೆ ಮುಂದಾಗಿದ್ದ ಪೊಲೀಸ್ ಸಿಬ್ಬಂದಿ ವಿರುದ್ಧ ಸಾರ್ವಜನಿಕರನ್ನು ಪ್ರಚೋದಿಸಿದ್ದಾರೆ' ಎಂದು ಆರೋಪಿಸಿದ್ದರು.

ಚಿಟಿಕೆ ಸುದ್ದಿ


ಬೆಂಗಳೂರು ವಿ.ವಿ: ಕೊನೆಯ ದಿನಾಂಕ ವಿಸ್ತರಣೆ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಕಾಲೇಜುಗಳು 2026-27ನೇ ಶೈಕ್ಷಣಿಕ ಸಾಲಿಗೆ ವಿವಿಧ ರೀತಿಯ ಸಂಯೋಜನಾ ಅರ್ಜಿಗಳನ್ನು ಸಲ್ಲಿಸಲು ನಿಗದಿಪಡಿಸಿದ್ದ ಕೊನೆಯ ದಿನಾಂಕವನ್ನು ವಿಸ್ತರಿಸಲಾಗಿದೆ.

ದಂಡರಹಿತವಾಗಿ ಇದೇ 15ರವರೆಗೆ ಮತ್ತು ₹1000 ದಂಡ ಶುಲ್ಕದೊಂದಿಗೆ ಇದೇ 18ರವರೆಗೆ ಅರ್ಜಿಗಳನ್ನು ಸಲ್ಲಿಸಬಹುದು ಎಂದು ಕುಲಸಚಿವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಮ್ಮಸಂದ್ರ ಸುರೇಶ್‌ಗೆ ಪುಸ್ತಕ ಬಹುಮಾನ

ಬೆಂಗಳೂರು: ಬಿ.ಎಂ.ಶ್ರೀ. ಪ್ರತಿಷ್ಠಾನ ನೀಡುವ 'ಸಾರಂಗಿ ವೆಂಕಟರಾಮಯ್ಯ ಪುಟ್ಟಚ್ಚಮ್ಮ ದತ್ತಿ ಪುಸ್ತಕ ಬಹುಮಾನ'ಕ್ಕೆ ಅಮ್ಮಸಂದ್ರ ಸುರೇಶ್ ಅವರ 'ಅಗ್ನಿಕುಂಡದಿಂದ ಬಂದ ಚೇತನ' ಕಾದಂಬರಿ ಆಯ್ಕೆಯಾಗಿದೆ.



ಅಮ್ಮಸಂದ್ರ ಸುರೇಶ್

ಈ ಬಹುಮಾನವು ₹3 ಸಾವಿರ ನಗದು ಹಾಗೂ ಅಭಿನಂದನಾ ಪತ್ರ ಒಳಗೊಂಡಿದೆ. ಇದೇ 23ರಂದು ಪ್ರತಿಷ್ಠಾನದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಬಹುಮಾನ ವಿತರಣೆ ಮಾಡಲಾಗುತ್ತದೆ ಎಂದು ಪ್ರತಿಷ್ಠಾನದ ಗೌರವ ಕಾರ್ಯದರ್ಶಿ ಶಾಂತರಾಜು ಅವರು ತಿಳಿಸಿದ್ದಾರೆ.

ಎಸ್‌ಐಆರ್‌ಸಿ ಸಮ್ಮೇಳನ 12–13ಕ್ಕೆ

ಬೆಂಗಳೂರು: ಇನ್‌ಸ್ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯಾದ (ಐಸಿಎಐ) ಬೆಂಗಳೂರು ಶಾಖೆಯು ಇದೇ 12 ಮತ್ತು 13ರಂದು ಜ್ಞಾನಜ್ಯೋತಿ ಸಭಾಂಗಣದಲ್ಲಿ ಐದನೇ ಆವೃತ್ತಿಯ ಐಸಿಎಐ ಸಮ್ಮೇಳನ ಹಮ್ಮಿಕೊಂಡಿದೆ.

ಮಂಗಳವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಐಸಿಎಐ ಬೆಂಗಳೂರು ಶಾಖೆಯ ಕಾರ್ಯದರ್ಶಿ ತುಪ್ಪದ ವಿರೂಪಾಕ್ಷಪ್ಪ ಮುಪ್ಪಣ್ಣ, 'ಐಟಿ-ಬಿಟಿ ಇಲಾಖೆಯ ಕಾರ್ಯದರ್ಶಿ ಮಂಜುಳಾ ಎನ್. ಅವರು ಸಮ್ಮೇಳನ ಉದ್ಘಾಟಿಸುತ್ತಾರೆ. ಲೆಕ್ಕಪರಿಶೋಧಕರಾದ ಪ್ರಸನ್ನ ಕುಮಾರ್ ಡಿ., ಸಂಜೀವ್ ಸಂಘಿ, ಅಭಯ್ ಛಾಜೇದ್, ಮಧುಕರ್ ಎನ್. ಹಿರೇಗಂಗೆ ಮತ್ತು ಮಂಜುನಾಥ್ ಎಂ. ಹಳ್ಳೂರ್ ಭಾಗವಹಿಸಲಿದ್ದಾರೆ' ಎಂದು ಹೇಳಿದರು.

'ಎರಡು ದಿನಗಳ ಈ ಸಮ್ಮೇಳನದಲ್ಲಿ ಲೆಕ್ಕಪರಿಶೋಧನೆ ಕ್ಷೇತ್ರಕ್ಕೆ ಸಂಬಂಧಿಸಿದ ಚರ್ಚೆಗಳು ನಡೆಯಲಿವೆ. ದೇಶದ ವಿವಿಧ ಭಾಗಗಳಿಂದ ವಿಷಯ ತಜ್ಞರು ಭಾಗವಹಿಸಲಿದ್ದಾರೆ' ಎಂದು ಹೇಳಿದರು.

ಕ್ರಿಸ್‌ಮಸ್ ಬಜಾರ್ 12ರಿಂದ

ಬೆಂಗಳೂರು: ಕ್ರಿಸ್‌ಮಸ್ ಹಬ್ಬದ ಅಂಗವಾಗಿ ವೀ ಕ್ಯಾನ್ ಸಂಘದಿಂದ ಇದೇ 12 ಮತ್ತು 13ರಂದು ಬ್ರಿಗೇಡ್ ರಸ್ತೆಯಲ್ಲಿರುವ ಸೇಂಟ್ ಪ್ಯಾಟ್ರಿಕ್ ಚರ್ಚ್‌ನಲ್ಲಿ ಕ್ರಿಸ್‌ಮಸ್ ಬಜಾರ್ ಆಯೋಜಿಸಲಾಗುತ್ತಿದೆ.

ಮಹಿಳಾ ಉದ್ಯಮಿಗಳು ತಯಾರಿಸಿದ ಎಕ್ಸ್-ಮಾಸ್, ಟೆರ್ರಾಕೋಟ, ಆಭರಣಗಳು, ಹ್ಯಾಂಡ್ ಮೇಡ್ ಸೋಪ್ ಮತ್ತು ಮೊಂಬತ್ತಿಗಳು, ಸೀರೆಗಳು, ಕೇಕ್ ಸೇರಿದಂತೆ ಅನೇಕ ವಸ್ತುಗಳ ಪ್ರದರ್ಶನ ಹಾಗೂ ಮಾರಾಟ ಬೆಳಿಗ್ಗೆ 10ರಿಂದ ಸಂಜೆ 7 ಗಂಟೆಯವರೆಗೆ ಇರಲಿದೆ ಎಂದು ಪ್ರಕಟಣೆ ತಿಳಿಸಿದೆ.

ಕುವೆಂಪು ಚಿರಂತನ' ಪ್ರಶಸ್ತಿಗೆ ಪುಸ್ತಕ ಆಹ್ವಾನ

ಬೆಂಗಳೂರು: ಕನ್ನಡ ಸಂಘರ್ಷ ಸಮಿತಿಯು 'ಕುವೆಂಪು ಚಿರಂತನ ಪ್ರಶಸ್ತಿ'ಗೆ 2025ರಲ್ಲಿ ಪ್ರಕಟಗೊಂಡ ಕೃತಿಗಳನ್ನು ಆಹ್ವಾನಿಸಿದೆ.

ಪ್ರಶಸ್ತಿಯು ₹10 ಸಾವಿರ ನಗದು ಒಳಗೊಂಡಿದೆ. 'ವೈಚಾರಿಕತೆ'ಗೆ ಒತ್ತುಕೊಟ್ಟ ಕಥೆ, ಕಾದಂಬರಿ, ನಾಟಕ ಸೇರಿ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿನ ಕೃತಿಗಳನ್ನು ಪ್ರಶಸ್ತಿಗೆ ಪರಿಗಣಿಸಲಾಗುತ್ತದೆ.

ಕೃತಿಯ ಎರಡು ಪ್ರತಿಗಳನ್ನು ಎ.ಎಸ್.ನಾಗರಾಜಸ್ವಾಮಿ, ಅಧ್ಯಕ್ಷ, ಕನ್ನಡ ಸಂಘರ್ಷ ಸಮಿತಿ, ನಂ.3, 1ನೇ ತಿರುವು, 1ನೇ ಮುಖ್ಯ ರಸ್ತೆ, ಅನ್ನಪೂರ್ಣೇಶ್ವರಿ ಬಡಾವಣೆ, ಉಲ್ಲಾಳ ಮುಖ್ಯ ರಸ್ತೆ, ಬೆಂಗಳೂರು-560 056 ಈ ವಿಳಾಸಕ್ಕೆ ಜನವರಿ 10ರೊಳಗೆ ಕಳುಹಿಸಬೇಕು ಎಂದು ಪ್ರಕಟಣೆ ತಿಳಿಸಿದೆ.

ಸಂಪರ್ಕಕ್ಕೆ: 9739001410

ಸುದ್ದಿ 2 ನಿಮಿಷ

ಯುವತಿಗೆ ಅಶ್ಲೀಲ ಫೋಟೊ ಕಳಿಸುತ್ತಿದ್ದ ಆರೋಪಿ ಬಂಧನ

ಹಾರೋಹಳ್ಳಿ: ಎಡಿಟ್ ಮಾಡಿದ ಅಶ್ಲೀಲ ಫೋಟೊ ಕಳುಹಿಸಿ ಯುವತಿಗೆ ತೊಂದರೆ ಕೊಡುತ್ತಿದ್ದ ಆರೋಪಿಯನ್ನು ಕಗ್ಗಲಿಪುರ ಪೊಲೀಸರು ಬಂಧಿಸಿದ್ದಾರೆ.

ಬೆಂಗಳೂರಿನ ಮಲ್ಲೇಶ್ವರದ ಶಿವಶಂಕರ್(35) ಬಂಧಿತ ಆರೋಪಿ. ಈತ ಮೂಲತಃ ಬಳ್ಳಾರಿಯ ಕುರುಗೋಡು ಬಳಿಯ ಯಲ್ಲಾಪುರ ಗ್ರಾಮದ ನಿವಾಸಿ.

ನ.16 ರಂದು ಆರೋಪಿಯು ದೂರುದಾರರಿಗೆ ವರ್ಕ್ ಫ್ರಮ್ ಹೋಂ ಕೆಲಸ ಕೊಡಿಸುವುದಾಗಿ ನಂಬಿಸಿ, ಪರಿಚಯ ಮಾಡಿಕೊಂಡಿದ್ದ ದೂರುದಾರರಿಂದ ಮುಂಗಡವಾಗಿ ₹500 ಪಡೆದು ನಂತರ ಮೊಬೈಲ್ ವಾಲೆಟ್‌ನಲ್ಲಿದ್ದ ದೂರುದಾರರ ಭಾವಚಿತ್ರವನ್ನು ಅಶ್ಲೀಲವಾಗಿ ಎಡಿಟ್ ಮಾಡಿ ದೂರುದಾರರಿಗೆ ಹಾಗೂ ಪರಿಚಯದವರಿಗೆ ಕಳುಹಿಸಿ ತೊಂದರೆ ನೀಡುತ್ತಿದ್ದ ಎಂದು ಯುವತಿ ಡಿ.5ರಂದು ಕಗ್ಗಲೀಪುರ ಠಾಣೆ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಪೊಲೀಸರು ಪ್ರಕರಣ ದಾಖಲಿಸಿ ತನಿಖೆ ಕೈಗೊಂಡಿದ್ದರು.

ಆರೋಪಿಯನ್ನು ಡಿ.6 ರಂದು ವಶಕ್ಕೆ ಪಡೆದು ವಿಚಾರಣೆ ನಡೆಸಿದರು. ಬೆಂಗಳೂರಿನಲ್ಲಿ ಕೊರಿಯರ್ ವಿಲೇವಾರಿ ಹಾಗೂ ಬಾಡಿಗೆ ಬೈಕ್ ಓಡಿಸುವ ಕೆಲಸ ಮಾಡುತ್ತಿದ್ದ ಆರೋಪಿ ಫ್ರೆಂಡ್ ಆ್ಯಪ್ ಮೂಲಕ ಯುವತಿಯರು ಮತ್ತು ಮಹಿಳೆಯರನ್ನು ಸಂಪರ್ಕಿಸಿ ವರ್ಕ್ ಫ್ರಮ್ ಹೋಂ ಕೆಲಸ ಕೊಡಿಸುವುದಾಗಿ ನಂಬಿಸುತ್ತಿದ್ದ. ಅವರಿಂದ ಫೋಟೊ ಹಾಗೂ ದಾಖಲೆ ಪಡೆದು ನಂತರ ಫೋಟೊಗಳನ್ನು ಅಶ್ಲೀಲವಾಗಿ ಎಡಿಟ್ ಮಾಡಿ ಪರಿಚಯಸ್ಥರಿಗೆ ಕಳಿಸುತ್ತಿದ್ದ ಎಂಬ ವಿಷಯ ವಿಚಾರಣೆಯಲ್ಲಿ ಬೆಳಕಿಗೆ ಬಂದಿದೆ.



ಬಂಧಿತನಿಂದ ಕೃತ್ಯಕ್ಕೆ ಬಳಕೆ ಮಾಡಿದ ಮೊಬೈಲ್ ಫೋನ್ ವಶಪಡಿಸಿಕೊಂಡು ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಮಳೆ ಹಾನಿ ಪ್ರದೇಶಗಳಿಗೆ ಜೆಡಿಎಸ್ ತಂಡ: ಸುರೇಶ್ ಬಾಬು

ಬೆಳಗಾವಿ: ಅತಿವೃಷ್ಟಿಯಿಂದ ಹಾನಿಯಾಗಿರುವ ಮೆಕ್ಕೆಜೋಳ, ಹತ್ತಿ ಬೆಳೆ ಪ್ರದೇಶಗಳಿಗೆ ಭೇಟಿ ನೀಡಿ, ಮಾಹಿತಿ ಸಂಗ್ರಹಿಸಲಾಗುವುದು ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಸುರೇಶ್ ಬಾಬು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅವರು, 'ಜೆಡಿಎಸ್-ಬಿಜೆಪಿ ಹೋರಾಟದ ಫಲವಾಗಿ ಅಧಿವೇಶನದಲ್ಲಿ ಉತ್ತರ ಕರ್ನಾಟಕ ಭಾಗದ ಸಮಸ್ಯೆಗಳ ಬಗ್ಗೆ ಹೆಚ್ಚಿನ ಚರ್ಚೆಗೆ ಅವಕಾಶ ಸಿಕ್ಕಿದೆ. ಮಳೆಯಿಂದ ಮೆಕ್ಕೆಜೋಳ, ಹತ್ತಿ ಬೆಳೆಗೆ ತೀವ್ರ ಹಾನಿಯಾಗಿದೆ. ಜೆಡಿಎಸ್ ಮುಖಂಡರನ್ನು ಒಳಗೊಂಡ ತಂಡ ಹಾನಿ ಪ್ರದೇಶಗಳಿಗೆ ಭೇಟಿ ನೀಡಲಿದೆ. ವರದಿಯನ್ನು ರಾಜ್ಯಪಾಲರಿಗೆ ಸಲ್ಲಿಸಲಿದೆ' ಎಂದರು.

ಕೇಂದ್ರ ಸರ್ಕಾರದ ತಂಡ ಹಾನಿ ಪ್ರದೇಶಗಳಲ್ಲಿ ಈಗಾಗಲೇ ಸಮೀಕ್ಷೆ ಪೂರ್ಣಗೊಳಿಸಿದೆ. ಆದರೆ, ರಾಜ್ಯ ಸರ್ಕಾರ ರೈತರ ಸಮಸ್ಯೆಗಳಿಗೆ ಸ್ಪಂದಿಸುವಲ್ಲಿ ವಿಫಲವಾಗಿದೆ. ತುಂಗಭದ್ರಾ ಜಲಾಶಯದ ಗೇಟ್ ಸೇರಿದಂತೆ ಎಲ್ಲ ವಿಷಯಗಳಲ್ಲೂ ರೈತ ವಿರೋಧಿ ನೀತಿ ಅನುಸರಿಸುತ್ತಿದೆ ಎಂದು ದೂರಿದರು.

'ಜೆಡಿಎಸ್ ಸದಸ್ಯರು ಭತ್ಯೆ ಕೂಡ ತೆಗೆದುಕೊಳ್ಳದೆ ಬೆಳಗಾವಿ ಅಧಿವೇಶನದಲ್ಲಿ ಭಾಗಿಯಾಗಿದ್ದಾರೆ. ಸದಸ್ಯರ ಬೇಡಿಕೆಯಂತೆ ಉತ್ತರ ಕರ್ನಾಟಕ ಭಾಗದ ಸಮಸ್ಯೆಗಳ ಬಗ್ಗೆ ಚರ್ಚಿಸಲು ಅವಕಾಶ ಸಿಕ್ಕಿದೆ. ಈ ವಿಷಯದಲ್ಲಿ ಜೆಡಿಎಸ್ ಶಾಸಕ ಶರಣಗೌಡ ಕಂದಕೂರ ಅವರ ಅವಿರತ ಹೋರಾಟವಿದೆ' ಎಂದರು.

ಚಿತ್ರಾವಳಿ



ವಲಸೆ ಮತ್ತು ಗ್ರಾಮೀಣ ಸಮುದಾಯದ ಮಕ್ಕಳಿಗೆ ರೋಟರಿ ಬೆಂಗಳೂರು ಮಿಡ್‌ಟೌನ್ ಜಕ್ಕೂರಿನ ರಂಗೋಲಿ ಗಾರ್ಡನ್‌ನಲ್ಲಿ ಹಮ್ಮಿಕೊಂಡಿದ್ದ ಉತ್ಸವದಲ್ಲಿ ಮಕ್ಕಳು ವಿವಿಧ ಆಟಗಳನ್ನು ಆಡಿ ಸಂಭ್ರಮಿಸಿದರು. ರೋಟರಿ ಬೆಂಗಳೂರು ಮಿಡ್‌ಟೌನ್‌ನ ಪ್ರತಿನಿಧಿಗಳು ಉಪಸ್ಥಿತರಿದ್ದರು



ಯೂನಿವರ್ಸಲ್ ಸ್ಕೂಲ್ ಆಫ್ ಲಾ ಮಂಗಳವಾರ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಸಭಾಂಗಣದಲ್ಲಿ ಆಯೋಜಿಸಿದ ಅಂತರರಾಷ್ಟ್ರೀಯ ಮಾನವ ಹಕ್ಕುಗಳ ದಿನ'ಆಚರಣೆ ಕಾರ್ಯಕ್ರಮದಲ್ಲಿ ಕರ್ನಾಟಕ ಕಾನೂನು ಆಯೋಗದ ಅಧ್ಯಕ್ಷರು ನ್ಯಾಯಮೂರ್ತಿ ಅಶೋಕ ಬಿ. ಹಿಂಚಿಗೇರಿ ಅವರನ್ನು ಯೂನಿವರ್ಸಲ್ ಗ್ರೂಪ್ ಆಫ್ ಇನ್ಸ್ಟಿಟ್ಯೂಷನ್ ಅಧ್ಯಕ್ಷ ಆರ್. ಉಪೇಂದ್ರ ಶೆಟ್ಟಿ ಸ್ವಾಗತಿಸಿದರು. ಯೂನಿವರ್ಸಲ್ ಸ್ಕೂಲ್ ಆಫ್ ಲಾ ಪ್ರಾಂಶುಪಾಲರು ಜುವೆಲ್ ಎಂ. ಪಣಿಕ್ಕರ್ ಯೂನಿವರ್ಸಲ್ ಸ್ಕೂಲ್ ಆಫ್ ಅಡ್ಮಿನಿಸ್ಟ್ರೇಷನ್ ಶಿಕ್ಷಣ ನಿರ್ದೇಶಕರು ಮೀರಾ ಕೃಷ್ಣಪ್ಪ, ಮಾನವ ಹಕ್ಕುಗಳ ಸಂಸ್ಥೆ ಅಮ್ನೆಸ್ಟಿ ಇಂಟರ್‌ನ್ಯಾಶನಲ್‌ನ ಮಾಜಿ ಪ್ರಧಾನ ಕಾರ್ಯದರ್ಶಿ ಸಲೀಲ್ ಶೆಟ್ಟಿ, ಯೂನಿವರ್ಸಲ್ ಗ್ರೂಪ್ ಆಫ್ ಇನ್ಸ್ಟಿಟ್ಯೂಷನ್ ನಿರ್ವಾಹಕ ಸಂತೋಷ್ ಜೆ ಶೆಟ್ಟಿ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ನಿರ್ವಹಣೆ ಮಾಡದ ಅಧಿಕಾರಿಗಳು, ಜನರಿಗೆ ರೋಗದ ಭೀತಿ

ಶೆಟ್ಟಿಹಳ್ಳಿ ರಸ್ತೆ ಇಕ್ಕೆಲಗಳಲ್ಲಿ ಕಸದ ರಾಶಿ

● ಪ್ರಸನ್ನಕುಮಾರ್ ಯಾದವ್

ಪೀಣ್ಯ ದಾಸರಹಳ್ಳಿ: ಮುಖ್ಯರಸ್ತೆಯ ಪಕ್ಕದಲ್ಲೇ ರಾಶಿ ರಾಶಿ ಕಸ, ಸುತ್ತಲೂ ಗಬ್ಬೆದ್ದು ನಾರುವ ವಾತಾವರಣ, ರಸ್ತೆಯಲ್ಲಿ ಹರಡಿರುವ ಕಸದಲ್ಲಿ ಆಹಾರ ಹುಡುಕುವ ಬೀಡಾಡಿ ದನ ಮತ್ತು ಬೀದಿ ನಾಯಿಗಳು. ಶೆಟ್ಟಿಹಳ್ಳಿ ವಾರ್ಡ್‌ನಲ್ಲಿ ಒಂದು ಸುತ್ತು ಹಾಕಿದರೆ ಇಂತಹ ಅವ್ಯವಸ್ಥೆ ಕಂಡುಬರುತ್ತದೆ.

ವಾರ್ಡ್ ವ್ಯಾಪ್ತಿಯಲ್ಲಿ ಸಮರ್ಪಕ ತ್ಯಾಜ್ಯ ವಿಲೇವಾರಿಯಾಗದ ಕಾರಣ ರಸ್ತೆಯ ಸುತ್ತಮುತ್ತ ಎಲ್ಲೆಂದರಲ್ಲಿ ರಾಶಿಗಟ್ಟಲೆ ಕಸ ಹಾಕುತ್ತಿದ್ದು, ಈ ಪ್ರದೇಶ ತ್ಯಾಜ್ಯದ ವಲಯವಾಗಿ ಮಾರ್ಪಟ್ಟಿದೆ.

ಮೇದರಹಳ್ಳಿ ರೈಲ್ವೆ ಗೇಟ್‌ನಿಂದ ರಾಘವೇಂದ್ರ ಬಡಾವಣೆಗೆ ಹೋಗುವ ದಾರಿಯಲ್ಲಿ, ಅಬ್ಬಿಗೆರೆಯಿಂದ ಮೇದರಹಳ್ಳಿ ಕಡೆ ತಿರುವಿನಲ್ಲಿ, ಶೆಟ್ಟಿಹಳ್ಳಿಯಿಂದ ಸಪ್ತಗಿರಿ ಕಾಲೇಜಿಗೆ ಹೋಗುವ ರಸ್ತೆಯ ಎರಡೂ ಬದಿ, ಚಿಕ್ಕಸಂದ್ರ ಮತ್ತು ಕಮ್ಮಗೊಂಡನಹಳ್ಳಿ ಭಾಗದ ಕಡೆಗಳಲ್ಲಿ ಕಸದ ರಾಶಿಯಿದೆ.

'ಮಳೆ ಬಂದಾಗ ಕಸವೆಲ್ಲ ಕೊಳೆತು ದುರ್ನಾತದಿಂದ ನೊಣ ಮತ್ತು ಸೊಳ್ಳೆಗಳು ಉತ್ಪತ್ತಿಯಾಗಿ ಅಕ್ಕ ಪಕ್ಕದ ನಿವಾಸಿಗಳಿಗೆ ಸಾಂಕ್ರಾಮಿಕ ರೋಗ ಹರಡುವ ಭೀತಿ ಇದೆ. ಅಧಿಕಾರಿಗಳು ಎಚ್ಚೆತ್ತುಕೊಂಡು ಕಸದ ಸಮಸ್ಯೆ ಬಗೆಹರಿಸಬೇಕು' ಎಂದು ಸಾರ್ವಜನಿಕರು ಆಗ್ರಹಿಸಿದರು.

ಜನರು ವಾಹನಗಳಲ್ಲಿ ಕಸ ತಂದು ಎಸೆದು ಹೋಗುತ್ತಾರೆ. ಅಬ್ಬಿಗೆರೆಯಲ್ಲಿ 20 ಕಡೆಗಳಲ್ಲಿ ಕಸದ ರಾಶಿ ಇದೆ. ಗುತ್ತಿಗೆದಾರರು ಅಧಿಕಾರಿಗಳ ಜೊತೆ ಶಾಮೀಲು ಆಗಿರುವ ಶಂಕೆ ಇದೆ. ಗುತ್ತಿಗೆದಾರರು ಹೋಟೆಲ್, ಅಂಗಡಿಗಳಿಂದ ಮಾತ್ರ ಕಸ ಸಂಗ್ರಹಿಸುತ್ತಾರೆ. ಮನೆಗಳಿಂದ ಕಸ ಸಂಗ್ರಹ ಮಾಡುತ್ತಿಲ್ಲ' ಎಂದು ಸ್ಥಳೀಯ ನಿವಾಸಿ ಅಬ್ಬಿಗೆರೆ ಮಂಜುನಾಥಗೌಡ ಆಕ್ರೋಶ ವ್ಯಕ್ತಪಡಿಸಿದರು.

ಗ್ರೇಟರ್ ಬೆಂಗಳೂರು ಪ್ರಾಧಿಕಾರ ರಚನೆಯಾದರೂ ಕಸದ ಸಮಸ್ಯೆ ಬಗೆಹರಿಯುತ್ತಿಲ್ಲ. ಕೆಲವೆಡೆ ಸರಿಯಾಗಿ ನಿರ್ವಹಣೆಯಾಗುತ್ತಿಲ್ಲ. ಅಧಿಕಾರಿಗಳು ಕಣ್ಮುಚ್ಚಿ ಕುಳಿತಿದ್ದಾರೆ. ಗುತ್ತಿಗೆದಾರರು ಕೂಡ ಕಸದ ನಿರ್ವಹಣೆ ಸರಿಯಾಗಿ ಮಾಡುತ್ತಿಲ್ಲ' ಎಂದು ಸಂಪರ್ಕ ನಾಗರಿಕ ಸೇವೆ ಮತ್ತು ಸಂಘಟನೆ ಅಧ್ಯಕ್ಷ ರಘು ಸೂರ್ಯ ದೂರಿದರು.

'ಬಳಕೆಯಾಗದ ಹಾಸಿಗೆ, ಬೆಡ್‌ಶೀಟ್ ಇತ್ಯಾದಿ ತ್ಯಾಜ್ಯವನ್ನು ಹಾಕುತ್ತಾರೆ. ಕಮ್ಮಗೊಂಡನಹಳ್ಳಿ ರೈಲ್ವೆ ಹಳಿ ಪಕ್ಕದ ರಸ್ತೆ ಬದಿಯಲ್ಲಿ ಕಸದ ರಾಶಿ ಇದೆ. ಇಲ್ಲಿ ಸಿ.ಸಿ. ಟಿ.ವಿ ಕ್ಯಾಮೆರಾ ಅಳವಡಿಸಿ, ಮಾರ್ಷಲ್‌ಗಳನ್ನು ನೇಮಕ ಮಾಡಿ ಕಸ ಎಸೆದವರಿಗೆ ದಂಡ ವಿಧಿಸಿದರೆ ಜನರು ಎಚ್ಚೆತ್ತುಕೊಳ್ಳುತ್ತಾರೆ' ಎಂದು ಸ್ಥಳೀಯ ನಿವಾಸಿ ಕಿಶೋರ್ ಕುಮಾರ್ ತಿಳಿಸಿದರು.

ಮುಖ್ಯಾಂಶಗಳು

- ಅಧಿಕಾರಿಗಳ ನಿರ್ಲಕ್ಷ್ಯ
- ಕಸ ವಿಲೇವಾರಿ ಗುತ್ತಿಗೆದಾರರ ಬೇಜವಾಬ್ದಾರಿತನ
- ಕಟ್ಟುನಿಟ್ಟಿನ ಕ್ರಮಕ್ಕೆ ಸಾರ್ವಜನಿಕರ ಆಗ್ರಹ



ರಸ್ತೆ ಪಕ್ಕದಲ್ಲಿನ ಕಸದ ರಾಶಿ

ಡ್ರಗ್ಸ್ ದಂಧೆಗೆ ಬೀಳದ ಕಡಿವಾಣ

ಈ ವರ್ಷ ₹162.87 ಕೋಟಿ ಮೌಲ್ಯದ ವಿವಿಧ ಮಾದರಿ ಮಾದಕ ವಸ್ತುಗಳ ಜಪ್ತಿ

• ಆದಿತ್ಯ ಕೆ.ಎ.

ಬೆಂಗಳೂರು: ಡ್ರಗ್ಸ್ ಮಾರಾಟ, ಪೂರೈಕೆಯ ವಿರುದ್ಧ ನಗರದ ವಿವಿಧ ಠಾಣೆ ಪೊಲೀಸರು ಹಾಗೂ ಸಿಸಿಬಿ ಘಟಕದ ಸಿಬ್ಬಂದಿ(ಮಾದಕ ದ್ರವ್ಯ ನಿಗ್ರ ದಳ) ನಿರಂತರ ಕಾರ್ಯಾಚರಣೆ ನಡೆಸುತ್ತಿದ್ದರೂ ನಗರದಲ್ಲಿ ಡ್ರಗ್ಸ್ ದಂಧೆಗೆ ಕಡಿವಾಣ ಬಿದ್ದಿಲ್ಲ.

ಮಾದಕ ವಸ್ತುಗಳ ಪೂರೈಕೆಗೆ ಪೆಡ್ಲರ್‌ಗಳು ಹಲವು ಉಪಾಯ ಕಂಡುಕೊಂಡಿದ್ದಾರೆ. ಪೊಲೀಸರೂ ಅಷ್ಟೇ ವೇಗದಲ್ಲಿ ಡ್ರಗ್ಸ್ ದಂಧೆಕೋರರನ್ನು ಮಟ್ಟಹಾಕಲು ಕಾರ್ಯಾಚರಣೆ ನಡೆಸುತ್ತಿದ್ದಾರೆ. ಕಳೆದೆರಡು ವರ್ಷಗಳಿಗೆ ಹೋಲಿಸಿದರೆ, ಈ ವರ್ಷ ಹೆಚ್ಚಿನ ಮೊತ್ತದ ಡ್ರಗ್ಸ್ ವಶಕ್ಕೆ ಪಡೆಯುವಲ್ಲಿ ನಗರದ ಪೊಲೀಸರು ಯಶಸ್ವಿ ಆಗಿದ್ದಾರೆ.

ವರ್ಷಾಂತ್ಯದಲ್ಲಿ ನಡೆಯುವ ಪಾರ್ಟಿಗಳಿಗೆ ನೈಸರ್ಗಿಕ ಹಾಗೂ ಸಿಂಥೆಟಿಕ್ ಡ್ರಗ್ಸ್ ಪೂರೈಕೆ ಆಗುವ ಮಾಹಿತಿ ಸಿಕ್ಕಿದ್ದು, ಒಂದು ತಿಂಗಳಿಂದ ಪೊಲೀಸರ ಕಾರ್ಯಾಚರಣೆ ಚುರುಕು ಪಡೆದುಕೊಂಡಿದೆ.

ಆಂಧ್ರಪ್ರದೇಶ, ತೆಲಂಗಾಣ, ದೆಹಲಿಯಿಂದ ಸಿಂಥೆಟಿಕ್ ಡ್ರಗ್ಸ್ ಬೆಂಗಳೂರಿಗೆ ಪೂರೈಕೆಯಾಗುವ ಮಾಹಿತಿ ಸಿಕ್ಕಿದ್ದು, ಪೆಡ್ಲರ್‌ಗಳ ಮೇಲೆ ಸಿಸಿಬಿ ಪೊಲೀಸರು ಕಣ್ಣಿಟ್ಟಿದ್ದಾರೆ. ಮಾದಕ ವಸ್ತುಗಳ ಮುಕ್ತ ನಗರ ಮಾಡಲು ಪೊಲೀಸರು ಪಣ ತೊಟ್ಟಿದ್ದಾರೆ.

2023ರಲ್ಲಿ ₹103.32 ಕೋಟಿ ಮೌಲ್ಯದ ಡ್ರಗ್ಸ್ ಹಾಗೂ 2024ರಲ್ಲಿ ₹98.83 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ ಮಾಡಲಾಗಿತ್ತು. ಈ ವರ್ಷ(ಡಿಸೆಂಬರ್ 9ರವರೆಗೆ) ₹162.87 ಕೋಟಿ ಮೌಲ್ಯದ ವಿವಿಧ ಮಾದರಿಯ ಮಾದಕ ವಸ್ತುಗಳನ್ನು ನಗರ ಪೊಲೀಸರು ವಶಕ್ಕೆ ಪಡೆದುಕೊಳ್ಳುವಲ್ಲಿ ಯಶಸ್ವಿ ಆಗಿದ್ದಾರೆ. ಆ ಪೈಕಿ ಸಿಸಿಬಿ ಪೊಲೀಸರೇ ₹120 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ ಮಾಡಿ ಪೆಡ್ಲರ್‌ಗಳಿಗೆ ಬಿಸಿ ಮುಟ್ಟಿಸಿದ್ದಾರೆ.



ಸಿಂಥೆಟಿಕ್ ಡ್ರಗ್

> ಗುಪ್ತಚರ ಮಾಹಿತಿ ಹಾಗೂ ತಾಂತ್ರಿಕ ಮೂಲಗಳನ್ನು ಬಳಸಿಕೊಂಡು ಡ್ರಗ್ಸ್ ದಂಧೆಗೆ ಕಡಿವಾಣ ಹಾಕುವ ಕೆಲಸ ಸಾಗುತ್ತಿದೆ. ಈ ಬಾರಿ ಹೆಚ್ಚಿನ ಪ್ರಮಾಣದಲ್ಲಿ ಡ್ರಗ್ಸ್ ಜಪ್ತಿ ಮಾಡಲಾಗಿದೆ
>
> **ಸೀಮಾಂತ್‌ಕುಮಾರ್ ಸಿಂಗ್**
> ನಗರ ಪೊಲೀಸ್ ಕಮಿಷನರ್

ಪಾರ್ಟಿಗಳ ಮೇಲೆ ನಿಗಾ: ಹೊಸ ವರ್ಷದ ಸಂದರ್ಭದಲ್ಲಿ ಬೆಂಗಳೂರಿನಲ್ಲಿ ನಡೆಯುವ ಪಾರ್ಟಿಗಳಿಗೆ ಪೂರೈಸಲು ಸಂಗ್ರಹಿಸಿಕೊಂಡಿದ್ದ ₹37 ಕೋಟಿ ಮೌಲ್ಯದ ವಿವಿಧ ಮಾದರಿಯ ಡ್ರಗ್ಸ್ ಅನ್ನು ಕಳೆದ 15 ದಿನಗಳಲ್ಲಿ ಸಿಸಿಬಿಯ ಸಿಬ್ಬಂದಿ ಜಪ್ತಿ ಮಾಡಿದ್ದಾರೆ. 10 ಮಂದಿ ಪೆಡ್ಲರ್‌ಗಳನ್ನು ಬಂಧಿಸುವಲ್ಲಿ ಯಶಸ್ವಿ ಆಗಿದ್ದಾರೆ. ವರ್ಷಾಂತ್ಯದಲ್ಲಿ ನಗರದಲ್ಲಿ ಇರುವ ಪಬ್, ಹೊರವಲದಲ್ಲಿರುವ ಹೋಮ್ ಸ್ಟೇಗಳು, ಸ್ಟಾರ್ ಹೋಟೆಲ್‌ಗಳ ಆವರಣದಲ್ಲಿ ವಿಶೇಷ ಪಾರ್ಟಿಗಳನ್ನು ಆಯೋಜಿಸಲು ಸಿದ್ಧತೆ ನಡೆದಿದೆ. ಈ ಪಾರ್ಟಿಗಳಿಗೆ ಡ್ರಗ್ಸ್ ಪೂರೈಸಲು ದಾಸ್ತಾನು ಮಾಡಿಕೊಂಡಿದ್ದ ಕೇಂದ್ರಗಳ ಮೇಲೂ ದಾಳಿ ನಡೆಸಲಾಗುತ್ತಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಕೆ.ಜಿ.ನಗರ ಪೊಲೀಸ್ ಠಾಣಾ ವ್ಯಾಪ್ತಿಯ ಅಂಚೆ ಕಚೇರಿಗೆ ಥಾಯ್ಲೆಂಡ್‌ನಿಂದ ಬಂದಿದ್ದ ಪಾರ್ಸಲ್‌ಗಳಲ್ಲಿ ಹೈಡ್ರೊಗಾಂಜಾ ಇರುವುದನ್ನು ಪೊಲೀಸರು ಪತ್ತೆಹಚ್ಚಿದ್ದಾರೆ.

'ಪೆಡ್ಲರ್‌ಗಳು ಹೊಸ ಹೊಸ ಸಂಚು ರೂಪಿಸಿಕೊಂಡು ಮಾದಕ ವಸ್ತುಗಳನ್ನು ಸಾಗಣೆ ಮಾಡುತ್ತಿದ್ದಾರೆ. ಚಾಕೊಲೇಟ್, ಕಾಫಿ-ಟೀ ಪುಡಿ, ಗಿಫ್ಟ್ ಬಾಕ್ಸ್, ಆಹಾರ ಪದಾರ್ಥಗಳ ಪೊಟ್ಟಣಗಳಲ್ಲಿ ಡ್ರಗ್ಸ್ ಬಚ್ಚಿಟ್ಟು ಸಾಗಣೆ ಮಾಡುತ್ತಿರುವುದು ಕಂಡುಬಂದಿದೆ. 18ರಿಂದ 35 ವರ್ಷದ ಒಳಗಿನವರನ್ನೇ ಗುರಿಯಾಗಿಸಿ ಮಾರಾಟ ಮಾಡುತ್ತಿರುವುದು ಪತ್ತೆಯಾಗಿದೆ' ಎಂದು ಅಧಿಕಾರಿಯೊಬ್ಬರು ಹೇಳಿದರು.

ಡ್ರಗ್ಸ್ ದಂಧೆಯ ವಿರುದ್ಧ ನಗರದ ಎಲ್ಲ ವಿಭಾಗದ ಪೊಲೀಸರ ಕಾರ್ಯಾಚರಣೆ

ವರ್ಷ	ಪೆಡ್ಲರ್ ಸೆರೆ	ಗಿರಾಕಿಗಳ ಸೆರೆ	ಬಂಧಿತರು	ಡ್ರಗ್ಸ್ ಜಪ್ತಿ (ಕೆ.ಜಿ)	ವಶಕ್ಕೆ ಪಡೆದ ಡ್ರಗ್ಸ್ (ಕೋಟಿಯಲ್ಲಿ)
2023	677	2,766	3,443	5,388	₹103.32
2024	482	13	495	1,923	₹98.83
2025*	452	626	1,078	1,447	₹162.87
ಸಿಸಿಬಿ ಪೊಲೀಸರ ಕಾರ್ಯಾಚರಣೆ					
2025*	55	6	61	147	₹120.14

62 ವಿದೇಶಿ ಪೆಡ್ಲರ್‌ಗಳ ಸೆರೆ

ಡ್ರಗ್ಸ್ ದಂಧೆಯಲ್ಲಿ ತೊಡಗಿದ್ದ 62 ವಿದೇಶಿ ಪ್ರಜೆಗಳನ್ನು ಈ ವರ್ಷ ಬಂಧಿಸಲಾಗಿದೆ. 2023ರಲ್ಲಿ 101 ಹಾಗೂ 2024ರಲ್ಲಿ 61 ವಿದೇಶಿ ಪ್ರಜೆಗಳನ್ನು ಬಂಧಿಸಲಾಗಿತ್ತು.

ಶಿಕ್ಷಣ ಹಾಗೂ ಪ್ರವಾಸಿ ವೀಸಾದ ಮೇಲೆ ನಗರಕ್ಕೆ ಬಂದು, ಅವಧಿ ಮುಕ್ತಾಯವಾದ ಮೇಲೂ ನಗರದಲ್ಲಿಯೇ ನೆಲಸಿ ಅಕ್ರಮ ಚಟುವಟಿಕೆಯಲ್ಲಿ ತೊಡಗಿದ್ದರು ಎಂದು ಸಿಸಿಬಿ ಮೂಲಗಳು ತಿಳಿಸಿವೆ.

ನಿಯಂತ್ರಣಕ್ಕೆ ಪೊಲೀಸರ ಕ್ರಮ

- ಜೈಲಿನಿಂದ ಬಿಡುಗಡೆಯಾದ ಆರೋಪಿಗಳ ಮೇಲೆ ನಿರಂತರ ನಿಗಾ
- ಮಾದಕ ದ್ರವ್ಯ ಮಾರಾಟದಲ್ಲಿ ಭಾಗಿಯಾಗಿರುವ ವಿದೇಶಿ ಪ್ರಜೆಗಳ ಪತ್ತೆಹಚ್ಚಿ, ಬಂಧನ
- ಶಾಲಾ-ಕಾಲೇಜುಗಳಲ್ಲಿ ಡ್ರಗ್ಸ್ ವಿರುದ್ಧ ಅಭಿಯಾನ, ವಿದ್ಯಾರ್ಥಿಗಳಲ್ಲಿ ಜಾಗೃತಿ ಕಾರ್ಯಕ್ರಮ

ಸ್ಕೂಟರ್‌ನಲ್ಲಿದ್ದ ಹಣ ಕಳ್ಳತನ ಪ್ರಕರಣ, ಉಳಿದವರ ಪತ್ತೆಗೆ ಶೋಧ

'ಓಜಿಕುಪ್ಪಂ ಗ್ಯಾಂಗ್'ನ ಆರೋಪಿ ಬಂಧನ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಬ್ಯಾಂಕ್‌ನಿಂದ ಹಣ ಡ್ರಾ ಮಾಡಿಕೊಂಡು ತೆರಳುತ್ತಿದ್ದ ವ್ಯಕ್ತಿಯನ್ನು ಹಿಂಬಾಲಿಸಿ ಹಣ ದೋಚಿ ಪರಾರಿಯಾಗಿದ್ದ 'ಓಜಿಕುಪ್ಪಂ ಗ್ಯಾಂಗ್'ನ ಆರೋಪಿಯನ್ನು ಕೆ.ಆರ್.ಪುರ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ತಮಿಳುನಾಡಿನ ತಿರುಚಿಯ ಗಾಂಧಿನಗರದ ರಾಜು ಅಲಿಯಾಸ್ ಚಿನ್ನುಕುಮಾರ್ (32) ಬಂಧಿತ. ಜನರ ಗಮನ ಬೇರೆಡೆ ಸೆಳೆದು ನಗದು ಕಳ್ಳತನ ಮಾಡುತ್ತಿದ್ದ ತಮಿಳುನಾಡಿನ 'ಓಜಿಕುಪ್ಪಂ ಗ್ಯಾಂಗ್'ನಲ್ಲಿ ರಾಜು ಗುರುತಿಸಿಕೊಂಡಿದ್ದ. ಆರೋಪಿಯಿಂದ ₹4 ಲಕ್ಷ ನಗದು ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಹೊರಮಾವು ಅಗ್ರಹಾರ ಪ್ರಕಾಶ್ ಗಾರ್ಡನ್‌ನಲ್ಲಿ ನೆಲಸಿದ್ದ ವ್ಯಕ್ತಿಯೊಬ್ಬರು, ಕಳೆದ ವರ್ಷದ ಡಿ.19ರಂದು ರಾಮಮೂರ್ತಿನಗರದ 'ಡಿ' ಮಾರ್ಟ್ ಬಳಿಯ ಬ್ಯಾಂಕ್‌ವೊಂದರಿಂದ ₹5 ಲಕ್ಷ ಡ್ರಾ ಮಾಡಿಕೊಂಡು ಸ್ಕೂಟರ್‌ನಲ್ಲಿ ಇಟ್ಟುಕೊಂಡು ಕೆಆರ್ ಪುರದ ಟಿಸಿ ಪಾಳ್ಯದಲ್ಲಿ ನಿರ್ಮಾಣ ಹಂತದ ಕಟ್ಟಡದ ಬಳಿಗೆ ಬಂದಿದ್ದರು. ಕಾರ್ಮಿಕರಿಗೆ ಕೊಡಲು ಡ್ರಾ ಮಾಡಿದ್ದ ಹಣದ ಪೈಕಿ ₹50 ಸಾವಿರವನ್ನು ತೆಗೆದುಕೊಂಡು, ಉಳಿಕೆ ಹಣವನ್ನು ಸ್ಕೂಟರ್‌ನಲ್ಲೇ ಇಟ್ಟು ತೆರಳಿದ್ದರು. ವಾಪಸ್ ಬಂದು ನೋಡಿದಾಗ ಹಣ ಇರಲಿಲ್ಲ ಎಂದು ಪೊಲೀಸರು ಹೇಳಿದರು.

ತಮಿಳುನಾಡಿನ ತಿರುಚಿಯ ಗಾಂಧಿನಗರದ ಸುಳ್ಳುಕೋವಿಲ್ ಎಂಬಲ್ಲಿ ಆರೋಪಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಯಿತು. ಕೆಂಗೇರಿಯ ಐವರು ಸಹಚರರೊಂದಿಗೆ ಸೇರಿಕೊಂಡು ಹಣ ದೋಚಿ ಪರಾರಿ ಆಗಿರುವುದಾಗಿ ಆರೋಪಿ ತಪ್ಪೊಪ್ಪಿಕೊಂಡಿದ್ದಾನೆ. ವರ್ಷದ ಬಳಿಕ ಆರೋಪಿಯನ್ನು ಬಂಧಿಸಲಾಗಿದೆ. ಉಳಿದ ಆರೋಪಿಗಳ ಪತ್ತೆ ಕಾರ್ಯ ನಡೆಯುತ್ತಿದೆ ಎಂದು ಮೂಲಗಳು ತಿಳಿಸಿವೆ.

ಕಳವು ಮಾಡಿದ್ದ ಹಣವನ್ನು ಕೋರಮಂಗಲದಲ್ಲಿರುವ ಪರಿಚಯಸ್ಥರಿಗೆ ನೀಡಿರುವುದಾಗಿ ಆರೋಪಿ ತಿಳಿಸಿದ್ದ. ಅವರಿಂದ ₹4 ಲಕ್ಷ ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ಹೇಳಿದರು.

ಲಿಂಗ ಪರಿವರ್ತನೆಗೆ ಯತ್ನ: ಇಬ್ಬರ ವಶ

ಯುವಕನೊಬ್ಬನನ್ನು ಲಿಂಗತ್ವ ಅಲ್ಪಸಂಖ್ಯಾತರು ಕರೆದೊಯ್ದು ಲಿಂಗ ಪರಿವರ್ತನೆಗೆ ಯತ್ನಿಸಿರುವುದು ಪೊಲೀಸ್ ತನಿಖೆಯಿಂದ ಗೊತ್ತಾಗಿದ್ದು, ಪ್ರಕರಣ ಸಂಬಂಧ ಇಬ್ಬರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಈ ಸಂಬಂಧ ಪ್ರಕರಣ ದಾಖಲಿಸಿಕೊಂಡು ಕಾರ್ಯಾಚರಣೆ ನಡೆಸಿದ ದೇವರ ಜೀವನಹಳ್ಳಿ(ಡಿ.ಜೆ.ಹಳ್ಳಿ) ಠಾಣೆ ಪೊಲೀಸರು, ಸೈಯದ್ ಸಾಜೀದ್ (23) ಅವರನ್ನು ತಮಿಳುನಾಡಿನಲ್ಲಿ ಮಧುರೈನಲ್ಲಿ ರಕ್ಷಣೆ ಮಾಡಿ ನಗರಕ್ಕೆ ಕರೆ ತಂದಿದ್ದಾರೆ.

ಕೃತ್ಯ ಎಸಗಿದ ಆರೋಪದಡಿ ಇಬ್ಬರು ಲಿಂಗತ್ವ ಅಲ್ಪಸಂಖ್ಯಾತರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ ಎಂದು ಗೊತ್ತಾಗಿದೆ. ನಾಪತ್ತೆ ಪ್ರಕರಣದ ದೂರು ಆಧರಿಸಿ ತನಿಖೆ ನಡೆಸಿದಾಗ ಕೃತ್ಯ ಬಯಲಾಗಿದೆ.

ಡಿ.ಜೆ.ಹಳ್ಳಿಯ ಮಸೀದಿಯೊಂದರ ಮೌಲ್ವಿಯ ಪುತ್ರ ಸೈಯದ್ ಸಾಜೀದ್ ಅವರು ಡಿ.5ರಂದು ಸಂಜೆ ಮಸೀದಿಗೆ ಹೋಗುವುದಾಗಿ ಹೇಳಿ ತೆರಳಿದ್ದರು. ರಾತ್ರಿಯಾದರೂ ಮನೆಗೆ ವಾಪಸ್ ಆಗಿರಲಿಲ್ಲ. ಆತಂಕಗೊಂಡ ಮನೆಯವರು ಪೊಲೀಸ್ ಠಾಣೆಗೆ ತೆರಳಿ ದೂರು ನೀಡಿದ್ದರು. ದೂರು ಆಧರಿಸಿ ತನಿಖೆ ನಡೆಸಿದ ತಂಡ, ಯುವಕ ನಡೆದು ಹೋಗಿದ್ದ ರಸ್ತೆಯಲ್ಲಿದ್ದ ಸಿ.ಸಿ.ಟಿ.ವಿಯಲ್ಲಿ ಸೆರೆಯಾದ ದೃಶ್ಯಾವಳಿ ಪರಿಶೀಲನೆ ನಡೆಸಿದರು. ಮೇಖ್ರಿ ವೃತ್ತದ ಬಳಿ ಲಿಂಗತ್ವ ಅಲ್ಪಸಂಖ್ಯಾತರೊಬ್ಬರ ಜತೆ ಹೋಗುತ್ತಿರುವುದು ಪತ್ತೆಯಾಯಿತು ಎಂದು ಮೂಲಗಳು ತಿಳಿಸಿವೆ.

ವಿಶೇಷ ತಂಡ ರಚಿಸಿಕೊಂಡು ಕಾರ್ಯಾಚರಣೆ ನಡೆಸಿ ತಮಿಳುನಾಡಿನ ಮಧುರೈನಲ್ಲಿ ಯುವಕನನ್ನು ರಕ್ಷಣೆ ಮಾಡಲಾಗಿದೆ. ಯುವಕನಿಗೆ ಯಾವುದೇ ಶಸ್ತ್ರಚಿಕಿತ್ಸೆ ನಡೆದಿಲ್ಲ. ವೈದ್ಯಕೀಯ ತಪಾಸಣೆ ನಡೆಸಲಾಗುತ್ತಿದೆ ಎಂದು ಪೊಲೀಸರು ಮಾಹಿತಿ ನೀಡಿದರು. ಡಿ.ಜೆ.ಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹಗಲು ಹಣ್ಣಿನ ವ್ಯಾಪಾರ, ರಾತ್ರಿ ಕಳ್ಳತನ: ಆರೋಪಿ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಗಲು ವೇಳೆ ಹಣ್ಣಿನ ವ್ಯಾಪಾರ ಮಾಡಿಕೊಂಡು, ರಾತ್ರಿ ವೇಳೆ ಮನೆಗೆ ನುಗ್ಗಿ ಚಿನ್ನದ ಆಭರಣ, ನಗದು ದೋಚಿ ಪರಾರಿ ಆಗುತ್ತಿದ್ದ ಆರೋಪಿಯನ್ನು ಮಹದೇವಪುರ ಠಾಣೆಯ ಪೊಲೀಸರು ಮಂಗಳವಾರ ಬಂಧಿಸಿದ್ದಾರೆ.

ಮೊಹಮ್ಮದ್ ತಂಜೀಮ್ (33) ಬಂಧಿತ ಆರೋಪಿ. ಬಂಧಿತ ಆರೋಪಿಯಿಂದ ₹29.40 ಲಕ್ಷ ಮೌಲ್ಯದ 245 ಗ್ರಾಂ ಚಿನ್ನಾಭರಣ ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ಹೇಳಿದರು.

ಠಾಣಾ ವ್ಯಾಪ್ತಿಯ ಬಡಾವಣೆಯೊಂದರಲ್ಲಿ ಆರೋಪಿ ನೆಲಸಿದ್ದ ಎಂದು ಮೂಲಗಳು ಹೇಳಿವೆ.

ಡಿಆರ್‌ಡಿಒ ಟೌನ್‌ಶಿಪ್‌ನ ನಿವಾಸಿ ಮ್ಯಾಥ್ಯು ಅವರ ಮನೆಗೆ ಆರೋಪಿ ನುಗ್ಗಿ ಕಳ್ಳತನ ಮಾಡಿದ್ದ. ಮ್ಯಾಥ್ಯು ಅವರು ನೀಡಿದ ದೂರಿನ ಮೇರೆಗೆ ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಖಚಿತ ಮಾಹಿತಿ ಮೇರೆಗೆ ಆರೋಪಿಯನ್ನು ಸಿ.ವಿ ರಾಮನ್ ನಗರದಲ್ಲಿ ವಶಕ್ಕೆ ಪಡೆದು ವಿಚಾರಣೆ ನಡೆಸಲಾಯಿತು. ವಿಚಾರಣೆ ವೇಳೆ ಕಳ್ಳತನ ಮಾಡಿರುವುದಾಗಿ ಆರೋಪಿ ತಪ್ಪೊಪ್ಪಿಕೊಂಡಿದ್ದಾನೆ ಎಂದು ಪೊಲೀಸರು ಹೇಳಿದರು.

'ಕಳವು ಮಾಡಿದ್ದ ಚಿನ್ನಾಭರಣಗಳ ಪೈಕಿ ಕೆಲವು ಆಭರಣಗಳನ್ನು ಮನೆಯಲ್ಲಿಟ್ಟಿದ್ದ. ಉಳಿದವನ್ನು ಪುಲಕೇಶಿನಗರದ ಜ್ಯೂವೆಲರಿ ಅಂಗಡಿಯೊಂದಕ್ಕೆ ಮಾರಾಟ ಮಾಡಿದ್ದ. ಅಲ್ಲಿಂದ ಆಭರಣ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

ಆರೋಪಿ ಮನೆಯಿಂದ 169 ಗ್ರಾಂ ಚಿನ್ನಾಭರಣ, ಕೃತ್ಯಕ್ಕೆ ಬಳಸಿದ ದ್ವಿಚಕ್ರ ವಾಹನ ಹಾಗೂ ಜ್ಯೂವೆಲರಿ ಅಂಗಡಿಯಿಂದ 75 ಗ್ರಾಂ ಆಭರಣ ಸೇರಿದಂತೆ ಒಟ್ಟು 245 ಗ್ರಾಂ ಚಿನ್ನಾಭರಣ ವಶಪಡಿಸಿಕೊಳ್ಳಲಾಗಿದೆ ಎಂದು ಮಹದೇವಪುರ ಠಾಣೆಯ ಪೊಲೀಸರು ತಿಳಿಸಿದ್ದಾರೆ.

ಆರೋಪಿ ವಿರುದ್ಧ ಈ ಹಿಂದೆ ಮೈಸೂರಿನ ನರಸಿಂಹರಾಜಪುರ ಪೊಲೀಸ್ ಠಾಣೆ ಹಾಗೂ ಕೇರಳದ ಎರಡು ಪೊಲೀಸ್ ಠಾಣೆಗಳಲ್ಲಿ ಪ್ರಕರಣಗಳು ದಾಖಲಾಗಿರುವುದು ತನಿಖೆಯಿಂದ ಗೊತ್ತಾಗಿದೆ.

ಹಗಲು ವೇಳೆ ತಳ್ಳು ಗಾಡಿಯಲ್ಲಿ ಹಣ್ಣಿನ ವ್ಯಾಪಾರ ಮಾಡುತ್ತಿದ್ದ ಆರೋಪಿ ಬೀಗ ಹಾಕಿದ ಮನೆಗಳನ್ನು ಗುರುತಿಸುತ್ತಿದ್ದ. ರಾತ್ರಿ ವೇಳೆ ಆ ಮನೆಗೆ ಬಂದು ಕನ್ನ ಹಾಕುತ್ತಿದ್ದ ಎಂದು ಮೂಲಗಳು ಹೇಳಿವೆ.

ಅನಧಿಕೃತ ಬಡಾವಣೆಗಳ ನಿವೇಶನಕ್ಕೆ ಎ–ಖಾತಾ

ಸಂಪುಟ ಸಭೆಯಲ್ಲಿ ನಿರ್ಧಾರ ಕೈಗೊಳ್ಳಲು ಕ್ರಮ: ಸಚಿವ ಬೈರತಿ ಸುರೇಶ್

ಪ್ರಜಾವಾಣಿ ವಾರ್ತೆ



ಬೈರತಿ ಸುರೇಶ್

ಸುವರ್ಣ ವಿಧಾನಸೌಧ (ಬೆಳಗಾವಿ): ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆಯದ, ಅನಧಿಕೃತ ಬಡಾವಣೆಗಳ ಸ್ವತ್ತುಗಳಿಗೆ ಎ-ಖಾತಾ ನೀಡುವ ಕುರಿತು ಸಂಪುಟ ಸಭೆಯಲ್ಲಿ ಚರ್ಚಿಸಿ, ನಿರ್ಧಾರ ಕೈಗೊಳ್ಳಲಾಗುವುದು ಎಂದು ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಹೇಳಿದರು.

ವಿಧಾನಪರಿಷತ್‌ನಲ್ಲಿ ಕಾಂಗ್ರೆಸ್‌ನ ರಾಮೋಜಿಗೌಡ ಅವರ ಪ್ರಶ್ನೆಗೆ ಉತ್ತರಿಸಿದ ಅವರು, 'ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆಯದ ವಿನ್ಯಾಸಗಳು, ವಿವಿಧ ಯೋಜನೆಗಳಲ್ಲಿ ಮಂಜೂರಾದ ನಿವೇಶನಗಳಿಗೆ ಈಗಾಗಲೇ ಬಿ-ಖಾತಾ ನೀಡಲಾಗುತ್ತಿದೆ. ತೆರಿಗೆ ವ್ಯಾಪ್ತಿಗೆ ಒಳಪಡಿಸಲಾಗುತ್ತಿದೆ. ಎ-ಖಾತಾ ನೀಡಲು ಬೇಡಿಕೆ ಇದೆ' ಎಂದರು.

ಮುಖ್ಯಾಂಶಗಳು

- ಅನಧಿಕೃತ ಬಡಾವಣೆ ಸ್ವತ್ತಿಗೆ ಎ–ಖಾತಾ: ಚರ್ಚಿಸಿ ನಿರ್ಧಾರ
- ವಿವಿಧ ಯೋಜನೆಗಳಲ್ಲಿ ಮಂಜೂರಾದ ನಿವೇಶನಕ್ಕೆ ಬಿ– ಖಾತಾ
- ಅರ್ಜಿ ಸಲ್ಲಿಸಿದ 15 ದಿನಗಳ ಒಳಗಾಗಿ ಕಟ್ಟಡ ಪರವಾನಗಿ

ಪೌರಾಡಳಿತ ಸಚಿವ ರಹೀಂ ಖಾನ್ ಮಾತನಾಡಿ, 'ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದ ವಿನ್ಯಾಸಗಳ, ಗ್ರಾಮಠಾಣಾ, ವಿವಿಧ ಯೋಜನೆಯಡಿ ಮಂಜೂರಾದ ನಿವೇಶನಗಳಲ್ಲಿ ಕಟ್ಟಡ ನಿರ್ಮಾಣಕ್ಕೆ ಪರವಾನಗಿ ನೀಡಲಾಗುತ್ತಿದ್ದು, ಇದರಿಂದಾಗಿ ಭೂ-ಪರಿವರ್ತನೆ ಹಾಗೂ ಕಟ್ಟಡ ನಿರ್ಮಾಣಕ್ಕೆ ಯಾವುದೇ ರೀತಿಯ ತೊಂದರೆ ಇಲ್ಲ. ಅಧಿಕೃತ ನಿವೇಶನ ಕಟ್ಟಡಗಳಿಗೆ ನಮೂನೆ -3 ಮತ್ತು ಅನುಮೋದನೆ ಪಡೆಯದ ಸ್ವತ್ತುಗಳಿಗೆ ನಮೂನೆ 3-ಎ ನೀಡಲಾಗುತ್ತಿದೆ' ಎಂದು ತಿಳಿಸಿದರು.

ಕಟ್ಟಡ ಪರವಾನಗಿ ಕೋರಿ ವಾಸ್ತುಶಿಲ್ಪ ಶಾಸ್ತ್ರಜ್ಞರ ಮೂಲಕ ಅಗತ್ಯ ದಾಖಲೆಗಳ ಜತೆ ಅರ್ಜಿ ಸಲ್ಲಿಸಿದ 15 ದಿನಗಳ ಒಳಗಾಗಿ ಕಟ್ಟಡ ಪರವಾನಗಿ ನೀಡಲಾಗುತ್ತಿದೆ. ಖಾತಾ ಪಡೆಯಲು ಅನುಸರಿಸಬೇಕಾದ ಕ್ರಮಗಳ ಬಗ್ಗೆ ಕಾರ್ಯವಿಧಾನ ಹೊರಡಿಸಲಾಗಿದೆ ಎಂದರು.

ಹಳೇ ಪದ್ಧತಿಯಲ್ಲಿ ಇ-ಖಾತಾ

'ಗ್ರೇಟರ್ ಬೆಂಗಳೂರು ವ್ಯಾಪ್ತಿಯಲ್ಲಿ ಇ-ಖಾತಾ ಮತ್ತು ಹೊಸ ಖಾತೆಗಾಗಿ ಸ್ವೀಕರಿಸಲಾದ ಒಟ್ಟು 31,274 ಅರ್ಜಿಗಳನ್ನು ವಿಲೇವಾರಿ ಮಾಡಲು ಕ್ರಮ ತೆಗೆದುಕೊಳ್ಳಲಾಗಿದೆ' ಎಂದು ಡಿ.ಕೆ. ಶಿವಕುಮಾರ್ ತಿಳಿಸಿದರು.

ಬಿಜೆಪಿಯ ಕೆ. ಗೋಪಾಲಯ್ಯ ಅವರ ಪ್ರಶ್ನೆಗೆ ಉತ್ತರಿಸಿದ ಅವರು, 'ಹೊಸ ಮಾದರಿಯಲ್ಲಿ ಇ-ಖಾತಾ ನೀಡುವುದರಿಂದ ಸಾರ್ವಜನಿಕರಿಗೆ ಕೆಲವು ಸಮಸ್ಯೆಗಳು ಎದುರಾಗುತ್ತಿವೆ ಎಂದು ಕೆಲವು ಶಾಸಕರು ಸದಸ್ಯರು ಈ ಬಗ್ಗೆ ಪ್ರಸ್ತಾಪಿಸಿದ್ದಾರೆ. ಎಲ್ಲ ಸಾಧಕ ಬಾಧಕಗಳನ್ನು ಚರ್ಚಿಸಿ, ಈ ಹಿಂದೆ ಇದ್ದಂತಹ ಹಳೇ ಪದ್ಧತಿಯಲ್ಲೇ ಇ-ಖಾತೆ ನೀಡಲು ವ್ಯವಸ್ಥೆ ಮಾಡಲಾಗುವುದು' ಎಂದರು.

ಕಸ ವಿಲೇವಾರಿಗೆ ಹೊಸ ವಿಧಾನ: ಡಿಕೆಶಿ

ಬೆಳಗಾವಿ (ಸುವರ್ಣಸೌಧ): 'ಮಂಗಳೂರಿನಲ್ಲಿ ಇತ್ತೀಚೆಗೆ ಕೀಟ (ಬ್ಲ್ಯಾಕ್ ಸೋಲ್ಜರ್ ಫ್ಲೈ) ಕಸವನ್ನು ತಿಂದು ಗೊಬ್ಬರ ಮಾಡುವ ಬಗ್ಗೆ ವರದಿಯಾಗಿದ್ದು, ಆ ಕುರಿತು ಸಮೀಕ್ಷೆ ನಡೆಸಿ ಕಸ ವಿಲೇವಾರಿಗೆ ಬೆಂಗಳೂರಿನಲ್ಲಿಯೂ ಅದನ್ನು ಬಳಸಿಕೊಳ್ಳಬಹುದೇ ಎಂಬ ಬಗ್ಗೆ ಯೋಚಿಸಲಾಗುತ್ತಿದೆ. ಜೊತೆಗೆ, ಇನ್ನೂ 2-3 ಪ್ರಯೋಗಗಳ ಬಗ್ಗೆಯೂ ಚಿಂತನೆ ನಡೆಸಲಾಗಿದೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ವಿಧಾನಸಭೆಯಲ್ಲಿ ಪ್ರಶ್ನೋತ್ತರ ವೇಳೆಯಲ್ಲಿ ಬಿಜೆಪಿಯ ಧೀರಜ್ ಮುನಿರಾಜು, ಗ್ರೇಟರ್ ಬೆಂಗಳೂರು ಪ್ರಾಧಿಕಾರ ಪ್ರದೇಶದ ವ್ಯಾಪ್ತಿಯಲ್ಲಿ ಸಂಗ್ರಹವಾಗುವ ಕಸವನ್ನು ದೊಡ್ಡಬಳ್ಳಾಪುರ ತಾಲ್ಲೂಕಿನ ದೊಡ್ಡಬೆಳವಂಗಲ ಹೋಬಳಿಯ ಗುಂದಲಹಳ್ಳಿ ಗ್ರಾಮದಲ್ಲಿ ಟೆರ್ರಾ ಫಾರ್ಮಾ ಬಯೋ ಟೆಕ್ನಾಲಜೀಸ್ ಲಿಮಿಟೆಡ್ ಸಂಸ್ಥೆ ಮತ್ತು ಇತರ ಹಿಡುವಳಿದಾರರಿಗೆ ಸೇರಿದ ಒಟ್ಟು 134 ಎಕರೆ 10 ಗುಂಟೆ ಪ್ರದೇಶದಲ್ಲಿ ವಿಲೇವಾರಿ ಮಾಡಲು ನಿರ್ಧರಿಸುವುದಕ್ಕೆ ತೀವ್ರ ವಿರೋಧ ವ್ಯಕ್ತಪಡಿಸಿದರು.


'ಪರಿಸರ ಮಾಲಿನ್ಯದ ಕಾರಣಕ್ಕೆ ಟೆರ್ರಾ ಫಾರ್ಮಾ ಬಯೋಟೆಕ್ನಾಲಜೀಸ್ ಲಿಮಿಟೆಡ್ ಸಂಸ್ಥೆಯನ್ನು 2016ರಲ್ಲಿಯೇ ಮುಚ್ಚಲಾಗಿದೆ. ಅಲ್ಲಿ ಮತ್ತೆ ಕಸ ವಿಲೇವಾರಿ ಕಾರ್ಯ ಆರಂಭಿಸುವುದಕ್ಕೆ ಸ್ಥಳೀಯರ ತೀವ್ರ ವಿರೋಧವಿದೆ' ಎಂದರು.

ಅದಕ್ಕೆ ಪ್ರತಿಕ್ರಿಯಿಸಿದ ಶಿವಕುಮಾರ್, 'ಬೆಂಗಳೂರು ನಗರದಲ್ಲಿ ತ್ಯಾಜ್ಯ ಉತ್ಪಾದನೆ ದಿನೇ ದಿನೇ ಹೆಚ್ಚಾಗುತ್ತಿದ್ದು, ತ್ಯಾಜ್ಯ ನಿರ್ವಹಣೆಗೆ ವೈಜ್ಞಾನಿಕ ಘಟಕಗಳನ್ನು ನಿರ್ಮಿಸಿ, ಸಮಗ್ರ ಘನತ್ಯಾಜ್ಯವನ್ನು ವೈಜ್ಞಾನಿಕ ಘಟಕದಲ್ಲಿ ವಿಲೇವಾರಿ ಮಾಡಲು ಕ್ರಮ ವಹಿಸಲಾಗುತ್ತಿದೆ' ಎಂದರು. 'ಬೆಂಗಳೂರು ನಗರದಲ್ಲಿ ಎಂಟು ಸಾವಿರಕ್ಕೂ ಹೆಚ್ಚು ಟನ್ ಕಸ ಸಂಗ್ರಹವಾಗುತ್ತಿದೆ. ಗ್ರೇಟರ್ ಬೆಂಗಳೂರು ಪ್ರಾಧಿಕಾರದಲ್ಲಿ ಸಂಗ್ರಹವಾಗುವ ಕಸವನ್ನು ಸಂಸ್ಕರಿಸಲು ನಗರದ ಎರಡು ದಿಕ್ಕುಗಳಲ್ಲಿ (ಉತ್ತರ ಮತ್ತು ದಕ್ಷಿಣ) ಘಟಕಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ. ತ್ಯಾಜ್ಯ ನಿರ್ವಹಣೆಗೆ ವೈಜ್ಞಾನಿಕ ಘಟಕಗಳನ್ನು ನಿರ್ಮಿಸಿ, ಹಸಿ ತ್ಯಾಜ್ಯದ ಬಯೋ ಮಿಥೆನೇಷನ್‌ನಿಂದ ಅನಿಲ ಉತ್ಪಾದನೆ, ಗೊಬ್ಬರ ತಯಾರಿಕೆ, ಒಣ ತ್ಯಾಜ್ಯದ ಮರುಬಳಕೆ ಮತ್ತು ವಿದ್ಯುತ್ ಉತ್ಪಾದನೆ ಇತ್ಯಾದಿ ಕಾರ್ಯಗಳನ್ನು ನಿರ್ವಹಿಸಲಾಗುತ್ತಿದೆ. ಅತ್ಯಾಧುನಿಕ ತಂತ್ರಜ್ಞಾನ ಬಳಸಿಕೊಂಡು ಘನತ್ಯಾಜ್ಯ ವಿಲೇವಾರಿ ಮಾಡಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ' ಎಂದರು.

'ಅತ್ಯಂತ ವೈಜ್ಞಾನಿಕವಾಗಿ ಕಸ ವಿಲೇವಾರಿ ಮಾಡುವ ಮೂಲಕ ಸ್ಥಳೀಯವಾಗಿ ಪರಿಸರದ ಮೇಲೆ ಮತ್ತು ಸಮಾಜದ ಮೇಲೆ ಯಾವುದೇ ದುಷ್ಪರಿಣಾಮ ಉಂಟಾಗದಂತೆ ಕ್ರಮ ತೆಗೆದುಕೊಳ್ಳಲಾಗುವುದು' ಎಂದು ಅವರು ಭರವಸೆ ನೀಡಿದರು.

'ಸೈಬರ್ ವಂಚನೆ ಮೊತ್ತ ₹ 5,474 ಕೋಟಿ'

ಪ್ರಜಾವಾಣಿ ವಾರ್ತೆ



ಜಿ.ಪರಮೇಶ್ವರ

ಬೆಳಗಾವಿ (ಸುವರ್ಣ ವಿಧಾನಸೌಧ): 'ರಾಜ್ಯದಲ್ಲಿ 2023ರಿಂದ ಈವರೆಗೆ (ನ. 15ರವರೆಗೆ) 57,733 ಸೈಬರ್ ಅಪರಾಧ ಪ್ರಕರಣಗಳು ದಾಖಲಾಗಿದ್ದು, ₹ 5,474 ಕೋಟಿ ವಂಚನೆ ನಡೆದಿದೆ. ಈ ಪೈಕಿ, 10,717 ಪ್ರಕರಣಗಳನ್ನು ಪತ್ತೆ ಹಚ್ಚಿ ₹ 627 ಕೋಟಿ ವಸೂಲು ಮಾಡಲಾಗಿದೆ' ಎಂದು ಗೃಹ ಸಚಿವ ಜಿ. ಪರಮೇಶ್ವರ ತಿಳಿಸಿದರು.

₹627 ಕೋಟಿ ವಸೂಲು

ವಿಧಾನ ಸಭೆಯಲ್ಲಿ ಬಿಜೆಪಿಯ ಸಿಮೆಂಟ್ ಮಂಜು ಪ್ರಶ್ನೆಗೆ ಉತ್ತರಿಸಿದ ಅವರು, 'ದೇಶ-ವಿದೇಶಗಳಲ್ಲಿ ಇಂದು ಆನ್‌ಲೈನ್ ಬೆಟ್ಟಿಂಗ್ ಹೆಚ್ಚಾಗಿದೆ. ಕಳ್ಳತನ, ಸುಲಿಗೆ, ದರೋಡೆ, ಡಕಾಯಿತಿ ಪ್ರಕರಣಗಳಿಗಿಂತ ಸೈಬರ್ ಅಪರಾಧಗಳ ಸಂಖ್ಯೆ ಹೆಚ್ಚಾಗುತ್ತಿದೆ' ಎಂದರು.

'ಆನ್‌ಲೈನ್ ಗೇಮ್ಸ್ ನಿರ್ಬಂಧಿಸಲು ಕರ್ನಾಟಕ ಪೊಲೀಸ್ (ತಿದ್ದುಪಡಿ) ಕಾಯ್ದೆಗೆ ತಾಂತ್ರಿಕ ಅಂಶಗಳನ್ನು ಸೇರ್ಪಡೆ ಮಾಡಲಾಗಿತ್ತು. ಇದರ ವಿರುದ್ಧ ಇಂಡಿಯನ್ ಗೇಮಿಂಗ್ ಫೆಡರೇಷನ್ ಹೈಕೋರ್ಟ್‌ನಲ್ಲಿ ಮೊಕದ್ದಮೆ ಹೂಡಿದೆ. ಸರ್ಕಾರ ಹೊರಡಿಸಿದ್ದ ತಿದ್ದುಪಡಿ ಆದೇಶವನ್ನು ನ್ಯಾಯಾಲಯ ರದ್ದುಪಡಿಸಿತ್ತು. ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿ ರಾಜ್ಯ ಸರ್ಕಾರ ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದು, ಇದೇ 19ಕ್ಕೆ ವಿಚಾರಣೆಗೆ ಬರಲಿದೆ' ಎಂದರು.

'ಸೈಬರ್ ಅಪರಾಧ ಸಂಭವಿಸಿದಾಗ 'ಸುವರ್ಣ ಅವಧಿ'ಯ ಒಳಗೆ ನಾಗರಿಕರು ಸಂಬಂಧಪಟ್ಟ ಸಂಸ್ಥೆಯೊಂದಿಗೆ ಮಾಹಿತಿ ಹಂಚಿಕೊಂಡರೆ ಪತ್ತೆ ಕಾರ್ಯಕ್ಕೆ ನೆರವಾಗಲಿದೆ. ಹೀಗಾಗಿ, ರಾಜ್ಯ ಗೃಹ ಇಲಾಖೆಯೊಂದಿಗೆ ಸಹಾಯವಾಣಿ ಆರಂಭಿಸಬೇಕು' ಎಂದು ಸಿಮೆಂಟ್ ಮಂಜು ಒತ್ತಾಯಿಸಿದರು.

ಅದಕ್ಕೆ ಉತ್ತರಿಸಿದ ಪರಮೇಶ್ವರ, 'ರಾಜ್ಯದಲ್ಲಿ ಸೈಬರ್ ಅಪರಾಧ ಪ್ರಕರಣಗಳ ತನಿಖೆಗೆ ಪ್ರತ್ಯೇಕವಾಗಿ ಡಿಜಿಪಿ ಶ್ರೇಣಿ ಅಧಿಕಾರಿಯ ನೇತೃತ್ವದಲ್ಲಿ ವಿಭಾಗವನ್ನೇ ಸೃಜಿಸಿರುವುದು ದೇಶದಲ್ಲೇ ಪ್ರಥಮವೆನಿಸಿದೆ. ರಾಜ್ಯದಲ್ಲಿ 43 ಸೈಬರ್ ಅಪರಾಧ ತನಿಖಾ ಠಾಣೆಗಳನ್ನು ಆರಂಭಿಸಲಾಗಿದೆ' ಎಂದು ಹೇಳಿದರು.

'ರೈತನಿಲ್ಲ ಎಂದರೆ ನೀವ್ಯಾರೂ ಇಲ್ಲ...'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರೈತನಿಲ್ಲ ಎಂದರೆ ಸಕ್ಕರೆ ಕಾರ್ಖಾನೆಯಾಗಲೀ ಅಥವಾ ಅವುಗಳ ಮಾಲೀಕರಾಗಲೀ ಯಾರೂ ಇರುವುದಿಲ್ಲ' ಎಂದು ಹೈಕೋರ್ಟ್, ಸಕ್ಕರೆ ಕಾರ್ಖಾನೆಗಳ ಮಾಲೀಕರ ನಡೆಗೆ ತೀವ್ರ ಅಸಹನೆ ವ್ಯಕ್ತಪಡಿಸಿದೆ.

'ನ್ಯಾಯಸಮ್ಮತ ಮತ್ತು ಲಾಭದಾಯಕ ದರ (ಎಫ್‌ಆರ್‌ಪಿ) ನಿಗದಿಪಡಿಸಿ ರಾಜ್ಯ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಕಾರ್ಯದರ್ಶಿ ನವೆಂಬರ್ 8ರಂದು ಹೊರಡಿಸಿರುವ ಆದೇಶ ರದ್ದುಪಡಿಸಬೇಕು' ಎಂದು ಕೋರಿ 'ದಕ್ಷಿಣ ಭಾರತದ ಸಕ್ಕರೆ ಕಾರ್ಖಾನೆಗಳ ಸಂಘದ ಕಾರ್ಯದರ್ಶಿ ಎಲ್.ಸೋಮೇಶ್ ಸೇರಿದಂತೆ ಆರು ಸಕ್ಕರೆ ಕಾರ್ಖಾನೆಗಳ ಪರವಾಗಿ ಸಲ್ಲಿಸಲಾಗಿರುವ ರಿಟ್ ಅರ್ಜಿಗಳನ್ನು ನ್ಯಾಯಮೂರ್ತಿ ಸೂರಜ್ ಗೋವಿಂದ ರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು, 'ರೈತರ ಆಂದೋಲನಕ್ಕೆ ಮಣಿದು ಮುಖ್ಯಮಂತ್ರಿ ಅಧ್ಯಕ್ಷತೆಯಲ್ಲಿ ನವೆಂಬರ್ 7ರಂದು ರಾಜ್ಯದ ಸಕ್ಕರೆ ಉತ್ಪಾದನಾ ಘಟಕಗಳ ಸಭೆ ನಡೆಸಲಾಯಿತು. ಈ ಸಭೆಯಲ್ಲಿ ಮುಖ್ಯಮಂತ್ರಿ, ಪ್ರತಿ ಟನ್ ಕಬ್ಬಿಗೆ ₹3,250 ಪಾವತಿಸುವಂತೆ ಸಕ್ಕರೆ ಕಾರ್ಖಾನೆಗಳಿಗೆ ಸೂಚಿಸಿದ್ದಾರೆ' ಎಂದರು.

'ಕಟಾವು ಮತ್ತು ಸಾಗಣೆ ಶುಲ್ಕ ₹900 ಸೇರಿದರೆ ಪ್ರತಿ ಟನ್‌ಗೆ ₹4,150 ತಗಲುತ್ತದೆ. ಸರ್ಕಾರ ಘೋಷಿಸಿರುವಂತೆ ಕಬ್ಬಿಗೆ ಬೆಲೆ ಪಾವತಿಸಲು ಸಾಧ್ಯವಿಲ್ಲ ಎಂದು ಸಕ್ಕರೆ ಕಾರ್ಖಾನೆಗಳ ಮಾಲೀಕರು ಪದೇ ಪದೇ ಮನವಿ ಮಾಡಿದರೂ ಮುಖ್ಯಮಂತ್ರಿ ಪರಿಗಣಿಸಿಲ್ಲ' ಎಂದು ದೂರಿದರು.

'ಸರ್ಕಾರದ ಪರ ವಕೀಲರ ವಾದವನ್ನು ಆಲಿಸುವ ಮೊದಲೇ ನಿಮ್ಮ ಮನವಿಯ ಅನುಸಾರ ಸರ್ಕಾರದ ಆದೇಶಕ್ಕೆ ಮಧ್ಯಂತರ ತಡೆ ನೀಡಲು ಸಾಧ್ಯವಿಲ್ಲ' ಎಂದ ನ್ಯಾಯಪೀಠ, ವಿಚಾರಣೆಯನ್ನು ಇದೇ 17ಕ್ಕೆ ಮುಂದೂಡಿದೆ.

ಅಧಿಕಾರಿಗಳು ಸರಿಯಾಗಿ ಸ್ಪಂದಿಸುವುದಿಲ್ಲ– ಸಿ.ಎಂಗೆ ಶಾಸಕರ ದೂರು

ಸಿಎಲ್‌ಪಿಯಲ್ಲಿ ಅನುದಾನ, ಭ್ರಷ್ಟಾಚಾರ ಪ್ರಸ್ತಾಪ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಅಭಿವೃದ್ಧಿ ಕಾರ್ಯಕ್ಕೆ ದೊರೆಯದ ಅನುದಾನ
- ಮುಖ್ಯಮಂತ್ರಿ ಮುಂದೆ ಪಕ್ಷದ ಶಾಸಕರ ಅಸಮಾಧಾನ

ಬೆಳಗಾವಿ: ಗ್ಯಾರಂಟಿ ಯೋಜನೆಗಳಿಂದಾಗಿ ಕ್ಷೇತ್ರದ ಅಭಿವೃದ್ಧಿಗೆ ಅನುದಾನದ ಕೊರತೆಯಾಗುತ್ತಿದೆ. ಅಧಿಕಾರಿಗಳು ಸರಿಯಾಗಿ ಸ್ಪಂದಿಸುವುದಿಲ್ಲ ಎಂದು ಕಾಂಗ್ರೆಸ್ ಪಕ್ಷದ ಹಲವು ಶಾಸಕರು ಮುಖ್ಯಮಂತ್ರಿ ಸಿದ್ದರಾಮಯ್ಯ ಬಳಿ ಅಳಲು ತೋಡಿಕೊಂಡಿದ್ದಾರೆ.

ಇಲ್ಲಿನ ಫೇರ್ ಫೀಲ್ಡ್ ಮ್ಯಾರಿಯೆಟ್ ಹೋಟೆಲ್‌ನಲ್ಲಿ ಮಂಗಳವಾರ ರಾತ್ರಿ ಕಾಂಗ್ರೆಸ್ ಶಾಸಕಾಂಗ ಸಭೆ ನಡೆಯಿತು. ಈ ವೇಳೆ ಸರ್ಕಾರದ ಆಡಳಿತ ಮತ್ತು ಅನುದಾನದ ವಿಚಾರದಲ್ಲಿ ಶಾಸಕರು ತಮ್ಮ ಅಸಮಾಧಾನ ವ್ಯಕ್ತಪಡಿಸಿದರು ಎಂದು ಗೊತ್ತಾಗಿದೆ.

ಆರಂಭದಲ್ಲಿ ಮಾತನಾಡಿದ ಮುಖ್ಯಮಂತ್ರಿ, ಉತ್ತರ ಕರ್ನಾಟಕದ ಸಮಸ್ಯೆ, ಕಬ್ಬು ದರ, ಮೆಕ್ಕೆಜೋಳ ಖರೀದಿ ಸಮಸ್ಯೆಯ ಬಗ್ಗೆ ಪ್ರಸ್ತಾಪಿಸಿದ್ದಾರೆ. ಈ ವಿಚಾರದಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರದ ಹೊಣೆಗಾರಿಕೆಗೆ ಸಂಬಂಧಿಸಿದ ಅಂಕಿ–ಅಂಶಗಳ ಸಂಪೂರ್ಣ ಮಾಹಿತಿಯನ್ನು ಶಾಸಕರಿಗೆ ಲಿಖಿತವಾಗಿ ನೀಡಿದ ಮುಖ್ಯಮಂತ್ರಿ, 'ಸದನದಲ್ಲಿ ವಿರೋಧ ಪಕ್ಷದವರಿಗೆ ಉತ್ತರ ಕೊಡದಿದ್ದರೆ ಜನರಿಗೆ ಸರ್ಕಾರದ ವಿರುದ್ಧ ತಪ್ಪು ಸಂದೇಶ ಹೋಗಲಿದೆ. ಕೇಂದ್ರ ಸರ್ಕಾರ ಮತ್ತು ಬಿಜೆಪಿ ಸರ್ಕಾರ ಇದ್ದಾಗ ಆಗಿರುವ ಲೋಪದೋಷಗಳನ್ನು ಎತ್ತಿತೋರಿಸಿ ಉತ್ತರ ನೀಡಬೇಕು' ಎಂದು ಸಲಹೆ ನೀಡಿದರು ಎಂದೂ ಗೊತ್ತಾಗಿದೆ.

ಅಧಿಕಾರಿಗಳು ಭ್ರಷ್ಟಾಚಾರ ನಡೆಸುತ್ತಿದ್ದಾರೆ. ಸ್ವೇಚ್ಛಾಚಾರದಿಂದ ಅಧಿಕಾರಿವರ್ಗ ವರ್ತಿಸುತ್ತಿದೆ. ಅಧಿಕಾರ ದುರುಪಯೋಗದ ಬಗ್ಗೆ ದೂರುಗಳು ಬಂದರೂ ಯಾವುದೇ ಕ್ರಮ ಆಗುತ್ತಿಲ್ಲ. ಯಾರೊಬ್ಬರಿಗೂ ನೋಟಿಸ್ ನೀಡುವ ಕೆಲಸ ಆಗುತ್ತಿಲ್ಲ. ಆರೋಪಗಳು ತನಿಖೆಯಲ್ಲಿ ಸಾಬೀತಾದರೂ ಕ್ರಮ ಆಗದೇ ಇರುವುದರಿಂದ ಅಧಿಕಾರಿಗಳಲ್ಲಿ ಯಾವುದೇ ಭಯ ಇಲ್ಲದಂತಾಗಿದೆ. ಇದಕ್ಕೆ ಕಡಿವಾಣ ಹಾಕಬೇಕಾಗಿದೆ. ಇಲ್ಲವಾದರೆ ಸರ್ಕಾರಕ್ಕೆ ಕೆಟ್ಟ ಹೆಸರು ಬರಲಿದೆ ಎಂದು ವಿಧಾನ ಪರಿಷತ್ ಸದಸ್ಯ ಸುಧಾಮ್ ದಾಸ್ ಅವರು ನೇರವಾಗಿ ಹೇಳಿದರು ಎಂದು ಗೊತ್ತಾಗಿದೆ.

ಅಲ್ಲದೆ, ಗ್ಯಾರಂಟಿ ಯೋಜನೆಗಳ ಬಗ್ಗೆ ಶಾಸಕರಲ್ಲಿ ಅಸಮಾಧಾನವಿದೆ. ಆದರೆ, ಧೈರ್ಯವಾಗಿ ತಮ್ಮ ಅಭಿಪ್ರಾಯ ಹೇಳಿಕೊಳ್ಳಲು ಹಿಂಜರಿಯುತ್ತಿದ್ದಾರೆ. ಮುಂದಿನ ಸಭೆಯಲ್ಲಿಯಾದರೂ ಮುಕ್ತವಾಗಿ ಮಾತನಾಡಲು ಅವಕಾಶ ಸಿಗಬೇಕು ಎಂದೂ ಸುಧಾಮ್ ದಾಸ್ ಹೇಳಿದರು ಎಂದು ತಿಳಿದುಬಂದಿದೆ.

ಶಾಸಕರ ಅಳಲು ಆಲಿಸಿದ ಮುಖ್ಯಮಂತ್ರಿ, ಬಾಕಿ ಇರುವ ಅನುದಾನ ಬಿಡುಗಡೆ ಮಾಡಲಾಗುವುದು. ಅಧಿಕಾರಿ ವರ್ಗಕ್ಕೂ ಎಚ್ಚರಿಕೆ ನೀಡುವುದಾಗಿ ಸಮಾಧಾನ ಮಾಡಿದ್ದಾರೆ ಎಂದು ತಿಳಿದುಬಂದಿದೆ.

ಬಿಜೆಪಿಯ ಉಚ್ಚಾಟಿತ ಶಾಸಕರು ಭಾಗಿ: ಕಾಂಗ್ರೆಸ್‌ನ 138 ಶಾಸಕರ ಪೈಕಿ 115 ಮಂದಿ, 37 ವಿಧಾನ ಪರಿಷತ್ ಸದಸ್ಯರ ಪೈಕಿ 33 ಮಂದಿ ಸಭೆಗೆ ಹಾಜರಾಗಿದ್ದರು. ಬಿಜೆಪಿಯ ಉಚ್ಚಾಟಿತ ಶಾಸಕರಾದ ಎಸ್.ಟಿ. ಸೋಮಶೇಖರ್ ಮತ್ತು ಶಿವರಾಮ್ ಹೆಬ್ಬಾರ್ ಶಾಸಕಾಂಗ ಪಕ್ಷದ ಸಭೆಯಲ್ಲಿ ಭಾಗವಹಿಸಿರುವುದು ವಿಶೇಷವಾಗಿದೆ.

ಎರಡನೇ ದೊಡ್ಡ ಧ್ವಜ ಅನಾವರಣ

ಸುವರ್ಣ ವಿಧಾನಸೌಧ (ಬೆಳಗಾವಿ): 'ತ್ರಿವರ್ಣ ಧ್ವಜ ಕೇವಲ ಖಾದಿ ವಸ್ತ್ರವಲ್ಲ. ಅದು ಸ್ವಾತಂತ್ರ್ಯ ಹೋರಾಟದ ಪ್ರತೀಕ, ಭಾರತದ ಹೆಮ್ಮೆ, ಸ್ವಾಭಿಮಾನದ ಸಂಕೇತ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೇಳಿದರು.

ಬೆಳಗಾವಿಯ ಸುವರ್ಣ ವಿಧಾನಸೌಧದ ಪಶ್ಚಿಮ ದಿಕ್ಕಿನಲ್ಲಿ ಇರುವ ಮೆಟ್ಟಿಲುಗಳ ಮೇಲೆ ಜಗತ್ತಿನಲ್ಲಿಯೇ ಎರಡನೇ ಅತಿ ದೊಡ್ಡದಾದ ತ್ರಿವರ್ಣ ಧ್ವಜವನ್ನು ಮಂಗಳವಾರ ಅನಾವರಣ ಮಾಡಿ ಅವರು ಮಾತನಾಡಿದರು. 'ನಮ್ಮ ತ್ರಿವರ್ಣ ಧ್ವಜದಲ್ಲಿರುವ ಕೇಸರಿ, ಬಿಳಿ, ಹಸಿರು ಬಣ್ಣಗಳು ಶೌರ್ಯ, ಸ್ವಾಭಿಮಾನ, ಶಾಂತಿ, ಸಮೃದ್ಧಿಯನ್ನು ಪ್ರತಿಬಿಂಬಿಸುತ್ತವೆ. ರಾಷ್ಟ್ರ ಧ್ವಜವನ್ನು ಪ್ರತಿಯೊಬ್ಬರೂ ಗೌರವಿಸಬೇಕು' ಎಂದು ಹೇಳಿದರು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, 'ಸುವರ್ಣ ವಿಧಾನಸೌಧದ ಮೆಟ್ಟಿಲುಗಳ ಮೇಲೆ ಬೃಹತ್ ತ್ರಿವರ್ಣ ಧ್ವಜವನ್ನು ಅನಾವರಣ ಮಾಡಿರುವುದು, ದೇಶ ಪ್ರೇಮವನ್ನು ಮುಂದಿನ ಪೀಳಿಗೆಗೆ ದಾಟಿಸುವ ಕ್ರಮವಾಗಿದೆ' ಎಂದರು.

ವಿಧಾನಸಭಾಧ್ಯಕ್ಷ ಯು.ಟಿ. ಖಾದರ್, ವಿಧಾನ ಪರಿಷತ್ತಿನಲ್ಲಿ ಸರ್ಕಾರದ ಮುಖ್ಯ ಸಚೇತಕ ಸಲೀಂ ಅಹಮದ್ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು.

'ಪ್ರಾಥಮಿಕ ಶಿಕ್ಷಣ ರಾಷ್ಟ್ರೀಕರಣಗೊಳಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರತಿಯೊಬ್ಬರಲ್ಲೂ ಇಂಗ್ಲಿಷ್ ಕಲಿಕೆಯ ವ್ಯಾಮೋಹ ಹೆಚ್ಚುತ್ತಿದೆ. ಸರ್ಕಾರಿ ಶಾಲೆಗಳಿಗೆ ಬರುವ ಮಕ್ಕಳ ಸಂಖ್ಯೆಯಲ್ಲಿ ಕುಸಿತ ಕಾಣುತ್ತಿದ್ದು, ಭಾರತೀಯ ಭಾಷೆಗಳು ಸಂಕಷ್ಟಕ್ಕೆ ಸಿಲುಕಿವೆ. ಇದನ್ನು ತಡೆಯಲು ಪ್ರಾಥಮಿಕ ಶಿಕ್ಷಣದ ರಾಷ್ಟ್ರೀಕರಣ ಮಾಡುವುದು ಸೂಕ್ತ' ಎಂದು ಸಾಹಿತಿ ಎಲ್.ಹನುಮಂತಯ್ಯ ಹೇಳಿದರು.

ಕನ್ನಡ ಗೆಳೆಯರ ಬಳಗ ಮತ್ತು ಕರ್ನಾಟಕ ಕಾರ್ಮಿಕ ಲೋಕ ಸಂಘಟನೆಗಳು ಬುಧವಾರ ನಯನ ಸಭಾಂಗಣದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ನ್ಯಾಯಾಲಯವು ಶಿಕ್ಷಣ ಮಾಧ್ಯಮದ ಆಯ್ಕೆಯನ್ನು ಪೋಷಕರಿಗೆ ಬಿಟ್ಟಿದೆ. ಗೋಜಲುಗಳಿಂದ ಕನ್ನಡದ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಮರೀಚಿಕೆಯಾಗಿದೆ. ಇದರ ನಡುವೆ ನಗರ ಪ್ರದೇಶದವರು ಮಾತ್ರವಲ್ಲದೇ ಗ್ರಾಮೀಣ ಭಾಗದಲ್ಲೂ ಮಕ್ಕಳು ಇಂಗ್ಲಿಷ್ ಮಾಧ್ಯಮ ಶಾಲೆಯತ್ತ ಆಕರ್ಷಿತರಾಗುತ್ತಿದ್ದಾರೆ' ಎಂದು ತಿಳಿಸಿದರು.

'ಸರ್ಕಾರಿ ಶಾಲೆಗಳಲ್ಲಿ ಗುಣಮಟ್ಟ ಸುಧಾರಿಸುವುದರಿಂದ ಮಾತ್ರ ಮಕ್ಕಳನ್ನು ಸೆಳೆಯಲು ಸಾಧ್ಯವಿದೆ. ಸಮವರ್ತಿ ಪಟ್ಟಿಯಲ್ಲಿ ಶಿಕ್ಷಣವೂ ಇರುವುದರಿಂದ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು, ರಾಷ್ಟ್ರೀಕರಣದ ವಿಚಾರದಲ್ಲಿ ನಿಲುವನ್ನು ಸ್ಪಷ್ಟಪಡಿಸಬೇಕು. ಉದ್ಯೋಗದಲ್ಲಿ ಸ್ಥಳೀಯ ಭಾಷೆಯ ಅರಿವು ಕಡ್ಡಾಯವಾಗಬೇಕು' ಎಂದು ಸಲಹೆ ನೀಡಿದರು.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಮಾತನಾಡಿ, 'ಬೆಂಗಳೂರು ಮಾತ್ರವಲ್ಲದೇ ರಾಜ್ಯದ ಹಲವು ಕಡೆ ಹೋಟೆಲ್ ಕೆಲಸಗಳಲ್ಲಿ ಕನ್ನಡಿಗರು ಕಡಿಮೆಯಾಗಿ ಈಶಾನ್ಯ ರಾಜ್ಯದವರು ಬರುತ್ತಿದ್ದಾರೆ. ಸಣ್ಣ ಸಣ್ಣ ಉದ್ಯೋಗಗಳಿಗೂ ಹೊರ ರಾಜ್ಯದವರು ಬಂದಿರುವುದರಿಂದ ಸ್ಥಳೀಯರಿಗೆ ಅವಕಾಶ ತಪ್ಪುತ್ತಿದೆ. ಕೌಶಲದ ಕಾರಣ ಅವಕಾಶ ತಪ್ಪುತ್ತಿರುವುದರಿಂದ ಸ್ಥಳೀಯರಿಗೆ ಉದ್ಯೋಗ ನೀಡಲು ಸರೋಜಿನಿ ಮಹಿಷಿ ವರದಿಯಲ್ಲಿ 11 ಶಿಫಾರಸುಗಳನ್ನಾದರೂ ಜಾರಿಗೊಳಿಸಲು ಕ್ರಮ ಕೈಗೊಳ್ಳಬೇಕು ಎಂದರು.

ಬೆಂಗಳೂರಿನ ಉದ್ಯಮ ವಲಯದಲ್ಲಿ ₹10 ಲಕ್ಷ ಕೋಟಿ ಹೂಡಿಕೆಯಾಗುವ ಪ್ರಸ್ತಾವಗಳಿದ್ದು, ಮುಂದಿನ ಕೆಲ ವರ್ಷದಲ್ಲಿ ಹೆಚ್ಚಿನ ಉದ್ಯೋಗಗಳು ಸೃಷ್ಟಿಯಾಗಲಿವೆ. ಹೊರ ದೇಶದವರೊಂದಿಗೆ ನಮ್ಮವರೂ ಸ್ಪರ್ಧಿಸುವ ಸನ್ನಿವೇಶವಿದೆ. ನಮ್ಮವರಿಗೆ ಉದ್ಯೋಗ ಸಿಗಲು ಬೇಕಾದ ಕೌಶಲ ತರಬೇತಿಗೆ ಹೆಚ್ಚಿನ ಒತ್ತು ನೀಡುವುದು ಅನಿವಾರ್ಯ' ಎಂದರು.

ಕನ್ನಡ ಹೋರಾಟಗಾರ ವ.ಚ.ಚನ್ನೇಗೌಡ, ಕನ್ನಡ ಗೆಳೆಯರ ಬಳಗದ ರಾ.ನಂ. ಚಂದ್ರಶೇಖರ, ಬೆ.ರಾ.ನಾಗರಾಜ, ಮ.ಚಂದ್ರಶೇಖರ್ ಬಾ.ಹ.ಉಪೇಂದ್ರ, ಅಮೃತಾ ನಾರಾಯಣ್ ಉಪಸ್ಥಿತರಿದ್ದರು.



ಕಾರ್ಯಕ್ರಮದಲ್ಲಿ (ಕುಳಿತವರು ಎಡದಿಂದ) ಎಸ್.ವಿಜಯ ಗುರುರಾಜ, ಸತ್ಯೇಶ್ ಎನ್. ಬೆಳ್ಳೂರ್, ಚ.ಹ.ರಘುನಾಥ್ ಅವರಿಗೆ ಹಾಮಾನಾ ಕನ್ನಡ ಜಾಗೃತಿ ಪುಸ್ತಕ ಬಹುಮಾನ, ಟಿ.ತಿಮ್ಮೇಶ್ ಅವರಿಗೆ ಕನ್ನಡ ಚಿರಂಜೀವಿ ಪ್ರಶಸ್ತಿ, ಹಿ.ಚಿ. ಬೋರಲಿಂಗಯ್ಯ ಅವರಿಗೆ ಡಾ.ಎಂ.ಚಿದಾನಂದಮೂರ್ತಿ ಕನ್ನಡ ಸಂಸ್ಕೃತಿ ಪ್ರಶಸ್ತಿ, ಅ.ಕೃ. ಸೋಮಶೇಖರ್ ಅವರಿಗೆ ಕನ್ನಡ ಅರವಿಂದ ಪ್ರಶಸ್ತಿ ಪ್ರದಾನ ಮಾಡಲಾಯಿತು. ಉತ್ತಮ ಸರ್ಕಾರಿ ಶಾಲಾ ಬಹುಮಾನವನ್ನು ಗದಗ ಜಿಲ್ಲೆ ಯಕ್ಲಾಸಪೂರ ಶ್ರೀಮತಿ ಪಾರ್ವತೆವ್ವ ಕೋಂ ಹಿರೇಬಸಪ್ಪ ಹಳೇಮನಿ ಸರ್ಕಾರಿ ಪ್ರೌಢಶಾಲೆಯ ಪರವಾಗಿ ಶಿಕ್ಷಕ ಎಂ.ಎಚ್. ಸವದತ್ತಿ ಪಡೆದುಕೊಂಡರು. ಎಲ್. ಹನುಮಂತಯ್ಯ, ರಾ.ನಂ. ಚಂದ್ರಶೇಖರ, ಪುರುಷೋತ್ತಮ ಬಿಳಿಮಲೆ, ವ.ಚ. ಚನ್ನೇಗೌಡ ಉಪಸ್ಥಿತರಿದ್ದರು –ಪ್ರಜಾವಾಣಿ ಚಿತ್ರ

ಸಾಧಕರಿಗೆ ಪ್ರಶಸ್ತಿ, ಕೃತಿಗೆ ಬಹುಮಾನ

ಜಾನಪದ ಸಂಶೋಧಕ ಹಿ.ಚಿ. ಬೋರಲಿಂಗಯ್ಯ ಅವರಿಗೆ 'ಎಂ. ಚಿದಾನಂದಮೂರ್ತಿ ಕನ್ನಡ ಸಂಸ್ಕೃತಿ ಪ್ರಶಸ್ತಿ, ಕನ್ನಡ ಹೋರಾಟಗಾರ ಟಿ. ತಿಮ್ಮೇಶ್ ಅವರಿಗೆ ' ಕನ್ನಡ ಚಿರಂಜೀವಿ ಪ್ರಶಸ್ತಿ', ಕೆ.ಜಿ.ಎಫ್.ನ ಕನ್ನಡಪರ ಕಾರ್ಯಕರ್ತ ಹ.ಕೃ. ಸೋಮಶೇಖರ ಅವರಿಗೆ 'ಕನ್ನಡ ಅರವಿಂದ ಪ್ರಶಸ್ತಿ' ಪ್ರದಾನ ಮಾಡಲಾಯಿತು.

ಮಯೂರ ಕಾರ್ಯನಿರ್ವಾಹಕ ಸಂಪಾದಕ ಚ.ಹ.ರಘುನಾಥ ಅವರ 'ಇಳಿಸಲಾಗದ ಶಿಲುಬೆ' ಕೃತಿಗೆ 'ಹಾಮಾನಾ ಕನ್ನಡ ಜಾಗೃತಿ' ಪುಸ್ತಕ ಬಹುಮಾನ ನೀಡಲಾಯಿತು.

ಸತ್ಯೇಶ್ ಬೆಳ್ಳೂರ್ ಕನ್ನಡೋತ್ಸವ ನೃತ್ಯ ನಾಟಕಕ್ಕೆ ಸಮಾಧಾನಕರ ಮತ್ತು ವಿಜಯಾ ಗುರುರಾಜ್ ಅವರ ಪ್ರಬಂಧ ರತ್ನಗಳು ಕೃತಿಗೆ ಮೆಚ್ಚುಗೆ ಬಹುಮಾನ ಲಭಿಸಿತು.

ಗದಗ ಜಿಲ್ಲೆಯ ಯಕ್ಲಾಸಪುರದ ಪಾರ್ವತೆವ್ವ ಹಿರೇಬಸಪ್ಪ ಸರ್ಕಾರಿ ಕನ್ನಡ ಮಾಧ್ಯಮ ಪ್ರೌಢಶಾಲೆಗೆ ₹10 ಸಾವಿರ ನಗದು ಬಹುಮಾನ, ಕನ್ನಡದಲ್ಲಿ ಹೆಚ್ಚು ಅಂಕ ಗಳಿಸಿದ ಅನ್ಯಭಾಷೆಯ 8 ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಮತ್ತೆ ಟಿಪ್ಪು ಜಯಂತಿ ಸದ್ದು

ಬೆಳಗಾವಿ (ಸುವರ್ಣ ವಿಧಾನಸೌಧ): ರಾಜ್ಯದಲ್ಲಿ ಟಿಪ್ಪು ಜಯಂತಿ ವಿಚಾರವನ್ನು ಸದನದಲ್ಲಿ ಸರ್ಕಾರದ ಗಮನಕ್ಕೆ ತರಲು ಮುಂದಾದ ಕಾಂಗ್ರೆಸ್ ಶಾಸಕ ವಿಜಯಾನಂದ ಕಾಶಪ್ಪನವರ್ ನಡೆಗೆ ಬಿಜೆಪಿ ತೀವ್ರ ವಿರೋಧ ವ್ಯಕ್ತಪಡಿಸಿದೆ.

ಟಿಪ್ಪು ಜಯಂತಿ ಆಚರಣೆಯ ಪ್ರಸ್ತಾಪವನ್ನು ಸಮರ್ಥಿಸಿಕೊಂಡಿರುವ ಕಾಶಪ್ಪನವರ್, 'ಎಲ್ಲ ಜಾತಿ, ಜನಾಂಗ ಇರುವ ಜಾತ್ಯತೀತ ರಾಷ್ಟ್ರದಲ್ಲಿ ಯಾಕೆ ವಿರೋಧ? ಅಲ್ಪಸಂಖ್ಯಾತರು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿರಲಿಲ್ಲವೇ. ಯಡಿಯೂರಪ್ಪ, ಜಗದೀಶ ಶೆಟ್ಟರ್ ಟಿಪ್ಪು ವೇಷ ಹಾಕಿರಲಿಲ್ಲವೇ' ಎಂದು ಪ್ರಶ್ನಿಸಿದ್ದಾರೆ.

ವಿಧಾನಪರಿಷತ್ತಿನ ಸರ್ಕಾರದ ಮುಖ್ಯ ಸಚೇತಕ ಸಲೀಂ ಅಹ್ಮದ್, 'ಟಿಪ್ಪು ಜಯಂತಿಯನ್ನು ಸರ್ಕಾರ ಆಚರಣೆ ಮಾಡಬೇಕು. ಈ ಕುರಿತು ಸದನದಲ್ಲಿ ಚರ್ಚೆ ನಡೆಯಬೇಕು ಎಂದು ವಿಜಯಾನಂದ ಕಾಶಪ್ಪನವರ್ ಹೇಳಿರುವುದು ವೈಯಕ್ತಿಯ ಅಭಿಪ್ರಾಯ. ಟಿಪ್ಪು ಒಬ್ಬ ದೇಶಭಕ್ತ. ಜಯಂತಿ ಆಚರಿಸಿದರೆ ತಪ್ಪೇನಿದೆ' ಎಂದು ಪ್ರಶ್ನಿಸಿದರು.

'ಕಾಂಗ್ರೆಸ್ ಎಂದರೆ ಟಿಪ್ಪು ಪಾರ್ಟಿ. ಪ್ರಚಾರ ಗಿಟ್ಟಿಸಲು ಈ ತಂತ್ರ. ಇಸ್ಲಾಂನಲ್ಲಿ ವ್ಯಕ್ತಿಗಳ ಜಯಂತಿ ಆಚರಣೆ ಮಾಡುವುದು ನಿಷೇಧವಿದೆ. ಅಧಿವೇಶನದಲ್ಲಿ ಕಾಲಹರಣ ಮಾಡಲು ಟಿಪ್ಪು ಕಾರ್ಡ್ ಉಪಯೋಗಿಸುತ್ತಿದ್ದಾರೆ' ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಆಕ್ರೋಶ ವ್ಯಕ್ತಪಡಿಸಿದರು.

ಭೂ ಮಾಫಿಯಾದವರ ಹೆಡೆಮುರಿ ಕಟ್ಟುವೆ: ಸಚಿವ ಕೃಷ್ಣ ಬೈರೇಗೌಡ

ಪ್ರಜಾವಾಣಿ ವಾರ್ತೆ

ಬೆಳಗಾವಿ (ಸುವರ್ಣ ವಿಧಾನಸೌಧ): 'ಪಾಪದವರು, ಅಮಾಯಕರಿಗೆ ನಾವು ತೊಂದರೆ ಮಾಡುವುದಿಲ್ಲ. ಆದರೆ, ಹಗರಣ ಮಾಡಿದವರು ಮತ್ತು ಭೂಮಾಫಿಯಾದವರನ್ನು ಬಿಡುವುದಿಲ್ಲ' ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಹೇಳಿದರು.

ಕಾಂಗ್ರೆಸ್‌ನ ಎಚ್.ಡಿ.ತಮ್ಮಯ್ಯ ಅವರು, ಚಿಕ್ಕಮಗಳೂರು ಜಿಲ್ಲೆಯ ವಿವಿಧ ತಾಲ್ಲೂಕುಗಳಲ್ಲಿ ಸಾಗುವಳಿ ಚೀಟಿ ಮಂಜೂರು ಮಾಡಿರುವ 57 ಅರ್ಜಿಗಳ ರದ್ದು ಪ್ರಕರಣವನ್ನು ಗಮನ ಸೆಳೆಯುವ ಸೂಚನೆಯಡಿ ಪ್ರಸ್ತಾಪಿಸಿದಾಗ ಸಚಿವರು ಮೇಲಿನಂತೆ ಕಟುವಾದ ಸಂದೇಶ ನೀಡಿದರು.

'ಮೋಸ ಮಾಡುವವರು ಅಮಾಯಕರಲ್ಲ. ಸಾಗುವಳಿದಾರರೇ ಅಲ್ಲದವರಿಗೆ ಹೇಗೆ ಮಂಜೂರು ಮಾಡಲು ಸಾಧ್ಯ? ತುಮಕೂರಿನಲ್ಲಿ ಸಾಗುವಳಿ ಮಾಡುತ್ತಿದ್ದವರಿಗೆ ಚಿಕ್ಕಮಗಳೂರಿನಲ್ಲಿ ಸಾಗುವಳಿ ಚೀಟಿ ಕೊಡುವುದು ಎಷ್ಟು ಸರಿ. ಅಂತಹ ಅಕ್ರಮ ಎಸಗಿದ ಆರೋಪ ಇರುವ ಅಧಿಕಾರಿಗಳ ವಿರುದ್ಧ ದೋಷಾರೋಪ ಪಟ್ಟಿ ಮಾಡಿಸಲಾಗಿದೆ' ಎಂದು ಕೃಷ್ಣ ಬೈರೇಗೌಡ ಹೇಳಿದರು.

ಸಾಗುವಳಿ ಚೀಟಿಗೆ ಸಂಬಂಧಿಸಿದ ಸಮಸ್ಯೆ ಬಗೆಹರಿಸಲು ಮಲೆನಾಡು ಭಾಗದ ಶಾಸಕರ ಸಭೆ ಕರೆಯುವುದಾಗಿ ಅವರು ಭರವಸೆ ನೀಡಿದರು.

'ನೀವು ಮಹಾರಾಷ್ಟ್ರ ಸಚಿವರಾ?'

'ನೀವು ಕರ್ನಾಟಕದ ಸಚಿವರಾ ಅಥವಾ ಮಹಾರಾಷ್ಟ್ರ ಸಚಿವರಾ' ಎಂದು ಬಿಜೆಪಿಯ ಮಹೇಶ ಟೆಂಗಿನಕಾಯಿ ಅವರು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ ಅವರನ್ನು ಪ್ರಶ್ನಿಸಿದರು.

'ಗೃಹಲಕ್ಷ್ಮಿ ಯೋಜನೆಯಡಿ ಕಳೆದ ಫೆಬ್ರುವರಿ ಮತ್ತು ಮಾರ್ಚ್ ತಿಂಗಳ ಕಂತನ್ನು ಪಾವತಿಸಿಲ್ಲ' ಎಂದು ಮಹೇಶ ಟೆಂಗಿನಕಾಯಿ ಸದನದ ಗಮನ ಸೆಳೆದರು.

'ಮಹಾರಾಷ್ಟ್ರ ಸರ್ಕಾರ ಲಾಡ್ಲಿ ಬೆಹನ್ ಯೋಜನೆ ಏನು ಮಾಡಿದೆ ಎಂದು ಹೇಳಲಾ' ಎಂದು ಸಚಿವೆ ಸವಾಲು ಹಾಕಿದರು. 'ಹಾಗಿದ್ದರೆ ನೀವು ಯಾವ ರಾಜ್ಯಕ್ಕೆ ಸಚಿವೆ' ಎಂದು ಟೆಂಗಿನಕಾಯಿ ಪ್ರಶ್ನಿಸಿದರು.

'ಎರಡು ತಿಂಗಳ ಕಂತು ಪಾವತಿ ಮಾಡದಿರುವುದಕ್ಕೆ ದಾಖಲೆ ಬೇಕಿದ್ದರೆ ಕೊಡುತ್ತೇನೆ' ಎಂದು ಟೆಂಗಿನಕಾಯಿ ಹೇಳಿದರು.

'ಹಣಕಾಸು ಇಲಾಖೆ ಕಂತಿನ ಮೊತ್ತ ಪಾವತಿಸಿದಾಗ ನಾವು ತಕ್ಷಣ ಬಿಡುಗಡೆ ಮಾಡುತ್ತೇವೆ. ಕಳೆದ ಎರಡೂವರೆ ವರ್ಷಗಳಲ್ಲಿ ಯಾವುದೇ ಮಧ್ಯವರ್ತಿಗಳ ಹಾವಳಿ ಇಲ್ಲದೆ ಗೃಹಲಕ್ಷ್ಮೀ ಫಲಾನುಭವಿಗಳ ಖಾತೆಗೆ ನೇರವಾಗಿ ಹಣ ತಲುಪಿದ್ದು, ಆಗಸ್ಟ್ ತಿಂಗಳವರೆಗೆ 1.24 ಕೋಟಿ ಮಹಿಳೆಯರ ಬ್ಯಾಂಕ್ ಖಾತೆಗೆ ತಲಾ ₹46 ಸಾವಿರದಂತೆ 23 ಕಂತಿನಲ್ಲಿ ಒಟ್ಟು ₹50 ಸಾವಿರ ಕೋಟಿ ಮಹಿಳೆಯರಿಗೆ ತಲುಪಿದೆ' ಹೆಬ್ಬಾಳಕರ ಸಮಜಾಯಿಷಿ ನೀಡಿದರು.

ಭದ್ರಾ ಮೇಲ್ದಂಡೆ: ವೆಚ್ಚ ₹24 ಸಾವಿರ ಕೋಟಿಗೆ

ಭದ್ರಾ ಮೇಲ್ದಂಡೆ ಯೋಜನೆಯ ವೆಚ್ಚ ₹24 ಸಾವಿರ ಕೋಟಿಗೆ ತಲುಪಿದೆ. ಕೇಂದ್ರ ಸರ್ಕಾರ ತನ್ನ ಬಜೆಟ್‌ನಲ್ಲಿ ಘೋಷಣೆ ಮಾಡಿದಂತೆ ₹5,400 ಕೋಟಿಯನ್ನು ನೀಡಿಲ್ಲ ಎಂದು ಜಲ ಸಂಪನ್ಮೂಲ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಕಾಂಗ್ರೆಸ್‌ನ ಟಿ.ಬಿ. ಜಯಚಂದ್ರ ಅವರ ಗಮನ ಸೆಳೆಯುವ ಸೂಚನೆಗೆ ಉತ್ತರಿಸಿದ ಅವರು, 'ಚಿತ್ರದುರ್ಗ ನಾಲೆಗೆ ನೀರು ಹರಿಸುವ ವಿಚಾರಕ್ಕೆ ಸರ್ಕಾರ ಬದ್ಧವಿದೆ. ಕೇಂದ್ರ ಸರ್ಕಾರ ಈ ಯೋಜನೆಗೆ ನೀಡುವುದಾಗಿ ಘೋಷಣೆ ಮಾಡಿದ ಹಣವನ್ನು ಪಡೆಯಲು ಸರ್ವ ಪಕ್ಷಗಳ ನಿಯೋಗವೊಂದನ್ನು ಆದಷ್ಟು ಬೇಗನೆ ಕರೆದೊಯ್ಯುತ್ತೇವೆ' ಎಂದು ಭರವಸೆ ನೀಡಿದರು.

ಜಾಮರ್ ಸಮಸ್ಯೆ ನಿವಾರಣೆ ಭರವಸೆ

ಬೆಂಗಳೂರಿನ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹಕ್ಕೆ ಅಳವಡಿಸಿರುವ ಜಾಮರ್‌ಗಳಿಂದ ಸುತ್ತಮುತ್ತಲಿನ ಬಡಾವಣೆಗಳಲ್ಲಿ ನೆಟ್‌ವರ್ಕ್ ಸಮಸ್ಯೆ ಆಗುತ್ತಿರುವ ಕಾರಣ ಇದೇ 22ರಂದು ಮೊಬೈಲ್ ಕಂಪನಿಗಳ ಸಭೆ ಕರೆಯಲಾಗಿದ್ದು, ಸಾರ್ವಜನಿಕರಿಗೆ ತೊಂದರೆ ಆಗದಂತೆ ಕ್ರಮಕೈಗೊಳ್ಳಲಾಗುವುದು ಎಂದು ಗೃಹ ಸಚಿವ ಜಿ.ಪರಮೇಶ್ವರ ಅವರು ತಿಳಿಸಿದರು.

ಪರಪ್ಪನ ಅಗ್ರಹಾರ ಕಾರಾಗೃಹದ ಒಳಗೆ ಮೊಬೈಲ್ ನೆಟ್ ವರ್ಕ್ ಸಿಗಬಾರದು ಎಂದು ಜಾಮರ್ ಅಳವಡಿಸಲಾಗಿದೆ. ಆದರೆ, ಕಾರಾಗೃಹದ ಒಳಗೆ ನೆಟ್‌ವರ್ಕ್ ಸಿಗುತ್ತಿದೆ; ಸಾರ್ವಜನಿಕರಿಗೆ ಸಿಗುತ್ತಿಲ್ಲ ಎಂದು ಬಿಜೆಪಿಯ ಎಂ.ಕೃಷ್ಣಪ್ಪ ಅವರು ಸದನದ ಗಮನ ಸೆಳೆದರು.

'ಕಾರಾಗೃಹದಲ್ಲಿ 19 ಜಾಮರ್‌ಗಳಿವೆ. ಕೆಲವು ಸಂದರ್ಭಗಳಲ್ಲಿ ಅದನ್ನು ಕೆಡಿಸಿ ಒಳಗೆ ನೆಟ್‌ವರ್ಕ್ ಬಳಸುತ್ತಿದ್ದರು. ಅದನ್ನು ಸರಿಪಡಿಸಿದ್ದೇವೆ. ಏರ್‌ಟೆಲ್, ಬಿಎಸ್‌ಎನ್‌ಎಲ್, ಜಿಯೋ ಸೇರಿ ಒಟ್ಟು ನಾಲ್ಕು ಟೆಲಿಕಾಂ ಕಂಪನಿಗಳು ಜಾಮರ್ ಅಳವಡಿಸಿ ನಿರ್ವಹಣೆ ಮಾಡುತ್ತಿವೆ. ಈ ಕಂಪನಿಗಳ ಜತೆ ನಾಲ್ಕು ಬಾರಿ ಸಭೆ ನಡೆಸಲಾಗಿದೆ' ಎಂದು ಪರಮೇಶ್ವರ ಹೇಳಿದರು.

ತಿಮ್ಮಪ್ಪನ ದರ್ಶನಕ್ಕೆ ಶಾಸಕರ ಶಿಫಾರಸು ಪತ್ರ

ರಾಜ್ಯದ ಶಾಸಕರ ಶಿಫಾರಸು ಪರಿಗಣಿಸಿ ತಿರುಪತಿ ದೇವಸ್ಥಾನದಲ್ಲಿ ದರ್ಶನಕ್ಕೆ ಅವಕಾಶ ಕಲ್ಪಿಸುವಂತೆ ಟಿಟಿಡಿಗೆ ಮನವಿ ಸಲ್ಲಿಸಲಾಗಿದೆ ಎಂದು ಮುಜರಾಯಿ ಇಲಾಖೆ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು.

ಬಿಜೆಪಿಯ ಎಸ್.ಆರ್.ವಿಶ್ವನಾಥ್ ಅವರ ಗಮನ ಸೆಳೆಯುವ ಸೂಚನೆಗೆ ಉತ್ತರಿಸಿದ ಅವರು, 'ತಿರುಪತಿಯಲ್ಲಿ ನಿರ್ಮಿಸಿರುವ ಕರ್ನಾಟಕ ಭವನ ಮತ್ತು ಕಲ್ಯಾಣ ಮಂಟಪದ ಕಳಪೆ ಕಾಮಗಾರಿ ಆರೋಪದ ಬಗ್ಗೆ ಅಲ್ಲಿಗೆ ಭೇಟಿ ನೀಡಿ ಪರಿಶೀಲಿಸಲಾಗುವುದು. ಕಟ್ಟಡ ನಿರ್ಮಿಸಿದ ಗುತ್ತಿಗೆದಾರರೇ 5 ವರ್ಷ ನಿರ್ವಹಣೆ ಮಾಡಬೇಕಿದೆ' ಎಂದರು.

ನವೋದ್ಯಮಗಳಿಗೆ ಅವಕಾಶ, 10 ಸಂಸ್ಕರಣಾ ಘಟಕಗಳಿಗೆ ವಿಸ್ತರಿಸುವ ಉದ್ದೇಶ

ತ್ಯಾಜ್ಯ ನೀರು ಜಲಮಂಡಳಿಗೆ ತರಲಿದೆ ಆದಾಯ

• ಉಮೇಶಭಟ್ಟ ಪಿ.ಎಚ್.

ಬೆಂಗಳೂರು: ತ್ಯಾಜ್ಯ ನೀರನ್ನು 11 ಹಂತಗಳಲ್ಲಿ ಶುದ್ಧೀಕರಿಸಿ ಕುಡಿಯಲು ಹೊರತುಪಡಿಸಿ, ಇತರೆ ಉದ್ದೇಶಗಳಿಗೆ ಬಳಸುವ ಮೂಲಕ ಆದಾಯ ಗಳಿಸಲು ಜಲಮಂಡಳಿ ಕಾರ್ಯ ಪ್ರವೃತ್ತವಾಗಿದೆ.

ನಗರದಲ್ಲಿ ನಿತ್ಯ 70 ಸಾವಿರ ಲೀಟರ್ ತ್ಯಾಜ್ಯ ನೀರಿನ ಸಂಸ್ಕರಣೆ ಕಾರ್ಯ ಆರಂಭವಾಗಿದ್ದು, 24 ಸಾವಿರ ಲೀಟರ್ ನೀರನ್ನು ಮಾರಾಟ ಮಾಡಲಾಗುತ್ತಿದೆ.ಅನ್ಯ ಬಳಕೆಗೆ ಸಿಹಿನೀರಿನ ಮೇಲಿನ ಅವಲಂಬನೆ ತಪ್ಪಿಸಿ ಆರ್ಥಿಕ ಹೊರೆ ತಗ್ಗಿಸುವುದು, ತ್ಯಾಜ್ಯ ನೀರು ಅನಗತ್ಯವಾಗಿ ಕೆರೆಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ಸೇರುವುದನ್ನು ತಪ್ಪಿಸಲು ತ್ಯಾಜ್ಯ ನೀರು ಸಂಸ್ಕರಣೆಗೆ ನವೋದ್ಯಮಗಳನ್ನು ಬಳಸಿಕೊಳ್ಳಲು ಜಲಮಂಡಳಿ ಮುಂದಾಗಿದೆ.

ಮೊದಲ ಹಂತದಲ್ಲಿ ಆರಂಭವಾಗಿರುವ ಯೋಜನೆಯಲ್ಲಿ ಜಲಮಂಡಳಿಯಿಂದ ಯಾವುದೇ ಬಂಡವಾಳ ಹೂಡಿಕೆ ಮಾಡುವುದಿಲ್ಲ. ಬದಲಿಗೆ, ಬೆಂಗಳೂರಿನ ಬೋಸನ್ ವೈಟ್‌ವಾಟರ್ ಎಂಬ ನವೋದ್ಯಮ ₹50 ಲಕ್ಷ ಅನುದಾನದಲ್ಲಿ ಅತ್ಯಾಧುನಿಕ ಶುದ್ಧೀಕರಣ ಯಂತ್ರೋಪಕರಣಗಳನ್ನು ಬಳಸಿ ಪ್ರಯೋಗವನ್ನು ಆರಂಭಿಸಿದೆ.

ಶುದ್ಧೀಕರಣ ಪ್ರಮಾಣ	1380 ಎಂಎಲ್‌ಡಿ
ಯೋಜಿತ ಘಟಕ	680 ಎಂಎಲ್‌ಡಿ
ಕೆ.ಸಿ ವ್ಯಾಲಿಯಿಂದ ಕೆರೆಗಳಿಗೆ ಬಳಕೆ	800 ಎಂಎಲ್‌ಡಿ
ಕೈಗಾರಿಕೆ, ಐಟಿ ಪಾರ್ಕ್ ಇತರೆ ಬಳಕೆಗೆ	50 ಎಂಎಲ್‌ಡಿ
ವಾಣಿಜ್ಯ ಬಳಕೆ ಗುರಿ	500 ಎಂಎಲ್‌ಡಿ
ಕಾರ್ಯನಿರತ ಎಸ್‌ಟಿಪಿಗಳು	34
ನಿರ್ಮಾಣ ಹಂತದ ಎಸ್‌ಟಿಪಿಗಳು	12

ಜಲಮಂಡಳಿಯು ಕಚ್ಚಾವಸ್ತುವಾಗಿ ತ್ಯಾಜ್ಯ ನೀರನ್ನು ಸಂಸ್ಕರಣಾ ಘಟಕದ ಮೂಲಕ ನೀಡಲಿದೆ. ಆ ನಂತರ ಸಂಸ್ಕರಿಸಿದ ನೀರಿನ ಮಾರಾಟಕ್ಕೆ ಬೇಕಾದ ಸಂಪರ್ಕ ವ್ಯವಸ್ಥೆಗೆ ಸಹಾಯ ಮಾಡಲಿದೆ.

ಇದರ ಸಾಧಕ-ಬಾಧಕಗಳನ್ನು ನೋಡಿಕೊಂಡು ಇನ್ನೂ 10 ತ್ಯಾಜ್ಯ ಸಂಸ್ಕರಣಾ ಘಟಕಗಳಿಗೆ ಇದನ್ನು ವಿಸ್ತರಿಸಲಾಗುತ್ತದೆ.

ಈ ಪ್ರಯೋಗಗಳ ಫಲಿತಾಂಶ, ಉದ್ಯಮ ವಲಯದಿಂದ ಶುದ್ಧೀಕರಿಸಿದ ನೀರಿನ ಬೇಡಿಕೆ ನೋಡಿಕೊಂಡು ಹಂತ ಹಂತವಾಗಿ ಮೂರು ವರ್ಷದಲ್ಲಿ 500 ಎಂಎಲ್‌ಡಿ ತ್ಯಾಜ್ಯ ನೀರು ಸಂಸ್ಕರಣೆ ಮಾಡಲಾಗುತ್ತದೆ. ತ್ಯಾಜ್ಯ ನೀರಿನಿಂದ ಕನಿಷ್ಠ ₹100 ಕೋಟಿ ಆದಾಯ ಗಳಿಸುವ ಯೋಜನೆ ರೂಪಿಸಲಾಗುತ್ತಿದೆ.

ಸಂಸ್ಕರಣೆಯ ವೆಚ್ಚ: ನವೋದ್ಯಮ ನಡೆಸಿರುವ ಪ್ರಯೋಗದಂತೆ ನೀರು ಶುದ್ಧೀಕರಣಕ್ಕೆ ಪ್ರತಿ ಲೀಟರ್‌ಗೆ 3ರಿಂದ 4 ಪೈಸೆ ವೆಚ್ಚವಾಗಲಿದೆ. ಶುದ್ಧೀಕರಣದ ನಂತರ 15ರಿಂದ 16 ಪೈಸೆಗೆ ಮಾರಾಟ ಮಾಡಬಹುದು. ಟ್ಯಾಂಕರ್ ಮೂಲಕ ಬಳಸಿದರೆ ಲೀಟರ್‌ಗೆ 20 ಪೈಸೆ ವೆಚ್ಚವಾಗಬಹುದು. ಅಂದರೆ 12 ಸಾವಿರ ಲೀಟರ್ ಸಾಮರ್ಥ್ಯದ ಒಂದು ಟ್ಯಾಂಕರ್‌ಗೆ ₹2,200 ರಿಂದ ₹2,400ವರೆಗೂ ಆದಾಯ ಬರಲಿದೆ.

'ಸಂಸ್ಕರಿಸಿದ ನೀರಿನ ಬಗ್ಗೆ ಜನರಲ್ಲಿ ಭರವಸೆ ಮೂಡಿಸಿ ಮುಂದೆ ಎಸ್‌ಟಿಪಿಗಳನ್ನು ಸಂಪನ್ಮೂಲ ಘಟಕವೆಂಬ ಬ್ರ್ಯಾಂಡಿಂಗ್ ಮಾಡುವ ಭಾಗವಾಗಿಯೇ ಬೋಸನ್ ವೈಟ್‌ವಾಟರ್ ಎಂಬ ನವೋದ್ಯಮಕ್ಕೆ ಮೊದಲ ಅವಕಾಶ ನೀಡಿದ್ದೇವೆ. ನೀರಿನ ನಿರ್ವಹಣೆ, ಮರುಬಳಕೆ ಮತ್ತು ಹೊಸ ತಂತ್ರಜ್ಞಾನಗಳಲ್ಲಿ ಆಸಕ್ತಿ ಇರುವ ನವೋದ್ಯಮ ಕಂಪನಿಗಳು ಮುಂದೆ ಬಂದರೆ ಪ್ರಾಯೋಗಿಕ ರೂಪದಲ್ಲಿ ಸಂಸ್ಕರಣೆಗೆ ಅವಕಾಶ ಮಾಡಿಕೊಡುತ್ತೇವೆ' ಎಂದು ಜಲಮಂಡಳಿ ಅಧ್ಯಕ್ಷ ಡಾ. ರಾಮ್ ಪ್ರಸಾತ್ ಮನೋಹರ್ ತಿಳಿಸಿದರು.

11 ಹಂತದಲ್ಲಿ ಶುದ್ಧೀಕರಣ

50 ಎಂಎಲ್‌ಡಿ ಸಾಮರ್ಥ್ಯದ ಕಾಡುಬೀಸನಹಳ್ಳಿ ಎಸ್‌ಟಿಪಿಯಿಂದ ಸಂಸ್ಕರಿಸಿದ ನೀರನ್ನು ಪಡೆಯುವ ಬೋಸಾನ್ ವೈಟ್‌ವಾಟರ್ ಸಂಸ್ಥೆ 11 ಹಂತದಲ್ಲಿ ಶುದ್ಧೀಕರಿಸುತ್ತಿದೆ. ಇದಕ್ಕಾಗಿಯೇ ಯಂತ್ರೋಪಕರಣಗಳನ್ನು ಬಳಕೆ ಮಾಡಲಾಗುತ್ತಿದೆ. ಪರೀಕ್ಷೆ ಮತ್ತು ಮಾಪನಾಂಕ ನಿರ್ಣಯ ಪ್ರಯೋಗಾಲಯಗಳ ರಾಷ್ಟ್ರೀಯ ಮಾನ್ಯತೆ ಮಂಡಳಿ(ಎನ್‌ಎಬಿಎಲ್) ನೀರಿನ ಶುದ್ಧತೆ ಪ್ರಮಾಣೀಕರಿಸಲಿದೆ.

'3 ತಿಂಗಳಿನಿಂದ ಜಲಮಂಡಳಿ ಘಟಕದಲ್ಲಿ ಪ್ರಯೋಗ ನಡೆದರೂ ಈಗ ಅಧಿಕೃತ ಚಟುವಟಿಕೆ ಶುರುವಾಗಿದೆ. ನೀರನ್ನು ಆಟೋಮೇಷನ್ ತಂತ್ರಜ್ಞಾನ ಬಳಸಿ ಶುದ್ಧೀಕರಣ ಮಾಡಲಾಗುತ್ತದೆ. ಇದು ಕುಡಿಯುವುದಕ್ಕಿಂತ ಉದ್ಯಮಗಳ ಕೂಲಿಂಗ್ ಸಹಿತ ಕಟ್ಟಡಗಳಿಗೆ ಬಳಸಲು ಯೋಗ್ಯ' ಎಂದು ಬೋಸಾನ್ ವೈಟ್‌ವಾಟರ್ ನವೋದ್ಯಮ ಸಂಸ್ಥಾಪಕ ಗೌತಮ್ ತಿಳಿಸಿದರು.



ಕಾಡುಬೀಸನಹಳ್ಳಿಯಲ್ಲಿ ನೀರು ಶುದ್ಧೀಕರಣಕ್ಕೆ ಆರಂಭಗೊಂಡಿರುವ ನವೋದ್ಯಮ ಚಟುವಟಿಕೆಯನ್ನು ಜಲಮಂಡಳಿ ಅಧ್ಯಕ್ಷ ರಾಮಪ್ರಸಾತ್ ಮನೋಹರ್ ಪರಿಶೀಲಿಸಿದರು

ಗವಿಮಠದ ಜಾತ್ರೆಗೆ ಮೈಸೂರು ಪಾಕ್ ಸವಿ

2 ದಿನ ಭಕ್ತರಿಗೆ ಸಿಹಿ ಸವಿ ಉಣಬಡಿಸಲು ಸಿದ್ಧತೆ; ಕನಿಷ್ಠ ನಾಲ್ಕೂವರೆ ಲಕ್ಷ ತಯಾರಿ

• ಪ್ರಮೋದ ಕುಲಕರ್ಣಿ



ಕೊಪ್ಪಳ: ಇಲ್ಲಿನ ಪ್ರಸಿದ್ಧ ಗವಿಸಿದ್ಧೇಶ್ವರ ಮಠದ ಜಾತ್ರಾ ಮಹೋತ್ಸವದಲ್ಲಿ ಭಕ್ತರಿಗೆ ಈ ಬಾರಿ ಕನಿಷ್ಠ 4.80 ಲಕ್ಷದಿಂದ 5.5 ಲಕ್ಷದ ಮೈಸೂರು ಪಾಕ್ ಉಣಬಡಿಸಲು ಸಿಂಧನೂರಿನ ಗವಿಸಿದ್ಧೇಶ್ವರ ಆಗ್ರೋ ಫುಡ್ಸ್ ವಿಜಯಕುಮಾರ್ ಗೆಳೆಯರ ಬಳಗ ಸಿದ್ಧತೆ ಮಾಡಿಕೊಂಡಿದೆ.

ಜಾತ್ರೆಗೆ ಲಕ್ಷಾಂತರ ಭಕ್ತರು ಸೇರಲಿದ್ದಾರೆ. ಬಳಗದ ಸದಸ್ಯರು ಎಂಟು ವರ್ಷಗಳಿಂದ ಭಿನ್ನ ತಿನಿಸು ಮಾಡಿಸಿ ಸೇವೆಯ ರೂಪದಲ್ಲಿ ಮಠಕ್ಕೆ ಅರ್ಪಿಸುತ್ತಾರೆ. ಮಹಾರಥೋತ್ಸವ ಹಾಗೂ ಅದರ ಮರುದಿನ ಮಠಕ್ಕೆ ಭೇಟಿ ನೀಡುವ ಲಕ್ಷಾಂತರ ಭಕ್ತರಿಗೆ ಸಿಹಿ ಬಡಿಸಲಾಗುತ್ತದೆ.

> ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿಯ ಪ್ರೇರಣೆಯಿಂದಾಗಿ ಪ್ರತಿವರ್ಷ ಜಾತ್ರೆಯ ಸಮಯದಲ್ಲಿ ಸಿಹಿ ತಿನಿಸು ತಯಾರಿಸಲಾಗುತ್ತಿದೆ. ಸೇವೆ ಆರಂಭಿಸಿದ ಬಳಿಕ ಬಹಳಷ್ಟು ಒಳ್ಳೆಯದಾಗಿದೆ.
> **ಈಶ್ವರ ಹೊಗರನಾಳ**, ವಕೀಲರು, ಬಳಗದ ಸದಸ್ಯ

ಬಳಗದ ಸ್ನೇಹಿತರು ಹಿಂದಿನ ವರ್ಷ ಸಾವಯವ ಬೆಲ್ಲದ 12 ಲಕ್ಷ ಜಿಲೇಬಿಯನ್ನು ಉಣಬಡಿಸಿದ್ದರು. ಅದಕ್ಕೂ ಹಿಂದಿನ ವರ್ಷಗಳ ಜಾತ್ರೆಯ ಸಮಯದಲ್ಲಿ ಶೇಂಗಾ ಹೋಳಿಗೆ, ಸಿಹಿ ಬೂಂದಿ, ಸಿಹಿ ಮಾದಲಿ ಹೀಗೆ ತರಹೇವಾರಿ ತಿನಿಸು ತಯಾರಿಸಿ ಕೊಟ್ಟಿದ್ದರು.

2026ರ ಗವಿಮಠದ ಜಾತ್ರಾ ಮಹೋತ್ಸವದ ಮಹಾರಥೋತ್ಸವ ಜ. 5ರಂದು ನಡೆಯಲಿದ್ದು, ಮಠದ ಮಹಾದಾಸೋಹದ ಆವರಣದಲ್ಲಿಯೇ ಮೈಸೂರು ಪಾಕ್ ತಯಾರಿಸಲು ಗವಿಮಠದ ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ ಒಪ್ಪಿಗೆಯನ್ನೂ ಬಳಗದವರು ಪಡೆದುಕೊಂಡಿದ್ದಾರೆ.

60 ಕ್ವಿಂಟಲ್ ಸಕ್ಕರೆ ಬಳಸಿ ಮೈಸೂರು ಪಾಕ್ ತಯಾರಿಸಲು ಯೋಜನೆ ಸಿದ್ಧವಾಗಿದೆ. ಒಂದು ಕ್ವಿಂಟಲ್ ಮೈಸೂರು ಪಾಕ್ ತಯಾರಿಸಲು ಅಂದಾಜು 75 ಕೆ.ಜಿ. ಅಡುಗೆ ಎಣ್ಣೆ, 30 ಕೆ.ಜಿ. ಹಸಿ ಕಡಲೆಹಿಟ್ಟು, ಐದು ಕೆ.ಜಿ. ಮೈದಾಹಿಟ್ಟು, ಐದು ಕೆ.ಜಿ. ತುಪ್ಪ, ಕಾಲು ಕೆ.ಜಿ. ಏಲಕ್ಕಿ ಹಾಗೂ ಇನ್ನಿತರ ಸಾಮಗ್ರಿ ಬಳಕೆ ಆಗುವ ಅಂದಾಜಿದೆ ಎಂದು ಸಂಘಟಕರು ಹೇಳುತ್ತಾರೆ.

ಒಂದು ವೇಳೆ ಭಕ್ತರ ಸಂಖ್ಯೆ ಹೆಚ್ಚಾದರೆ ಅದಕ್ಕೆ ಅನುಗುಣವಾಗಿ ಮೈಸೂರು ಪಾಕ್ ತಯಾರಿಸಲು ಬಳಗದವರು ತಯಾರಿ ಮಾಡಿಕೊಂಡಿದ್ದಾರೆ.

ವಿಜಯಕುಮಾರ್ ಅವರ ಐದಾರು ಜನರ ಸ್ನೇಹಿತರ ಬಳಗವಿದೆ. ಮಠದ ಆವರಣದಲ್ಲಿ ಸತತವಾಗಿ ಎರಡು ದಿನ ಸಿಹಿ ತನಿಸು ತಯಾರಿಸುವ, ಹಂಚುವ ಮತ್ತು ಇದಕ್ಕೆ ನೆರವಾಗುವ ಅನೇಕ ಭಕ್ತರ ದೊಡ್ಡ ದಂಡು ಬಳಗದ ಜೊತೆ ಕೈ ಜೋಡಿಸಿದೆ.

ಖರ್ಚು, ವೆಚ್ಚ ನಿರ್ವಹಣೆ ಹೇಗೆ?

ಗವಿಮಠದ ಜಾತ್ರೆಗೆ ಪ್ರತಿವರ್ಷವೂ ಲಕ್ಷಾಂತರ ಸಿಹಿ ತಿನಿಸು ತಯಾರಿಸಿಕೊಡಲು ಐದಾರು ಸ್ನೇಹಿತರು ತಲಾ ಒಂದಷ್ಟು ಹಣ ನೀಡಿ ಸಹಕಾರ ಮನೋಭಾವನೆಯಿಂದ ಈ ಕೆಲಸ ಮಾಡಿಕೊಂಡು ಬಂದಿದ್ದಾರೆ.

‘ಗವಿಮಠ ಹಾಗೂ ಸ್ವಾಮೀಜಿಯವರ ಆಶೀರ್ವಾದದಿಂದ ಆದಷ್ಟು ಸೇವೆ ಮಾಡುತ್ತಿದ್ದೇವೆ. ಲಕ್ಷಾಂತರ ಭಕ್ತರು ಬರುವ ಮಠಕ್ಕೆ ಇದು ಅಳಿಲುಸೇವೆ ಅಷ್ಟೇ’ ಎಂದು ಬಳಗದ ಪ್ರಮುಖರಾದ ಉದ್ಯಮಿ ವಿಜಯಕುಮಾರ ಗುಡಿಹಾಳ ಹೇಳಿದರು.



ರಾಜ್ಯ ಸರ್ಕಾರದ ರೈತ ವಿರೋಧಿ ನೀತಿಗಳನ್ನು ಖಂಡಿಸಿ ಬಿಜೆಪಿಯ ರೈತ ಮೋರ್ಚಾ ನಾಯಕರು ಮತ್ತು ಕಾರ್ಯಕರ್ತರು ಬೆಳಗಾವಿಯ ಬಿ.ಎಸ್ ಯಡಿಯೂರಪ್ಪ ರಸ್ತೆಯಲ್ಲಿ ಪ್ರತಿಭಟನಾ ಮೆರವಣಿಗೆ ನಡೆಸಿದರು –ಚಿತ್ರ: ರಂಜು ಪಿ

ಸುವರ್ಣಸೌಧಕ್ಕೆ ಮುತ್ತಿಗೆ ಯತ್ನ

ಒಂದನೇ ಪುಟದಿಂದ...

ನಾಯಕರ ಬಂಧನ: ‘ಕಾಂಗ್ರೆಸ್ ಸರ್ಕಾರದ ಕಳೆದ ಎರಡೂವರೆ ವರ್ಷಗಳ ಅವಧಿಯಲ್ಲಿ 2,500 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮೆಕ್ಕೆಜೋಳ, ಹೆಸರು ಖರೀದಿ ಕೇಂದ್ರ ತೆರೆಯದೇ, ಕಬ್ಬು, ಹೆಸರಿಗೆ ಸೂಕ್ತ ದರ ನೀಡದೆ ಅನ್ಯಾಯಮಾಡಲಾಗುತ್ತಿದೆ’ ಎಂದು ಆರೋಪಿಸಿ ಬಿಜೆಪಿ ಕಾರ್ಯಕರ್ತರು ಬೃಹತ್ ಪ್ರತಿಭಟನೆ ನಡೆಸಿದರು.

ಪ್ರತಿಭಟನಾ ಸಮಾವೇಶದ ಸ್ಥಳದಿಂದ ವಿಧಾನಸೌಧದ ಸಾಗುತ್ತಾ 3 ಕಿ.ಮೀ ಕ್ರಮಿಸಿದ ಬಳಿಕ ದಾಟಿ ರಾಷ್ಟ್ರೀಯ ಹೆದ್ದಾರಿಗೆ ನುಗ್ಗಲು ಯತ್ನಿಸಿದರು. ಆಗ ಗೊಂದಲ ಮೂಡಿತು. ಬ್ಯಾರಿಕೇಡ್ ಕಿತ್ತು ಸೌಧದತ್ತ ನುಗ್ಗಲೆತ್ನಿಸಿದ ನಾಯಕರನ್ನು ಪೊಲೀಸರು ವಶಕ್ಕೆ ಪಡೆದರು.

ನೇತೃತ್ವ ವಹಿಸಿದ್ದ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ, ಉಭಯ ಸದನಗಳ ವಿರೋಧಪಕ್ಷ ನಾಯಕರಾದ ಆರ್.ಅಶೋಕ, ಛಲವಾದಿ ನಾರಾಯಣಸ್ವಾಮಿ, ಶಾಸಕರಾದ ಬಾಲಚಂದ್ರ ಜಾರಕಿಹೊಳಿ, ಸಿದ್ದು ಸವದಿ, ಅಭಯ ಪಾಟೀಲ, ಸಿ.ಟಿ.ರವಿ, ರೈತ ಮೋರ್ಚಾ ಅಧ್ಯಕ್ಷ ಎ.ಎಸ್.ಪಾಟೀಲ ನಡಹಳ್ಳಿ, ಬಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಅಣ್ಣಾಸಾಹೇಬ ಜೊಲ್ಲೆ ಸೇರಿ ಹಲವು ಕಾರ್ಯಕರ್ತರನ್ನು ಪೊಲೀಸ್ ವಾಹನ ಹಾಗೂ ಬಸ್‌ಗಳಲ್ಲಿ ಕರೆದೊಯ್ದರು.

> ರೈತರಿಗೆ ಕೇಂದ್ರ ಸರ್ಕಾರವೇ ಮೋಸ ಮಾಡುತ್ತಿದೆ. ನಾವು ರೈತರ ಪರ ಇದ್ದೇವೆ. ಕೇಂದ್ರದಿಂದ ಬೆಂಬಲ ಬೆಲೆ ಘೋಷಿಸಲು ಅವರಿಗೇ ಮನಸ್ಸಿಲ್ಲ
> **ಡಿ.ಕೆ.ಶಿವಕುಮಾರ್,** ಉಪ ಮುಖ್ಯಮಂತ್ರಿ

ಪಟ್ಟುಹಿಡಿದ ರೈತರು:

ಇದೇ ಮಾರ್ಗದಲ್ಲಿ ಬಲಬದಿ ಸರ್ವಿಸ್ ರಸ್ತೆಯಲ್ಲೂ ರೈತರು ತಾಸುಗಟ್ಟಲೇ ಧರಣಿ ಕೂತರು. ಆಲಮಟ್ಟಿ ಜಲಾಶಯದ ಎತ್ತರ ಹೆಚ್ಚಿಸಬೇಕು, ಮೂರು ಕೃಷಿ ಕಾಯ್ದೆಗಳನ್ನು ಕೈಬಿಡಬೇಕು, ಮೆಕ್ಕೆಜೋಳ ಖರೀದಿಗೆ ಕೇಂದ್ರಗಳನ್ನು ತೆರೆಯಬೇಕು ಎಂದು ಆಗ್ರಹಿಸಿ ಘೋಷಣೆ ಕೂಗಿದರು.

‘ಮುಖ್ಯಮಂತ್ರಿ ಅವರು ಸ್ಥಳಕ್ಕೆ ಬರುವವರೆಗೂ ಧರಣಿ ಬಿಡುವುದಿಲ್ಲ’ ಎಂದು ಪಟ್ಟು ಹಿಡಿದರು. ಇದರಿಂದ ಒಂದು ಗಂಟೆ ವಾಹನಗಳ ಸಂಚಾರ ಬಂದ್ ಆಯಿತು.

ಸ್ಥಳಕ್ಕೆ ಬಂದ ಡಿಸಿಪಿ ನಾರಾಯಣ ಭರಮನಿ ಅವರು ಪ್ರತಿಭಟನ ನಿರತ ರೈತರ ಮನವೊಲಿಸಲು ಯತ್ನಿಸಿದರು. ಸ್ಥಳಕ್ಕೆ ಬರುವುದಾಗಿ ಕೃಷಿ ಸಚಿವರು ಭರವಸೆ ನೀಡಿದ ಬಳಿಕ ಪ್ರತಿಭಟನೆಯ ತಾಣಕ್ಕೆ ಮರಳಿದರು.

‘ಸರ್ಕಾರದ ಹೆಣ ಎತ್ತಲು ಸಿ.ಎಂ, ಡಿಸಿಎಂ ಪೈಪೋಟಿ’

ಪ್ರತಿಭಟನೆ ವೇಳೆ ಮಾತನಾಡಿದ ಆರ್.ಅಶೋಕ, ‘ಜನರ ಪಾಲಿಗೆ ಈ ಸರ್ಕಾರ ಸತ್ತು ಹೋಗಿದೆ. ಇದರ ಹೆಣವನ್ನು ಯಾರು ಮುಂದೆ ಹೊರಬೇಕು ಎಂಬ ಬಗ್ಗೆ ಸಿ.ಎಂ, ಡಿಸಿಎಂ ಪೈಪೋಟಿ ನಡೆಸಿದ್ದಾರೆ’ ಎಂದು ವ್ಯಂಗ್ಯವಾಡಿದರು.

ಇದಕ್ಕೆ ದನಿಗೂಡಿಸಿದ ವಿಜಯೇಂದ್ರ, ‘ಈ ಲಜ್ಜೆಗೇಡಿ ಸರ್ಕಾರ ರೈತರ ಪಾಲಿಗೆ ಸತ್ತುಹೋಗಿದೆ’ ಎಂದು ಟೀಕಿಸಿದರು. ಬಿಜೆಪಿ ನಾಯಕರ ಈ ಮಾತಿಗೆ ಕೃಷಿ ಸಚಿವ ಎನ್. ಚಲುವರಾಯಸ್ವಾಮಿ, ‘ವಿಜಯೇಂದ್ರ ನಾಲಿಗೆ ಬಿಗಿ ಹಿಡಿದು ಮಾತನಾಡಬೇಕು. 5 ವರ್ಷ ಇವರೇನು ಮಾಡಿದ್ದಾರೆ? ನಾವೂ ಕಂಡಿದ್ದೇವೆ’ ಎಂದು ಪ್ರತಿಕ್ರಿಯಿಸಿದ್ದಾರೆ.

ಅಧಿವೇಶನಕ್ಕೆ ಪ್ರತಿಭಟನೆಗಳ ಬಿಸಿ

ಬೆಳಗಾವಿ: ಸುವರ್ಣ ವಿಧಾನಸೌಧದ ಆವರಣ ಮಂಗಳವಾರ ಪ್ರತಿಭಟನಕಾರರಿಂದ ತುಂಬಿಹೋಯಿತು. ಒಂದೇ ದಿನ ವಿವಿಧೆಡೆ ಹತ್ತು ಪ್ರತಿಭಟನೆ, ಧರಣಿ, ರ್‍ಯಾಲಿಗಳು ನಡೆದವು.

15ನೇ ಹಣಕಾಸು ಆಯೋಗದ ಅನುದಾನ ಬಿಡುಗಡೆಗೆ ಒತ್ತಾಯಿಸಿ, ಗ್ರಾಮ ಪಂಚಾಯಿತಿ ಸದಸ್ಯರ ಮಹಾ ಒಕ್ಕೂಟದವರು, ವಿವಿಧ ಇಲಾಖೆಗಳ ಹೊರಗುತ್ತಿಗೆ ಕಾರ್ಮಿಕರು ಮತ್ತು ನೌಕರರ ಸೇವೆ ಕಾಯಂಗೆ ಒತ್ತಾಯಿಸಿ ಆಲ್ ಇಂಡಿಯಾ ಯುನೈಟೆಡ್ ಟ್ರೇಡ್ ಯೂನಿಯನ್ ಸೆಂಟರ್‌ನವರು ಪ್ರತಿಭಟಿಸಿದರು.

ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ, ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷ, ರಾಜ್ಯ ಮಡಿವಾಳರ ಕ್ಷೇಮಾಭಿವೃದ್ಧಿ ಸಂಘ, ಸೊರಬದ ಸಾರ್ವಜನಿಕ ಹಿತರಕ್ಷಣಾ ಹೋರಾಟ ಸಮಿತಿ ಟ್ರಸ್ಟ್ ಇನ್ನಿತರ ಸಂಘಟನೆಗಳವರು ಪ್ರತಿಭಟಿಸಿದರು.

ಚಿಟಿಕೆ ಸುದ್ದಿ

ವೈದ್ಯಕೀಯ ಸೀಟು ಮಿತಿ ಜಾರಿ ಮುಂದೂಡಿಕೆ

ನವದೆಹಲಿ (ಪಿಟಿಐ): ರಾಷ್ಟ್ರೀಯ ವೈದ್ಯಕೀಯ ಆಯೋಗದಿಂದ (ಎನ್‌ಎಂಸಿ) ಎಂಬಿಬಿಎಸ್ ಸೀಟುಗಳಿಗೆ ಮಿತಿ ಹೇರುವ ಮಾರ್ಗಸೂಚಿ ಜಾರಿಯನ್ನು 2024–25 ಮತ್ತು 2025–26ನೇ ಶೈಕ್ಷಣಿಕ ವರ್ಷಕ್ಕೆ ಮುಂದೂಡಲಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವ ಜೆ.ಪಿ. ನಡ್ಡಾ ಮಂಗಳವಾರ ರಾಜ್ಯಸಭೆಗೆ ತಿಳಿಸಿದ್ದಾರೆ.

ಕೊಲೆ ಮಾಡಿ ವಿಡಿಯೊ ಕಳಿಸಿದರು

ಹಾಸನ: ಆಟೊ ರಿಕ್ಷಾ ಚಾಲಕರಿಬ್ಬರ ನಡುವೆ ಸೋಮವಾರ ರಾತ್ರಿ ನಡೆದ ಜಗಳ ಕೊಲೆಯಲ್ಲಿ ಕೊನೆಯಾಗಿ, ಕೊಲೆಯ ವಿಡಿಯೊವನ್ನು ಮೃತ ಚಾಲಕನ ಸಹೋದರನಿಗೆ ಕಳಿಸಿರುವ ಆರೋಪಿಗಳಿಗಾಗಿ ಪೊಲೀಸರು ಹುಡುಕಾಟ ನಡೆಸಿದ್ದಾರೆ.

ನಗರದ ಚನ್ನಪಟ್ಟಣ–ಬಿಟ್ಟಗೌಡನಹಳ್ಳಿ ಜಂಕ್ಷನ್ ಸಮೀಪದ ಕೋಳಿಫಾರಂ ಹಿಂಭಾಗ ಕೃತ್ಯ ನಡೆದಿದೆ. ತಾಲ್ಲೂಕಿನ ಹೂವಿನಹಳ್ಳಿ ಕಾವಲಿನ ಕೀರ್ತಿ (24) ಕೊಲೆಯಾದ ಯುವಕ. ಆಲೂರು ತಾಲ್ಲೂಕು ದೊಡ್ಡ ಕಣಗಾಲ್ ಗ್ರಾಮದ ಉಲ್ಲಾಸ್ ಪ್ರಮುಖ ಆರೋಪಿ.

ಘಟನೆ ನಡೆದಾಗ ಚಾಲಕರು ಗಾಂಜಾ ಅಮಲಿನಲ್ಲಿದ್ದರು. ಆರೋಪಿಗಳು ಕೀರ್ತಿಯನ್ನು ಕಲ್ಲಿನಿಂದ ಜಜ್ಜಿ ಕೊಲೆ ಮಾಡಿದ ಬಳಿಕ, ವಿಡಿಯೊ ಮಾಡಲಾಗಿದೆ. ಪಿಎಸ್‌ಐ ಪ್ರಿಯಾಂಕ ಸ್ಥಳಕ್ಕೆ ಭೇಟಿ ನೀಡಿದ್ದರು.

ಸ್ನಾತಕೋತ್ತರ ವೈದ್ಯಕೀಯ ಪ್ರವೇಶ • 19ರವರೆಗೂ ಗಡುವು

ಮೂಲ ದಾಖಲೆ ಸಲ್ಲಿಕೆಗೆ ಇಂದಿನಿಂದ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ನಾತಕೋತ್ತರ ವೈದ್ಯಕೀಯ ಕೋರ್ಸ್‌ಗಳ ಎರಡನೇ ಸುತ್ತಿನ ಸೀಟು ಹಂಚಿಕೆಯಲ್ಲಿ ಭಾಗವಹಿಸಲು ಅರ್ಹರಾಗಿರುವ ಅಭ್ಯರ್ಥಿಗಳು, ಡಿ.10ರಿಂದ 19ರವರೆಗೆ ತಮ್ಮ ಮೂಲ ದಾಖಲೆಗಳನ್ನು ಬೆಂಗಳೂರಿನ ಮಲ್ಲೇಶ್ವರದಲ್ಲಿರುವ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (ಕೆಇಎ) ಕಚೇರಿಯಲ್ಲಿ ಸಲ್ಲಿಸುವಂತೆ ಸೂಚಿಸಲಾಗಿದೆ.

ಮೊದಲ ಸುತ್ತಿನಲ್ಲಿ ಸೀಟು ಹಂಚಿಕೆಯಾಗಿ, ಛಾಯ್ಸ್- 2 ಮತ್ತು 3 ಅನ್ನು ಆಯ್ಕೆ ಮಾಡಿರುವ ಅಭ್ಯರ್ಥಿಗಳು ಡಿ.10ರಿಂದ 12ರವರೆಗೆ ದಾಖಲೆಗಳನ್ನು ಸಲ್ಲಿಸಬೇಕು ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಹೆಚ್. ಪ್ರಸನ್ನ ತಿಳಿಸಿದ್ದಾರೆ.

ಇದುವರೆಗೂ ಸೀಟು ಹಂಚಿಕೆಯಾಗದಿರುವವರು ಡಿ.13ರಿಂದ 19ರವರೆಗೆ ದಾಖಲೆ ಸಲ್ಲಿಸಬೇಕು. ಪಿಜಿ ನೀಟ್ ರ್‍ಯಾಂಕ್ ಪ್ರಕಾರ ವೇಳಾಪಟ್ಟಿಯನ್ನು ವೆಬ್ ಸೈಟ್‌ನಲ್ಲಿ ಪ್ರಕಟಿಸಿದ್ದು, ಆ ಪ್ರಕಾರ ಹಾಜರಾಗಿ ದಾಖಲೆ ಸಲ್ಲಿಸಬೇಕು. ದಾಖಲೆ ಸಲ್ಲಿಸಿದವರನ್ನು ಮಾತ್ರ ಸೀಟು ಹಂಚಿಕೆಗೆ ಪರಿಗಣಿಸಲಾಗುತ್ತದೆ ಎಂದು ಹೇಳಿದ್ದಾರೆ.

ಹೆಚ್ಚಿನ ವಿವರಗಳಿಗೆ ಪ್ರಾಧಿಕಾರದ ವೆಬ್‌ಸೈಟ್ ನೋಡಬಹುದು.

ಜಲಮಂಡಳಿ: ಪರೀಕ್ಷಾ ದಿನಾಂಕ ಬದಲು

ಬೆಂಗಳೂರು: ಬೆಂಗಳೂರು ಜಲಮಂಡಳಿಯ ಸಿವಿಲ್, ಎಲೆಕ್ಟ್ರಿಕಲ್ ಮತ್ತು ಮೆಕ್ಯಾನಿಕಲ್ ವಿಭಾಗದ ಕಿರಿಯ ಎಂಜಿನಿಯರ್ ಹುದ್ದೆಗಳ ನೇಮಕಾತಿಗೆ ಡಿ.20ರ ಬದಲು ಡಿ. 22ರಂದು ಲಿಖಿತ ಪರೀಕ್ಷೆ ನಡೆಯಲಿದೆ ಎಂದು ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಪ್ರಸನ್ನ ತಿಳಿಸಿದ್ದಾರೆ.

ಇತರ ಎಲ್ಲ ಪರೀಕ್ಷೆಗಳು ನ.19ರಂದು ಹೊರಡಿಸಿದ ಆದೇಶದಂತೆ ಆಯಾ ದಿನಾಂಕಗಳಂದೇ ನಡೆಯಲಿವೆ. ಆ ವೇಳಾಪಟ್ಟಿಯಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ಡಿ.20 ಮತ್ತು 22ರಂದು ನಡೆಯುವ ಪರೀಕ್ಷೆಗಳನ್ನು ಕೇವಲ ಬೆಂಗಳೂರು ನಗರದಲ್ಲಿ ಮಾತ್ರ ನಡೆಸಲಾಗುತ್ತದೆ ಎಂದು ಅವರು ತಿಳಿಸಿದ್ದಾರೆ.



ಬಾಗಲಕೋಟೆಯ ಕಲಾಭವನದಲ್ಲಿ ಮಂಗಳವಾರ ನಡೆದ ಬಾಗಲಕೋಟೆ ವಲಯದ ‘ಪ್ರಜಾವಾಣಿ’ ರಸಪ್ರಶ್ನೆ ಚಾಂಪಿಯನ್‌ಶಿಪ್‌ನಲ್ಲಿ ವಿಜೇತರಾದ ಬಾಗಲಕೋಟೆಯ ಬಸವೇಶ್ವರ ಅಂತರರಾಷ್ಟ್ರೀಯ ಪಬ್ಲಿಕ್ ಶಾಲೆ ವಿದ್ಯಾರ್ಥಿನಿಯರಾದ ತೇಜಲ್ ಅಮಾರಿ ಮತ್ತು ಸ್ತುತಿ ರಾಠಿ ಅವರಿಗೆ ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಅಜಿತ್ ಮನ್ನಿಕೇರಿ ಅವರು ಚೆಕ್ ಹಾಗೂ ಪ್ರಮಾಣಪತ್ರ ವಿತರಿಸಿದರು. ಕ್ವಿಜ್ ಮಾಸ್ಟರ್ ಮೇಘವಿ ಮಂಜುನಾಥ ಪಾಲ್ಗೊಂಡಿದ್ದರು.

ದೇಣಿಗೆ ಸಂಗ್ರಹಕ್ಕೆ ಬಂದವರಿಗೆ ಥಳಿತ

ದಾವಣಗೆರೆ: ರೇಣುಕಾ ಯಲ್ಲಮ್ಮ ದೇವಿಯ ನೂತನ ದೇಗುಲ ನಿರ್ಮಾಣದ ಹೆಸರಿನಲ್ಲಿ ದೇಣಿಗೆ ಸಂಗ್ರಹಿಸುತ್ತಿದ್ದ ಐವರನ್ನು ತಾಲ್ಲೂಕಿನ ಈಚಘಟ್ಟ ಗ್ರಾಮದ ಜನರು ಮಂಗಳವಾರ ಹಿಡಿದು ದೇಗುಲದಲ್ಲಿ ಕೂಡಿಹಾಕಿ ಥಳಿಸಿದ್ದಾರೆ.


ಥಳಿತಕ್ಕೆ ಒಳಗಾದವರನ್ನು ನಾರಾಯಣ, ಮಂಜುನಾಥ್, ಚಂದ್ರಶೇಖರ್, ರಮೇಶ್ ಹಾಗೂ ಶಿವಪ್ಪ ಎಂದು ಗುರುತಿಸಲಾಗಿದೆ. ಇವರೆಲ್ಲ ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲ್ಲೂಕಿನ ಕಾರೇಹಳ್ಳಿ ದಾಸರಹಟ್ಟಿ ಗ್ರಾಮದವರು ಎಂದು ಅವರು ಹೇಳಿಕೊಂಡಿದ್ದಾರೆ.

ದಾವಣಗೆರೆ ಹಾಗೂ ಚನ್ನಗಿರಿ ತಾಲ್ಲೂಕಿನ ಕೆಲ ಗ್ರಾಮಗಳಿಗೆ ಭೇಟಿ ನೀಡಿದ ಗುಂಪು, ಕಾರೇಹಳ್ಳಿ ದಾಸರ ಹಟ್ಟಿಯಲ್ಲಿ ಮನೆಗಳಿಗೆ ಭೇಟಿ ನೀಡಿ ದೇಗುಲದ ಕರಪತ್ರ ಕೈಗಿಟ್ಟು ದೇಣಿಗೆ ಕೇಳಿದೆ. ಅನೇಕರು ₹ 1,000ದಿಂದ ₹ 25,000ದವರೆಗೆ ದೇಣಿಗೆ ನೀಡಿದ್ದಾರೆ.

ಈಚಘಟ್ಟಕ್ಕೆ ಬಂದಿದ್ದ ಗುಂಪಿನ ಬಗ್ಗೆ ಸಂಶಯಗೊಂಡ ಗ್ರಾಮಸ್ಥರು ಕರಪತ್ರ, ರಸೀದಿ ಪರಿಶೀಲಿಸಿದ್ದಾರೆ. ಕಾರೇಹಳ್ಳಿ ದಾಸರಹಟ್ಟಿ ಗ್ರಾಮಸ್ಥರನ್ನು ವಿಚಾರಿಸಿದ್ದಾರೆ. ಗ್ರಾಮದಲ್ಲಿ ದೇಗುಲ ನಿರ್ಮಿಸುತ್ತಿಲ್ಲ ಎಂದು ಖಚಿತ ಪಡಿಸಿಕೊಂಡ ಜನರು ದೇಣಿಗೆ ಸಂಗ್ರಹಕ್ಕೆ ಬಂದಿದ್ದವರನ್ನು ಕೂಡಿಹಾಕಿ ಥಳಿಸಿದ್ದಾರೆ. ಈ ಬಗ್ಗೆ ದೂರು ನೀಡದ್ದರಿಂದ ಪ್ರಕರಣ ದಾಖಲಿಸಿಲ್ಲ’ ಎಂದು ಪೊಲೀಸರು ತಿಳಿಸಿದ್ದಾರೆ.

ಐವರಿಗೆ ‘ಸಂಸ್ಕೃತಿ ಸಿರಿ ಪ್ರಶಸ್ತಿ’

ಪ್ರಜಾವಾಣಿ ವಾರ್ತೆ



ಗರ್ತಿಕೆರೆ ರಾಘಣ್ಣ



ನರಸಿಂಹಲು



ಸೋಮಶೇಖರ್



ನಾಗಾಭರಣ



ಸಂಧ್ಯಾ ರೆಡ್ಡಿ

ಬೆಂಗಳೂರು: ಡಾ. ವೇಮಗಲ್ ನಾರಾಯಣಸ್ವಾಮಿ ಸಾಂಸ್ಕೃತಿಕ ಪ್ರತಿಷ್ಠಾನ ನೀಡುವ 2025ನೇ ಸಾಲಿನ ‘ಸಂಸ್ಕೃತಿ ಸಿರಿ’ ಪ್ರಶಸ್ತಿಗೆ ಸುಗಮ ಸಂಗೀತ ಕಲಾವಿದ ಗರ್ತಿಕೆರೆ ರಾಘಣ್ಣ ಸೇರಿ ಐವರು ಆಯ್ಕೆಯಾಗಿದ್ದಾರೆ.

ಕ್ಲಾರಿಯೊನೆಟ್ ಕಲಾವಿದ ನರಸಿಂಹಲು ವಡವಾಟಿ, ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸಿ. ಸೋಮಶೇಖರ್, ರಂಗ ನಿರ್ದೇಶಕ ಟಿ.ಎಸ್. ನಾಗಾಭರಣ ಹಾಗೂ ಲೇಖಕಿ ಕೆ.ಆರ್. ಸಂಧ್ಯಾ ರೆಡ್ಡಿ ಆಯ್ಕೆಯಾಗಿದ್ದಾರೆ. ಪ್ರಶಸ್ತಿಯು ತಲಾ ₹ 25 ಸಾವಿರ ನಗದು ಹಾಗೂ ಫಲಕ ಒಳಗೊಂಡಿದೆ.

ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಇದೇ 14ರಂದು ಬೆಳಿಗ್ಗೆ 11.30ಕ್ಕೆ ಪ್ರಶಸ್ತಿ ಪ್ರದಾನ ಸಮಾರಂಭ ಹಮ್ಮಿಕೊಳ್ಳಲಾಗಿದೆ. ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ರಾಜ್ಯ ಪೊಲೀಸ್ ಮಹಾನಿರ್ದೇಶಕ ಎಂ.ಎ.ಸಲೀಂ ಅವರು ಸಮಾರಂಭ ಉದ್ಘಾಟಿಸಲಿದ್ದಾರೆ ಎಂದು ಪ್ರತಿಷ್ಠಾನದ ಅಧ್ಯಕ್ಷ ವೇಮಗಲ್ ನಾರಾಯಣಸ್ವಾಮಿ ತಿಳಿಸಿದ್ದಾರೆ.



ನವದೆಹಲಿಯ ವಿಜ್ಞಾನ ಭವನದಲ್ಲಿ ಜವಳಿ ಸಚಿವಾಲಯ ಮಂಗಳವಾರ ಆಯೋಜಿಸಿದ್ದ ಸಮಾರಂಭದಲ್ಲಿ ಕಲಬುರಗಿಯ ಸಾಂಪ್ರದಾಯಿಕ ಕುಸುರಿ ಕೆತ್ತನೆಯ ಹಿರಿಯ ಕಲಾವಿದ ಚಂದ್ರಶೇಖರ ವೈ.ಶಿಲ್ಪಿ ಅವರಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು 2024ನೇ ಸಾಲಿನ ‘ರಾಷ್ಟ್ರೀಯ ಶಿಲ್ಪಕಲಾ ಪ್ರಶಸ್ತಿ’ ಪ್ರದಾನ ಮಾಡಿದರು. ಕೇಂದ್ರ ಸಚಿವ ಗಿರಿರಾಜ್ ಸಿಂಗ್ ಹಾಜರಿದ್ದರು

ಶಾಸಕ ಚವಾಣ್ ಭೂಕಬಳಿಕೆ ಆರೋಪ: ವರದಿಗೆ ನಿರ್ದೇಶನ

ಬೀದರ್: ಔರಾದ್ ಶಾಸಕ ಪ್ರಭು ಚವಾಣ್ ಅವರು ಸರ್ಕಾರಿ ಜಮೀನು ಕಬಳಿಸಿದ್ದಾರೆ ಎಂಬ ಆರೋಪದ ಪ್ರಕರಣ ಸಂಬಂಧ ವರದಿ ಸಲ್ಲಿಸಬೇಕು ಎಂದು ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯವು ಬೀದರ್ ಜಿಲ್ಲಾಧಿಕಾರಿಗೆ ನಿರ್ದೇಶನ ನೀಡಿದೆ.

ಔರಾದ್ ಮುಖಂಡ ದೀಪಕ್ ಪಾಟೀಲ ಚಾಂದೋರಿ ಹೂಡಿರುವ ದಾವೆಯ ಹಿನ್ನೆಲೆಯಲ್ಲಿ ವಿಶೇಷ ನ್ಯಾಯಾಲಯವು ಡಿ.1ರಂದು ಬೀದರ್ ಜಿಲ್ಲಾಧಿಕಾರಿಗೆ ಮರು ನಿರ್ದೇಶನ ನೀಡಿದೆ.

ಬೀದರ್ ತಾಲ್ಲೂಕಿನ ಕೊಳಾರ (ಬಿ) ಗ್ರಾಮದ ಸರ್ವೆ ಸಂಖ್ಯೆ 102/*/* ಹುಲ್ಲುಗಾವಲು ಅಥವಾ ‘ಬಿ’ ಖರಾಬ್ ಜಮೀನು ಎಂಬ ಆರೋಪಗಳ ಬಗ್ಗೆ ವರದಿ ಸಲ್ಲಿಕೆಗೆ ಸೂಚಿಸಿದೆ. ‘ಔರಾದ್ ಶಾಸಕರು 3 ಎಕರೆ ಸರ್ಕಾರಿ ಜಮೀನು ಅತಿಕ್ರಮಣ ಮಾಡಿಕೊಂಡಿದ್ದಾರೆ’ ಎಂದು ದೂರುದಾರರು ಆರೋಪಿಸಿದ್ದಾರೆ.

ಉದ್ಯೋಗ ವಾಣಿ



ಚಾಲಕರಹಿತ ವಾಹನಗಳು

• ಅಮೃತೇಶ್ವರಿ ಬಿ.

ಚಾಲಕನಿಲ್ಲದ, ಪ್ರಯಾಣಿಕರು ಮಾತ್ರವೇ ಡ್ರೈವರ್ ಅಸಿಸ್ಟೆನ್ಸ್ ಟೆಕ್ನಾಲಜಿಯನ್ನು ಬಳಸಿಕೊಂಡು ಪ್ರಯಾಣಿಸಬಹುದಾದ ವಾಹನಗಳ ಬಗ್ಗೆ ಇತ್ತೀಚೆಗೆ ನೀವೆಲ್ಲ ಕೇಳಿರುತ್ತೀರಿ. ಈ ಚಾಲಕರಹಿತ ವಾಹನಗಳನ್ನು 'ಸ್ವಾಯತ್ತ ವಾಹನಗಳು' ಎಂದೂ ಕರೆಯಲಾಗುತ್ತದೆ. ಇಂತಹ ವಾಹನಗಳು ಜಿಪಿಎಸ್, ಕ್ಯಾಮೆರಾ, ರೆಡಾರ್ (ರೇಡಿಯೋ ಡಿಟೆಕ್ಷನ್ ಅಂಡ್ ರೇಂಜಿಂಗ್), ಲಿಡಾರ್ (ಲೈಟ್ ಡಿಟೆಕ್ಷನ್ ಅಂಡ್ ರೇಂಜಿಂಗ್) ತಂತ್ರಜ್ಞಾನಗಳನ್ನು ಬಳಸಿಕೊಂಡು ಕಾರ್ಯನಿರ್ವಹಿಸುತ್ತವೆ.

ಅಬ್ಬಾ! ಎಂಥ ಅದ್ಭುತ ತಂತ್ರಜ್ಞಾನ– ಎಂದೆನಿಸಿದರೂ ಮರುಕ್ಷಣವೇ ಸಣ್ಣದೊಂದು ಭಯವೂ ನಮ್ಮನ್ನು ಕಾಡುತ್ತದೆ. ಈ ತಂತ್ರಜ್ಞಾನ ದಾರಿಯಲ್ಲಿ ಕೈಕೊಟ್ಟುಬಿಟ್ಟರೆ? ಇಂತಹ ವಾಹನಗಳು ಸಂಚಾರ ದಟ್ಟಣೆಯನ್ನು ನಿರ್ವಹಿಸಬಲ್ಲವೆ? ಜನಸಂದಣಿ ಇರುವಲ್ಲಿ ಘರ್ಷಣೆ ಮಾಡಿಕೊಳ್ಳದೆ ಹೇಗೆ ಚಲಿಸಬಲ್ಲವು? ಯಾರಾದರೂ ಅಡ್ಡ ಬಂದರೆ ಅದನ್ನು ಗ್ರಹಿಸಬಲ್ಲವೆ? ಇಂಥ ಸಾಕಷ್ಟು ಅನುಮಾನಗಳನ್ನು ಹುಟ್ಟುಹಾಕುತ್ತವೆ. ಕೃತಕ ಬುದ್ಧಿಮತ್ತೆಯಾಧಾರಿತ ತಂತ್ರಜ್ಞಾನಗಳಿಗೆ ಈಗ ಸಾಮಾಜಿಕ ಅರಿವನ್ನೂ ಕಲಿಸಲಾಗಿದೆ. ಈ ಸ್ವಾಯತ್ತ ವಾಹನಗಳು ಅಚ್ಚುಕಟ್ಟಾಗಿ ಕೆಲಸ ಮಾಡುವುದು ಖಚಿತವಾಗಿದ್ದರೂ ಕೆಲವೇ ದೇಶಗಳಲ್ಲಿ ಮಾತ್ರವೇ ರಸ್ತೆಗಿಳಿದಿವೆ. ಆಯಾ ದೇಶಗಳ ಎಲ್ಲ ರೀತಿಯ ವಾತಾವರಣಗಳನ್ನೂ ಪರಿಗಣಿಸಿ, ಜನರಿಗೂ ಇವುಗಳ ಬಗ್ಗೆ ವಿಶ್ವಾಸ ಹಾಗೂ ಅರಿವು ಮೂಡಿಸಿ, ನಂತರವೇ ಇವನ್ನು ಕಾರ್ಯರೂಪಕ್ಕೆ ತರಬೇಕಿದೆ. ಈ ವಾಹನಗಳು ಅಸುರಕ್ಷಿತವೆನಿಸಿದರೆ ಜನರ ವಿಶ್ವಾಸವನ್ನು ಗಳಿಸುವುದರಲ್ಲಿ ಸೋಲಬಹುದು. ಇವು ಪಾದಚಾರಿಗಳು ಯಾವಾಗ ನಿಧಾನಿಸಬಹುದು, ವೇಗವಾಗಿ ಚಲಿಸಬಹುದು, ಅವರ ಮಾರ್ಗಗಳನ್ನು ಹೇಗೆ ಬದಲಾಯಿಸಬಹುದು ಎಂಬುದರ ಬಗ್ಗೆ ಕ್ಷಣ ಮಾತ್ರದಲ್ಲಿ ನಿರ್ಧಾರ ತೆಗೆದುಕೊಳ್ಳುವಂತಿರಬೇಕು. ಇವೆಲ್ಲ ಅಡಚಣೆಗಳನ್ನು ಮೀರಿಯೂ ಸ್ವಾಯತ್ತ ವಾಹನಗಳು ನೈಜ ಸಮಯದ ಅವಶ್ಯಕತೆಗಳನ್ನು ಪೂರೈಸಬಲ್ಲವು.

ಚೀನಾದ ಟಾಂಜ್ಷಿ ವಿಶ್ವವಿದ್ಯಾಲಯ ಮತ್ತು ಶಾಂಘೈ ಜಿಯಾವೊ ಟಾಂಗ್ ವಿಶ್ವವಿದ್ಯಾಲಯಗಳು ಜೊತೆಗೂಡಿ ಇಂಥದೊಂದು ಅಧ್ಯಯನವನ್ನು ಮಾಡಿದ್ದಾರೆ. ಚಾಲಕರಹಿತ ವಾಹನಗಳು ರಸ್ತೆಯಲ್ಲಿ ಚಲಿಸಬೇಕಾದರೆ, ಅವು ಪಾದಚಾರಿಗಳು ಹಾಗೂ ಇತರೆ ವಾಹನಗಳು ಚಲಿಸಬಹುದಾದ ಎಲ್ಲ ರೀತಿಗಳನ್ನೂ ಮುಂದಾಲೋಚಿಸಬೇಕಾಗುತ್ತದೆ. ಈ ಸ್ವಾಯತ್ತ ವಾಹನಗಳು ಸುರಕ್ಷಿತವಾಗಿ ಚಲಿಸಬಲ್ಲಂತಹ, ಸಾಮಾಜಿಕ ಅರಿವನ್ನು ಪಡೆದಿರುವ ನಿರೀಕ್ಷೆಯಿಂದ ನಿಯಂತ್ರಣ (ಪ್ರೆಡಿಕ್ಷನ್ ಟು ಕಂಟ್ರೋಲ್) ಎನ್ನುವ ವ್ಯವಸ್ಥೆಯೊಂದನ್ನು ಚೀನಾದ ಜಿಹಾನ್ ಜಿಯಾಂಗ್ ಮತ್ತು ಸಂಗಡಿಗರು ರೂಪಿಸಿದ್ದಾರೆ. ಇಲ್ಲಿ 'ಜನರೇಟಿವ್ ಅಡ್ವೆರ್ಸೇರಿಯಲ್ ನೆಟ್ವರ್ಕ್' (ಜಿಎಎನ್), 'ಟ್ರ್ಯಾಜೆಕ್ಟರಿ ಪ್ರೆಡಿಕ್ಟರ್' ಮತ್ತು 'ಮಾಡೆಲ್ ಪ್ರೆಡಿಕ್ಟಿವ್ ಕಂಟ್ರೋಲ್' (ಎಂಪಿಸಿ) ಪ್ಲಾನರ್ ವ್ಯವಸ್ಥೆಗಳನ್ನು ಎಐನೊಂದಿಗೆ ಮಿಳಿತಗೊಳಿಸಲಾಗಿದೆ.

ಜಿಎಎನ್ ಟ್ರ್ಯಾಜೆಕ್ಟರಿ ಪ್ರೆಡಿಕ್ಟರ್ ಹಾಗೂ ಎಂಪಿಸಿ ಪ್ಲಾನರುಗಳು ಯಾವುದೇ ವಾಹನ, ವ್ಯಕ್ತಿ ಅಥವಾ ಡ್ರೋನ್‌ಗಳು ಚಲಿಸಬಹುದಾದ ಮಾರ್ಗಗಳನ್ನು, ಅವುಗಳ ಹಿಂದಿನ ಚಲನವಲನಗಳನ್ನು ಅಧ್ಯಯನ ಮಾಡಿಕೊಂಡು, ಪ್ರಸ್ತುತ ಚಾಲನೆಗೆ, ವಾಸ್ತವಿಕ, ಬಹುಮುಖ ಮತ್ತು ಸಾಮಾಜಿಕವಾಗಿ ಹೊಂದಿಕೊಳ್ಳಬಹುದಾದ ಮಾರ್ಗಗಳನ್ನು ಸೂಚಿಸುವ ತಂತ್ರಜ್ಞಾನಗಳಾಗಿವೆ. ಇವರೆಡರ ಸಂಯೋಜನೆಯು 'ಸುಗಮ ಚಾಲನೆ' ಹಾಗೂ 'ಶೂನ್ಯ ಸುರಕ್ಷಾ ಉಲ್ಲಂಘನೆ' (ಝೀರೋ ಸೇಫ್ಟಿ ವಯಲೇಷನ್ಸ್) ಅನ್ನು ಖಾತರಿಪಡಿಸುತ್ತದೆ. ಅರ್ಥಾತ್, ಯಾವುದೇ ನಿಯಮಗಳನ್ನು ಉಲ್ಲಂಘಿಸದೆ ಪ್ರಯಾಣಿಕರು ಹಾಗೂ ವಾಹನದ ಸುರಕ್ಷತೆಯನ್ನು ಕಾಪಾಡಬಲ್ಲದು.


'ಟ್ರೆಡಿಷನಲ್ ಮೋಷನ್ ಪ್ಲಾನರ್'(ಆಲ್ಗಾರಿದಮ್ ಉಪಯೋಗಿಸಿ ರೋಬೋಟ್‌ಗಳಿಗೆ ಘರ್ಷಣಾರಹಿತ ರಸ್ತೆಗಳನ್ನು ತಿಳಿಸುವ ಮಾದರಿ)ಗಳು, ಪಾದಚಾರಿಗಳು ಯಾವಾಗಲೂ ಸುಲಭ ಹಾಗೂ ನಿರೀಕ್ಷಿಸಿದಂತೆಯೇ ವರ್ತಿಸುತ್ತಾರೆ ಎಂದು ಅಂದಾಜಿಸುತ್ತವೆ. ಆದರೆ ಅದು ನಿಜವಲ್ಲ. ಒಮ್ಮೊಮ್ಮೆ ಜಾಗಕ್ಕಾಗಿ ಪರದಾಡುವುದು, ಇದ್ದಕ್ಕಿದ್ದಂತೆ ಜನ ಒಂದೆಡೆ ಸೇರುವುದು, ಗುಂಪುಗಳಾಗಿಬಿಡುವುದು, ತಕ್ಷಣವೇ ನಿಂತು ತಮ್ಮ ಫೋನುಗಳನ್ನು ನೋಡುವುದು– ಹೀಗೆ ಏನಾದರೂ ಮಾಡುತ್ತಿರುತ್ತಾರೆ. ಆದರೆ ಇಂಥ ವಾಹನಗಳಲ್ಲಿ ಕೆಲಸ ನಿರ್ವಹಿಸುವ ಕಂಪ್ಯೂಟರುಗಳಿಗೆ ಇವನ್ನು ಅಂದಾಜಿಸಲು ಸುಲಭವಾಗಿಸುವ ಸಲುವಾಗಿ, ಸದ್ಯ ಇರುವ ವ್ಯವಸ್ಥೆಗಳು ಇಂತಹ ಅನಿಶ್ಚಿತತೆಗಳನ್ನು ಸರಾಸರಿ ತೆಗೆದು ಒಂದು ವರದಿಯನ್ನು ನೀಡುತ್ತವೆ; ಕೆಟ್ಟದಾದ ಪ್ರಕರಣವೊಂದನ್ನು ಸರಾಸರಿಗೊಳಿಸಿ ಪೂರ್ವಸಿದ್ಧತೆಗೆ ವಾಹನವನ್ನು ಜಾಗೃತವಾಗಿರುವಂತೆ ಅನುವು ಮಾಡಿಕೊಡುತ್ತದೆ. ಈ ವಿಧಾನವು ಅಂದಾಜು ಪ್ರಕ್ರಿಯೆಗಳನ್ನು ಸುಲಭವಾಗಿಸಿದರೂ, ಮತ್ತೊಂದೆಡೆ ವಾಹನವನ್ನು ವಿಪರೀತವಾಗಿ ಎಚ್ಚರ ವಹಿಸುವಂತೆ ಮಾಡುತ್ತದೆ. ಆಗ ವಾಹನವು ಆಗಾಗ್ಗೆ ನಿಲ್ಲುವಂತಾಗಬಹುದು; ಈ ಸರಾಸರಿಯಲ್ಲಿ ಸ್ವಲ್ಪ ವ್ಯತ್ಯಾಸವಾದರೂ ವಾಹನ ಅತಿವಿಶ್ವಾಸ ತೋರಬಹುದು. ಅದು ಮಾರಕ ಪರಿಣಾಮಕ್ಕೆ ಎಡೆಮಾಡಿಕೊಡಬಹುದು.

ಆದರೆ ಹೊಸದಾಗಿ ರೂಪಿಸಿರುವ ಯೋಜನೆಯು ಕಲಿಕಾಧಾರಿತ ಅಂದಾಜು ಮತ್ತು ಸುಧಾರಿತ ನಿಯಂತ್ರಣ – ಈ ಎರಡರ ನಡುವೆ ಕೆಲಸ ಮಾಡುತ್ತದೆ. ಮೊದಲನೆಯದಾಗಿ, ಅಂದಾಜು ಮಾಡುವಾಗ, ಸಾಮಾಜಿಕ ಜಿಎಎನ್ ಮಾದರಿಯು ಪಾದಾಚಾರಿಗಳ ಚಲನವಲನಗಳ ಕಿರುದತ್ತಾಂಶವನ್ನು ತೆಗೆದುಕೊಂಡು, ರಸ್ತೆಯಲ್ಲಿರುವ ಪ್ರತಿ ವ್ಯಕ್ತಿಗೂ ಸಾಮಾಜಿಕವಾಗಿ ಸ್ಥಿರವೆನಿಸುವ, ಅವರು ಚಲಿಸಬಹುದಾದೆಲ್ಲ ಮುಂದಿನ ಮಾರ್ಗಗಳನ್ನು ನೀಡುತ್ತದೆ. ನೇರವಾಗಿ ಹೋಗುವವರು, ನಿಧಾನಕ್ಕೆ ಚಲಿಸುವವರು ಅಥವಾ ನಿಂತು ಇತರರಿಗೆ ದಾರಿ ನೀಡಿ ನಂತರ ಹೊರಡುವವರು – ಹೀಗೆ ಎಲ್ಲ ಸಾಧ್ಯತೆಗಳನ್ನೂ ಅಚ್ಚುಕಟ್ಟಾಗಿ ತಿಳಿಸುತ್ತದೆ. ಎರಡನೆಯದಾಗಿ, ನಿಯಂತ್ರಣ ಕಾರ್ಯದಲ್ಲಿ, ಎಂಪಿಸಿ ಪ್ಲಾನರು, ಭೌತಿಕ ಮಿತಿ ಹಾಗೂ ನಿರ್ಬಂಧಗಳನ್ನು ಗಮನದಲ್ಲಿರಿಸಿಕೊಂಡು, ಮುಂದೆ ವಾಹನ ತಿರುಗಿಸುವ ಸ್ಟಿಯರಿಂಗ್ ದಿಕ್ಕು ಹಾಗೂ ವೇಗವರ್ಧಕದ ಸೂಚನೆ ಗಳೆಲ್ಲವನ್ನೂ ಅಂದಾಜಿಸುತ್ತದೆ. ಈ ಯೋಜನೆಯ ವಿಶೇಷತೆಯಿರುವುದು, ನಿರತವಾಗಿ ಬದಲಾಗುತ್ತಿರುವ ಸಾಮಾಜಿಕ ಜಿಎಎನ್ ಟ್ರ್ಯಾಜೆಕ್ಟರಿ ಅಥವಾ ಮಾರ್ಗಕ್ಕೆ ಅನುಸಾರವಾಗಿ ತನ್ನದೇ ಅತ್ಯುತ್ತಮ ದಾರಿಯನ್ನು ಕಂಡುಕೊಳ್ಳುವಲ್ಲಿ ಸೂಕ್ಷ್ಮವಾಗಿರುವುದು. ಇನ್ನೂ ಸುಲಭವಾಗಿ ಹೇಳುವುದಾದರೆ, ಪ್ರೆಡಿಕ್ಟರ್, ಪ್ರತಿ ಪಾದಚಾರಿಗಳಿಗೂ ಸಾಮಾಜಿಕವಾಗಿ ಸಾಧ್ಯವಿರುವ ಅನೇಕ ಚಲನೆಗಳನ್ನು ಅಂದಾಜಿಸಿ ಸುರಕ್ಷಿತ ದಾರಿಯನ್ನು ಆಯ್ಕೆ ಮಾಡಿಕೊಡುತ್ತದೆ. ಪಾದಚಾರಿಗಳು ಚಲನವಲನಗಳನ್ನು ಅಂದಾಜಿಸುವ ದತ್ತಾಂಶಗಳ ಮಾನದಂಡಗಳೊಂದಿಗೆ ಪರೀಕ್ಷಿಸಿ ಹೋಲಿಸಿಯೂ ನೋಡಲಾಗಿದೆ. ಫಲಿತಾಂಶವೂ ಅತ್ಯುತ್ತಮವಾಗಿದ್ದುದನ್ನು ಖಚಿತಪಡಿಸಿಕೊಂಡ ನಂತರ, ಅತಿ ಹೆಚ್ಚಿನ ಮಟ್ಟದ ಜನಸಂಚಾರ ಇರುವೆಡೆ ಪಾದಚಾರಿಯ ಜಾಗಕ್ಕೆ ಒಂದು ರೋಬೋಟನ್ನಿರಿಸಿ ಒಂದು ವೇಳೆ ಆ ಪಾದಚಾರಿ ತುಂಬಾ ಹತ್ತಿರಕ್ಕೆ ಸಮೀಪಿಸಿದಾಗ, ಈ ವ್ಯವಸ್ಥೆ ಹೇಗೆ ಕೆಲಸ ಮಾಡಬಹುದು ಎಂದು ಎರಡು ವ್ಯವಸ್ಥೆಗಳನ್ನು ಹೋಲಿಕೆ ಮಾಡಿದ್ದಾರೆ.

ಸುರಕ್ಷತೆ ವಿಚಾರದಲ್ಲಿ ಎರಡೂ ವಿಧಾನಗಳೂ ಒಂದೇ ಆಗಿದ್ದರೂ, ಜಿಎಎನ್ + ಎಂಪಿಸಿ ಕಂಟ್ರೋಲರ್ ಮಾತ್ರ ಸುರಕ್ಷತಾ ನಿಯಮವನ್ನು ಉಲ್ಲಂಘಿಸದೆ, ಹತ್ತಿರದ ಪಾದಚಾರಿಯೊಂದಿಗೆ ಸರಾಸರಿ 0.94 ಮೀಟರುಗಳ ಅಂತರವನ್ನು ಕಾಯ್ದುಕೊಂಡಿದ್ದು, ವೇಗ ಹಾಗೂ ಪೂರ್ವಭಾವಿಯಾಗಿ ಹೊಂದಾಣಿಕೆಗಳನ್ನು ಮಾಡಿಕೊಳ್ಳಬಲ್ಲದಂತೆ. ಎಮರ್ಜೆನ್ಸಿ ಸ್ಟಾಪ್ ವಿಧಾನದಲ್ಲಿ ಇಷ್ಟು ಅಂತರ ಕಾಯ್ದುಕೊಳ್ಳುವುದೂ ಕಷ್ಟವಾಗಿತ್ತು ಎನ್ನುತ್ತಾರೆ ಸಂಶೋಧಕರು. ಒಟ್ಟಾರೆ, ಕೇವಲ 0.8 ಸೆಕೆಂಡುಗಳಷ್ಟು ನಿಧಾನವಾಗುವುದನ್ನು ಹೊರತುಪಡಿ ಸಿದರೆ, ಚಾಲಕರಹಿತ ವಾಹನದಲ್ಲಿ ಪ್ರಯಾಣ ಸುರಕ್ಷಿ ತವಾಗಿರುತ್ತದೆ. ಅರ್ಥಾತ್, ಇವರ ಅಧ್ಯಯನಗಳ ಪ್ರಕಾರ ಎಲ್ಲ ವಿವರಗಳೂ ಒಪ್ಪಿತ ಮಿತಿಯೊಳಗೇ ಇದ್ದು, ಪ್ರಯಾಣಿಕರು ಸ್ವಾಯತ್ತ ವಾಹನಗಳ ಕುಶಲತೆಯನ್ನು ಆಕ್ರಮಣಕಾರಿ ಎನ್ನದೆ, ವಿಶ್ವಾಸವಿಟ್ಟು ಒಪ್ಪಿಕೊಳ್ಳುತ್ತಾರೆ ಎನ್ನಬಹುದು. ಈ ಸ್ವಾಯತ್ತ ವಾಹನಗಳೂ ಸುರಕ್ಷಿತವಾಗಿವೆ ಎನ್ನುವುದು ಸಂಶೋಧಕರ ವಿಶ್ವಾಸ.

❖


ವಿದ್ವಾಂಸರಿಗೆ ವಿದ್ವಾಂಸ ವ್ಯಾಪಾರಿಗೆ ವ್ಯಾಪಾರಿ



ಫ್ರೆಡ್ ರಾಮ್ಸ್‌ಡೆಲ್ ಚಿತ್ರಕೃಪೆ: ನೊಬೆಲ್ ಅಧಿಕೃತ ವೆಬ್‌ಸೈಟ್

• ಕೊಳ್ಳೇಗಾಲ ಶರ್ಮ

ಫ್ರೆಡ್ ರಾಮ್ಸ್‌ಡೆಲ್ ಸೊನೊಮಾ ಬಯೋಥೆರಾಪ್ಯುಟಿಕ್ಸ್ ಎನ್ನುವ ಜೈವಿಕ ತಂತ್ರಜ್ಞಾನದ ಕಂಪನಿಯ ಸಂಸ್ಥಾಪಕರಲ್ಲಿ ಒಬ್ಬರು. ಆರು ವರ್ಷದ ಹಿಂದೆ, 2019ನೆ ಇಸವಿಯಲ್ಲಿ ಇವರು ತಮ್ಮ ಮೂವರು ಗೆಳೆಯರೊಂದಿಗೆ ಸೇರಿ ಈ ಕಂಪೆನಿಯನ್ನು ಸ್ಥಾಪಿಸಿದರು. ಆಟೊ ಇಮ್ಯೂನ್ ಕಾಯಿಲೆಗಳ ರೋಗಿಗಳಲ್ಲಿ ಸಮತೋಲ ಕೆಟ್ಟಿದ್ದ ದೇಹದ ರೋಗನಿರೋಧಕ ವ್ಯವಸ್ಥೆಯನ್ನು ತಹಬಂದಿಗೆ ತರುವಂತಹ ಚಿಕಿತ್ಸೆಗಳನ್ನು ರೂಪಿಸುವುದು ಈ ಕಂಪನಿಯ ಉದ್ದೇಶವಾಗಿತ್ತು. ಕಂಪನಿಯನ್ನು ಸ್ಥಾಪಿಸಿದ ಐದೇ ವರ್ಷದೊಳಗೆ ರಾಮ್ಸ್‌ಡೆಲ್‌ಗೆ ನೊಬೆಲ್ ಪ್ರಶಸ್ತಿ ದೊರಕಿದ ಸುದ್ದಿ ಬಂದಿದೆ. ಈ ವರ್ಷದ ಜೀವಕ್ರಿಯಾ-ವಿಜ್ಞಾನ ಹಾಗೂ ವೈದ್ಯಕೀಯ ವಿಭಾಗದ ನೊಬೆಲ್ ಪ್ರಶಸ್ತಿಯ ಮೂರನೇ ಒಂದು ಪಾಲು ರಾಮ್ಸ್‌ಡೆಲ್‌ಗೆ ಸಂದಿದೆ.



ಆದರೆ ನೊಬೆಲ್ ಪ್ರಶಸ್ತಿ ಕಂಪನಿಯಲ್ಲಿ ಇವರು ಮಾಡಿದ ಕೆಲಸಕ್ಕೆ ದೊರೆತದ್ದಲ್ಲ; ಅದಕ್ಕೂ ಹಿಂದೆ ಇಪ್ಪತ್ತೈದು ವರ್ಷಗಳ ಹಿಂದೆ ಮತ್ತೊಂದು ಕಂಪನಿಯಲ್ಲಿ ನಡೆಸಿದ ಸಂಶೋಧನೆಗಳಿಗಾಗಿ ಸಂದ ಸನ್ಮಾನವಿದು. ಆಗ ರಾಮ್ಸ್‌ಡೆಲ್ ಇನ್ನೂ ಮೂವತ್ತರ ಹರೆಯದ ಯುವಕ. ಅಮೆರಿಕದ ಕ್ಯಾಲಿಫೋರ್ನಿಯ ವಿಶ್ವವಿದ್ಯಾಲಯದಿಂದ ಸೂಕ್ಷ್ಮಜೀವಿವಿಜ್ಞಾನ ಹಾಗೂ ರೋಗಪ್ರತಿರೋಧ ಕುರಿತು ಡಾಕ್ಟರೇಟ್ ಪದವಿಯನ್ನು ಪಡೆದಿದ್ದರು. ಆ ಬಳಿಕ ಉದ್ಯೋಗವನ್ನು ಅರಸಿ ಹೊರಟಿದ್ದರು. ಎಲ್ಲ ಯುವಕರಂತೆ ಆತನ ಮುಂದೂ ಎರಡು ಪ್ರಶ್ನೆಗಳಿದ್ದವು: ವಿವಿಗಳಲ್ಲಿ ಸಂಶೋಧನೆಗೆ ಸೇರುವುದೋ ಅಥವಾ ಆಗ ಅಣಬೆಗಳಂತೆ ಹುಟ್ಟಿಕೊಳ್ಳುತ್ತಿದ್ದ ಜೈವಿಕ ತಂತ್ರಜ್ಞಾನ ಕಂಪನಿಗಳಲ್ಲಿ ಉದ್ಯೋಗ ಹುಡುಕುವುದೋ? ಕೊನೆಗೆ ಕಂಪನಿಯ ಹುದ್ದೆಯೇ ಸರಿ ಎಂದು ತೀರ್ಮಾನಿಸಿ, ಸೆಲ್‌ಟೆಕ್ ಎನ್ನುವ ಕಂಪನಿಯನ್ನು ಸೇರಿದರು.

ನೊಬೆಲ್ ವಿಜ್ಞಾನಿಗಳು 9

ರೋಗಪ್ರತಿರೋಧ ವ್ಯವಸ್ಥೆಯ ಬಗ್ಗೆ ಅದ್ಭುತವಾದ ಸಂಶೋಧನೆಗಳು ನಡೆಯುತ್ತಿದ್ದ ಕಾಲ ಅದು. ಆಗಷ್ಟೆ ಕ್ಯಾನ್ಸರ್‌ಕೋಶಗಳನ್ನೂ, ರೋಗ ಪ್ರತಿರೋಧ ವನ್ನುಂಟು ಮಾಡುವ ಆ್ಯಂಟಿಬಾಡಿಗಳನ್ನು ಸೃಷ್ಟಿಸುವ ಕೋಶಗಳನ್ನೂ ಕೂಡಿಸಿ, ಒಂದೇ ತೆರನಾದ ಆ್ಯಂಟಿಬಾಡಿಗಳನ್ನು ಸೃಷ್ಟಿಸುವ ತಂತ್ರ ಬಂದಿತ್ತು. ನಿರ್ದಿಷ್ಟವಾದ ಜೈವಿಕ ಅಣುವನ್ನಷ್ಟೆ ಗುರುತಿಸಬಲ್ಲ ಈ ಬಗೆಯ ಮಾನೋಕ್ಲೋನಲ್ ಪ್ರತಿಕಾಯಗಳನ್ನು ಬಳಸಿಕೊಂಡು, ಆ ಅಣುಗಳು ಎಲ್ಲಿವೆ, ಅವುಗಳ ಕಾರ್ಯವೇನು ಎಂದು ತಿಳಿಯುವ ಇಮ್ಯುನೋಪರೀಕ್ಷೆಗಳು ಸಿದ್ಧವಾಗಿದ್ದುವು. ಇವೆಲ್ಲ ಕ್ರಾಂತಿಕಾರಕ ಬೆಳವಣಿಗೆಗಳೂ ಹೊಸ ಕನಸನ್ನು ಹುಟ್ಟಿಸಿದ್ದುವು. ಕ್ಯಾನ್ಸರಿಗೆ, ಚಿಕಿತ್ಸೆಯೇ ಇಲ್ಲವೆಂದು ಭಾವಿಸಿದ್ದ ಆಟೊ ಇಮ್ಯೂನು ಕಾಯಿಲೆಗಳಿಗೆ ಚಿಕಿತ್ಸೆ ಸಾಧ್ಯ ಎನ್ನುವ ಕನಸು. ಈ ಕನಸನ್ನು ರಾಮ್ಸ್‌ಡೆಲ್ ಕಂಡಿದ್ದರು. ಹೀಗಾಗಿ ಜೈವಿಕ ತಂತ್ರಜ್ಞಾನ ಕಂಪನಿಗೆ ಸೇರಿದರೆ ಒಳ್ಳೆಯದು ಎನ್ನುವ ತೀರ್ಮಾನಕ್ಕೆ ಬಂದಿದ್ದರು.

ಅದೃಷ್ಟವೋ ದುರದೃಷ್ಟವೋ – ರಾಮ್ಸ್‌ಡೆಲ್ಲನ ಬದುಕೆಲ್ಲವೂ ಮುಂದೆ ಇಂತಹ ಖಾಸಗಿ ಕಂಪನಿಗಳಲ್ಲಿ ಸಂಶೋಧಕರಾಗಿಯೇ ನಡೆಯಿತು. ಆ ಹೊತ್ತಿನಲ್ಲಿ ಅವರಿಗೆ ಜೊತೆಯಾದವರು ಈ ವರ್ಷದ ನೊಬೆಲ್ ಪ್ರಶಸ್ತಿ ವಿಜೇತರಲ್ಲಿ ಒಬ್ಬರಾದ ಮೇರಿ ಬ್ರಂಕೋವ್. ಇವರಿಬ್ಬರಿಗೂ ನೆರವಾಗಿ ಬಂದಿದ್ದು ಒಂದು ವಿಶಿಷ್ಟ ಇಲಿ. ನಲವತ್ತು ವರ್ಷಗಳ ಹಿಂದೆ ಪರಮಾಣುಬಾಂಬಿನ ಯೋಜನೆ ನಡೆಯುತ್ತಿದ್ದಾಗ, ಓಕ್ಸ್‌ಬರ್ಗ್ ಸಂಶೋಧನಾಲಯದಲ್ಲಿ ಹುಟ್ಟಿದ ಇಲಿ.

ಓಕ್ಸ್‌ಬರ್ಗ್‌ನಲ್ಲಿ ವಿಕಿರಣಗಳ ಪರಿಣಾಮವೇನಿರಬಹುದು ಎನ್ನುವ ಪ್ರಯೋಗಗಳು ನಡೆದಿದ್ದುವು. ಇಲಿಗಳನ್ನು ವಿಕಿರಣಗಳಿಗೆ ಒಡ್ಡಿ ಪರೀಕ್ಷಿಸಿದ್ದರು. ಇಂತಹ ಇಲಿಗಳಿಗೆ ಹಲವಾರು ವಿಕೃತ ಸಂತಾನಗಳು ಹುಟ್ಟಿದ್ದವು. ಅವುಗಳಲ್ಲಿ ಒಂದು 'ಸ್ಕರ್ಫಿ' ಎನ್ನುವ ತಳಿ. ಈ ತಳಿಯ ಗಂಡುಗಳಲ್ಲಿ ಅರ್ಧಕ್ಕರ್ಧ ಹುಟ್ಟಿದ ಕೆಲವೇ ವಾರಗಳಲ್ಲಿ ಸಾಯುತ್ತಿದ್ದುವು. ಹಲವು ಅಂಗಗಳಲ್ಲಿ ದೋಷಗಳು ಉಂಟಾಗುತ್ತಿತ್ತು. ಈ ದೋಷಗಳೆಲ್ಲವೂ ಇಲಿಗಳದ್ದೇ ರೋಗನಿರೋಧಕ ವ್ಯವಸ್ಥೆ ಹದಗೆಟ್ಟದ್ದರಿಂದ ಆಗಿದ್ದು ಎನ್ನುವುದು ತಿಳಿದಿತ್ತು. ಈ ಇಲಿಯನ್ನು ಬಳಸಿಕೊಂಡು ಚಿಕಿತ್ಸೆಯನ್ನು ರೂಪಿಸಲು ರಾಮ್ಸ್‌ಡೆಲ್ ಮತ್ತು ಬ್ರಂಕೋವ್ ನಿರ್ಧರಿಸಿದ್ದರು. ಅದುವೂ ಅವರ ಅದೃಷ್ಟವೇ. ಏಕೆಂದರೆ ಇಂತಹ ದೋಷಪೂರ್ಣ ತಳಿಗಳನ್ನು ಸಾಕುವುದು ಸುಲಭವಲ್ಲ. ಹಾಗೆಯೇ ಅದಕ್ಕಾಗಿ ಆಗುವ ಶ್ರಮ ಮತ್ತು ಖರ್ಚು ಬಹಳಷ್ಟು. ಹಾಗಿದ್ದೂ ಓಕ್ಸ್‌ಬರ್ಗ್ ಪ್ರಯೋಗಾಲಯದಲ್ಲಿ ಇವನ್ನು ನಾಶ ಮಾಡದೆ, ನೂರಾರು ಸಂತತಿಗಳ ವರೆಗೆ, ನಲವತ್ತು ವರ್ಷಗಳ ಕಾಲ ಬೆಳೆಸಲಾಗಿತ್ತು. ರಾಮ್ಸ್‌ಡೆಲ್ ಮತ್ತು ಬ್ರಂಕೋವರಿಗೆ ಇದು ವರದಾನವಾಯಿತು. ಈ ಸ್ಕರ್ಫಿ ಇಲಿಗಳಲ್ಲಿ ಎಕ್ಸ್ ಎನ್ನುವ ವರ್ಣತಂತುವಿನಲ್ಲಿ ಮಾತ್ರ ವ್ಯತ್ಯಾಸ ಇದ್ದುದರಿಂದ ಗಂಡುಗಳಷ್ಟೆ ರೋಗಕ್ಕೆ ಈಡಾಗುತ್ತಿದ್ದುವು. ಅಧ್ಯಯನಕ್ಕೆ ಅನುಕೂಲವಾಗಿತ್ತು.

ಎಕ್ಸ್ ವರ್ಣತಂತುವಿನಲ್ಲಿ ಎಂತಹ ದೋಷ ಉಂಟಾಗಿದೆ? ಅದನ್ನು ಪತ್ತೆ ಮಾಡಬಹುದೇ? ಅದು ಯಾವ ಜೀನ್? ಆ ಜೀನ್‌ನಲ್ಲಿರುವ ದೋಷವನ್ನು ತಿದ್ದಲು ಸಾಧ್ಯವಾದರೆ ಆಟೊಇಮ್ಯೂನ್ ದೋಷಗಳಿಗೆ ಚಿಕಿತ್ಸೆ ದೊರೆಯಬಹುದೇ ಎಂದು ರಾಮ್ಸ್‌ಡೆಲ್ ಯೋಚಿಸಿದರು. ಎಕ್ಸ್ ವರ್ಣತಂತವಿನ ಮೇಲಿರುವ ದೋಷಪೂರ್ಣ ಜೀನನ್ನು ಹುಡುಕಲು ಹೊರಟರು. ಈ ಕೆಲಸಕ್ಕೆ ಹತ್ತಾರು ವರ್ಷಗಳು ಆದುವು. ಆ ಅವಧಿಯಲ್ಲಿ ಸ್ಕರ್ಫಿ ಉಂಟು ಮಾಡುವ ಜೀನ್‌ಗಳು ಯಾವುವು, ಎಲ್ಲಿವೆ ಎಂದು ಗುರುತಿಸಿದ್ದಷ್ಟೆ ಅಲ್ಲ, ಅದೇ ತೆರನ ದೋಷಗಳು ಮನುಷ್ಯನಲ್ಲಿಯೂ ಇರಬಹುದು ಎಂದು ರಾಮ್ಸ್‌ಡೆಲ್ ಗುರುತಿಸಿದರು. ಫಾಕ್ಸ್–3 ಎನ್ನುವ ಜೀನ್ ದೋಷವೇ ಇದಕ್ಕೆ ಕಾರಣ ಎಂದು ಪತ್ತೆ ಮಾಡಿದರು. ಇವುಗಳಿಂದಾಗಿ ರೋಗಪ್ರತಿರೋಧದಲ್ಲಿ ಪ್ರಮುಖ ಪಾತ್ರ ವಹಿಸುವ ಟಿಕೋಶಗಳನ್ನು ನಿಯಂತ್ರಿಸುವ ಕೋಶಗಳು ಹುಟ್ಟುವುದೇ ಇಲ್ಲ. ಈ ನಿಯಂತ್ರಕ ಕೋಶಗಳನ್ನೇ ಟಿ-ನಿಯಂತ್ರಕಗಳು ಅಥವಾ ಟ್ರೆಗ್ ಎಂದು ಚುಟುಕಾಗಿ ಇವರು ಕರೆದಿದ್ದಾರೆ.

ಈ ಎಲ್ಲ ಅಂಶಗಳನ್ನೂ ಗುರುತಿಸಿ, ಇದೀಗ ಸುಧಾರಣೆ ಆಗಿರುವ ತಂತ್ರಗಳ ನೆರವಿನಿಂದ ಹೊಸ ಚಿಕಿತ್ಸೆಯನ್ನು ರೂಪಿಸುವುದು ರಾಮ್ಸ್‌ಡೆಲ್ ಅವರ ಆಶಯ. ಕಾಲು ದಶಕದ ಹಿಂದಿನ ಕನಸನ್ನು ಎಡೆಬಿಡದೆ ಮುಂದುವರೆಸಿಕೊಂಡು ಬಂದಿರುವ ರಾಮ್ಸ್‌ಡೆಲ್, ಬದುಕಿನುದ್ದಕ್ಕೂ ಖಾಸಗಿ ಕಂಪನಿಗಳಲ್ಲಿಯೇ ಕಾಲ ಕಳೆದ ರಾಮ್ಸ್‌ಡೆಲ್ ವಿದ್ವಾಂಸರ ಜಗತ್ತಿನಲ್ಲಿಯೂ ಈಗ ಮನ್ನಣೆ ಪಡೆಯುವಂತಾಗಿದೆ. ನೊಬೆಲ್ ಎಂದರೆ ವಿವಿ ವಿದ್ವಾಂಸರ ಪ್ರಶಸ್ತಿ ಎನ್ನುವುದನ್ನು ರಾಮ್ಸ್‌ಡೆಲ್ ಹಾಗೂ ಬ್ರಂಕೋವ್ ಸುಳ್ಳಾಗಿಸಿದ್ದಾರೆ.

('ನೊಬೆಲ್ ವಿಜ್ಞಾನಿಗಳು' ಮಾಲಿಕೆ ಮುಕ್ತಾಯವಾಯಿತು.)

❖

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ


ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ದಿಕ್ಸೂಚಿ

ವಿಜ್ಞಾನ

ವಿದ್ಯುಚ್ಛಕ್ತಿ ಪ್ರವಾಹದ ಕಾಂತೀಯ ಪರಿಣಾಮಗಳು

14) ಫ್ಲೆಮಿಂಗನ ಎಡಗೈ ನಿಯಮವನ್ನು ಬರೆಯಿರಿ

ಉತ್ತರ:– ಎಡಗೈನ ಹೆಬ್ಬೆರಳು, ತೋರುಬೆರಳು ಮತ್ತು ಮಧ್ಯದ ಬೆರಳುಗಳನ್ನು ಪರಸ್ಪರ ಲಂಬವಾಗಿರುವಂತೆ ಹಿಡಿದುಕೊಂಡಾಗ




(ಚಿತ್ರದಲ್ಲಿರುವಂತೆ) ತೋರು ಬೆರಳು ಕಾಂತಕ್ಷೇತ್ರದ ದಿಕ್ಕನ್ನು, ಮಧ್ಯದ ಬೆರಳು ವಿದ್ಯುತ್‌ಪ್ರವಾಹದ ದಿಕ್ಕನ್ನು ಹಾಗೂ ಹೆಬ್ಬೆರಳು ವಾಹಕದ ಮೇಲೆ ವರ್ತಿಸುವ ಚಲನೆಯ ಅಥವಾ ಬಲದ ದಿಕ್ಕನ್ನು ಸೂಚಿಸುತ್ತದೆ.

15) ವಿದ್ಯುತ್ ಪ್ರವಹಿಸುತ್ತಿರುವ ವಾಹಕ ಮತ್ತು ಕಾಂತಕ್ಷೇತ್ರವನ್ನು ಬಳಸುವ ಸಾಧನಗಳನ್ನು ಹೆಸರಿಸಿ

ಉತ್ತರ:– ವಿದ್ಯುತ್ ಪ್ರವಹಿಸುತ್ತಿರುವ ವಾಹಕ ಮತ್ತು ಕಾಂತಕ್ಷೇತ್ರವನ್ನು ಬಳಸುವ ಸಾಧನಗಳೆಂದರೆ ವಿದ್ಯುತ್ ಮೋಟಾರ್, ವಿದ್ಯುತ್ ಜನರೇಟರ್, ಧ್ವನಿವರ್ಧಕ ಯಂತ್ರಗಳು, ಮೈಕ್ರೋಫೋನ್‌ಗಳು ಮತ್ತು ವಿದ್ಯುತ್ ಮಾಪಕ ಯಂತ್ರಗಳು.

16) ಚಿತ್ರದಲ್ಲಿರುವಂತೆ ಒಂದು ಇಲೆಕ್ಟ್ರಾನ್, ಅಯಸ್ಕಾಂತೀಯ ಕ್ಷೇತ್ರಕ್ಕೆ ಲಂಬವಾಗಿ ಪ್ರವೇಶಿಸುತ್ತದೆ. ಇಲೆಕ್ಟ್ರಾನ್‌ನ ಮೇಲೆ ವರ್ತಿಸುವ ಬಲದ ದಿಕ್ಕು _____________



a) ಬಲಕ್ಕಿರುತ್ತದೆ b) ಎಡಕ್ಕಿರುತ್ತದೆ

c) ಪುಟದಿಂದ ಹೊರಗಿರುತ್ತದೆ

d) ಪುಟದ ಒಳಗಿರುತ್ತದೆ.

ಉತ್ತರ:– (d) (ವಿವರಣೆ:- ಫ್ಲೆಮಿಂಗ್‌ನ ಬಲಗೈ ನಿಯಮದ ಪ್ರಕಾರ ಬಲದ ದಿಕ್ಕು, ಕಾಂತಕ್ಷೇತ್ರ ಮತ್ತು ವಿದ್ಯುತ್‌ಪ್ರವಾಹದ ದಿಕ್ಕಿಗೆ ಲಂಬವಾಗಿರುತ್ತದೆ. (ಇಲೆಕ್ಟ್ರಾನ್‌ಗಳ ಚಲನೆಯ ದಿಕ್ಕನ್ನು ವಿದ್ಯುತ್‌ಪ್ರವಾಹದ ದಿಕ್ಕಿಗೆ ವಿರುದ್ಧವಾಗಿ ತೆಗೆದುಕೊಳ್ಳಲಾಗಿದೆ ಎಂಬುದನ್ನು ನೆನಪಿಸಿಕೊಳ್ಳಿರಿ.) ಆದ್ದರಿಂದ ಬಲವು ಪುಟದ ಒಳಗೆ ನಿರ್ದೇಶಿತವಾಗಿರುತ್ತದೆ.

17) ವೈದ್ಯಕೀಯ ಕ್ಷೇತ್ರದಲ್ಲಿ ಕಾಂತತ್ವದ ಬಗ್ಗೆ ಬರೆಯಿರಿ

ಉತ್ತರ:– ವಿದ್ಯುತ್‌ಪ್ರವಾಹವು ಯಾವಾಗಲೂ ಕಾಂತಕ್ಷೇತ್ರವನ್ನು ಉಂಟುಮಾಡುತ್ತದೆ. ನಮ್ಮ ದೇಹದಲ್ಲಿನ ನರಕೋಶಗಳಲ್ಲಿ ಪ್ರಯಾಣಿಸುವ ದುರ್ಬಲ ಅಯಾನುಗಳ ಪ್ರವಾಹಗಳೂ ಸಹ ಕಾಂತಕ್ಷೇತ್ರವನ್ನು ಉತ್ಪತ್ತಿ ಮಾಡುತ್ತವೆ. ನಾವು ಏನನ್ನಾದರೂ ಸ್ಪರ್ಶಿಸಿದಾಗ, ನಮ್ಮ ನರಗಳು ನಾವು ಬಳಸಬೇಕಾದ ಸ್ನಾಯುಗಳಿಗೆ ವಿದ್ಯುತ್ ಪ್ರಚೋದನೆಯನ್ನು ನೀಡುತ್ತವೆ. ಈ ವಿದ್ಯುತ್ ಪ್ರಚೋದನೆಯು ತಾತ್ಕಾಲಿಕ ಕಾಂತಕ್ಷೇತ್ರವನ್ನು ಉತ್ಪಾದಿಸುತ್ತದೆ. ಈ ಕ್ಷೇತ್ರಗಳು ಅತ್ಯಂತ ದುರ್ಬಲವಾಗಿರುತ್ತವೆ ಮತ್ತು ಭೂಮಿಯ ಕಾಂತಕ್ಷೇತ್ರದ ಸುಮಾರು ಶತಕೋಟಿಗಳ ಒಂದು ಭಾಗದಷ್ಟಿರುತ್ತದೆ. ಮಾನವನ ದೇಹದಲ್ಲಿ ಎರಡು ಪ್ರಮುಖ ಅಂಗಗಳಾದ ಹೃದಯ ಮತ್ತು ಮಿದುಳಿನಲ್ಲಿ ಕಾಂತಕ್ಷೇತ್ರವು ಗಮನಾರ್ಹವಾಗಿ ಉತ್ಪತ್ತಿಯಾಗುತ್ತದೆ. ದೇಹದೊಳಗಿನ ಕಾಂತೀಯ ಕ್ಷೇತ್ರವು ದೇಹದ ವಿವಿಧ ಭಾಗಗಳ ಚಿತ್ರಗಳನ್ನು ಪಡೆಯಲು ಆಧಾರವಾಗಿದೆ. ಇದನ್ನು ಕಾಂತೀಯ ಅನುರಣನ ಪ್ರತಿಬಿಂಬ (MRI-Magnetic Resonance Imaging) ಎಂಬ ತಂತ್ರವನ್ನು ಬಳಸಿ ಮಾಡಲಾಗುತ್ತದೆ. MRI ಚಿತ್ರಗಳ ವಿಶ್ಲೇಷಣೆಯು ರೋಗಗಳ ನಿರ್ಣಯಕ್ಕೆ ಸಹಾಯವಾಗುತ್ತದೆ. ಹೀಗೆ, ಕಾಂತತ್ವವು ವೈದ್ಯಕೀಯ ಲೋಕದಲ್ಲಿ ಪ್ರಮುಖ ಉಪಯೋಗಗಳನ್ನು ಹೊಂದಿದೆ.

18) ವಿದ್ಯುತ್ ಮಂಡಲಗಳಲ್ಲಿ ಮತ್ತು ಉಪಕರಣಗಳಲ್ಲಿ ಸಾಮಾನ್ಯವಾಗಿ ಬಳಸುವ ಯಾವುದಾದರೂ ಎರಡು ಸುರಕ್ಷಾ ಕ್ರಮಗಳನ್ನು ಹೆಸರಿಸಿ.

ಉತ್ತರ:– ವಿದ್ಯುತ್ ಮಂಡಲಗಳಲ್ಲಿ ಮತ್ತು ಉಪಕರಣಗಳಲ್ಲಿ ಸಾಮಾನ್ಯವಾಗಿ ಬಳಸುವ ಯಾವುದಾದರೂ ಎರಡು ಸುರಕ್ಷಾ ಕ್ರಮಗಳೆಂದರೆ :– (1) ವಿದ್ಯುತ್ ಫ್ಯೂಸ್ (2) ಭೂ ಸಂಪರ್ಕ ತಂತಿ

19) ಗೃಹ ವಿದ್ಯುತ್ ಮಂಡಲಗಳಲ್ಲಿ ಉಂಟಾಗುವ ಓವರ್ ಲೋಡ್‌ನ್ನು ತಪ್ಪಿಸಲು ಯಾವ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಬೇಕು?

ಉತ್ತರ:– ಗೃಹ ವಿದ್ಯುತ್ ಮಂಡಲಗಳಲ್ಲಿ ಉಂಟಾಗುವ ಓವರ್ ಲೋಡ್‌ನ್ನು ತಪ್ಪಿಸಲು ಯಾವ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದರೆ

1) ವಿದ್ಯುತ್ ಮಂಡಳದಲ್ಲಿರುವ ಫ್ಯೂಸ್ ಮಂಡಲ ಹಾಗೂ ವಿದ್ಯುತ್ ಉಪಕರಣಗಳಿಗೆ ಓವರ್ ಲೋಡ್‌ನಿಂದ ಉಂಟಾಗುವ ಹಾನಿಯಿಂದ ರಕ್ಷಿಸುತ್ತದೆ.

2) ಹಲವು ಉಪಕರಣಗಳನ್ನು ಒಂದೇ ಸಾಕೆಟ್‌ಗೆ ಜೋಡಿಸಬಾರದು

3) ಅನೇಕ ವಿದ್ಯುತ್ ಸಲಕರಣೆಗಳನ್ನು ಏಕಕಾಲಕ್ಕೆ ಉಪಯೋಗಿಸಬಾರದು.

20) ಗೃಹ ಬಳಕೆಯ ವಿದ್ಯುತ್ ಮಂಡಲಗಳ ಬಗ್ಗೆ ಬರೆಯಿರಿ

ಉತ್ತರ:– ನಮ್ಮ ಮನೆಗಳಲ್ಲಿ, ನಾವು ಮುಖ್ಯ ವಿದ್ಯುತ್ ಪೂರೈಕೆಯ (mains ಎಂದೂ ಸಹ ಕರೆಯುವರು) ಮೂಲಕ ವಿದ್ಯುಚ್ಛಕ್ತಿಯನ್ನು ಪಡೆಯುತ್ತೇವೆ. ಇದು ವಿದ್ಯುತ್ ಕಂಬಗಳಿಗೆ ಹೊಂದಿಕೊಂಡಿರುವ ಮುಖ್ಯ ತಂತಿಯ ಮೂಲಕ ಅಥವಾ ನೆಲದಡಿಯಲ್ಲಿ ಹುದುಗಿಸಿದ ಕೇಬಲ್‌ಗಳ ಮೂಲಕ ನಮ್ಮ ಮನೆಯವರೆಗೆ ಬರುತ್ತದೆ. ಈ ಪೂರೈಕೆಯಲ್ಲಿನ ತಂತಿಗಳಲ್ಲಿ ಒಂದಾದ ಸಾಮಾನ್ಯವಾಗಿ ಕೆಂಪು ಅವಾಹಕ ಹೊದಿಕೆಯನ್ನು ಹೊಂದಿರುವ ತಂತಿಯನ್ನು ಸಜೀವ ತಂತಿ(ಅಥವಾ ಧನಾತ್ಮಕ) ಎಂದೂ ಹಾಗೂ ಇನ್ನೊಂದು ಕಪ್ಪು ಅವಾಹಕ ಹೊದಿಕೆಯನ್ನು ಹೊಂದಿರುವ ತಂತಿಯನ್ನು ತಟಸ್ಥ ತಂತಿ(ಅಥವಾ ಋಣಾತ್ಮಕ) ಎಂದೂ ಕರೆಯುವರು. ನಮ್ಮ ದೇಶದಲ್ಲಿ ಈ ಎರಡು ತಂತಿಗಳ ನಡುವಿನ ವಿಭವಾಂತರ 220V ಆಗಿದೆ.

ಮನೆಯಲ್ಲಿನ ಮೀಟರ್ ಬೋರ್ಡ್‌ನಲ್ಲಿ ಈ ತಂತಿಗಳು ಮುಖ್ಯ ಫ್ಯೂಸ್‌ನ ಮೂಲಕ ಹಾಯ್ದು ವಿದ್ಯುತ್ ಮೀಟರ್‌ಅನ್ನು ಪ್ರವೇಶಿಸುತ್ತದೆ. ಇವುಗಳನ್ನು ಮುಖ್ಯ ಸ್ವಿಚ್‌ನ ಮೂಲಕ ಮನೆಯಲ್ಲಿನ ವಿದ್ಯುತ್ ತಂತಿಗಳೊಂದಿಗೆ ಸಂಪರ್ಕಿಸಲಾಗುತ್ತದೆ. ಮನೆಯೊಳಗೆ ಈ ತಂತಿಗಳು ಪ್ರತ್ಯೇಕ ವಿದ್ಯುತ್ ಮಂಡಲಗಳಿಗೆ ವಿದ್ಯುತ್‌ಅನ್ನು ಪೂರೈಸುತ್ತವೆ. ಸಾಮಾನ್ಯವಾಗಿ ಎರಡು ಪ್ರತ್ಯೇಕ ವಿದ್ಯುತ್ ಮಂಡಲಗಳನ್ನು ಬಳಸುತ್ತೇವೆ. ಅವುಗಳಲ್ಲಿ ಒಂದು 15A ವಿದ್ಯುತ್ ಪ್ರವಾಹವನ್ನು ಪ್ರವಹಿಸುವಂತೆ ಮಾಡುವ ಮಂಡಲದಲ್ಲಿ ಹೆಚ್ಚಿನ ಸಾಮರ್ಥ್ಯವುಳ್ಳ ಸಾಧನಗಳಾದ ಗೀಸರ್‌ಗಳು, ಕೂಲರ್‌ಗಳು, ತಂಪುಕಾರಕಗಳನ್ನು ಬಳಸಲಾಗುತ್ತದೆ. ಇನ್ನೊಂದು 5A ವಿದ್ಯುತ್ ಪ್ರವಾಹವನ್ನು ಪ್ರವಹಿಸುವಂತೆ ಮಾಡುವ ಮಂಡಲದಲ್ಲಿ ಬಲ್ಬ್‌ಗಳು, ಫ್ಯಾನ್, ಇತ್ಯಾದಿಗಳನ್ನು ಬಳಸಲಾಗುತ್ತದೆ. ಹಸಿರು ಅವಾಹಕ ಹೊದಿಕೆಯನ್ನು ಹೊಂದಿರುವ ಭೂಸಂಪರ್ಕ ತಂತಿಯನ್ನು ಮನೆಯ ಹತ್ತಿರ ಭೂಮಿಯಲ್ಲಿ ಬಹಳಷ್ಟು ಆಳದಲ್ಲಿ ಹೂಳಲಾಗಿರುವ ಲೋಹದ ತಟ್ಟೆಗೆ ಜೋಡಿಸಲಾಗಿರುತ್ತದೆ. ಈ ತಂತಿಯ ಉಪಯೋಗವು ಪ್ರಮುಖವಾಗಿ ಲೋಹದ ಮೇಲ್ಮೈಲ ಹೊಂದಿರುವ ವಿದ್ಯುತ್ ಉಪಕರಣಗಳ ಸುರಕ್ಷತೆಗಾಗಿ ಬಳಸಲಾಗುತ್ತದೆ. ಉದಾಹರಣೆಗೆ ಇಸ್ತ್ರಿ ಪೆಟ್ಟಿಗೆ, ಟೋಸ್ಟರ್, ಮೇಜಿನ ಮೇಲಿನ ವಿದ್ಯುತ್ ಪಂಖ, ರೆಫ್ರಿಜರೇಟರ್ ಇತ್ಯಾದಿ. ವಿದ್ಯುತ್ ಉಪಕರಣಗಳಲ್ಲಿ ಅವುಗಳ ಲೋಹದ ಮೇಲ್ಮೈಗೆ ಭೂಸಂಪರ್ಕ ತಂತಿಯನ್ನು ಜೋಡಿಸಲಾಗುತ್ತದೆ ಇದು ಕಡಿಮೆ ರೋಧವನ್ನು ಹೊಂದಿರುವ ವಿದ್ಯುತ್ ಪ್ರವಾಹದ ಪಥವನ್ನು ಉಂಟುಮಾಡುತ್ತದೆ. ಹೀಗಾಗಿ, ಲೋಹದ ಮೇಲ್ಮೈ ಹೊಂದಿರುವ ಉಪಕರಣಕ್ಕೆ ಯಾವುದೇ ರೀತಿಯ (ಮುಂದುವರಿಯುವುದು)

ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

CHEMISTRY

Alcohols, Phenols and Ethers


***9:* Explain the following with an example.**
(i) Kolbe's reaction.
(ii) Reimer-Tiemann reaction.
(iii) Williamson ether synthesis
(iv) Unsymmetrical ether. (.....Contd)

***Ans* (iv) Unsymmetrical ether:** When an oxygen atom has two groups on two of its side, it is called **Unsymmetrical ether**. (i.e., the number of carbon atoms is unequal). For eg: ethyl methyl ether ($CH_3 - O - CH_2CH_3$).


***10:* Write the mechanism of acid dehydration of ethanol to yield ethene.**

Ans: The mechanism of acid dehydration of ethanol to yield ethene involves the following three steps :


Step 1 :
Formation of ethyl oxonium by protonation of ethanol :



Step 2 :
A carbocation is formed (rate-determining step) :




Step 3 :
Ethane is formed by elimination of proton:




The acid is released in **Step 3** which was being consumed in **Step 1**. It is removed to shift the equilibrium in a forward direction, after ethene is formed.

***11:* How are the following conversions carried out?**
(i) Propene → Propan-2-ol.
(ii) Benzyl chloride → Benzyl alcohol.
(iii) Ethyl magnesium chloride → Propan-1-ol.
(iv) Methyl magnesium bromide → 2-Methylpropan-2-ol.


Ans : (i) When propene is reacted with water in the presence of an acid as a catalyst, as a result, we obtain propan – 2 – ol.




(ii) If then benzyl alcohol is obtained when benzyl chloride is reacted with NaOH which is then followed by acidification.



(iii) An adduct is obtained when ethyl magnesium chloride is reacted with methanal, as a result, propan – 1 – ol on hydrolysis is obtained.



(iv) On treating methyl magnesium bromide with propane, an adduct is obtained which results in 2 – methylpropane – 2 – ol on hydrolysis.




***12:*Name the reagents used in the following reactions:**
(i) Oxidation of primary alcohol to a carboxylic acid.
(ii) Oxidation of primary alcohol to aldehyde.
(iii) Bromination of phenol to 2,4,6-tribromophenol.
(iv) Benzyl alcohol to benzoic acid.
(v) Dehydration of propan-2-ol to propene.
(vi) Butan-2-one to butan-2-ol.

Ans : (i) $NaBH_4$ or $LiAlH_4$ to acidified $KMnO_4$
(ii) Pyridinium chlorochromate (PCC)
(iii) Bromine water
(iv) Acidified potassium permanganate
(v) Concentrated H_2SO_4 or H_3PO_4
(vi) Catalytic hydrogenation or sodium borohydride ($NaBH_4$) or lithium aluminium hydride ($LiAlH_4$)

***13:*Give a reason for the higher boiling point of ethanol in comparison to methoxymethane.**

Solution : Ethanol experiences intermolecular H – bonding because of the presence of – OH group, which results in the association of molecules. additional energy is necessary to break these hydrogen bonds. Conversely, methoxymethane does not experience H – bonding. Therefore, ethanol has a higher boiling point when compared to methoxymethane



(Contd……)

ಅಬಕಾರಿ ಹರಾಜು: ಮಧ್ಯಂತರ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿನ ಅಬಕಾರಿ ಸನ್ನದುಗಳನ್ನು ಇ-ಹರಾಜು ಮಾಡುವ ಉದ್ದೇಶದಿಂದ ಹೊರಡಿಸಲಾಗಿದ್ದ, ಕರ್ನಾಟಕ ಅಬಕಾರಿ (ಭಾರತೀಯ ಹಾಗೂ ವಿದೇಶಿ ಮದ್ಯ ಮಾರಾಟ) ಎರಡನೇ ತಿದ್ದುಪಡಿ ನಿಯಮಕ್ಕೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

ಈ ಸಂಬಂಧ, 'ಕರ್ನಾಟಕ ಫೆಡರೇಷನ್ ಆಫ್ ವೈನ್ ಮರ್ಚೆಂಟ್ ಅಸೋಸಿಯೇಷನ್' ಅಧ್ಯಕ್ಷ ಎಸ್. ಗುರುಸ್ವಾಮಿ ಮತ್ತು ಪ್ರಧಾನ ಕಾರ್ಯದರ್ಶಿ ಬಿ.ಗೋವಿಂದರಾಜ ಹೆಗ್ಡೆ ಸೇರಿದಂತೆ ಐವರು ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಕೆ.ಎಸ್.ಹೇಮಲೇಖಾ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

ಅರ್ಜಿದಾರರ ಪರ ಪದಾಂಕಿತ ಹಿರಿಯ ವಕೀಲ ಡಿ.ಆರ್. ರವಿಶಂಕರ್ ಮಂಡಿಸಿದ, 'ಸರ್ಕಾರದ ಆದೇಶವು, ಕಾನೂನು ಬಾಹಿರ, ಏಕ ಪಕ್ಷೀಯವಾದ ಸಕಾರಣ ಇಲ್ಲದ ಮದ್ಯ ಸಂವಿಧಾನದ ವಿಧಿಗಳಿಗೆ ವಿರುದ್ಧವಾಗಿದೆ' ಎಂಬ ವಾದಾಂಶವನ್ನು ಮಾನ್ಯ ಮಾಡಿರುವ ನ್ಯಾಯಪೀಠ, ಮುಂದಿನ ಆದೇಶದವರೆಗೆ 2025ರ ನಿಯಮ 5 ಮತ್ತು ನಿಯಮ 5ಎ ಅನುಷ್ಠಾನಕ್ಕೆ ಮಧ್ಯಂತರ ತಡೆ ನೀಡಿದೆ.

'ಪ್ರತಿವಾದಿ ರಾಜ್ಯ ಸರ್ಕಾರ ಮಧ್ಯಂತರ ಆದೇಶದ ಮಾರ್ಪಾಡು ಅಥವಾ ತೆರವಿಗೆ ಅರ್ಜಿ ಸಲ್ಲಿಸಲು ಸ್ವತಂತ್ರವಿದೆ' ಎಂದು ಸ್ಪಷ್ಟಪಡಿಸಿರುವ ನ್ಯಾಯಪೀಠ, ಆಕ್ಷೇಪಣೆ ಸಲ್ಲಿಸುವಂತೆ ಸರ್ಕಾರಕ್ಕೆ ಸೂಚಿಸಿ ವಿಚಾರಣೆಯನ್ನು ಇದೇ 12ಕ್ಕೆ ಮುಂದೂಡಿದೆ.

'ಕರ್ನಾಟಕ ಅಬಕಾರಿ (ಭಾರತೀಯ ಹಾಗೂ ವಿದೇಶಿ ಮದ್ಯ ಮಾರಾಟ) ಎರಡನೇ ತಿದ್ದುಪಡಿ ನಿಯಮ-2025ರ ನಿಯಮ 5 ಮತ್ತು 5ಎ ಅಡಿಯಲ್ಲಿ ಪ್ರಸ್ತಾಪಿಸಿರುವ ಹೊಸ ಷರತ್ತುಗಳು, ಮೀಸಲು ಮತ್ತು ಅರ್ಹತಾ ಮಾನದಂಡ ಮತ್ತಿತರ ಅಂಶಗಳು ಮೂಲ ಕರ್ನಾಟಕ ಅಬಕಾರಿ ಕಾಯ್ದೆ-1965ರ ನಿಬಂಧನೆಗಳ ವ್ಯಾಪ್ತಿಯ ಹೊರಗಿದ್ದಂತಿವೆ. ಹಾಗಾಗಿ, ಈ ಬಗ್ಗೆ ವಿಸ್ತೃತವಾದ ವಿಚಾರಣೆಯ ಅಗತ್ಯವಿದೆ' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ಅರ್ಜಿಯ ಸಾರಾಂಶ: ಹೆಚ್ಚುವರಿ ಅಬಕಾರಿ ಆದಾಯವನ್ನು ಸಂಗ್ರಹಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ 2025-26ನೇ ಸಾಲಿನ ಬಜೆಟ್‌ನಲ್ಲಿ ಅಬಕಾರಿ ಪರವಾನಗಿಗಳಿಗೆ ಇ-ಹರಾಜು ಪರಿಚಯಿಸುವುದಾಗಿ ಘೋಷಿಸಿತ್ತು. ಅದರಂತೆ ಈ ಹಿಂದೆ ನವೀಕರಣಗೊಳ್ಳದ ಅಥವಾ ಸ್ಥಗಿತಗೊಂಡಿರುವ ಸುಮಾರು 500 ಅಬಕಾರಿ ಸನ್ನದುಗಳನ್ನು ಪಟ್ಟಿ ಮಾಡಿ ಅವುಗಳ ಹರಾಜಿಗೆ ಸಿದ್ಧತೆ ನಡೆಸಿದೆ.

ಇದಕ್ಕೆ ಅನುಕೂಲವಾಗುವಂತೆ ಕಳೆದ ನವೆಂಬರ್‌ನಲ್ಲಿ ಕರ್ನಾಟಕ ಅಬಕಾರಿ (ಭಾರತೀಯ ಹಾಗೂ ವಿದೇಶಿ ಮದ್ಯ ಮಾರಾಟ) ಎರಡನೇ ತಿದ್ದುಪಡಿ ನಿಯಮ 5 ಮತ್ತು 5ಎ ಕರಡು ಪ್ರಕಟಿಸಿತ್ತು. ನಂತರ ಈ ಕರಡನ್ನು ಅಂತಿಮಗೊಳಿಸಿ ಅಧಿಸೂಚನೆ ಹೊರಡಿಸಲಾಗಿದೆ. ಈ ಅಧಿಸೂಚನೆಯನ್ನು ಅರ್ಜಿದಾರರು ಪ್ರಶ್ನಿಸಿದ್ದಾರೆ.

ಹೈಕೋರ್ಟ್ ಸುದ್ದಿಗಳು

ಹೋರಿ ಹಬ್ಬಕ್ಕೆ ಅಸ್ತು

ಗೂಳಿ ಪಳಗಿಸುವ 'ಹೋರಿ ಹಬ್ಬ' ಆಚರಣೆಗೆ ಅನುಮತಿ ನೀಡಿರುವ ಹೈಕೋರ್ಟ್, 'ಜಲ್ಲಿಕಟ್ಟು ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ವಿಧಿಸಿರುವ ಷರತ್ತುಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ನೋಡಿಕೊಳ್ಳಬೇಕು' ಎಂದು ರಾಜ್ಯ ಸರ್ಕಾರಕ್ಕೆ ತಾಕೀತು ಮಾಡಿದೆ.

ಈ ಸಂಬಂಧ ಹಾವೇರಿ ಜಿಲ್ಲೆಯ ಇಜಾರಿ ಲಕ್ಮಾಪುರದ, ಅಖಿಲ ಕರ್ನಾಟಕ ರೈತರ ಜಾನಪದ ಕ್ರೀಡೆಯ, 'ಹೋರಿ ಹಬ್ಬ ಹೋರಾಟ ಸಮಿತಿ' ಅಧ್ಯಕ್ಷ ಬಸವರಾಜ ದ್ಯಾಮಣ್ಣ ಬಂಡಿವಡ್ಡರ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ (ಧಾರವಾಡ) ವಿಲೇವಾರಿ ಮಾಡಿದೆ.

ಅರ್ಜಿದಾರರ ಪರ ಹೈಕೋರ್ಟ್ ವಕೀಲ ಸಂದೀಪ್ ಎಸ್.ಪಾಟೀಲ್ ಅವರ ವಾದ ಮಾನ್ಯ ಮಾಡಿರುವ ನ್ಯಾಯಪೀಠ, 'ಉತ್ಸವದ ಸಮಯದಲ್ಲಿ ಯಾವುದೇ ಅಹಿತಕರ ಘಟನೆಗಳು ಸಂಭವಿಸದಂತೆ ನೋಡಿಕೊಳ್ಳಬೇಕು' ಎಂದು ಪೊಲೀಸರು ಮತ್ತು ಹಾವೇರಿ ಜಿಲ್ಲಾಡಳಿತಕ್ಕೆ ನಿರ್ದೇಶಿಸಿದೆ.

'ಪ್ರಾಣಿಗಳ ಮೇಲಿನ ಕ್ರೌರ್ಯ ತಡೆ ಕಾಯ್ದೆ-1960ರ ನಿಬಂಧನೆಗಳ ಅನುಸಾರ ಪ್ರಾಣಿಗಳ ಭಾಗವಹಿಸುವಿಕೆ ಅಥವಾ ಬಳಕೆ ವೇಳೆ ಕೈಗೊಳ್ಳಬೇಕಾದ ಸುರಕ್ಷತಾ ಕ್ರಮಗಳು ಸುಪ್ರೀಂ ಕೋರ್ಟ್ ನಿಗದಿಪಡಿಸಿದ ಷರತ್ತುಗಳಿಗೆ ಒಳಪಟ್ಟಿರುತ್ತವೆ. ಈ ಷರತ್ತುಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು' ಎಂದು ಅರ್ಜಿದಾರರಿಗೆ ಸ್ಪಷ್ಟಪಡಿಸಿದೆ.

ಏನಿದು ಹಬ್ಬ?

ಹೋರಿ ಹಬ್ಬ ಅಥವಾ ಹಟ್ಟಿ ಹಬ್ಬವು ಕರ್ನಾಟಕದ ಮುಖ್ಯವಾಗಿ ಶಿವಮೊಗ್ಗ, ಹಾವೇರಿ, ಉತ್ತರ ಕನ್ನಡ ಜಿಲ್ಲೆಗಳಲ್ಲಿ ದೀಪಾವಳಿ ಸಮಯದಲ್ಲಿ ನಡೆಯುವ ಸಾಂಪ್ರದಾಯಿಕ ಸಾಹಸಮಯ ಗ್ರಾಮೀಣ ಕ್ರೀಡೆ ಎನಿಸಿದೆ. ಜಲ್ಲಿಕಟ್ಟು ಕ್ರೀಡೆಗೆ ಹೋಲುವ ಈ ಹಬ್ಬದಲ್ಲಿ ಅಲಂಕರಿಸಿದ ಗೂಳಿಗಳನ್ನು ಜನಸಂದಣಿಯ ಮಧ್ಯೆ ಓಡಿಸಲಾಗುತ್ತದೆ. ಗೂಳಿಗಳ ಬೆನ್ನಿಗೆ ಕಟ್ಟಿದ ಬಹುಮಾನಗಳನ್ನು (ಕೊಪ್ಪೆ) ಕಿತ್ತುಕೊಳ್ಳಲು ಯುವಕರು ಪ್ರಯತ್ನಿಸುತ್ತಾರೆ.

ಹತ್ತು ಮಂದಿ ಬಾಂಗ್ಲಾ ಪ್ರಜೆಗಳಿಗೆ 2 ವರ್ಷ ಜೈಲು


ಪ್ರಜಾವಾಣಿ ವಾರ್ತೆ

ಉಡುಪಿ: ಮಲ್ಪೆ ಠಾಣೆಯ ಪೊಲೀಸರು ಬಂಧಿಸಿದ್ದ ಹತ್ತು ಮಂದಿ ಬಾಂಗ್ಲಾದೇಶದ ಪ್ರಜೆಗಳಿಗೆ ಉಡುಪಿ ನ್ಯಾಯಾಲಯವು ಎರಡು ವರ್ಷ ಸಜೆ ಹಾಗೂ ತಲಾ ₹ 10 ಸಾವಿರ ದಂಡ ವಿಧಿಸಿದೆ.

ಬಾಂಗ್ಲಾದೇಶದ ಪ್ರಜೆಗಳಾದ ಹಕೀಮ್ ಅಲಿ, ಸುಜೋನ್ ಎಸ್.ಕೆ., ಇಸ್ಮಾಯಿಲ್ ಎಸ್.ಕೆ., ಕರೀಮ್ ಎಸ್.ಕೆ., ಸಲಾಂ ಎಸ್.ಕೆ., ರಾಜಿಕುಲ್ ಎಸ್.ಕೆ., ಮೊಹಮ್ಮದ್ ಸೋಜಿಬ್, ರಿಮೊಲ್, ಮೊಹಮ್ಮದ್ ಇಮಾಮ್ ಶೇಖ, ಮೊಹಮ್ಮದ್ ಜಹಾಂಗಿರ್ ಆಲಂ ಶಿಕ್ಷೆಗೆ ಒಳಗಾದವರು.

2024 ಅಕ್ಟೋಬರ್ 11ರಂದು ಸಂಜೆ ಮಲ್ಪೆಯ ವಡಭಾಂಡೇಶ್ವರ ಬಸ್ ನಿಲ್ದಾಣದ ಬಳಿಯಿಂದ 7 ಮಂದಿಯನ್ನು ಹಾಗೂ ಅನಂತರ ಆ ಪ್ರಕರಣದ ತನಿಖೆ ನಡೆಸಿದ್ದ ಮಲ್ಪೆ ಸರ್ಕಲ್ ಇನ್‌ಸ್ಪೆಕ್ಟರ್ ಉಳಿದ ಮೂವರನ್ನು ಬಂಧಿಸಿದ್ದರು.

ಇವರು ಭಾರತದೇಶದ ಯಾವುದೇ ಅನುಮತಿ, ದಾಖಲೆಗಳನ್ನು ಪಡೆಯದೆ ಅಕ್ರಮವಾಗಿ ನಕಲಿ ಆಧಾರ್ ಕಾರ್ಡ್‌ಗಳನ್ನು ಸೃಷ್ಟಿಸಿ ಬಾಂಗ್ಲಾ ದೇಶದಿಂದ ಉಡುಪಿ ತಾಲ್ಲೂಕಿನ ಪಡುತೋನ್ಸೆ ಗ್ರಾಮದ ಹೂಡೆಗೆ ಬಂದಿದ್ದರು ಎಂದು ನ್ಯಾಯಾಲಯದಲ್ಲಿ ದೋಷಾರೋಪಣ ಪಟ್ಟಿ ಸಲ್ಲಿಸಲಾಗಿತ್ತು. ಉಡುಪಿಯ ಪ್ರಧಾನ ಹಿರಿಯ ಸಿವಿಲ್ ಮತ್ತು ಸಿಜೆಎಂ ನ್ಯಾಯಾಲಯ ಶಿಕ್ಷೆ ವಿಧಿಸಿದೆ.


ರಿಮೋಲ್


ಸೋಜಿಬ್


ಇಮಾಮ್


ಸಲಾಂ ಎಸ್‌ಕೆ.


ಹಕೀಮ್ ಅಲಿ

₹3.06 ಕೋಟಿ ಕಾಣಿಕೆ ಸಂಗ್ರಹ

ರಾಯಚೂರು: ಮಂತ್ರಾಲಯದ ಶ್ರೀರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಮಂಗಳವಾರ ಹುಂಡಿ ತೆರೆದು ಹಣ ಎಣಿಕೆ ಮಾಡಿದಾಗ 21 ದಿನಗಳಲ್ಲಿ ₹3.06 ಕೋಟಿ ನಗದು ಹಾಗೂ ಚಿನ್ನಾಭರಣ ಕಾಣಿಕೆ ರೂಪದಲ್ಲಿ ಬಂದಿದೆ.

₹2,97,44,661 ನಗದು, ₹9,37,000 ನಾಣ್ಯಗಳು ಸೇರಿ ಒಟ್ಟು ₹3,06,81,661 ನಗದು, 23 ಗ್ರಾಂ ಚಿನ್ನ, 490 ಗ್ರಾಂ. ಬೆಳ್ಳಿ ಸಂಗ್ರಹವಾಗಿದೆ ಎಂದು ಮಠದ ಪ್ರಕಟಣೆ ತಿಳಿಸಿದೆ.

ಮಂತ್ರಾಲಯ

ಚಿಟಿಕೆ ಸುದ್ದಿ

ಜಪಾನ್ ಪ್ರಶಸ್ತಿಗೆ ಶ್ರೀಹರಿ ಆಯ್ಕೆ

ಕಾರವಾರ: ಉತ್ತರ ಕನ್ನಡ ಜಿಲ್ಲೆ ಸಿದ್ದಾಪುರ ತಾಲ್ಲೂಕಿನ ವಿಜ್ಞಾನಿ ಮತ್ತು ಉದ್ಯಮಿ ಶ್ರೀಹರಿ ಚಂದ್ರಘಾಟಗಿ ಅವರು ಜಪಾನ್‌ನ ಉದ್ಯಮ ತಂತ್ರಜ್ಞಾನದ 'ಸೂಪರ್ ಮ್ಯಾನುಫ್ಯಾಕ್ಚರ್ಸ್ (ಚೋ ಮೊನೊಜುಕುರಿ)' ಅತ್ಯುನ್ನತ ಪ್ರಶಸ್ತಿಗೆ ಪಾತ್ರರಾಗಿದ್ದಾರೆ.


ಶ್ರೀಹರಿ

ಪರಿಸರ ಸಂರಕ್ಷಣೆ ಮತ್ತು ಜೈವಿಕ ತಂತ್ರಜ್ಞಾನದಲ್ಲಿ ಶ್ರೀಹರಿ ಅವರು ಮಾಡಿದ ಉನ್ನತ ಸಾಧನೆಯನ್ನು ಪರಿಗಣಿಸಲಾಗಿದೆ. ಎರಡೂವರೆ ದಶಕಗಳಿಂದ ಟೋಕಿಯೋದಲ್ಲಿ ನೆಲೆಸಿರುವ ಅವರು, 'ಎಕೋಸ್ಪೆಕ್ಚಲ್ ಕಾರ್ಪೊರೇಷನ್' ಎಂಬ ಸಂಸ್ಥೆ ಸ್ಥಾಪಿಸಿ ಮುನ್ನಡೆಸುತ್ತಿದ್ದಾರೆ.

ಜಪಾನ್ ಸರ್ಕಾರದ ಆರ್ಥಿಕ, ವ್ಯಾಪಾರ, ಕೈಗಾರಿಕಾ ಸಚಿವಾಲಯ ಸೇರಿ ವಿವಿಧ ಸಂಘಸಂಸ್ಥೆಗಳ ಸಹಯೋಗದಲ್ಲಿ ಈ ಪ್ರಶಸ್ತಿ ಪ್ರದಾನ ಮಾಡಲಾಗುತ್ತಿದೆ.

ಅನುದಾನ ದುರ್ಬಳಕೆ ಆರೋಪ: ಲೋಕಾಯುಕ್ತ ದಾಳಿ

ಶಿರಹಟ್ಟಿ: ಅನುದಾನ ದುರ್ಬಳಕೆ ಆರೋಪದ ಮೇಲೆ ಪಟ್ಟಣದ ಪಶು ವೈದ್ಯಾಧಿಕಾರಿ ಡಾ. ಎನ್. ಎಚ್.ಓಲೇಕಾರ ಅವರ ಮನೆ ಹಾಗೂ ಕಚೇರಿ ಸೇರಿ ಒಟ್ಟು ಏಳು ಕಡೆ ಲೋಕಾಯುಕ್ತ ಪೊಲೀಸರು ಮಂಗಳವಾರ ದಾಳಿ ನಡೆಸಿದರು. ಓಲೇಕಾರ ಈ ಹಿಂದೆ ಶಿರಹಟ್ಟಿ ತಾಲ್ಲೂಕು ಪಂಚಾಯಿತಿಯ ಪ್ರಭಾರ ಕಾರ್ಯನಿರ್ವಹಣಾಧಿಕಾರಿ (ಇಒ) ಆಗಿದ್ದರು.

'2023-24ನೇ ಸಾಲಿನಲ್ಲಿ ಪಂಚಾಯಿತಿಗೆ ಮಂಜೂರಾದ ಅನುದಾನದಲ್ಲಿ ₹1.97 ಲಕ್ಷ ದುರ್ಬಳಕೆ ಮಾಡಿಕೊಂಡು ಕಳಪೆ ಗುಣಮಟ್ಟದ ಸಾಮಗ್ರಿಗಳನ್ನು ಅಂಗನವಾಡಿ, ಶಾಲೆ, ಕಾಲೇಜುಗಳಿಗೆ ಪೂರೈಸಿದ್ದಾರೆ' ಎಂಬ ಆರೋಪವಿದೆ.

ಕಿರಿಯ ಎಂಜಿನಿಯರ್ ಅರಿಫ್ ಹಿರೇಹಾಳ (ಪ್ರಸ್ತುತ ಸಹಾಯಕ ಎಂಜಿನಿಯರ್, ಧಾರವಾಡ ವೃತ್ತ), ಸಂಯುಕ್ತ ಎಂಟರ್‌ಪ್ರೈಸಸ್‌ನ ಗಂಗಪ್ಪ ತಡಹಾಳ ಹಾಗೂ ವಿಜಯನಗರದ ನಂದಿ ಇನ್ಫ್ರಾಸ್ಟ್ರಕ್ಚರ್ ಏಜೆನ್ಸಿಯ ಪ್ರತಿನಿಧಿ ಮಂಜುನಾಥ ಹಿರೇಮಠ ವಿರುದ್ಧ ಪ್ರಕರಣ ದಾಖಲಾಗಿದೆ.

AUCTION NOTICE

This is to inform public in general that Kotak Mahindra Bank Ltd has organized an auction in below mention respect of vehicles.

1) ASHOK LEYLAND LIMITED - AL 3118
YOM – 2018
Reg No – KA564067
2) AL_DOST_GOODS
YOM – 2019
Reg No – KA33B6516
3) CB_AL_BADA_DOST
YOM – -
Reg No – KA35D8792
4) CB_Ashok Leyland Dost GOODS
YOM – 2023
Reg No – KA38A5446
5) CB_TATA INTRA V30 _COMMERCIAL VEHICLE
YOM – 2024
Reg No – KA25AC0216
6) CB_SAMRAT_4760_GS _CAB_CHASSIS
YOM – 2024
Reg No – KA41D9838
7) CB_EICHER_PRO_2110_E_BS_6_CAB_CHASSIS
YOM – -
Reg No – KA53AB6270

UNDER HYPOTHECATION WITH M/S KOTAK MAHINDRA BANK IS UNDER SALE IN ITS "AS IS WHERE IS CONDITION"

INTERESTED PARTIES CAN GIVE THEIR QUOTATIONS (ONLINE/OFFLINE) WITHIN 15 DAYS FROM THIS PAPER PUBLICATION i.e. from 10.12.2025 (Please note that closing Auction date would not be a Weekly off / Holiday)

BRANCH ADDRESS:
KOTAK MAHINDRA BANK LTD.,
22, MG ROAD, BANGALORE
KARNATAKA – 560001
OR
Contact: Arunlaxman Kokare
Kotak Mahindra Bank Ltd.
Contact / 080 - 61564249

ಕರ್ನಾಟಕ ಲೋಕೋಪಯೋಗಿ ಇಲಾಖೆ

ಪ್ರಧಾನ ಇಂಜಿನಿಯರ್‌ರವರ ಕಛೇರಿ, ಪಿ.ಆರ್.ಎ.ಎಂ.ಸಿ., ಪಿಡಬ್ಲ್ಯೂಡಿ, ಬೆಂಗಳೂರು–560001

ಸಂ.: ಪ್ರಇಂ/ಲೋಇ/05/ಪಿಆರ್‌ಎಎಂಸಿ/2025–26/1316 ದಿನಾಂಕ: 08.12.2025

ಅಲ್ಪಾವಧಿ ಟೆಂಡರ್

ಬೆಂಗಳೂರು, ಬಳ್ಳಾರಿ, ಮಂಡ್ಯ, ಕಲಬುರಗಿ, ಕೊಪ್ಪಳ, ಧಾರವಾಡ, ಬೆಳಗಾವಿ, ಹಾಸನ, ಯಾದಗಿರಿ ಹಾಗೂ ದಾವಣಗೆರೆ ಜಿಲ್ಲೆಗಳ ಒಟ್ಟು 06 ಕಟ್ಟಡ ಕಾಮಗಾರಿಗಳಿಗೆ ಟೆಂಡರ್ ಅನ್ನು ಕಾರ್ಯಪಾಲಕ ಇಂಜಿನಿಯರ್, ಪಿ.ಆರ್.ಎ.ಎಂ.ಸಿ. ರವರು ರಾಜ್ಯಪಾಲರ ಪರವಾಗಿ ಅಲ್ಪಾವಧಿ ಟೆಂಡರ್ ಅನ್ನು ಆಹ್ವಾನಿಸಿರುತ್ತಾರೆ. ಹೆಚ್ಚಿನ ವಿವರಗಳನ್ನು ಕರ್ನಾಟಕ ಕೆಪಿಪಿಪಿ ಪೋರ್ಟಲ್‌ನಲ್ಲಿ (https://kppp.karnataka.gov.in) ದಿನಾಂಕ: **09.12.2025ರಂದು ಅಪರಾಹ್ನ 05:30ರ** ನಂತರ ಪಡೆಯಬಹುದಾಗಿರುತ್ತದೆ.

ವಾಸಾಸಂಇ/ವಾಪ್ರ/ಎಲ್‌ಸಿ/4325/2025–26

ಸಹಿ/–, ಕಾರ್ಯಪಾಲಕ ಇಂಜಿನಿಯರ್, ಪಿಆರ್‌ಎಎಂಸಿ, ಲೋ.ಇ., ಬೆಂಗಳೂರು

ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯ
DR. MANMOHAN SINGH BENGALURU CITY UNIVERSITY

BE BOUNDLESS

ಕುಲಸಚಿವರ ಕಛೇರಿ, ಸೆಂಟ್ರಲ್ ಕಾಲೇಜ್ ಕ್ಯಾಂಪಸ್, ಡಾ|| ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು–560001.
ಇ–ಮೇಲ್: registrar@bcu.ac.in

ಟೆಂಡರ್ ಸಂಖ್ಯೆ: BCU/2024-25/IND0023 ದಿನಾಂಕ: 05–12–2025

ಟೆಂಡರ್ ಅಧಿಸೂಚನೆ
(ಕೆ.ಪಿ.ಪಿ. ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

1) ಕಾಮಗಾರಿಯ ಹೆಸರು: **Supply of Stationery Materials to Administrative Departments of Bengaluru City University, Central College Campus, Bengaluru.** 2) ಇ.ಎಂ.ಡಿ: ರೂ. 60,000/–. 3) ಪ್ರಶ್ನೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **10–12–2025 ರಂದು 16.30 ಗಂಟೆವರೆಗೆ.** 4) ಪೂರ್ವ ಬಿಡ್ ಸಭೆಯ ದಿನಾಂಕ ಮತ್ತು ಸ್ಥಳ: **11–12–2025 ರಂದು ಬೆಳಿಗ್ಗೆ 11.30 ಗಂಟೆಗೆ, ಕುಲಸಚಿವರ ಕಛೇರಿ, ಸೆಂಟ್ರಲ್ ಕಾಲೇಜು ಆವರಣ, ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯ, ಬೆಂಗಳೂರು.** 5) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **22–12–2025 ರಂದು 16.30 ಗಂಟೆವರೆಗೆ.** 6) ಮಾದರಿಯನ್ನು ಸಲ್ಲಿಸಲು ಕೊನೆಯ ದಿನಾಂಕ: **22–12–2025 ರಂದು 16.35 ಗಂಟೆವರೆಗೆ.** 7) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: **23–12–2025 ರಂದು 16.40 ಗಂಟೆಗೆ.**

ಸೂಚನೆ: ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಪ್ರಕ್ರಿಯೆ ಶುಲ್ಕ ಮತ್ತು ಇ.ಎಂ.ಡಿ ಮೊತ್ತವನ್ನು ಪಾವತಿಸುವುದು.

ವಾಸಾಸಂಇ/ವಾ.ಪ್ರ/4313/ಅಡ್ವರ್ಟೈಸ್/2025–26

ಸಹಿ/–
ಕುಲಸಚಿವರು

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಮುಖ್ಯ ಅಭಿಯಂತರರ ಕಛೇರಿ (ಕಾವೇರಿ–ಕಾ&ನಿ), 8ನೇ ಮಹಡಿ,
ಕಾವೇರಿ ಭವನ, ಕೆ. ಜಿ. ರಸ್ತೆ, ಬೆಂಗಳೂರು–09

ಸಂಖ್ಯೆ:ಬೆಂಜಮಂ/ಮುಅಕಾ(ಕಾ&ನಿ)ಟಿಇ/ತಾಂಸ-01/96/2024/1809/2025-26 ದಿನಾಂಕ: 08-12-2025

ಟೆಂಡರ್‌ಗಾಗಿ ಆಹ್ವಾನ : 2ನೇ ಕರೆ
(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಜಲಮಂಡಳಿಯು ಅರ್ಹ ಗುತ್ತಿಗೆದಾರರಿಂದ ದ್ವಿ ಹಂತದ ಟೆಂಡರ್ ಪದ್ಧತಿಯಲ್ಲಿ **ಟಿ ಕೆ ಹಳ್ಳಿಯಲ್ಲಿ 4ನೇ ಹಂತ 1ನೇ ಘಟ್ಟದ 400 ಎಂಎಲ್‌ಡಿ ನೀರು ಸಂಸ್ಕರಣಾ ಘಟಕ (ಡಬ್ಲ್ಯೂಟಿಪಿ) ಪಲ್ಸೇಟರ್ಸ್‌ಗಳಿಗೆ ಫೈಬರ್ ಸಿಮೆಂಟ್ ಬೋರ್ಡ್ ಸ್ಟಿಲಿಂಗ್ ಪ್ಲೇಟ್‌ಗಳ ಪೂರೈಕೆ ಮತ್ತು ಫಿಕ್ಸಿಂಗ್ ಕಾಮಗಾರಿಗಾಗಿ ಟೆಂಡರ್ ಅನ್ನು ಆಹ್ವಾನಿಸಲಾಗಿದೆ.**

ಟೆಂಡರ್‌ಗೆ ಇಟ್ಟ ಮೊತ್ತ: **ರೂ.151.50 ಲಕ್ಷಗಳು.** ಇಎಂಡಿ: **ರೂ.2.28 ಲಕ್ಷಗಳು.**

ಟೆಂಡರ್ ದಾಖಲೆಗಳನ್ನು ಸಲ್ಲಿಸುವ ಕೊನೆಯ ದಿನಾಂಕ ಮತ್ತು ವೇಳೆ: **19–12–2025ರ ಮಧ್ಯಾಹ್ನ 3:00** ಗಂಟೆಯವರೆಗೆ. ಟೆಂಡರ್‌ಗಳನ್ನು ತೆರೆಯುವ ದಿನಾಂಕ: **20–12–2025ರ ಸಂಜೆ 4:00 ಗಂಟೆಗೆ.** ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಮಾಹಿತಿಗಳನ್ನು **https://kppp.karnataka.gov.in** ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಸಹಿದಾರರ ಕಛೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

DIPR/CP/AAPL/RO4316/25-26

ಸಹಿ/–
ಮುಖ್ಯ ಅಭಿಯಂತರರು (ಕಾವೇರಿ–ಕಾ&ನಿ).

ನಗರಸಭಾ ಕಾರ್ಯಾಲಯ, ಶಿರಸಿ (ಉ.ಕ.)

ದೂರವಾಣಿ: 08384-226338 ವೆಬ್‌ಸೈಟ್: www.sirsicity.mrc.gov.in
ಇ–ಮೇಲ್: comm_srs@yahoo.com

ನಂ. ನಸಶಿ/ನೈವಿ/ಟೆಂಡರ/15ನೇಹ.ಉ/ವಿವ–/2025–26 ದಿನಾಂಕ: 05.12.2025

ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ಸಾರ್ವಜನಿಕ ಪಾರದರ್ಶಕತೆ ಕಾಯ್ದೆ 1999 ಹಾಗೂ ನಿಯಮಾವಳಿ–2000 ರಂತೆ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ನೋಂದಾಯಿತ ಏಜೆನ್ಸಿದಾರರು/ಅಧೀಕೃತ ಗುತ್ತಿಗೆದಾರರು/ಅಧೀಕೃತ ಪೂರೈಕೆದಾರರಿಂದ ಟೆಂಡರ್ ಡಾಕ್ಯುಮೆಂಟ್ KG-2ರ ನಿಬಂಧನೆಗೊಳಪಟ್ಟಂತೆ, **KPP Portal** ನಲ್ಲಿ ರಜಿಸ್ಟ್ರೇಷನ್ ಮಾಡಿಸಿದ ನೋಂದಾಯಿತ ಅರ್ಹ ನೋಂದಾಯಿತ ಏಜೆನ್ಸಿದಾರರು/ ಅಧೀಕೃತ ಗುತ್ತಿಗೆದಾರರು/ಅಧೀಕೃತ ಪೂರೈಕೆದಾರರಿಂದ **(1) DMA/2025-26/IND5726** (ಅಂದಾಜು ಮೊತ್ತ ರೂ. 66.00 ಲಕ್ಷಗಳು) ಕಾಮಗಾರಿಗೆ ಟೆಂಡರಗಳನ್ನು **KPP Portal** ಮೂಲಕ ಕರೆಯಲಾಗಿದ್ದು, **KPP Portal** ನಿಯಮಗಳ ಮತ್ತು ಟೆಂಡರು ಕರಾರುಗಳ ಅನ್ವಯ ಟೆಂಡರ್ ಫಾರ್ಮಗಳನ್ನು ಪಡೆಯುವುದು, ಭರ್ತಿ ಮಾಡುವುದು ಮತ್ತು ಸಲ್ಲಿಸುವುದು.

(1) **KPP Portal** ಮೂಲಕ ಟೆಂಡರಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 19.12.2025 (ಸಂಜೆ 16.00 ಗಂಟೆವರೆಗೆ) (2) **KPP Portal** ಮೂಲಕ ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 20.12.2025 (ಸಂಜೆ 16.30 ಗಂಟೆಗೆ) (3) **KPP Portal** ಮೂಲಕ ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ: 22.12.2025 (ಬೆಳಿಗ್ಗೆ 11.00 ಗಂಟೆಗೆ) (ರಜಾ ಇದ್ದಲ್ಲಿ ಮುಂದಿನ ಕೆಲಸದ ದಿನಗಳಲ್ಲಿ ಟೆಂಡರ್ ತೆರೆಯಲಾಗುವುದು)

ಟೆಂಡರನಲ್ಲಿಯ ನಿಬಂಧನೆಗಳನ್ನು ಹಾಗೂ ಷರತ್ತುಗಳ ವಿವರಗಳನ್ನು **KPP Portal** ಪ್ಲಾಟ್ ಫಾರಂನಲ್ಲಿ **www.kppp.karnataka.gov.in** ರಲ್ಲಿ ಪಡೆಯಬಹುದು ಹಾಗೂ ಕಚೇರಿಯಲ್ಲಿ ಹೆಚ್ಚಿನ ಮಾಹಿತಿಗಳನ್ನು ಪಡೆಯತಕ್ಕದ್ದು.

DIPR/ADK/KSMCA/814/25-26 dt.08.12.2025

ಸಹಿ/– ಪೌರಾಯುಕ್ತರು,
ನಗರಸಭೆ, ಶಿರಸಿ.

ಕರ್ನಾಟಕ ಗೃಹ ಮಂಡಳಿ

ಕರ್ನಾಟಕ ಗೃಹ ಮಂಡಳಿ – ಸಮುದಾಯ ನಿರ್ಮಾಣದತ್ತ

ಗೃಹ ಆಯುಕ್ತರ ಕಛೇರಿ, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಬೆಂಗಳೂರು–560 009.

ಸಂಖ್ಯೆ: ಕಗೃಮಂ/ಕಾ/ಹಂಚಿಕೆ–10/ಬೇ.ಸ.ಪ್ರ/2025–26 ದಿನಾಂಕ: 09–12–2025

ಬೇಡಿಕೆ ಸಮೀಕ್ಷೆ ಸಾರ್ವಜನಿಕ ಪ್ರಕಟಣೆ

ಕರ್ನಾಟಕ ಗೃಹ ಮಂಡಳಿಯ ವತಿಯಿಂದ ಚಾಮರಾಜನಗರ ತಾಲ್ಲೂಕು ಕಸಬಾ ಹೋಬಳಿ ಸರ್ವೆ ನಂ 506/1B, 507/1B, 508/1B ಮತ್ತು ಹಾಗೂ ಉತ್ತುವಳ್ಳಿ ಗ್ರಾಮದ 42/1, 43/2, 68, 70 ಹಾಗೂ 71 ರಲ್ಲಿ ಒಟ್ಟು 24 ಎಕರೆ 13 ಗುಂಟೆ ಜಮೀನಿನಲ್ಲಿ M/s Vidwath Infra Pvt Ltd., ಮೈಸೂರು ಸಂಸ್ಥೆಯೊಂದಿಗೆ ಮಾರ್ಕೆಟಿಂಗ್ ಜಂಟಿ ಸಹಭಾಗಿತ್ವದಡಿ ಎಲ್ಲಾ ಮೂಲಭೂತ ಸೌಲಭ್ಯನ್ನೊಳಗೊಂಡ ವಸತಿ ಯೋಜನೆಯನ್ನು ಹಮ್ಮಿಕೊಳ್ಳಲು ಉದ್ದೇಶಿಸಲಾಗಿದ್ದು, ಸದರಿ ವಸತಿ ಯೋಜನೆಯಲ್ಲಿ ವಿವಿಧ ವರ್ಗದ ನಿವೇಶನ ಹೊಂದಲು ಬಯಸುವ ಸಾರ್ವಜನಿಕರಿಂದ ಬೇಡಿಕೆ ಸಮೀಕ್ಷೆಗಾಗಿ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತ ಸಾರ್ವಜನಿಕರು e-payment ಮೂಲಕ ನೋಂದಣಿ ಶುಲ್ಕ ಮತ್ತು ಆರಂಭಿಕ ಠೇವಣಿ ಹಣವನ್ನು ಪಾವತಿಸಿ **ದಿನಾಂಕ: 12.12.2025** ರಿಂದ ಅರ್ಜಿ ಸಲ್ಲಿಸಬಹುದಾಗಿದೆ. **ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 31.12.2025 ಆಗಿರುತ್ತದೆ.**

ಬಡಾವಣೆಯ ಸ್ಥಳ	ವರ್ಗ	ನಿವೇಶನದ ಅಳತೆ (ಮೀಟರ್‌ಗಳಲ್ಲಿ)	ನೋಂದಣಿ ಶುಲ್ಕ (ರೂ.ಗಳಲ್ಲಿ)	ಆರಂಭಿಕ ಠೇವಣಿ ಹಣ (ರೂ.ಗಳಲ್ಲಿ)	ತಾತ್ಕಾಲಿಕ ಬೆಲೆ ಪ್ರತಿ.ಚ.ಅಡಿಗೆ
ಚಾಮರಾಜನಗರ ತಾಲ್ಲೂಕು, ಕಸಬಾ ಹೋಬಳಿ ಹಾಗೂ ಉತ್ತುವಳ್ಳಿ ಗ್ರಾಮ	EWS	6 x 9	300/-	5,000/-	ರೂ.750/-
	LIG	9 x 12	500/-	10,000/-	ರೂ. 1500/-
	MIG	9 x 15	1,000/-	40,000/-	
	HIG	12 x 18	1,500/-	50,000/-	

ಅರ್ಜಿ ನೊಂದಣಿ ಮತ್ತು ಆರಂಭಿಕ ಠೇವಣಿ ಹಣವನ್ನು e-payment ಮೂಲಕ ಪಾವತಿಸಿ ಅರ್ಜಿ ಸಲ್ಲಿಸಲು ಹಾಗೂ ನಿಯಮ ಮತ್ತು ಷರತ್ತುಗಳ ವಿವರಗಳಿಗಾಗಿ ವೆಬ್‌ಸೈಟ್ **https://www.khb.karnataka.gov.in** ಸಂಪರ್ಕಿಸುವುದು.

ಹೆಚ್ಚಿನ ಮಾಹಿತಿಗಾಗಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ಕಗೃಮಂ, ಜಿಲ್ಲಾ ಯೋಜನಾ ಕಛೇರಿ, ಚಾಮರಾಜನಗರ ಮೊಬೈಲ್ ನಂ. 8310045887 ಅಥವಾ ಕಂದಾಯ ಅಧಿಕಾರಿಗಳು, ಹಂಚಿಕೆ ಶಾಖೆ, ಕಛೇರಿ ದೂರವಾಣಿ ಸಂಖ್ಯೆ: 080-22273511 ext 306/309.

DIPR/CP/RO4333/AAPL/2025-26

ಸಹಿ/– ಗೃಹ ಆಯುಕ್ತರು,
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು.

ಕರ್ನಾಟಕ ಗೃಹ ಮಂಡಳಿ

Karnataka Housing Board – Building Communities

3ನೇ ಮಹಡಿ, ಕಾವೇರಿ ಭವನ, ಕೆ. ಜಿ. ರಸ್ತೆ, ಬೆಂಗಳೂರು–560009

ಟೆಂಡರ್ ಪ್ರಕಟಣೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮುಖಾಂತರ)

ಕರ್ನಾಟಕ ಗೃಹ ಮಂಡಳಿಯಲ್ಲಿ ಪೂರ್ವಾರ್ಹತೆ ಪಡೆದಿರುವ ಹಾಗೂ ಪಡೆಯಲಿಚ್ಛಿಸುವ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮೂಲಕ ಈ ಕೆಳಕಂಡ ಕಾಮಗಾರಿಗೆ ಟೆಂಡರ್‌ನ್ನು ಕರೆಯಲಾಗಿದೆ. ವಿವರಗಳು ಕೆಳಕಂಡಂತಿವೆ.

ಬಿಡ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ವೇಳೆ: 07.01.2026 ಸಂಜೆ 4.00 ಗಂಟೆ.

ಕ್ರ.ಸಂ.	ಕಾಮಗಾರಿಯ ಹೆಸರು
1	ಬೆಂಗಳೂರು ನಗರ ಜಿಲ್ಲೆ, ಆನೇಕಲ್ ತಾಲ್ಲೂಕು, ಸೂರ್ಯನಗರ 3ನೇ ಹಂತದ ನಿವೇಶನ ಸಂಖ್ಯೆ GH-1/B5 ರಲ್ಲಿ ನಿರ್ಮಿಸಲು ಉದ್ದೇಶಿಸಿರುವ ಬಹುಮಹಡಿ ವಸತಿ ಸಮುಚ್ಛಯ ಕಟ್ಟಡ ನಿರ್ಮಾಣ ಕಾಮಗಾರಿ. Work Indent No: KHB/2025-26/BW/work_indent 669 & IFT No.117/2025-26 Date: 08.12.2025. ಟೆಂಡರ್‌ಗಿಟ್ಟ ಮೊತ್ತ: ರೂ.25,89,09,590/-


ಕಾಮಗಾರಿಯ ಬಗ್ಗೆ ಹಾಗೂ ಇನ್ನಿತರ ವಿವರಗಳನ್ನು ಈ ಕೆಳಕಂಡ ವಿಳಾಸದಲ್ಲಿ ಕಛೇರಿಯ ವೇಳೆಯಲ್ಲಿ ಪಡೆಯಬಹುದಾಗಿದೆ. ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಬೆಂಗಳೂರು. ದೂರವಾಣಿ: 080–22273511/ 080–22100077 website: https://kppp.karnataka.gov.in

ವಾ.ಸಾ.ಸಂ.ಇ/ವಾಪ್ರ/4334/ಆಕಾರ್/2025–26

ಸಹಿ/– ಕಾರ್ಯಪಾಲಕ ಅಭಿಯಂತರರು,
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು

ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ತುಮಕೂರು.

ಪೋಷಕರ ಪತ್ತೆಗಾಗಿ ಪ್ರಕಟಣೆ



ಈ ಭಾವಚಿತ್ರದಲ್ಲಿರುವ ಸುಮಾರು 10 ವರ್ಷದ ಕು ಶಿವಾನಿ ಎಂಬ ಬಾಲಕಿಯು ಮಸಣಾಪುರ, ತುಮಕೂರು ತಾಲ್ಲೂಕು ಲಕ್ಕಮ್ಮ ಎಂಬುವವರ ಮನೆಯಲ್ಲಿ ದೊರೆತಿದ್ದು, ಬಾಲಕಿಯನ್ನು ಮಕ್ಕಳ ಕಲ್ಯಾಣ ಸಮಿತಿ, ತುಮಕೂರು ಇವರ ವಶಕ್ಕೆ ಪಡೆಯಲಾಗಿರುತ್ತದೆ. ಸದರಿ ಬಾಲಕಿಯ ಆಧಾರ್ ಕಾರ್ಡ್‌ನಲ್ಲಿ ಬಾಲಕಿಯ ವಿಳಾಸ ಶಿವಾನಿ ಬಿ ಕೇರಾಫ್ ಬೆಟ್ಟೇಗೌಡ ಕೆ, ನಂ.315/6, 10ನೇ ಕ್ರಾಸ್, ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಹತ್ತಿರ, ವಿಲ್ಸನ್ ಗಾರ್ಡನ್, ಬೆಂಗಳೂರು ದಕ್ಷಿಣ–560027 ಎಂದು ನಮೂದಾಗಿದ್ದು, ಸದರಿ ವಿಳಾಸದಲ್ಲಿ ಮಗುವಿನ ಜೈವಿಕ ಪೋಷಕರು ಪತ್ತೆಯಾಗಿರುವುದಿಲ್ಲ, ಮಗುವಿನ ಪೋಷಕರು ಯಾರಾದರು ಇದ್ದಲ್ಲಿ ಕೂಡಲೇ ಮಕ್ಕಳ ಕಲ್ಯಾಣ ಸಮಿತಿ, ತುಮಕೂರು ಅಥವಾ ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಮೊದಲನೇ ಮಹಡಿ, ಮಹಾತ್ಮಾ ಗಾಂಧಿ ಕ್ರೀಡಾಂಗಣ, ಕುವೆಂಪುನಗರ, ತುಮಕೂರು ದೂರವಾಣಿ ಸಂಖ್ಯೆ: 0816–2956699 ಕಛೇರಿಯನ್ನು ಸಂಪರ್ಕಿಸಲು ಕೋರಿದೆ.

ಸ್ಥಳ: ತುಮಕೂರು
ದಿನಾಂಕ: 03–12–2025

ಸಹಿ/– ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ,
ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ತುಮಕೂರು.

DIPR/TUM/362/KSMCA/2025-26

ನಗರಸಭಾ ಕಾರ್ಯಾಲಯ, ಉಡುಪಿ.

ಸಂಖ್ಯೆ: ಉನಸ:ಬಿ1:ಸಿಆರ್:2025–26 ದಿನಾಂಕ: 08.12.2025

ಟೆಂಡರು ಪ್ರಕಟಣೆ

2025–26ನೇ ಸಾಲಿನ ನಗರಸಭಾ ನಿಧಿ, 2025–26ನೇ ಸಾಲಿನ ಉದ್ಯಮ ನಿಧಿ ಮತ್ತು 2025–26ನೇ ಸಾಲಿನ ನೀರು ಸರಬರಾಜು ಮತ್ತು ಒಳಚರಂಡಿ ನಿಧಿಯಡಿ ಈ ಕೆಳಗಿನ ಕಾಮಗಾರಿಯನ್ನು ಕೈಗೊಳ್ಳಲು ಅರ್ಹ ಗುತ್ತಿಗೆದಾರರಿಂದ Standard Bid Document K.W-1 & K.W-2 ರ ನಿಯಮ ನಿಬಂಧನೆಗೊಳಪಟ್ಟು (ವೆಬ್‌ಸೈಟ್‌ನಲ್ಲಿ ಆಪ್‌ಲೋಡ್ ಮಾಡಿರುವಂತೆ) **e-procurement** ಮೂಲಕ ಟೆಂಡರನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳನ್ನು ಕಚೇರಿ ವೇಳೆಯಲ್ಲಿ ಸಂಬಂಧಿಸಿದವರಿಂದ ಮತ್ತು ವೆಬ್‌ಸೈಟ್ **https://kppp.karnataka.gov.in** ನಿಂದ ಪಡೆದುಕೊಳ್ಳಬಹುದು.
(1) ತುಂಬಿದ ಟೆಂಡರುಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: **22.12.2025 ಸಂಜೆ 5.00 ಗಂಟೆಗೆ** (2) ಸ್ವೀಕರಿಸಲಾದ ಟೆಂಡರುಗಳನ್ನು ತೆರೆಯುವ ದಿನಾಂಕ: **23.12.2025 ಸಂಜೆ 5.01 ಗಂಟೆಗೆ**

ಕ್ರ. ಸಂ	ಕಾಮಗಾರಿಗಳ ವಿವರ	ಅಂದಾಜು ಮೊತ್ತ	ಇ.ಎಂ.ಡಿ	ಕಾಮಗಾರಿ ಪೂರ್ತಿಗೊಳಿಸುವ ಅವಧಿ
	2025–26ನೇ ಸಾಲಿನ ನಗರಸಭಾ ನಿಧಿ			
1	DMA/2025-26/EL/ WORK_INDENT52549	50,00,000.00	100000.00	15 ದಿನ
	2025–26ನೇ ಸಾಲಿನ ಉದ್ಯಮ ನಿಧಿ			
2	DMA/2025-26/EL/ WORK_INDENT52546	7,70,000.00	9625.00	6 ತಿಂಗಳು
	2025–26ನೇ ಸಾಲಿನ ನೀರು ಸರಬರಾಜು ಮತ್ತು ಒಳಚರಂಡಿ ನಿಧಿ (ಮರು ಟೆಂಡರು)			
3	DMA/2023-24/OW/ WORK_ INDENT15998/CALL-2	1,40,000.00	1750.00	1 ತಿಂಗಳು
4	DMA/2025-26/OW/ WORK_ INDENT51786/CALL-2	10,90,000.00	27250.00	2 ತಿಂಗಳು

ವಾಸಾಇ/ಸನಿಉ/ಕೆಎಸ್‌ಎಂಸಿಎ/571/ 25–26 ದಿ: 09.12.2025

ಸಹಿ/– ಪೌರಾಯುಕ್ತರು, ನಗರಸಭೆ ಉಡುಪಿ

ಬೆಂಗಳೂರು ಪೂರ್ವ ನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರು, ದೊಡ್ಡನೆಕ್ಕುಂಡಿ ವಿಭಾಗ,
ಫೀನಿಕ್ಸ್ ಮಾಲ್ ಎದುರು, ಐಟಿಪಿಎಲ್ ಮುಖ್ಯ ರಸ್ತೆ,
ಮಹದೇವಪುರ, ಬೆಂಗಳೂರು–560 048

ಸಂಖ್ಯೆ: ಬೆಂಪೂನಪಾ/ಕಾಅ/ದೊನೆಕು/ಟೆಂಡರ್/05/2025-26 ದಿನಾಂಕ: 09-12-2025

ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ
(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)
ವೆಬ್‌ಸೈಟ್ **https://kppp.karnataka.gov.in**

ಕಾರ್ಯಪಾಲಕ ಅಭಿಯಂತರರು, ದೊಡ್ಡನೆಕ್ಕುಂಡಿ ವಿಭಾಗ, ಬೆಂಪೂನಪಾ ಬೆಂಗಳೂರು ರವರು ಬಿ.ಬಿ.ಎಂ.ಪಿ/ಕೆ.ಪಿ.ಡಬ್ಲ್ಯೂ.ಡಿ/ಸಿ.ಪಿ.ಡಬ್ಲ್ಯೂ.ಡಿ/ಎಂಇಎಸ್/ರೈಲ್ವೇಸ್ ಅಥವಾ ಯಾವುದೇ ರಾಜ್ಯ / ಕೇಂದ್ರ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗೆ ಐಟಂದರದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು
1.	**ಮಹಾದೇವಪುರ ವಿಧಾನಸಭಾ ಕ್ಷೇತ್ರದ ಆರ್ಟಿರಿಯಲ್ ಮತ್ತು ಸಬ್‌ಆರ್ಟಿರಿಯಲ್ ರಸ್ತೆಗಳ, ಒಳಚರಂಡಿಗಳ ಸಮಗ್ರ ಅಭಿವೃದ್ಧಿ ರಸ್ತೆಗಳು ಹಾಗೂ ವಿಶ್ವೇಶ್ವರಯ್ಯ ಮುಖ್ಯ ರಸ್ತೆ, 2ನೇ ಮುಖ್ಯ ರಸ್ತೆ (ದೊಡ್ಡನೆಕ್ಕುಂಡಿ ಇಂಡಸ್ಟ್ರಿಯಲ್ ಎಸ್ಟೇಟ್) ಗ್ರಾಫೈಟ್ ಇಂಡಿಯಾ ಮುಖ್ಯ ರಸ್ತೆಯಿಂದ ವಿಶ್ವೇಶ್ವರಯ್ಯ ಮುಖ್ಯ ರಸ್ತೆ, 2ನೇ ಮುಖ್ಯ ರಸ್ತೆ (ರಾಡೋ ಕೈಗಾರಿಕಾ ವರ್ಕ್ಸ್) ಮತ್ತು ವೈದೇಹಿ ಆಸ್ಪತ್ರೆಯ ಮೂಲಕ ಇಪಿಐಪಿ ಮುಖ್ಯ ರಸ್ತೆಯಲ್ಲಿ ಗ್ರಾಫೈಟ್ ಇಂಡಿಯಾ ರಸ್ತೆಯಿಂದ ಐಟಿಪಿಎಲ್ ಮುಖ್ಯ ರಸ್ತೆ ಬಿಗ್ ಬಜಾರ್ ಜಂಕ್ಷನ್ ವರೆಗೆ ಮತ್ತು ಗರುಡಾಚಾರ್‌ಪಾಳ್ಯ ಲಿಂಕ್ ರಸ್ತೆಯಲ್ಲಿ ಗ್ರಾಫೈಟ್ ಇಂಡಿಯಾ ಮುಖ್ಯ ರಸ್ತೆಯಿಂದ ಗರುಡಾಚಾರ್‌ಪಾಳ್ಯ ವರೆಗೆ ಇತರ ಸಂಬಂಧಿತ ಕಾಮಗಾರಿಗಳು ಜಿಒಕೆ ಅನುದಾನದಡಿಯಲ್ಲಿ (ಕರೆ–03).** ಟೆಂಡರ್‌ನ ಮೊತ್ತ (ಲಕ್ಷರೂ. ಗಳಲ್ಲಿ).: **1209.00.** ಇಎಂಡಿ ಮೊತ್ತ (ರೂ. ಗಳಲ್ಲಿ): **(ಕೆಪಿಪಿ ಪೋರ್ಟಲ್ ಮೂಲಕ ರೂ.1,00,000/– ಮತ್ತು ಬ್ಯಾಂಕ್ ಗ್ಯಾರಂಟಿ/ ಎಫ್‌ಡಿಆರ್ ಮೂಲಕ ರೂ.14,00,000/–).**

ಟೆಂಡರ್‌ನ ಕಾರ್ಯಸೂಚಿ: 1) ವಿಚಾರಣೆಗಳನ್ನು ಸಲ್ಲಿಸುವ ಕೊನೆಯ **ದಿನಾಂಕ: 12–12–2025ರ ಸಂಜೆ 3:00 ಗಂಟೆಯ ಒಳಗೆ. 2)** ಪೂರ್ವ ಬಿಡ್ ಸಭೆ **ದಿನಾಂಕ: 15–12–2025ರ ಸಂಜೆ 3:00 ಗಂಟೆಗೆ. 3)** ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ **ದಿನಾಂಕ: 18–12–2025ರ ಸಂಜೆ 4:00 ಗಂಟೆಯವರೆಗೆ. 4)** ತಾಂತ್ರಿಕ ಬಿಡ್‌ಗಳನ್ನು ತೆರೆಯುವ **ದಿನಾಂಕ: 19–12–2025ರ ಸಂಜೆ 4:30 ಗಂಟೆಗೆ. 5)** ಆರ್ಥಿಕ ಬಿಡ್‌ಗಳನ್ನು ತೆರೆಯುವ **ದಿನಾಂಕ: 20–12–2025ರ ಸಂಜೆ 4:00 ಗಂಟೆಗೆ.**

ಕಾರ್ಯಪಾಲಕ ಅಭಿಯಂತರರು, ದೊಡ್ಡನೆಕ್ಕುಂಡಿ ವಿಭಾಗ, ಬೆಂಪೂನಪಾ.

MSIL ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್

ಗ್ರಾಹಕ ಮತ್ತು ಕೈಗಾರಿಕಾ ಉತ್ಪನ್ನಗಳ ವಿಭಾಗ,
ಎಂಎಸ್‌ಐಎಲ್ ಹೌಸ್, ನಂ. 36, ಕನ್ನಿಂಗ್‌ಹ್ಯಾಂ ರಸ್ತೆ , ಬೆಂಗಳೂರು – 560 052.

ಸಂ: ಎಂಎಸ್‌ಐಎಲ್/ಸಿಐಪಿಡಿ/(ಆರ್‌ಎಫ್‌ಪಿ)/293/2025–26 ದಿನಾಂಕ: 11.12.2025

ಪ್ರಸ್ತಾವನೆಗಳನ್ನು (ಆರ್.ಎಫ್.ಪಿ.) ಆಹ್ವಾನಿಸಲಾಗಿದೆ

ಕರ್ನಾಟಕ ರಾಜ್ಯದಾದ್ಯಂತ ಸರ್ಕಾರಿ ಇಲಾಖೆಗಳು / ಸಂಸ್ಥೆಗಳಿಗೆ ಎಂ.ಎಸ್.ಐ.ಎಲ್. ಸಂಸ್ಥೆಯ ಪೀಠೋಪಕರಣ ಸಂಬಂಧಿತ ಉತ್ಪನ್ನಗಳನ್ನು ಪ್ರಚಾರ ಮತ್ತು ಮಾರಾಟ ಮಾಡಲು **"ವ್ಯಾಪಾರ ಪ್ರವರ್ತಕ"**ರಾಗಿ ಕಾರ್ಯನಿರ್ವಹಿಸಲು ಆಯ್ದ ಪಟ್ಟಿಯಲ್ಲಿ ಸೇರ್ಪಡೆಗಾಗಿ ಪ್ರಸ್ತಾವನೆ (ಆರ್.ಎಫ್.ಪಿ.) ಯನ್ನು ಆಹ್ವಾನಿಸುತ್ತದೆ. ಪ್ರಸ್ತಾವನೆಗಾಗಿ ವಿನಂತಿ (ಆರ್.ಎಫ್.ಪಿ.) ಸ್ವೀಕರಿಸಲು ಕೊನೆಯ **ದಿನಾಂಕ: 29.12.2025 ರಂದು ಮಧ್ಯಾಹ್ನ 3.30 ಗಂಟೆ** ಹೆಚ್ಚಿನ ಮಾಹಿತಿಗಾಗಿ ಇ–ಪೋರ್ಟಲ್ **https://kppp.karnataka.gov.in** ಅನ್ನು ಭೇಟಿ ಮಾಡಿ

ಸಹಿ/– ಪ್ರಧಾನ ವ್ಯವಸ್ಥಾಪಕರು (ಮಾರುಕಟ್ಟೆ/ಸಿಐಪಿಡಿ ವಿಭಾಗ)

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

NVT QC NABCB

ಕಾರ್ಯಪಾಲಕ ಅಭಿಯಂತರರ ಕಛೇರಿ, ಕನನೀಸ ಮತ್ತು ಒಚ ಮಂಡಳಿ, ವಿಭಾಗ ಮಂಡ್ಯ
ದೂರವಾಣಿ ಫ್ಯಾಕ್ಸ್: 08232–224816, ಇ–ಮೇಲ್: kwbeemnd@gmail.com

ಸಂಖ್ಯೆ:–ಕಜಮ/ಕಾಅ/ಮಂಡ್ಯ/ತಾಂ.ಶಾ/ತಾಂ.ಸ/ಸ.ಅ/1412/2025–26 ದಿನಾಂಕ: 08.12.2025

ಅಲ್ಪಾವಧಿ ಟೆಂಡರ್ ಅಧಿಸೂಚನೆ

ಮಂಡ್ಯ ಜಿಲ್ಲೆಯ ಪಾಂಡವಪುರ ಪಟ್ಟಣ ವ್ಯಾಪ್ತಿಯಲ್ಲಿನ ವಿವಿಧ ವಾರ್ಡ್‌ಗಳಲ್ಲಿ ಒಳಚರಂಡಿ ವ್ಯವಸ್ಥೆ ಕಲ್ಪಿಸುವ ಕಾಮಗಾರಿಗಳಿಗೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಮೂಲಕ ಈ ಕೆಳಕಂಡ ಇಂಡೆಂಟ್ ನಂಬರ್‌ಗಳಲ್ಲಿ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿರುತ್ತದೆ.

ಕ್ರ.ಸಂ	ಇಂಡೆಂಟ್ ನಂ	ಟೆಂಡರ್ ಮೊತ್ತ
1	KUWSDB/2025-26/WS/WORK_INDENT444/CALL-2	ರೂ.62,98,459/–
2	KUWSDB/2025-26/WS/WORK_INDENT445/CALL-2	ರೂ.42,06,496/–
3	KUWSDB/2025-26/WS/WORK_INDENT446/CALL-2	ರೂ.14,02,816/–

ಹೆಚ್ಚಿನ ವಿವರಗಳಿಗೆ **https://kppp.karnataka.gov.in** ವೆಬ್‌ಸೈಟ್ ಸಂಪರ್ಕಿಸುವುದು.

ವಾಸಾಸಂಇ/ಮಂಡ್ಯ/ಶಿರಡಿ ಸಾಯಿ/631/2025–26

ಸಹಿ/– ಕಾರ್ಯಪಾಲಕ ಅಭಿಯಂತರರು,
ಕ.ನ.ನೀ.ಸ ಮತ್ತು ಒ.ಚ ಮಂಡಳಿ, ವಿಭಾಗ ಮಂಡ್ಯ

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು – 560 001.
ಫೋನ್: 080–22215601, 22215801, ಫ್ಯಾಕ್ಸ್: 080–22215602

ಸಂ: ಡಿವೈಇಎಸ್/ಎಸ್‌ಎಸ್‌ಹೆಚ್/224/2024–25 ದಿನಾಂಕ: 08–12–2025

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಉಪ–ನಿರ್ದೇಶಕರು (ಆಡಳಿತ), ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು–560 001, ಕರ್ನಾಟಕ, ಇವರು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಕ್ರೀಡಾ ವಸತಿ ನಿಲಯಗಳಲಿ ತರಬೇತಿ ಪಡೆಯುತ್ತಿರುವ ಕ್ರೀಡಾಪಟುಗಳ ದೈನಂದಿನ ಕ್ರೀಡಾ ತರಬೇತಿಗೆ ಅಗತ್ಯವಾದ ಕ್ರೀಡಾವಾರು ಶೂಸ್‌ಗಳನ್ನು ಖರೀದಿಸಲು ಇ–ಟೆಂಡರ್ ಮೂಲಕ ಗುತ್ತಿಗೆದಾರರನ್ನು ನೇಮಿಸಲು ಕೆಪಿಪಿ ಪೋರ್ಟಲ್ ಮೂಲಕ ಅರ್ಹ ಟೆಂಡರ್‌ದಾರರಿಂದ ಬಿಡ್‌ಗಳನ್ನು ಆಹ್ವಾನಿಸಿದೆ.

ಕ್ರ. ಸಂ.	ವಿವರ	ಅಂದಾಜು ಮೊತ್ತ (ರೂ.ಗಳಲ್ಲಿ)	ಇ.ಎಂ.ಡಿ ಮೊತ್ತ (ರೂ.ಗಳಲ್ಲಿ)
1	ಕ್ರೀಡಾವಾರು ಶೂಸ್‌ಗಳ ಸರಬರಾಜು	68,93,219/–	1,37,864/–

ಆಸಕ್ತ ಟೆಂಡರ್‌ದಾರರು ಇ–ಪ್ರೊಕ್ಯೂರ್ಮೆಂಟ್ ಪೋರ್ಟಲ್ http://kppp.karnataka.gov.in ಮೂಲಕ ತಮ್ಮ ಬಿಡ್‌ಗಳನ್ನು ಆನ್‌ಲೈನ್ ಮೂಲಕ ಮಾತ್ರ ಸಲ್ಲಿಸತಕ್ಕದು. ಟೆಂಡರ್ ದಾಖಲೆಗಳನ್ನು ಉಚಿತವಾಗಿ ಕೆಪಿಪಿ ಪೋರ್ಟಲ್‌ನಲ್ಲಿ ವೀಕ್ಷಿಸಬಹುದು.

1) ಕೆಪಿಪಿ ಪೋರ್ಟಲ್ ಮೂಲಕ ಬಿಡ್ ಸಲ್ಲಿಸಲು ಕೊನೆಯ ದಿನಾಂಕ: 22–12–2025 ಸಮಯ 17.00 ಗಂಟೆ

2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 23–12–2025 ಸಮಯ 17.30 ಗಂಟೆ

ಹೆಚ್ಚಿನ ಮಾಹಿತಿಗಾಗಿ ಮೇಲ್ಕಾಣಿಸಿದ ವಿಳಾಸ ಸಂಪರ್ಕಿಸಬಹುದು.

ಸಹಿ/–
ಉಪ–ನಿರ್ದೇಶಕರು (ಆಡಳಿತ),
(ಟೆಂಡರ್ ಆಹ್ವಾನಿಸುವ ಪ್ರಾಧಿಕಾರ)
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ,

ವಾ.ಸಾ.ಸಂ.ಇ/ವಾಪ್ರ/4323/ಆಕಾರ್/2025–26

Government of Karnataka
KARNATAKA GOVERNMENT SECRETARIAT

MS Building, Dr. B R Ambedkar Veedhi Bengaluru-560001

No: RD/383/RMF/2025 Dated: 08.12.2025

Notification regarding engagement of Technical Staffs/Modelers for the KWSRP- KSNDMC

Subject: Advertisement for details in engaging various Technical Consultants/Staffs/Modelers for the proposed Team Urban Flood Modelling for Water Management & Planning for Karnataka State Natural Disaster Monitoring Centre (KSNDMC) under Karnataka Water Security and Resilience Program (KWSRP) established in Revenue Department (DM) for implementation of World Bank funded Project. Timeline of Project Contract 2 Years.

The World Bank-funded Karnataka Water Security and Resilience Program (KWSRP) is being implemented across the State. The overarching objective of the Program is to enhance disaster resilience through a combination of structural and non-structural measures. The initiative seeks to develop climate-resilient infrastructure to mitigate the impacts of floods and droughts, while also strengthening disaster risk governance and resilience mechanisms.

The Revenue Department (Disaster Management) Government of Karnataka, invites applications from qualified and experienced professionals for the following positions:

I. Chief Urban Town Planner/ Environmental Planner (1 position)
ii. Chief Urban Designer (1 position)
iii. Chief Hydrological Modeller (1 position)
iv. Lead Hydrological Modeller (4 positions)
v. Hydrological Modeller / Data Analyst (7 positions)

The detailed terms of reference, eligibility criteria, and other conditions for engagement of the above positions are available in the Terms of Reference (ToR) and may be seen on the KSNDMC, website: **https://www.ksndmc.org/default.aspx.**

Note: a) Applications, along with the relevant supporting documents, should be submitted by email to **jsrdssp@gmail.com**, latest by **22.12.2025.**

b) Incomplete applications will not be considered. The Revenue Department (Disaster Management) reserves the right to reject any application without assigning a reason.

c) The qualified candidates will be shortlisted and called for interview for final selection. For any queries, contact - The Joint Secretary, Revenue Department (KAT, SSP and PP). **Ph: 080-22032010.**

Sd/- (G. Venkatesh)
Joint Secretary to Government,
Revenue Department (KAT, SSP & PP)

DIPR/CP/4307/SSC/2025-26

ಉತ್ತರದ ರೈತರ ಚರ್ಚೆ, ಜಟಾಪಟಿ

ವಿಧಾನ ಪರಿಷತ್‌ನಲ್ಲಿ ಆಡಳಿತ, ವಿರೋಧ ಪಕ್ಷಗಳ ನಾಯಕರ ಮಧ್ಯೆ ವಾಕ್ಸಮರ

ಪ್ರಜಾವಾಣಿ ವಾರ್ತೆ

ಸುವರ್ಣ ವಿಧಾನಸೌಧ (ಬೆಳಗಾವಿ): ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಮತ್ತು ಬಿಜೆಪಿಯ ಸಿ.ಟಿ.ರವಿ ಅವರು ಕಲಾಪದ ವೇಳೆ ನಿಯಮ 68ರ ಅಡಿಯಲ್ಲಿ ರೈತರು, ಉತ್ತರ ಕರ್ನಾಟಕದ ಸಮಸ್ಯೆಗಳ ಬಗ್ಗೆ ಪ್ರಸ್ತಾಪಿಸಿದ ವಿಚಾರಗಳು ಆಡಳಿತ ಮತ್ತು ವಿರೋಧ ಪಕ್ಷಗಳ ನಾಯಕರ ಮಧ್ಯೆ ತೀವ್ರ ಜಟಾಪಟಿಗೆ ಕಾರಣವಾದವು.

ನಾರಾಯಣಸ್ವಾಮಿ ಅವರು, 'ಉತ್ತರ ಕರ್ನಾಟಕದ ಸಮಸ್ಯೆಗಳ ಬಗ್ಗೆಯೇ ಚರ್ಚಿಸಬೇಕು ಎಂಬ ಉದ್ದೇಶದಿಂದ ಬೆಳಗಾವಿಯಲ್ಲಿ ಸುವರ್ಣ ವಿಧಾನ ಸೌಧವನ್ನು ನಿರ್ಮಿಸಲಾಯಿತು. ಇಲ್ಲಿ ಉತ್ತರ ಕರ್ನಾಟಕದ ಸಮಸ್ಯೆಗಳ ಬಗ್ಗೆ ಚರ್ಚೆಗೆ ಹೆಚ್ಚಿನ ಸಮಯ ನೀಡಬೇಕು' ಎಂದರು.

'ಕಬ್ಬಿಗೆ ಸರ್ಕಾರ ಪ್ರೋತ್ಸಾಹ ಬೆಲೆ ನಿಗದಿ ಮಾಡಿದ್ದರೂ ಕಾರ್ಖಾನೆ ಮಾಲೀಕರು ನೀಡುತ್ತಿಲ್ಲ. ಮೆಕ್ಕಜೋಳ ಖರೀದಿಗೆ ಬೆಂಬಲ ಬೆಲೆ ಘೋಷಿಸಿದ್ದರೂ ಖರೀದಿ ಕೇಂದ್ರಗಳನ್ನು ಆರಂಭಿಸಿಲ್ಲ. ಸರ್ಕಾರ ರೈತರ ಸಮಸ್ಯೆಗಳನ್ನು ಪೂರ್ಣ ಪ್ರಮಾಣದಲ್ಲಿ ಬಗೆಹರಿಸುತ್ತಿಲ್ಲ' ಎಂದರು.

'ಕರ್ನಾಟಕ ಕೈಗಾರಿಕ ಪ್ರದೇಶಾಭಿವೃದ್ಧಿ ಮಂಡಳಿಯು ರಿಯಲ್ ಎಸ್ಟೇಟ್ ಏಜೆನ್ಸಿ ಆಗಿದೆ. ಅಪಾರ್ಟ್‌ಮೆಂಟ್‌ಗಳನ್ನು ನಿರ್ಮಿಸಲು ಜಮೀನು ನೀಡುತ್ತಿದೆ' ಎಂದರು.

ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಕಾಂಗ್ರೆಸ್‌ನ ಬಿ.ಕೆ.ಹರಿಪ್ರಸಾದ್, 'ಉತ್ತರ ಕರ್ನಾಟಕ ಮತ್ತು ರೈತರ ಸಮಸ್ಯೆ ಬಗ್ಗೆ ಮಾತನಾಡಿ' ಎಂದು ಹೇಳಿದರು.

ಸಿ.ಟಿ.ರವಿ, 'ಪ್ರತಿ ಟನ್ ಕಬ್ಬಿಗೆ ಕೇಂದ್ರ ಸರ್ಕಾರವು ₹3,570 ಎಫ್‌ಆರ್‌ಪಿ



ವಿಧಾನಪರಿಷತ್ ಕಲಾಪದಲ್ಲಿ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಅವರು ಮಾತನಾಡಿದರು

ನಿಗದಿ ಮಾಡಿದೆ. ರಾಜ್ಯ ಸರ್ಕಾರವು ಅದಕ್ಕಿಂತ ಕಡಿಮೆ, ₹3,300ರಂತೆ ಕಬ್ಬು ಖರೀದಿಸುವಂತೆ ಆದೇಶಿಸಿದೆ' ಎಂದರು.

ಅದಕ್ಕೆ ಪ್ರತಿಕ್ರಿಯಿಸಿದ ಬೃಹತ್ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ, 'ಆ ಎಫ್‌ಆರ್‌ಪಿಯಲ್ಲಿ ಸಾಗಣೆ ವೆಚ್ಚ ಕಳೆದು, ಇಳುವರಿ ಪ್ರಮಾಣ ಆಧರಿಸಿ ರೈತರಿಗೆ ಸಿಗುವುದು ₹2,700 ಮಾತ್ರ. ಅದಕ್ಕಾಗಿಯೇ ರೈತರು ಹೋರಾಟ ನಡೆಸಿದ್ದು ಎಂಬ ಸತ್ಯವನ್ನು ಹೇಳಿ. ಸುಳ್ಳು ಹೇಳಿ ಸದನದ ಹಾದಿ ತಪ್ಪಿಸಬೇಡಿ' ಎಂದು ಜೋರು ಮಾಡಿದರು.

ರವಿ ಅವರು ತಮ್ಮ ಹಿಂದೆಯೇ ಇದ್ದ ಹಣಮಂತ ನಿರಾಣಿ ಅವರಿಂದ ಮಾಹಿತಿ ಪಡೆದುಕೊಂಡು, 'ನಾನು ಎಫ್‌ಆರ್‌ಪಿ ಎಂದಷ್ಟೇ ಹೇಳಿದೆ. ಸಾಗಣೆ ವೆಚ್ಚ ಸೇರಿ ಅಥವಾ ಬಿಟ್ಟು ಎಂದು ಹೇಳಿಲ್ಲ' ಎಂದು ಸಮಜಾಯಿಷಿ ನೀಡಿದರು.

ರವಿ ಅವರು ನೀರಾವರಿ ಯೋಜನೆಗಳ ಬಗ್ಗೆ ಪ್ರಸ್ತಾಪಿಸಿ, '1964ರಲ್ಲಿ ಆರಂಭವಾದ ಕೃಷ್ಣಾ ಮೇಲ್ದಂಡೆ ಯೋಜನೆ ಇನ್ನೂ ಪೂರ್ಣಗೊಂಡಿಲ್ಲ' ಎನ್ನುತ್ತಿದ್ದಂತೆ ಹಲವು ಸಚಿವರು, 'ಯೋಜನೆ ಸಂಬಂಧ ಅಧಿಸೂಚನೆ ಹೊರಡಿಸುವಂತೆ ಕೇಂದ್ರ ಸರ್ಕಾರಕ್ಕೆ ತಿಳಿಸಿ' ಎಂದು ಒತ್ತಾಯಿಸಿದರು.

ರವಿ, 'ಭದ್ರಾ ಯೋಜನೆ ಪೂರ್ಣವಾಗಿಲ್ಲ' ಎಂದಾಗ ಸಚಿವರು, 'ನಿರ್ಮಲಾ ಸೀತಾರಾಮನ್ ಅವರು ಐದು ವರ್ಷಗಳ ಹಿಂದೆ ಬಜೆಟ್‌ನಲ್ಲಿ ಘೋಷಿಸಿದ್ದ ₹5,400 ಕೋಟಿಯನ್ನು ಕೊಡಿಸಿ' ಎಂದು ಕೂಗಿದರು. ಸಚಿವ ಸಂತೋಷ್ ಲಾಡ್, 'ಕೇಂದ್ರಕ್ಕೆ ಹತ್ತಾರು ಪತ್ರ ಬರೆದರೂ ನಿಮ್ಮ ಪ್ರಧಾನಿ, ಕೇಂದ್ರ ಸಚಿವರು ಸಮಯ ನೀಡುತ್ತಿಲ್ಲ. ನಿಯೋಗದೊಂದಿಗೆ ಬನ್ನಿ ಎಂದರೆ ನೀವು ಬರುತ್ತಿಲ್ಲ' ಎಂದು ಹೇಳಿದರು.

ಛಲವಾದಿ ನಾರಾಯಣಸ್ವಾಮಿ, 'ನಾವು ಕೇಂದ್ರವನ್ನು ಕೇಳಬೇಕು ಎಂದಾದರೆ ನೀವು ಏಕೆ ಇರಬೇಕು? ನೀವು ಕೇಂದ್ರಕ್ಕೆ ಪ್ರೇಮ ಪತ್ರ ಬರೆದರೆ ಸಾಲದು, ಬೀದಿಗಿಳಿದು ಹೋರಾಟ ಮಾಡಿ' ಎಂದರು. ಈ ಹಂತದಲ್ಲಿ ಎರಡೂ ಕಡೆಯ ಸದಸ್ಯರು ಪರಸ್ಪರ ವಿರುದ್ಧ ತೀವ್ರ ವಾಗ್ವಾಳಿ ನಡೆಸಿದರು. ಉಪ ಸಭಾಧ್ಯಕ್ಷ ಎಂ.ಕೆ.ಪ್ರಾಣೇಶ್ ಅವರು ಎಲ್ಲರನ್ನೂ ಕೂರಿಸಿ, 'ವಿಷಯ ಪ್ರಸ್ತಾಪವನ್ನು ಮುಗಿಸಿ' ಎಂದು ಸಿ.ಟಿ.ರವಿ ಅವರಿಗೆ ಸೂಚಿಸಿದರು.

ಯುಕೆಪಿ: ಶಾಸಕ ಬಸನಗೌಡ ಪಾಟೀಲ ಯತ್ನಾಳ ಸಭಾತ್ಯಾಗ

ಬೆಳಗಾವಿ (ಸುವರ್ಣ ವಿಧಾನಸೌಧ): 'ಕೃಷ್ಣಾ ಮೇಲ್ದಂಡೆ ಯೋಜನೆ (ಯುಕೆಪಿ) ಹಂತ- 3ರ ಅನುಷ್ಠಾನಕ್ಕೆ ಹಿಂದೆ ಸ್ವಾಧೀನಪಡಿಸಿಕೊಂಡ ಜಮೀನುಗಳ ರೈತರಿಗೆ ಈವರೆಗೆ ಪರಿಹಾರ ನೀಡಿಲ್ಲ. ಸುಮಾರು 5 ಸಾವಿರ ಪ್ರಕರಣಗಳು ನ್ಯಾಯಾಲಯಗಳ ಮೆಟ್ಟಿಲೇರಿವೆ. ನ್ಯಾಯಾಲಯ ಪರಿಹಾರ ನೀಡುವಂತೆ ಆದೇಶ ಮಾಡಿದ್ದರೂ ನೀಡುತ್ತಿಲ್ಲ' ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಆರೋಪಿಸಿದರು.

ವಿಧಾನಸಭೆಯಲ್ಲಿ ಯುಕೆಪಿ ವಿಷಯವನ್ನು ಯತ್ನಾಳ ಪ್ರಸ್ತಾಪಿಸಿದಾಗ ಪ್ರತಿಕ್ರಿಯಿಸಿದ ಜಲಸಂಪನ್ಮೂಲ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, 'ವಕೀಲರು ಹಾಗೂ ಅಧಿಕಾರಿಗಳು ಒಪ್ಪಂದ ಮಾಡಿಕೊಂಡು ಭೂ ಪರಿಹಾರ ನಿಗದಿ ಮಾಡಿಸಿದ್ದಾರೆ. ₹ 10 ಲಕ್ಷದ ಜಮೀನಿಗೆ ₹ 10 ಕೋಟಿ ಆದೇಶ ಮಾಡಿಸಿದರೆ ಕೊಡಲು ಸಾಧ್ಯವಿಲ್ಲ. ನಾನು ಇದನ್ನು ಒಪ್ಪುವುದಿಲ್ಲ. ನಾವು ರಾಜ್ಯದ ಹಿತ ಕಾಪಾಡಲು ಬದ್ಧ' ಎಂದರು.

ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಯತ್ನಾಳ, 'ನ್ಯಾಯಾಲಯದ ಆದೇಶ ಹಾಗೂ ರೈತರಿಗೆ ಅವಮಾನ ಮಾಡಿದ್ದೀರಿ. ಈ ಅವಮಾನ ಖಂಡಿಸಿ ಸಭಾತ್ಯಾಗ ಮಾಡುತ್ತಿದ್ದೇನೆ' ಎಂದು ಹೇಳಿ ಸದನದಿಂದ ಹೊರನಡೆದರು.

'ಯುಕೆಪಿ- 3ರ ಅನುಷ್ಠಾನಕ್ಕೆ 2013ರಿಂದ ಇಲ್ಲಿಯವರೆಗೆ ಕೇಂದ್ರ ಸರ್ಕಾರ ಅಧಿಸೂಚನೆ ಹೊರಡಿಸದೆ ಬಾಕಿ ಉಳಿಸಿಕೊಂಡಿದೆ. ಬಿಜೆಪಿ ನಾಯಕರು ಒತ್ತಡ ಹೇರಿ ಯೋಜನೆಗೆ ಅನುಮತಿ ಕೊಡಿಸಿದರೆ ಸಾಲ ಮಾಡಿಯಾದರೂ ಯೋಜನೆ ಪೂರ್ಣಗೊಳಿಸಲು ಬದ್ಧವಾಗಿದ್ದೇವೆ' ಎಂದು ಶಿವಕುಮಾರ್ ಹೇಳಿದರು.

'ಕೃಷ್ಣಾ ಮೇಲ್ದಂಡೆ ಯೋಜನೆ ವಿಚಾರವಾಗಿ ಸಿದ್ದರಾಮಯ್ಯ ಅವರು ಹಾಗೂ ನಾವು ಚರ್ಚೆ ಮಾಡಿ ಭೂ ಪರಿಹಾರದ ಬಗ್ಗೆ ಐತಿಹಾಸಿಕ ತೀರ್ಮಾನ ತೆಗೆದುಕೊಂಡಿದ್ದೇವೆ. ಎಲ್ಲಿಂದಾದರೂ ಹಣ ತಂದು ವೆಚ್ಚ ಮಾಡಲು ಯೋಜನೆ ರೂಪಿಸಿದ್ದೇವೆ. ವರ್ಷಕ್ಕೆ ಸುಮಾರು ₹ 20 ಸಾವಿರ ಕೋಟಿ ಬೇಕು. ಮುಂದಿನ ಮೂರ್ನಾಲ್ಕು ವರ್ಷದಲ್ಲಿ ಭೂಸ್ವಾಧೀನ ಪೂರ್ಣಗೊಳಿಸಬೇಕು ಎಂದು ಹೊರಟಿದ್ದೇವೆ. ಕೆಲವು ಕಡೆ ಕೆಲಸವನ್ನೂ ಆರಂಭಿಸಿದ್ದೇವೆ' ಎಂದು ಹೇಳಿದರು.



ಬೆಳಗಾವಿಯಲ್ಲಿ ಮಂಗಳವಾರ ಚಳಿಗಾಲದ ಅಧಿವೇಶನದ ವಿಧಾನಸಭಾ ಕಲಾಪದಲ್ಲಿ ಯತ್ನಾಳ ಹಾಗೂ ಡಿ.ಕೆ. ಶಿವಕುಮಾರ್ ಮಾತನಾಡಿದರು

ಈವರೆಗೆ ₹50,452 ಕೋಟಿ ವೆಚ್ಚ: 'ಈ ಯೋಜನೆಗೆ 188 ಗ್ರಾಮಗಳ 75,563 ಎಕರೆ ಜಮೀನು ಮುಳುಗಡೆಯಾಗುತ್ತದೆ. ಈ ಪೈಕಿ 2,543 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಂಡು ಪರಿಹಾರ ವಿತರಿಸಲಾಗಿರುತ್ತದೆ. ನವೆಂಬರ್‌ವರೆಗೆ ಭೂಸ್ವಾಧೀನ ಹಾಗೂ ಪುನರ್ ನಿರ್ಮಾಣ ವೆಚ್ಚ ಸೇರಿದಂತೆ ₹ 50,452 ಕೋಟಿ ವೆಚ್ಚ ಭರಿಸಲಾಗಿದೆ' ಎಂದು ಶಿವಕುಮಾರ್ ಉತ್ತರಿಸಿದರು.

ಡಿಕೆಶಿ 'ಮುಖ್ಯಮಂತ್ರಿ' ಚನ್ನರಾಜ 'ಪೋಸ್ಟ್'

ಪ್ರಜಾವಾಣಿ ವಾರ್ತೆ

ಸುವರ್ಣ ವಿಧಾನಸೌಧ (ಬೆಳಗಾವಿ): ಕಾಂಗ್ರೆಸ್‌ನಲ್ಲಿ ನಾಯಕತ್ವ ಬದಲಾವಣೆ ವಿಚಾರ ಚರ್ಚೆಯಲ್ಲಿ ಇರುವ ಮಧ್ಯೆಯೇ ಸಚಿವೆ ಲಕ್ಷ್ಮೀ ಹೆಬ್ಬಾಳಕರ ಅವರ ತಮ್ಮ, ವಿಧಾನಪರಿಷತ್ ಸದಸ್ಯ ಚನ್ನರಾಜ ಹಟ್ಟಿಹೊಳಿ ಅವರು ಡಿ.ಕೆ. ಶಿವಕುಮಾರ್ ಅವರನ್ನು 'ಮುಖ್ಯಮಂತ್ರಿ' ಎಂದು ಸಂಬೋಧಿಸಿ ಸಾಮಾಜಿಕ ಜಾಲತಾಣದಲ್ಲಿ ಮಾಡಿದ್ದ ಪೋಸ್ಟ್ ಚರ್ಚೆಗೆ ಗ್ರಾಸವಾಗಿದೆ.

ಇಲ್ಲಿ ನಡೆಯುತ್ತಿರುವ ಅಧಿವೇಶನದಲ್ಲಿ ಭಾಗವಹಿಸಲು ಬೆಳಗಾವಿಯ ಸಾಂಬ್ರಾ ವಿಮಾನ ನಿಲ್ದಾಣಕ್ಕೆ ಮಂಗಳವಾರ ಬಂದ ಡಿ.ಕೆ. ಶಿವಕುಮಾರ್ ಅವರನ್ನು ಚನ್ನರಾಜ ಹಟ್ಟಿಹೊಳಿ ಅವರು ಸ್ವಾಗತಿಸಿದರು. ಈ ಕುರಿತಂತೆ ತಮ್ಮ 'ಎಕ್ಸ್' ಖಾತೆಯಲ್ಲಿ 'ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್' ಎಂದು ಉಲ್ಲೇಖಿಸಿ ಪೋಸ್ಟ್ ಮಾಡಿದ್ದರು.

ಡಿ.ಕೆ. ಶಿವಕುಮಾರ್ ಅವರನ್ನು 'ಮುಖ್ಯಮಂತ್ರಿ' ಎಂದು ಉಲ್ಲೇಖಿಸಿದ್ದು ಗಮನಕ್ಕೆ ಬಂದ ಕೂಡಲೇ ಆ ಪೋಸ್ಟ್ ಅಳಿಸಿ ಹಾಕಿದ ಚನ್ನರಾಜ ಹಟ್ಟಿಹೊಳಿ, 'ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್' ಎಂದು ಉಲ್ಲೇಖಿಸಿ ಹೊಸದಾಗಿ ಪೋಸ್ಟ್ ಮಾಡಿದ್ದಾರೆ. ಅಷ್ಟರಲ್ಲಾಗಲೇ ಚನ್ನರಾಜ ಹಟ್ಟಿಹೊಳಿ ಅವರ ಪೋಸ್ಟ್ ಕಾಂಗ್ರೆಸ್‌ನಲ್ಲಿ ಚರ್ಚೆಯ ವಿಷಯವಾಗಿತ್ತು.

ಈ ಕುರಿತು ಪ್ರತಿಕ್ರಿಯಿಸಿದ ಚನ್ನರಾಜ ಹಟ್ಟಿಹೊಳಿ, 'ನಮ್ಮ ಎಕ್ಸ್ ಖಾತೆಯನ್ನು ಬೇರೆಯವರ ಮೂಲಕ ಹ್ಯಾಂಡಲ್ ಮಾಡಿಸಲಾಗುತ್ತದೆ. ಡಿ.ಕೆ. ಶಿವಕುಮಾರ್ ಅವರನ್ನು ಸ್ವಾಗತಿಸಿದ ಪೋಸ್ಟ್ ಮಾಡುವಾತ ನಿದ್ದೆಗಣ್ಣಿನಲ್ಲಿದ್ದ ಎನಿಸುತ್ತದೆ. ಹೀಗಾಗಿ ಟೈಪಿಂಗ್ ತಪ್ಪಾಗಿದೆ. ಅದನ್ನು ಅರಿತ ಕೂಡಲೇ ಸರಿಪಡಿಸಲಾಗಿದೆ' ಎಂದರು.

ಸಚಿವೆ ಲಕ್ಷ್ಮೀ ಹೆಬ್ಬಾಳಕರ ಮಾತನಾಡಿ, 'ಚನ್ನರಾಜ ಹಟ್ಟಿಹೊಳಿ ಅವರ 'ಎಕ್ಸ್' ಖಾತೆಯಲ್ಲಿ ಆಗಿರುವ ಲೋಪ ಅರಿಯದೇ ನಡೆದಿರುವುದು. ನಾವು ಪೋಸ್ಟ್ ಮಾಡುವುದಿಲ್ಲ. ಅದಕ್ಕೆ ಪ್ರತ್ಯೇಕ ತಂಡವಿರುತ್ತದೆ. ಅವರು ಪೋಸ್ಟ್ ಮಾಡುವಾಗ ಅಚಾತುರ್ಯವಾಗಿದೆ. ನಾನು ಮತ್ತು ನನ್ನ ಸಹೋದರ ಪಕ್ಷದ ಶಿಸ್ತಿನ ಸಿಪಾಯಿಗಳು' ಎಂದರು.

'ಬಾಯಿ ಮುಚ್ಚಿಕೊಂಡು ಇರಬೇಕು': 'ಅಧಿವೇಶನ ಮುಗಿಯುವವರೆಗೆ ಮುಖ್ಯಮಂತ್ರಿ ಬದಲಾವಣೆ ಬಗ್ಗೆ ಯಾರೂ ಮಾತನಾಡಬಾರದು ಮತ್ತು ಬಾಯಿ ಮುಚ್ಚಿಕೊಂಡು ಇರಬೇಕು' ಎಂದು ಕಾಂಗ್ರೆಸ್ ಶಾಸಕ ಬೇಳೂರು ಗೋಪಾಲಕೃಷ್ಣ ಅವರು ಸ್ವಪಕ್ಷೀಯರ ವಿರುದ್ಧ ಹರಿಹಾಯ್ದರು.

'ಅಧಿವೇಶನ ಮುಗಿಯುವವರೆಗೆ ಬಾಯಿ ಮುಚ್ಚಿಕೊಂಡು ಇರಿ, ನಂತರ ಬೇಕಾದರೆ ನಿಮ್ಮ ಚಟ ತೀರಿಸಿಕೊಳ್ಳಿ. ನಾನು ಈ ಬಗ್ಗೆ ಶಾಸಕಾಂಗ ಪಕ್ಷದ ಸಭೆಯಲ್ಲಿ ಮಾತನಾಡುತ್ತೇನೆ. ಪಕ್ಷದ ಆಂತರಿಕ ವಿಚಾರಗಳನ್ನು ಬಹಿರಂಗಪಡಿಸುವವರಿಗೆ ರಾಷ್ಟ್ರೀಯ ನಾಯಕರು ನೋಟಿಸ್ ಕೊಡಬೇಕು' ಎಂದು ಆಗ್ರಹಿಸಿದರು.

ಕಿಂಗ್ ಈಸ್ ಅಲೈವ್: ಬೈರತಿ ಸುರೇಶ್

'ಸಿದ್ದರಾಮಯ್ಯ ಅವರೇ ನಮ್ಮ (ಅಹಿಂದ) ನಾಯಕರು. ಅವರು ಇನ್ನೂ ಇದ್ದಾರೆ. ಟೈಗರ್ ಜಿಂದಾ ಹೈ ಮತ್ತು ಕಿಂಗ್ ಇಸ್ ಅಲೈವ್. ಹೀಗಾಗಿ, ಸರ್ಕಾರವನ್ನಾಗಲಿ ಅಥವಾ ಅಹಿಂದ ಹೋರಾಟವನ್ನಾಗಲೀ ಮುಂದೆ ತೆಗೆದುಕೊಂಡು ಹೋಗುವವರು ಯಾರು ಎಂದು ಸಿದ್ದರಾಮಯ್ಯ ಅವರೇ ತೀರ್ಮಾನಿಸುತ್ತಾರೆ' ಎಂದು ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಹೇಳಿದರು.

ಮುಂದಿನ ಅಹಿಂದ ನಾಯಕ ಯಾರು ಎಂಬ ಬಗ್ಗೆ ಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್ ಅವರು ಸತೀಶ ಜಾರಕಿಹೊಳಿ ಹೆಸರು ಹೇಳಿದ್ದರು. ಈ ಹೇಳಿಕೆ ಸೇರಿದಂತೆ ಕೆಲ ನಾಯಕರ ಹೇಳಿಕೆಗಳಿಗೆ ಬೈರತಿ ಸುರೇಶ್ ಪ್ರತಿಕ್ರಿಯಿಸಿದರು. 'ಕಾಂಗ್ರೆಸ್ ಪಕ್ಷದೊಳಗೆ ನಾಯಕತ್ವ ಬದಲಾವಣೆಯ ಚರ್ಚೆಯೇ ಇಲ್ಲ' ಎಂದೂ ಅವರು ಹೇಳಿದರು.

'ನನ್ನ ಹೇಳಿಕೆ ಸಿಎಲ್‌ಪಿಯಲ್ಲಿ ಪ್ರಸ್ತಾಪಿಸಲಿ'

'ನನಗೆ ಗೊತ್ತಿರುವ ಹಾಗೆ ಕಾಂಗ್ರೆಸ್ ಶಾಸಕಾಂಗ ಪಕ್ಷದ (ಸಿಎಲ್‌ಪಿ) ಸಭೆಯಲ್ಲಿ ಈ ವಿಚಾರ ಚರ್ಚೆ ಆಗುವುದಿಲ್ಲ. ಒಂದು ವೇಳೆ ಯಾರಾದರೂ ಶಾಸಕರು ಈ ಬಗ್ಗೆ ಪ್ರಸ್ತಾಪಿಸುವುದಾದರೆ ಪ್ರಸ್ತಾಪಿಸಲಿ' ಎಂದು ವಿಧಾನಪರಿಷತ್ತಿನ ಸದಸ್ಯ ಯತೀಂದ್ರ ಸಿದ್ದರಾಮಯ್ಯ ಹೇಳಿದರು.

'2028ರವರೆಗೂ ಸಿದ್ದರಾಮಯ್ಯ ಸಿ.ಎಂ'

'2028ರವರೆಗೂ ಮುಖ್ಯಮಂತ್ರಿ ಸ್ಥಾನದಲ್ಲಿ ಸಿದ್ದರಾಮಯ್ಯ ಅವರೇ ಇರುತ್ತಾರೆಂದು ನಾನು ಅಂದುಕೊಂಡಿದ್ದೇನೆ' ಎಂದು ವಕ್ಫ್ ಸಚಿವ ಜಮೀರ್ ಅಹಮದ್ ಖಾನ್ ಹೇಳಿದರು.

'ಮನೆಗಳಲ್ಲಿ ಮದ್ಯದ ಬಾಟಲಿ ನಿಯಮ ಸರಳೀಕರಿಸಬೇಕು'

ಪ್ರಜಾವಾಣಿ ವಾರ್ತೆ

ಸುವರ್ಣ ವಿಧಾನಸೌಧ (ಬೆಳಗಾವಿ): 'ಕಡಲ ತೀರದ ಪ್ರದೇಶಗಳಲ್ಲಿ ಕದ್ದು ಮುಚ್ಚಿ ಮದ್ಯ ಮಾರಾಟ ನಡೆಯುತ್ತಿದೆ. ಅದನ್ನು ತಪ್ಪಿಸಲು ಅಧಿಕೃತವಾಗಿಯೇ ಪರವಾನಗಿ ನೀಡುವ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಜೊತೆ ಚರ್ಚಿಸಿದ್ದೇನೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಮನೆಗಳಲ್ಲಿ ಏಳು ಬಾಟಲಿ ಮದ್ಯ ಮಾತ್ರ ಇಟ್ಟುಕೊಳ್ಳಬೇಕೆಂಬ ನಿಯಮವಿದೆ. ಯಾರೋ ಬಂದು ಬಾಟಲಿ ಉಡುಗೊರೆ ಕೊಡುತ್ತಾರೆ. ಮತ್ಯಾರೋ ಬಂದು ಕೇಸು ಹಾಕುತ್ತಾರೆ. ಇದನ್ನು ತಪ್ಪಿಸಲು ಕ್ರಮಬದ್ಧಗೊಳಿಸಬೇಕು. ಈ ಬಗ್ಗೆ ಚರ್ಚೆ ಮಾಡಬೇಕು ಎಂದು ಅಬಕಾರಿ ಸಚಿವ ಆರ್.ಬಿ. ತಿಮ್ಮಾಪುರ ಅವರಿಗೆ ಸಲಹೆ ನೀಡಿದರು.

ಕಿರಾಣಿ ಅಂಗಡಿಗಳಲ್ಲಿ ಮದ್ಯ ಮಾರಾಟ ಮಾಡುತ್ತಿರುವುದನ್ನು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಸಿ.ಬಿ. ಸುರೇಶ್ ಬಾಬು ಪ್ರಸ್ತಾಪಿಸಿದಾಗ ಮಧ್ಯಪ್ರವೇಶಿಸಿದ ಡಿ.ಕೆ. ಶಿವಕುಮಾರ್, 'ಸ್ವಿಗ್ಗಿಯಂತಹ ಗಿಗ್ ಆ್ಯಪ್‌ಗಳ ಮೂಲಕ ಪ್ರತಿಯೊಂದು ವಸ್ತುವೂ ಮನೆ ಬಾಗಿಲಿಗೆ ಬರುತ್ತಿದೆ. ಮದ್ಯವೂ ಬರುತ್ತಿಲ್ಲ ಎಂಬುದಕ್ಕೆ ಗ್ಯಾರಂಟಿ ಏನು' ಎಂದರು.

'ಸದ್ಯ ಕಡಲ ತೀರಗಳಲ್ಲಿ ಮದ್ಯ ಮಾರಾಟಕ್ಕೆ ಅನುಮತಿ ಇಲ್ಲ. ಆದರೆ, ಬೀಚ್‌ಗಳಲ್ಲಿ ಬಿಯರ್ ಸಿಗುತ್ತದೆ. ಇದನ್ನು ತಪ್ಪಿಸಲು ಅಧಿಕೃತವಾಗಿ ಅನುಮತಿ ನೀಡಬೇಕೆಂಬುದು ನನ್ನ ವೈಯಕ್ತಿಕ ಅಭಿಪ್ರಾಯ. ಈ ಬಗ್ಗೆ ಮುಖ್ಯಮಂತ್ರಿ ಜೊತೆ ಚರ್ಚಿಸಿದ್ದೇನೆ' ಎಂದು ಶಿವಕುಮಾರ್ ಹೇಳಿದರು.

'ನಾನು ಅಡ್ಜಸ್ಟ್‌ಮೆಂಟ್ ಗಿರಾಕಿ ಅಲ್ಲ'

ಮಾತು ಗಮ್ಮತ್ತು

ಸುವರ್ಣ ವಿಧಾನಸೌಧ (ಬೆಳಗಾವಿ): 'ನಾನು ಅಡ್ಜಸ್ಟ್‌ಮೆಂಟ್ ಗಿರಾಕಿ ಅಲ್ಲ. ವಿರೋಧ ಪಕ್ಷದ ನಿಜವಾದ ನಾಯಕ ನಾನೇ' ಎಂದು ಬಿಜೆಪಿಯಿಂದ ಉಚ್ಚಾಟಿತರಾಗಿರುವ ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದರು.

ವಿಧಾನಸಭೆಯಲ್ಲಿ ಹಿರಿಯ ಶಾಸಕರಾದ ತಮಗೆ ಮುಂದಿನ ಸಾಲಿನಲ್ಲಿ ಆಸನ ನೀಡಬೇಕೆಂದು ಸಭಾಧ್ಯಕ್ಷರಿಗೆ ಯತ್ನಾಳ ಮನವಿ ಮಾಡಿದರು.

ಅದಕ್ಕೆ ಪ್ರತಿಕ್ರಿಯಿಸಿದ ಸಭಾಧ್ಯಕ್ಷ ಯು.ಟಿ. ಖಾದರ್, 'ರಾಜಕೀಯದಲ್ಲಿ ಹಿರಿಯರು, ಕಿರಿಯರು ಎಂದು ಇಲ್ಲ. ಹಿರಿತನ ನೋಡಿ ಆಸನ ನೀಡುವುದಿಲ್ಲ. ಬೇಕಾದಾಗ ಬರುವುದು, ಬಿಡುವುದು ಅಲ್ಲ' ಎಂದರು.

ಅದಕ್ಕೆ ಯತ್ನಾಳ, 'ನಾವು ಬೇಕಾದಾಗ ಬರುವುದು ಬಿಡುವುದು ಅಲ್ಲ. ನಾವೇ ನಿಷ್ಠಾವಂತ ಕಾರ್ಯಕರ್ತರು. ಈ ಸದನದಲ್ಲಿ ವಿಪಕ್ಷದ ನಿಜವಾದ ನಾಯಕ ಅಂದರೆ ನಾನೇ' ಎಂದರು.

'ನಾನು ಹೊಂದಾಣಿಕೆ ಮಾಡಿಕೊಂಡಿಲ್ಲ. ಯಾವ ಮಂತ್ರಿಗಳಿಗೂ ದಯಾಪರನಾಗಿ ಕೇಳಿಕೊಂಡಿಲ್ಲ. ಅದಕ್ಕಾಗಿ ನಾನೇ ವಿರೋಧ ಪಕ್ಷದ ನಾಯಕ. ಬೇಕಿದ್ದರೆ ಉಪ ಸಭಾಧ್ಯಕ್ಷರ ಪಕ್ಕದಲ್ಲಿ ಒಂದು ಕುರ್ಚಿ ನನಗೆ ವ್ಯವಸ್ಥೆ ಮಾಡಿ' ಎಂದು ಹಾಸ್ಯ ಚಟಾಕಿ ಹಾರಿಸಿದರು.

ಮುಂದಿನ ಸಿ.ಎಂ?: ಬೆಟ್ಟಿಂಗ್ ಜೋರು

ವಿಧಾನಸಭೆಯಲ್ಲಿ ಆನ್‌ಲೈನ್ ಬೆಟ್ಟಿಂಗ್ ಬಗ್ಗೆ ಚರ್ಚೆ ಜೋರಾಗಿತ್ತು. ಬಿಜೆಪಿಯ ಸಿಮೆಂಟ್ ಮಂಜು ಅವರ ಪ್ರಶ್ನೆಗೆ ಉತ್ತರಿಸಿದ ಗೃಹ ಸಚಿವ ಜಿ. ಪರಮೇಶ್ವರ, 'ಎಲ್ಲ ಕಡೆ ಬೆಟ್ಟಿಂಗ್ ಜೋರಾಗಿದೆ' ಎಂದರು.

ಮಧ್ಯಪ್ರವೇಶಿಸಿದ ಬಿಜೆಪಿಯ ವಿ. ಸುನಿಲ್ ಕುಮಾರ್, 'ಮುಂದಿನ ತಿಂಗಳು ಮುಖ್ಯಮಂತ್ರಿ ಯಾರು ಎಂಬ ಬಗ್ಗೆಯೂ ಶಾಸಕರು, ಜನರ ನಡುವೆ ಬೆಟ್ಟಿಂಗ್ ಜೋರಾಗಿ ನಡೆದಿದ್ದು, ಇದರ ನಿಯಂತ್ರಣಕ್ಕೂ ಕ್ರಮ ಕೈಗೊಳ್ಳಬೇಕಲ್ಲವೇ' ಎಂದು ನಗುತ್ತಾ ಹೇಳಿದರು.

ಈ ವೇಳೆ ಸದನದಲ್ಲಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಯಾವುದೇ ಪ್ರತಿಕ್ರಿಯೆ ನೀಡಿದಂತೆ ಕಾಣಲಿಲ್ಲ. ಆದರೆ, ನಸುನಕ್ಕ ಡಿ.ಕೆ. ಶಿವಕುಮಾರ್ ಅವರು ಸುನಿಲ್ ಕಡೆ ನೋಡುತ್ತಾ ಕಾಲೆಳೆಯುವ ಪ್ರಯತ್ನ ಮಾಡಿದರು.

'ಸಚ್ಚಾರಿತ್ರ್ಯ ಇಲ್ಲದವರು...'

ರೈತರ ಸಮಸ್ಯೆಗಳ ಬಗ್ಗೆ ಸಿ.ಟಿ. ರವಿ ಅವರು ವಿಧಾನ ಪರಿಷತ್ತಿನಲ್ಲಿ ವಿಷಯ ಪ್ರಸ್ತಾಪಿಸುವ ವೇಳೆ, 'ಕೇಂದ್ರ ಸರ್ಕಾರವು ಅನುದಾನ ನೀಡುತ್ತಿಲ್ಲ' ಎಂದು ಕಾಂಗ್ರೆಸ್‌ನ ಸದಸ್ಯರು ದೂರಿದರು.

ಇದರಿಂದ ಸಿಡಿಮಿಡಿಗೊಂಡ ರವಿ ಅವರು, 'ಕುಣಿಯಲಾರದವರು, ನೆಲ ಡೊಂಕು ಎಂದರಂತೆ' ಎಂದು ಹಂಗಿಸಿದರು. ಕಾಂಗ್ರೆಸ್‌ನ ರಮೇಶ್ ಬಾಬು, 'ಒಂದು ಪಕ್ಷದ ವಿಚಾರದಲ್ಲಿ ಈ ರೀತಿಯ ಪದ ಬಳಕೆ ಮಾಡಬಾರದು. ಅವರು ಅಂತಹ ಮಾತುಗಳನ್ನು ಆಡುವುದೇ ಆದರೆ, 'ಸಚ್ಚಾರಿತ್ರ್ಯ ಇಲ್ಲದವರು ತುಳಸಿ ಕಟ್ಟೆ ಸುತ್ತಿದರೆ...' ಎಂದು ನಾನೂ ಹೇಳಬೇಕಾಗುತ್ತದೆ' ಎಂದು ಎಚ್ಚರಿಸಿದರು.

ರವಿ ಅವರು ತಕ್ಷಣವೇ, 'ಸಚ್ಚಾರಿತ್ರ್ಯ ಇಲ್ಲದವರು ಪದೇ-ಪದೇ ಪಕ್ಷ ಬದಲಿಸುತ್ತಾರೆ. ಸಚ್ಚಾರಿತ್ರ್ಯರು ಒಂದೇ ಪಕ್ಷದಲ್ಲಿ ಇರುತ್ತಾರೆ' ಎಂದು ರಮೇಶ್ ಬಾಬು ಅವರ ಕಾಲೆಳೆದರು.

ಸಚಿವ ಸಂತೋಷ್ ಲಾಡ್, 'ಮಹಾರಾಷ್ಟ್ರದಲ್ಲಿ 70,000 ಕೋಟಿ ಅಕ್ರಮ ನಡೆಸಿದ್ದಾರೆ ಎಂದು ನಿಮ್ಮ ಪಕ್ಷದವರೇ ಆರೋಪಿಸಿದ್ದ ನಾಯಕರೊಬ್ಬರ ಮನೆಗೆ, ನಿಮ್ಮವರೇ ಹೋಗಿ ಸರ್ಕಾರ ರಚಿಸಿದ್ದು ಏಕೆ? ಸಚ್ಚಾರಿತ್ರ್ಯ ಇಲ್ಲದವರು ಯಾವ ಪಕ್ಷಕ್ಕೆ ಹೋಗುತ್ತಾರೆ ಎಂಬುದನ್ನು ಹೇಳಿ' ಎಂದು ಛೇಡಿಸಿದರು.

'ಮಾತು ಬಿಟ್ಟ' ಅಶೋಕ: ಸಿ.ಎಂ ಸಂಯಮದ ಪಾಠ

ಪ್ರಜಾವಾಣಿ ವಾರ್ತೆ

ಸುವರ್ಣ ವಿಧಾನಸೌಧ (ಬೆಳಗಾವಿ): ತಮ್ಮ ಮಾತಿಗೆ ಸಚಿವರಾದ ಕೃಷ್ಣ ಬೈರೇಗೌಡ ಮತ್ತು ಪ್ರಿಯಾಂಕ್ ಖರ್ಗೆ ಅಡ್ಡಿಪಡಿಸುತ್ತಿದ್ದಾರೆ ಎಂದು ಮುನಿಸಿಕೊಂಡ ವಿರೋಧ ಪಕ್ಷದ ನಾಯಕ ಆರ್. ಅಶೋಕ ಅವರು ಮಾತು ಮುಂದುವರಿಸಲು ನಿರಾಕರಿಸಿದರೆ, ಸುಗಮ ಕಲಾಪಕ್ಕೆ ಆಡಳಿತ ಮತ್ತು ವಿರೋಧ ಪಕ್ಷದವರ ಸಂಯಮ ಎಷ್ಟು ಮುಖ್ಯ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪಾಠ ಮಾಡಿದರು.

ಉತ್ತರ ಕರ್ನಾಟಕದ ಸಮಸ್ಯೆಗಳ ಕುರಿತು ವಿಧಾನಸಭೆಯಲ್ಲಿ ಮಂಗಳವಾರ ಅಶೋಕ ಮಾತನಾಡುವಾಗ, 'ಬರ ಪರಿಹಾರ ಸಮರ್ಪಕವಾಗಿ ನೀಡಿಲ್ಲ' ಎಂದು ಹೇಳಿದ್ದು, ಕೃಷ್ಣ ಬೈರೇಗೌಡ ಅವರನ್ನು ಕೆರಳಿಸಿತು. ತಮ್ಮ ಅವಧಿಯಲ್ಲಿ ಎಷ್ಟು ಮೊತ್ತದ ಪರಿಹಾರ ನೀಡಲಾಗಿದೆ ಎಂಬ ಅಂಕಿ-ಅಂಶ ಮುಂದಿಟ್ಟರು. ಈ ಸಂದರ್ಭದಲ್ಲಿ ಪ್ರಿಯಾಂಕ್ ಖರ್ಗೆ ಮತ್ತು ಕಾಂಗ್ರೆಸ್‌ನ ಇತರ ಸದಸ್ಯರು ಅಶೋಕ ಅವರನ್ನು ತರಾಟೆಗೆ ತೆಗೆದುಕೊಂಡಾಗ, ತಮ್ಮ ಮಾತನ್ನು ನಿಲ್ಲಿಸಿದ ಅಶೋಕ ಸುಮ್ಮನೆ ಕುಳಿತರು.

> ನೀವು ಸುಳ್ಳು ಹೇಳಿದರೆ ಕೇಳಿಕೊಂಡು ನಾವು ಸುಮ್ಮನೇ ಕುಳಿತುಕೊಳ್ಳಬೇಕೆ? ಸರಿಯಾದ ಮಾಹಿತಿ ಕೊಡಿ ಜನಕ್ಕೆ ತಪ್ಪು ಸಂದೇಶ ಹೋಗಬಾರದು
>
> **ಕೃಷ್ಣ ಬೈರೇಗೌಡ,** ಕಂದಾಯ ಸಚಿವ

ಸಭಾಧ್ಯಕ್ಷ ಯು.ಟಿ.ಖಾದರ್ ಅವರು ಅಶೋಕ ಅವರನ್ನು ಸಮಾಧಾನಗೊಳಿಸಲು ಪ್ರಯತ್ನಿಸಿದರೂ ಮಣಿಯಲಿಲ್ಲ. ಬಿಜೆಪಿ ಸದಸ್ಯರು ಸಭಾತ್ಯಾಗಕ್ಕೆ ಮುಂದಾದಾಗ, ಸಭಾಧ್ಯಕ್ಷರು ಕಲಾಪ ಮುಂದೂಡಿದರು. ಬಳಿಕ ಸಭಾಧ್ಯಕ್ಷರು ವಿರೋಧ ಪಕ್ಷಗಳ ಸದಸ್ಯರನ್ನು ತಮ್ಮ ಕೊಠಡಿಗೆ ಕರೆಸಿಕೊಂಡು ಸಂಧಾನ ನಡೆಸಿದರು.

ಮತ್ತೆ ಕಲಾಪ ಆರಂಭವಾದಾಗ ಕಲಾಪದಲ್ಲಿ ಹೇಗೆ ನಡೆದುಕೊಳ್ಳಬೇಕು ಎಂಬ ಬಗ್ಗೆ ಸಿದ್ದರಾಮಯ್ಯ ಅವರು ಆಡಳಿತ ಮತ್ತು ವಿರೋಧಪಕ್ಷದವರಿಗೆ ತಿಳಿ ಹೇಳಿದರು.

ಕಲಾಪ ಸುಸೂತ್ರಕ್ಕೆ ಸಿದ್ದರಾಮಯ್ಯ ಸೂತ್ರ:

- ಸಭಾನಾಯಕ ಮತ್ತು ವಿರೋಧ ಪಕ್ಷದ ನಾಯಕರು ಮಾತನಾಡುವಾಗ ಅವರಿಗೆ ಸಚಿವರು ಸೇರಿ ಯಾರೂ ಅಡ್ಡಿಪಡಿಸಬಾರದು
- ಇತ್ತೀಚಿನ ದಿನಗಳಲ್ಲಿ ಸದನದ ಗೌರವ ಕಡಿಮೆ ಆಗುತ್ತಿದೆ, ಚರ್ಚೆಯ ಗುಣಮಟ್ಟ ಕಡಿಮೆ ಆಗುತ್ತಿದೆ ಎಂಬ ಭಾವನೆ ಜನರಲ್ಲಿದೆ. ಇದನ್ನು ಸರಿಪಡಿಸುವ ಜವಾಬ್ದಾರಿ ನಮ್ಮ ಮೇಲಿದೆ
- ಮುಖ್ಯಮಂತ್ರಿಯಾಗಲಿ, ವಿರೋಧ ಪಕ್ಷದ ನಾಯಕರಾಗಲಿ, ಸದಸ್ಯರಾಗಲಿ ಅಸಂಸದೀಯ ಪದ ಬಳಸಬಾರದು. ಸಂಸದೀಯ ಪದಗಳ ಮೂಲಕವೇ ಟೀಕೆ-ಟಿಪ್ಪಣಿ ಮಾಡಬಹುದು. ವಿರೋಧ ಪಕ್ಷದವರು ಟೀಕೆ ಮಾಡಿದಾಗ ಅಡ್ಡಿಪಡಿಸುವ ಕ್ರಮ ಸರಿಯಲ್ಲ. ಇದು ಸಚಿವರಿಗೂ ಅನ್ವಯವಾಗುತ್ತದೆ. ವಿರೋಧ ಪಕ್ಷದ ನಾಯಕರು ಒಪ್ಪಿದರೆ ಮಾತ್ರ ಮಧ್ಯಪ್ರವೇಶಿಸಿ ಮಾತನಾಡಬೇಕು. ಒಪ್ಪದಿದ್ದರೆ ಮಾತನಾಡಬಾರದು
- ಟೀಕೆ ಮಾಡಿ, ಆದರೆ ಅಸತ್ಯ ಹೇಳಬೇಡಿ. ವಾಸ್ತವ ವಿಚಾರವನ್ನು ಮುಂದಿಟ್ಟುಕೊಂಡು ಟೀಕೆ ಮಾಡಿದರೆ ನಮ್ಮ ಆಕ್ಷೇಪವಿಲ್ಲ. ಅದೇ ರೀತಿ ನಾವು ಉತ್ತರ ಕೊಡುವಾಗ ದಾರಿ ತಪ್ಪಿಸಬೇಡಿ. ಇಷ್ಟು ಆದರೆ ಚರ್ಚೆ ಗುಣಮಟ್ಟ ಹೆಚ್ಚುತ್ತದೆ



ವಿಧಾನಸಭಾ ಕಲಾಪದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ವಿರೋಧ ಪಕ್ಷದ ನಾಯಕ ಆರ್. ಅಶೋಕ ಮಾತನಾಡಿದರು

'ಹೇಗೆ ಮಾತಾಡಬೇಕೆಂದು ಬರೆದುಕೊಡಿ'

'ನಾವು ಏನು ಮಾಡಬೇಕು, ಏನು ಮಾತನಾಡಬೇಕು ಎಂಬುದನ್ನು ಬರೆದುಕೊಡಿ. ನಿಮ್ಮ ಬಳಿ ಅಧಿಕಾರಿಗಳಿದ್ದಾರೆ. ನನ್ನ ಬಳಿ ಯಾರಿದ್ದಾರೆ? ನನಗೆ ಸ್ವಲ್ಪ ಜ್ಞಾನ ಕಡಿಮೆ ಇರಬಹುದು. ತಿಳಿವಳಿಕೆ ಕಡಿಮೆ ಇರಬಹುದು. ಆದ್ದರಿಂದ ನೀವೇ ಬರೆದುಕೊಡಿ' ಎಂದು ಆರ್.ಅಶೋಕ ಅವರು ಕಿಡಿಕಾರಿದರು.

'ನಾನು ಏನಾದರೂ ತಪ್ಪು ಹೇಳಿದರೆ ತಿದ್ದಲು ಮುಖ್ಯಮಂತ್ರಿ ಇದ್ದಾರೆ. ಅವರಿಗೆ ಗೊತ್ತಿಲ್ಲಾ ಎಂದರೆ ನಿಮ್ಮ(ಕೃಷ್ಣ ಬೈರೇಗೌಡ) ಜ್ಞಾನವನ್ನು ಅವರಿಗೆ ಧಾರೆ ಎರೆದು ಕೊಡಿ' ಎಂದು ಕುಟುಕಿದರು.

ಆವರ್ತನಿಧಿ ಏಕೆ ಸ್ಥಾಪಿಸಿಲ್ಲ?

'ರೈತರ ಸಂಕಷ್ಟಕ್ಕೆ ಸ್ಪಂದಿಸಲು ₹5,000 ಕೋಟಿ ಆವರ್ತನಿಧಿ ಸ್ಥಾಪಿಸುವುದಾಗಿ ಕಾಂಗ್ರೆಸ್ ಪಕ್ಷ ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿತ್ತು. ಆದರೆ ಈವರೆಗೂ ಆವರ್ತನಿಧಿ ಏಕೆ ಸ್ಥಾಪಿಸಿಲ್ಲ' ಎಂದು ಚರ್ಚೆ ಆರಂಭಿಸಿದ ಆರ್.ಅಶೋಕ ಅವರು ಪ್ರಶ್ನಿಸಿದರು.

'ರಾಜ್ಯದಲ್ಲಿ 422 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. 37 ಮಂದಿ ಕಬ್ಬು ಬೆಳೆಗಾರರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇಡೀ ದೇಶದಲ್ಲಿ ಕರ್ನಾಟಕ 2ನೇ ಸ್ಥಾನದಲ್ಲಿದೆ. ಉತ್ತರ ಕರ್ನಾಟಕದ ರೈತರು ಅತ್ಯಂತ ಸಂಕಷ್ಟದಲ್ಲಿದ್ದಾರೆ. ಸಿದ್ದರಾಮಯ್ಯ ಅವರು ನಿಜವಾಗಿ ರೈತರೇ ಆಗಿದ್ದರೆ, ನೇಗಿಲು ಹಿಡಿದು ಉಳುಮೆ ಮಾಡಿದ್ದರೆ ರೈತರಿಗೆ ಸ್ಪಂದಿಸುತ್ತಿದ್ದರು. ಈಗ ರೈತರು ರೊಚ್ಚಿಗೆದ್ದಿದ್ದಾರೆ. ಇದು ಕಲ್ಲು ಹೃದಯದ ಸರ್ಕಾರ' ಎಂದು ಟೀಕಿಸಿದರು.

ಜಗದಗಲ ಭಾರತದ ಬಾವುಟ

ಪ್ರಜಾವಾಣಿ ಚಿತ್ರ: ರಂಜು ಪಿ.



ಬೆಳಗಾವಿಯ ಸುವರ್ಣ ವಿಧಾನಸೌಧದ ಭವ್ಯ ಮೆಟ್ಟಿಲುಗಳ ಮೇಲೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮಂಗಳವಾರ ಅನಾವರಣ ಮಾಡಿದ ಖಾದಿ ತ್ರಿವರ್ಣ ಬಾವುಟವು ಜಗತ್ತಿನ ಎರಡನೆಯ ಅತಿ ದೊಡ್ಡ ಧ್ವಜ ಎನಿಸಿದೆ


'ಆರೋಗ್ಯ ಯೋಜನೆಗಳ ದರ ಪರಿಷ್ಕರಿಸಿ'

ಪರಿಷತ್‌ನ ಬಿಜೆಪಿ ಸದಸ್ಯ ಡಾ.ಧನಂಜಯ ಸರ್ಜಿ ಆಗ್ರಹ

ಪ್ರಜಾವಾಣಿ ವಾರ್ತೆ

ಸುವರ್ಣ ವಿಧಾನಸೌಧ (ಬೆಳಗಾವಿ): ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ ಯೋಜನೆ ಅಡಿ ವಿವಿಧ ಚಿಕಿತ್ಸೆಗಳಿಗೆ ಕೇಂದ್ರ ಸರ್ಕಾರ ನಿಗದಿಪಡಿಸಿದ (ಸಿಜಿಎಚ್‌ಎಸ್) ಪರಿಷ್ಕೃತ ದರಗಳನ್ನು ಅನ್ವಯಿಸುವ ಪ್ರಸ್ತಾವವು ಪರಿಶೀಲನೆಯಲ್ಲಿದೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ವಿಧಾನಪರಿಷತ್‌ನಲ್ಲಿ ಬಿಜೆಪಿಯ ಡಾ.ಧನಂಜಯ ಸರ್ಜಿ ಅವರ ಪ್ರಶ್ನೆಗೆ ಉತ್ತರಿಸಿದ ಅವರು, 'ಗೃಹ ಇಲಾಖೆ, ಕಾರ್ಮಿಕ ಇಲಾಖೆ ಹಾಗೂ ಸರ್ಕಾರಿ ನೌಕರರಿಗೆ ಕೇಂದ್ರ ನಿಗದಿ ಮಾಡಿದ ದರವನ್ನು ಅಳವಡಿಸಿಕೊಳ್ಳಲಾಗಿದೆ. ಯಶಸ್ವಿನಿ ಯೋಜನೆಗೆ ಸಹಕಾರ ಇಲಾಖೆ ಅನುಮೋದನೆ ಬೇಕಿದೆ. ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ ಯೋಜನೆಗೆ ಕೇಂದ್ರ ನಿಗದಿ ಮಾಡಿದ ದರದ ಬದಲು ಪ್ರಸ್ತುತ 2014ರ ಆರೋಗ್ಯ ಪ್ರಯೋಜನೆಗಳ ಪ್ಯಾಕೇಜ್ (ಎಚ್‌ಬಿಪಿ) ದರದ ಪ್ರಕಾರ ವೆಚ್ಚ ನೀಡಲಾಗುತ್ತಿದೆ' ಎಂದರು.



ಧನಂಜಯ

'ರಾಜ್ಯದಲ್ಲಿ ವಿವಿಧ ಆರೋಗ್ಯ ಯೋಜನೆಗಳಡಿ ಪಡೆಯುವ ಚಿಕಿತ್ಸೆಗಳಿಗೆ ಸಿಜಿಎಚ್‌ಎಸ್ ದರಗಳನ್ನು ನೀಡದ ಕಾರಣ ಹಲವು ಆಸ್ಪತ್ರೆಗಳಲ್ಲಿ ಸೇವೆ ಪಡೆಯಲು ಕಷ್ಟವಾಗುತ್ತಿದೆ. ಸಿಜಿಎಚ್‌ಎಸ್ ಅಡಿ ಸಿಸೇರಿಯನ್ ಹೆರಿಗೆಗೆ ₹38,040, ಸಾಮಾನ್ಯ ಹೆರಿಗೆಗೆ ₹26,775 ನಿಗದಿಯಾಗಿದೆ. ಆದರೆ, ರಾಜ್ಯದ ಯಶಸ್ವಿನಿ ಯೋಜನೆ, ಆಯುಷ್ಮಾನ್ ಭಾರತ ಆರೋಗ್ಯ ಕರ್ನಾಟಕ ಯೋಜನೆಯಲ್ಲಿ ಕೇವಲ ₹14,000, ಆಂಜಿಯೋಪ್ಲಾಸ್ಟ್‌ಗೆ ಪರಿಷ್ಕೃತ ಸ್ಟೆಂಟ್ ದರವೂ ಸೇರಿ ₹1 ಲಕ್ಷ ಆಗುತ್ತದೆ. ಬೇರೆ ಯೋಜನೆಯಡಿ ₹60,000 ಇದೆ. ಹೀಗೆ ಪ್ರತಿ ಕಾಯಿಲೆಯ ಚಿಕಿತ್ಸೆಗೆ ಇರುವ ದರದಲ್ಲಿ ಭಾರಿ ವ್ಯತ್ಯಾಸವಿದೆ. ಇದರಿಂದ ಯಶಸ್ವಿನಿ ಯೋಜನೆ, ಆಯುಷ್ಮಾನ್ ಭಾರತ ಆರೋಗ್ಯ ಕರ್ನಾಟಕ ಯೋಜನೆಯಡಿ ಸೇವೆ ನೀಡಲು ಆಸ್ಪತ್ರೆಗಳಿಗೆ ಕಷ್ಟವಾಗಿದೆ. ದರ ಪರಿಷ್ಕರಣೆಗೆ ತ್ವರಿತ ಕ್ರಮ ಕೈಗೊಳ್ಳಬೇಕು' ಎಂದು ಧನಂಜಯ ಸರ್ಜಿ ಒತ್ತಾಯಿಸಿದರು.

ಪ್ರಶ್ನೋತ್ತರ

3 ತಿಂಗಳಲ್ಲಿ ಪಿಎಸ್‌ಐ ಹುದ್ದೆ ಭರ್ತಿ

ವಿಧಾನಸಭೆ

ರಾಜ್ಯದಲ್ಲಿ 545 ಪಿಎಸ್‌ಐ ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಪೂರ್ಣಗೊಳಿಸಿ, ಈಗಾಗಲೆ ಅಭ್ಯರ್ಥಿಗಳ ತರಬೇತಿ ನಡೆಯುತ್ತಿದ್ದು, ಮೂರು ತಿಂಗಳ ಒಳಗಾಗಿ ಖಾಲಿ ಇರುವ ಸ್ಥಳಗಳಲ್ಲಿ ನೇಮಕ ಮಾಡಲಾಗುವುದು. 3,600 ಪೊಲೀಸ್ ಕಾನ್‌ಸ್ಟೆಬಲ್‌ಗಳ ನೇಮಕಾತಿಯ ಪ್ರಸ್ತಾವಕ್ಕೆ ಆರ್ಥಿಕ ಇಲಾಖೆ ಅನುಮತಿ ನೀಡಿದೆ.

ಗೃಹ ಸಚಿವ ಜಿ. ಪರಮೇಶ್ವರ (ಬಿಜೆಪಿಯ ಉಮಾನಾಥ ಕೋಟ್ಯಾನ್ ಪ್ರಶ್ನೆ)

ಮದ್ಯ: 721 ಕಡೆ ದಾಳಿ

ಹೆಚ್ಚಿನ ಆದಾಯ ಸಂಗ್ರಹಿಸಲು ಇಂತಿಷ್ಟೇ ಪ್ರಮಾಣದಲ್ಲಿ ಮದ್ಯ ಮಾರಾಟ ಮಾಡಬೇಕು ಎಂಬ ಯಾವುದೇ ಗುರಿ ನೀಡಿಲ್ಲ. ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ 721 ಅಬಕಾರಿ ದಾಳಿ ನಡೆಸಿ, 491 ಪ್ರಕರಣಗಳನ್ನು ದಾಖಲಿಸಿದ್ದು, 448 ಜನರನ್ನು ಬಂಧಿಸಲಾಗಿದೆ. 641 ಲೀಟರ್ ಅಕ್ರಮ ಮದ್ಯ ವಶಪಡಿಸಿಕೊಂಡಿದ್ದು, 16 ವಾಹನಗಳನ್ನು ಜಪ್ತಿ ಮಾಡಿ ₹ 12.69 ಲಕ್ಷ ದಂಡ ವಿಧಿಸಲಾಗಿದೆ. ಅಕ್ರಮ ಮದ್ಯ ಮಾರಾಟ ತಡೆಗಟ್ಟಲು ಇನ್ನಷ್ಟು ಕಠಿಣ ಕ್ರಮ ತೆಗೆದುಕೊಳ್ಳಲಾಗುವುದು

ಅಬಕಾರಿ ಸಚಿವ ಆರ್.ಬಿ. ತಿಮ್ಮಾಪುರ (ಪ್ರಶ್ನೆ–ಜೆಡಿಎಸ್‌ನ ಸಿ.ಬಿ. ಸುರೇಶ್‌ಬಾಬು)

23 ಕಂಬಳೋತ್ಸವ ತಲಾ ₹5 ಲಕ್ಷ

2024-25ನೇ ಸಾಲಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಮೂಲ್ಕಿ, ಮಂಗಳೂರು, ನರಿಂಗಾಣ, ಮೂಡಬಿದಿರೆ, ಐಕಳ, ಜಪ್ಪು, ಪುತ್ತೂರು, ಬಂಟ್ವಾಳ, ಉಪ್ಪಿನಂಗಡಿ ಮತ್ತು ವೇಣೂರಿನಲ್ಲಿ ಆಯೋಜಿಸಿದ್ದ ಕಂಬಳೋತ್ಸವಗಳಿಗೆ ತಲಾ ₹ 5 ಲಕ್ಷದಂತೆ ಒಟ್ಟು ₹ 50 ಲಕ್ಷ ಬಿಡುಗಡೆ ಮಾಡಲಾಗಿದೆ. 2025–26ನೇ ಸಾಲಿನಲ್ಲಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ನಡೆಯುವ 23 ಕಂಬಳೋತ್ಸವಗಳಿಗೆ ತಲಾ ₹ 5 ಲಕ್ಷ ಅನುದಾನ ಬಿಡುಗಡೆ ಮಾಡಲಾಗುವುದು

ಪ್ರವಾಸೋದ್ಯಮ ಸಚಿವ ಎಚ್.ಕೆ. ಪಾಟೀಲ (ಪ್ರಶ್ನೆ–ಕಾಂಗ್ರೆಸ್‌ನ ಅಶೋಕ ಕುಮಾರ್ ರೈ)

10 ಎಕರೆ ಮೇಲ್ಪಟ್ಟ ಬಡಾವಣೆ: ಎಸ್‌ಟಿಪಿ ಕಡ್ಡಾಯ

ಪರಿಷತ್

10 ಎಕರೆಗಳಿಗಿಂತ ಹೆಚ್ಚಿನ ವಿಸ್ತೀರ್ಣದ ಹೊಸ ಬಡಾವಣೆಗಳಲ್ಲಿ ಕೊಳಚೆ ನೀರು ಶುದ್ಧೀಕರಣ ಘಟಕ (ಎಸ್‌ಟಿಪಿ) ನಿರ್ಮಾಣ ಕಡ್ಡಾಯ. ರಾಜ್ಯದ ಎಲ್ಲಾ ನಗರಗಳಲ್ಲಿ ನದಿ ಮೂಲಗಳು ಕಲುಷಿತಗೊಳ್ಳದಂತೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ನಿಗದಿಪಡಿಸಿದ ಮಾನದಂಡಗಳನ್ನು ಪಾಲಿಸಬೇಕು. ನಗರಾಭಿವೃದ್ಧಿ ಪ್ರಾಧಿಕಾರಗಳು ನಿರ್ಮಿಸುವ ಬಡಾವಣೆಗಳಲ್ಲೂ ಈ ನಿಯಮವನ್ನು ಪಾಲಿಸಬೇಕು

ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ (ಪ್ರಶ್ನೆ:ಕಾಂಗ್ರೆಸ್‌ನ ಕೆ.ಶಿವಕುಮಾರ್)

ಹೂಡಿಕೆ: 6.92 ಲಕ್ಷ ಜನರಿಗೆ ಉದ್ಯೋಗ

ರಾಜ್ಯ ಸರ್ಕಾರದ ಉನ್ನತ ಮಟ್ಟದ ಒಪ್ಪಿಗೆ ಸಮಿತಿ 1,888 ಹೂಡಿಕೆ ಪ್ರಸ್ತಾವಗಳಿಗೆ ಅನುಮೋದನೆ ನೀಡಿದ್ದು, ₹5.03 ಲಕ್ಷ ಕೋಟಿ ಹೂಡಿಕೆ ಮಾಡಲಾಗುತ್ತಿದೆ. 67 ಯೋಜನೆಗಳಿಂದ ₹66,435 ಕೋಟಿ ಈಗಾಗಲೇ ಹೂಡಿಕೆಯಾಗಿದೆ. ಅನುಮೋದನೆ ನೀಡಿದ ಮೊತ್ತ ಸಂಪೂರ್ಣ ಹೂಡಿಕೆಯಾದರೆ 6.92 ಲಕ್ಷ ಜನರಿಗೆ ಉದ್ಯೋಗ ಸಿಗಲಿದೆ

ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ (ಪ್ರಶ್ನೆ:ಬಿಜೆಪಿಯ ಕೇಶವ ಪ್ರಸಾದ್)

'ಸದಸ್ಯರ ಗೌರವಧನ ಹೆಚ್ಚಳ ಶೀಘ್ರ'

ಪಟ್ಟಣ ಪಂಚಾಯಿತಿ, ಪುರಸಭೆ ಸೇರಿದಂತೆ ನಗರ ಸ್ಥಳೀಯ ಸಂಸ್ಥೆಗಳ ಸದಸ್ಯರ ಗೌರವಧನವನ್ನು ಶೀಘ್ರ ಹೆಚ್ಚಳ ಮಾಡಲಾಗುವುದು. ಇದೇ ವರ್ಷದ ಅಕ್ಟೋಬರ್‌ನಲ್ಲೇ ಹೆಚ್ಚಳದ ಪ್ರಸ್ತಾವ ರಾಜ್ಯ ಸರ್ಕಾರಕ್ಕೆ ಸಲ್ಲಿಕೆಯಾಗಿದೆ. ಹೆಚ್ಚಳದ ಮೊತ್ತವನ್ನು ಆಯಾ ಸ್ಥಳೀಯ ಸಂಸ್ಥೆಗಳ ಸಂಪನ್ಮೂಲಗಳಿಂದ ಭರಿಸುವ ಕಾರಣ ಸರ್ಕಾರಕ್ಕೆ ಹೆಚ್ಚುವರಿ ಆರ್ಥಿಕ ಹೊರೆಯಾಗುವುದಿಲ್ಲ. ಎಷ್ಟು ಮೊತ್ತ ಹೆಚ್ಚಳ ಎನ್ನುವ ಕುರಿತು ನಿರ್ಧಾರ ಮಾಡಲಾಗುವುದು

ಪೌರಾಡಳಿತ ಸಚಿವ ರಹೀಂ ಖಾನ್ (ಪ್ರಶ್ನೆ:ಕಾಂಗ್ರೆಸ್‌ನ ಸುನಿಲ್‌ಗೌಡ)

ರೋಗ: 4 ಲಕ್ಷ ಹೆಕ್ಟೇರ್ ತೆಂಗಿಗೆ ಹಾನಿ

ಕಪ್ಪು ತಲೆ ಹುಳು ಬಾಧೆಯಿಂದ 62,044 ಹೆಕ್ಟೇರ್ ಮತ್ತು ಬಿಳಿ ನೊಣಗಳ ರೋಗಬಾಧೆಯಿಂದ 3.24 ಲಕ್ಷ ಹೆಕ್ಟೇರ್ ತೆಂಗು ಬೆಳೆಗೆ ಹಾನಿಯಾಗಿದೆ. ಒಟ್ಟು 4 ಲಕ್ಷ ಹೆಕ್ಟೇರ್‌ನಲ್ಲಿ ಸಮಸ್ಯೆಯು ಕಾಣಿಸಿಕೊಂಡಿದೆ. ರೋಗ ಕುರಿತು ವೈಜ್ಞಾನಿಕ ಸಮೀಕ್ಷೆ ಕೈಗೊಳ್ಳಲಾಗಿತ್ತು. ಜನವರಿಯಿಂದ ಕಪ್ಪುತಲೆ ಹುಳುವಿನ ಸಮೀಕ್ಷೆಯನ್ನು ಪುನಾರಂಭಿಸಿ ಶೀಘ್ರ ಪೂರ್ಣಗೊಳಿಸಲಾಗುವುದು. ಪರಿಹಾರ ವಿತರಿಸಲಾಗುವುದು.

ತೋಟಗಾರಿಕಾ ಸಚಿವ **ಎಸ್.ಎಸ್.ಮಲ್ಲಿಕಾರ್ಜುನ್** (ಕಾಂಗ್ರೆಸ್‌ನ ಮಧು ಮಾದೇಗೌಡ)

‘ಮತ ಕಳವು ದೇಶದ್ರೋಹಿ ಕೃತ್ಯ’

ಲೋಕಸಭೆಯಲ್ಲಿ ಚುನಾವಣಾ ವ್ಯವಸ್ಥೆ ಸುಧಾರಣೆ ಕುರಿತ ವಿಶೇಷ ಚರ್ಚೆ

ಪ್ರಜಾವಾಣಿ ವಾರ್ತೆ


ರಾಹುಲ್ ಗಾಂಧಿ

ನವದೆಹಲಿ: ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎಸ್‌ಎಸ್) ಹಾಗೂ ಬಿಜೆಪಿ ವಿರುದ್ಧ ಲೋಕಸಭೆಯಲ್ಲಿ ಮಂಗಳವಾರ ತೀವ್ರ ವಾಗ್ದಾಳಿ ನಡೆಸಿದ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ‘ಚುನಾವಣಾ ಆಯೋಗದೊಂದಿಗೆ ಶಾಮೀಲಾಗಿ ಮತ ಕಳವು ಮಾಡುವ ಮೂಲಕ ಬಿಜೆಪಿ ಅತಿದೊಡ್ಡ ರಾಷ್ಟ್ರವಿರೋಧಿ ಕೃತ್ಯದಲ್ಲಿ ತೊಡಗಿದೆ’ ಎಂದು ಆರೋಪಿಸಿದರು.

ಚುನಾವಣಾ ವ್ಯವಸ್ಥೆ ಸುಧಾರಣೆ ಕುರಿತ ವಿಶೇಷ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ರಾಹುಲ್, ‘ಭಾರತದ ಪ್ರಜಾಪ್ರಭುತ್ವಕ್ಕೆ ಹಾನಿ ಮಾಡಲು ಚುನಾವಣಾ ಆಯೋಗವನ್ನು ಬಳಸುತ್ತಿದೆ’ ಎಂದರು. ಆರ್‌ಎಸ್‌ಎಸ್ ವಿರುದ್ಧ ರಾಹುಲ್ ಟೀಕಾಪ್ರಹಾರ ನಡೆಸಿದ್ದಕ್ಕೆ ಬಿಜೆಪಿ ಸದಸ್ಯರು ತೀವ್ರ ಆಕ್ಷೇಪ ವ್ಯಕ್ತಪಡಿಸಿ ಗದ್ದಲ ಎಬ್ಬಿಸಿದರು.

ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಅವರು ರಾಹುಲ್ ಭಾಷಣಕ್ಕೆ ಅಡ್ಡಿಪಡಿಸಿ, ‘ಕಾಂಗ್ರೆಸ್ ಸಂಸದ ಎಲ್ಲರ ಸಮಯ ವ್ಯರ್ಥ ಮಾಡುತ್ತಿದ್ದಾರೆ ಮತ್ತು ಸಂಬಂಧವಿಲ್ಲದ ವಿಷಯಗಳನ್ನೆಲ್ಲ ಇಲ್ಲಿ ಪ್ರಸ್ತಾಪಿಸುತ್ತಿದ್ದಾರೆ’ ಎಂದರು. ಚುನಾವಣಾ ವ್ಯವಸ್ಥೆ ಸುಧಾರಣೆಗೆ ಸಂಬಂಧಿಸಿದ ವಿಷಯಗಳನ್ನಷ್ಟೇ ಇಲ್ಲಿ ಪ್ರಸ್ತಾಪಿಸುತ್ತಿದ್ದೇನೆ ಎಂದು ಕಾಂಗ್ರೆಸ್ ನಾಯಕ ಸ್ಪಷ್ಟಪಡಿಸಿದರು.

‘ನೀವು ಮಾಡಬಹುದಾದ ಅತ್ಯಂತ ದೊಡ್ಡ ರಾಷ್ಟ್ರವಿರೋಧಿ ಕೃತ್ಯವೆಂದರೆ ಮತ ಕಳವು. ಇದಕ್ಕಿಂತ ದೊಡ್ಡ ರಾಷ್ಟ್ರವಿರೋಧಿ ಕೃತ್ಯ ಇನ್ನೊಂದಿಲ್ಲ. ಏಕೆಂದರೆ, ನೀವು ಮತವನ್ನು ನಾಶಮಾಡಿದಾಗ, ನೀವು ಈ ದೇಶದ ರಚನೆಯನ್ನು ನಾಶಪಡಿಸುತ್ತೀರಿ. ನೀವು ಆಧುನಿಕ ಭಾರತವನ್ನು ನಾಶಮಾಡುತ್ತೀರಿ, ನೀವು ಭಾರತದ ಕಲ್ಪನೆಯನ್ನು ನಾಶಮಾಡುತ್ತೀರಿ’ ಎಂದು ಅವರು ಹೇಳಿದರು.

ಮುಖ್ಯ ಚುನಾವಣಾ ಆಯುಕ್ತರು ಮತ್ತು ಚುನಾವಣಾ ಆಯುಕ್ತರ ನೇಮಕಾತಿಯ ಆಯ್ಕೆ ಸಮಿತಿಯಿಂದ ಭಾರತದ ಮುಖ್ಯ ನ್ಯಾಯಮೂರ್ತಿ ಅವರನ್ನು ತೆಗೆದು ಹಾಕಿದ್ದು ಏಕೆ ಎಂದು ಪ್ರಶ್ನಿಸಿದ ಅವರು, ‘ಚುನಾವಣಾ ಆಯುಕ್ತರನ್ನು ಆಯ್ಕೆ ಮಾಡಲು ಪ್ರಧಾನಿ ಮತ್ತು ಅಮಿತ್ ಶಾ ಏಕೆ ಉತ್ಸುಕರಾಗಿದ್ದಾರೆ? ಎಂದು ಕೇಳಿದರು. ‘ಭಾರತವು 1.4 ಶತಕೋಟಿ ಜನರಿಂದ ಮಾಡಲ್ಪಟ್ಟ ಬಟ್ಟೆಯಾಗಿದೆ. ಅವರು ಮತದಿಂದ ಒಟ್ಟಿಗೆ ನೇಯಲ್ಪಟ್ಟಿದ್ದಾರೆ’ ಎಂದು ಒತ್ತಿ ಹೇಳಿದ ಅವರು, ದೇಶದ ಪ್ರತಿಯೊಬ್ಬ ವ್ಯಕ್ತಿಯೂ ಸಮಾನರು ಎಂಬ ಕಲ್ಪನೆಯು ನನ್ನ ಆರ್‌ಎಸ್‌ಎಸ್ ಸ್ನೇಹಿತರಿಗೆ ಸಹಿಸಲು ಆಗುತ್ತಿಲ್ಲ. ಅವರು ಶ್ರೇಣಿ ವ್ಯವಸ್ಥೆಯಲ್ಲಿ ನಂಬಿಕೆ ಇಟ್ಟಿರುವುದರಿಂದ ಪ್ರತಿಯೊಬ್ಬ ವ್ಯಕ್ತಿಯೂ ಸಮಾನರು ಎಂಬ ಕಲ್ಪನೆಯನ್ನು ಸಹಿಸಿಕೊಳ್ಳಲು ಆಗುತ್ತಿಲ್ಲ ಎಂದರು.

ಮಹಾತ್ಮ ಗಾಂಧೀಜಿ ಅವರ ಹತ್ಯೆಯೊಂದಿಗೆ ಆರ್‌ಎಸ್‌ಎಸ್‌ನವರ ಯೋಜನೆ ಕೊನೆಗೊಂಡಿಲ್ಲ. ಯೋಜನೆಯ ಮುಂದಿನ ಹಂತವು ಭಾರತದ ಸಾಂಸ್ಥಿಕ ಚೌಕಟ್ಟನ್ನು ಸಂಪೂರ್ಣವಾಗಿ ವಶಪಡಿಸಿಕೊಳ್ಳುವುದಾಗಿತ್ತು. ವಿಶ್ವವಿದ್ಯಾಲಯಗಳು, ಸಿಬಿಐ, ಜಾರಿ ನಿರ್ದೇಶನಾಲಯ ಮತ್ತು ಆದಾಯ ತೆರಿಗೆ ಇಲಾಖೆಯಂತಹ ಸಂಸ್ಥೆಗಳನ್ನು ವಶಪಡಿಸಿಕೊಳ್ಳಲು ಅವರು ಮತಗಳನ್ನು ಕದಿಯುತ್ತಿದ್ದಾರೆ ಎಂದು ಅವರು ಟೀಕಿಸಿದರು.

ಚುನಾವಣಾ ಆಯುಕ್ತರು ಅಧಿಕಾರದಲ್ಲಿದ್ದಾಗ ತೆಗೆದುಕೊಳ್ಳುವ ಯಾವುದೇ ಕ್ರಮಕ್ಕೆ ಶಿಕ್ಷೆ ಇಲ್ಲ ಎಂಬ ಕಾನೂನಿನ ಬದಲಾವಣೆಯನ್ನು ಉಲ್ಲೇಖಿಸಿದ ರಾಹುಲ್, ‘ಭಾರತದ ಇತಿಹಾಸದಲ್ಲಿ ಯಾವುದೇ ಪ್ರಧಾನಿ ಹೀಗೆ ಮಾಡಿಲ್ಲ. ಪ್ರಧಾನಿ ಮತ್ತು ಗೃಹ ಸಚಿವರು ಚುನಾವಣಾ ಆಯುಕ್ತರಿಗೆ ಈ ವಿನಾಯಿತಿಯ ಉಡುಗೊರೆಯನ್ನು ಏಕೆ ನೀಡುತ್ತಿದ್ದಾರೆ’ ಎಂದು ಪ್ರಶ್ನಿಸಿದರು.

‘ಯಾವುದೇ ಚುನಾವಣೆಯ ವೇಳಾಪಟ್ಟಿಯನ್ನು ಪ್ರಧಾನಮಂತ್ರಿಯವರ ಪ್ರಚಾರ ವೇಳಾಪಟ್ಟಿಗೆ ಅನುಗುಣವಾಗಿ ರೂಪಿಸಲಾಗುತ್ತಿದೆ’ ಎಂದು ರಾಹುಲ್ ಆರೋಪಿಸಿದರು.

ಚುನಾವಣಾ ಸುಧಾರಣೆಗೆ ರಾಹುಲ್ ಸಲಹೆ

- ಚುನಾವಣಾ ಆಯುಕ್ತರ ನೇಮಕಾತಿ ಪ್ರಕ್ರಿಯೆ ಸರಿಪಡಿಸಲು ಕಾನೂನುಗಳಲ್ಲಿ ಬದಲಾವಣೆಗಳನ್ನು ತರಬೇಕು.
- ಪ್ರತಿ ಚುನಾವಣೆಗೆ ಒಂದು ತಿಂಗಳ ಮೊದಲು ಯಂತ್ರದಿಂದ ಓದಬಹುದಾದ ಮತದಾರರ ಪಟ್ಟಿಯನ್ನು ಪಕ್ಷಗಳಿಗೆ ಒದಗಿಸಬೇಕು.
- 45 ದಿನಗಳ ನಂತರ ಸಿಸಿಟಿವಿ ಕ್ಯಾಮೆರಾ ದೃಶ್ಯಾವಳಿಗಳನ್ನು ನಾಶಮಾಡಲು ಅನುಮತಿಸುವ ಕಾನೂನನ್ನು ರದ್ದುಗೊಳಿಸಬೇಕು.

1.2 ಲಕ್ಷ ನಕಲಿ ಮತದಾರರು

ಹಲವು ರಾಜ್ಯಗಳಲ್ಲಿ ಮತದಾರರ ಪಟ್ಟಿಗಳಲ್ಲಿ ಅಕ್ರಮಗಳು ನಡೆದಿವೆ ಎಂದು ರಾಹುಲ್ ಗಾಂಧಿ ಆರೋಪಿಸಿದರು. ಬಿಹಾರ ಚುನಾವಣೆಯನ್ನು ಉಲ್ಲೇಖಿಸಿದ ಅವರು, ‘ಅಲ್ಲಿನ ಎಸ್‌ಐಆರ್ ಬಗ್ಗೆ ನಾನು ಸ್ವಲ್ಪ ಹೇಳುತ್ತೇನೆ. ರಾಜ್ಯದಲ್ಲಿ ಎಸ್‌ಐಆರ್ ನಡೆಸಿದ ಬಳಿಕವೂ ಮತದಾರರ ಪಟ್ಟಿಯಲ್ಲಿ 1.2 ಲಕ್ಷ ನಕಲಿ ಫೋಟೋಗಳು ಏಕೆ ಇವೆ? ಮತದಾರರ ಪಟ್ಟಿ ಸ್ವಚ್ಛಗೊಳಿಸಿದ್ದರೆ ಇಷ್ಟೊಂದು ನಕಲಿ ಫೋಟೋಗಳು ಏಕೆ ಉಳಿದಿವೆ’ ಎಂದು ಪ್ರಶ್ನಿಸಿದರು.

ಹರಿಯಾಣ ಮತದಾರರ ಪಟ್ಟಿಯಲ್ಲಿ 20 ಬಾರಿ ಬ್ರೆಜಿಲ್ ರೂಪದರ್ಶಿ ಕಾಣಿಸಿಕೊಂಡಿರುವುದು, 200ಕ್ಕೂ ಹೆಚ್ಚು ಬಾರಿ ಕಾಣಿಸಿಕೊಂಡಿರುವ ಒಬ್ಬ ಮಹಿಳೆಯ ವಿವರಗಳು ಮತ್ತು ಉತ್ತರ ಪ್ರದೇಶದ ಬಿಜೆಪಿ ನಾಯಕರು ಹರಿಯಾಣದಲ್ಲಿ ಮತ ಚಲಾಯಿಸಿರುವುದನ್ನು ಉಲ್ಲೇಖಿಸಿದ ಅವರು, ಇಂತಹ ಗಂಭೀರ ಲೋಪಗಳು ಒಂದು ರಾಜ್ಯಕ್ಕೆ ಸೀಮಿತವಾಗಿಲ್ಲ. ಹರಿಯಾಣದ ಮತ ಕಳವಿನ ಬಗ್ಗೆ ದಾಖಲೆಗಳನ್ನು ನೀಡಿದ್ದೇವೆ. ಚುನಾವಣಾ ಆಯೋಗವು ನಮ್ಮ ಯಾವುದೇ ಪ್ರಶ್ನೆಗಳಿಗೆ ಉತ್ತರಿಸಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

‘ಕರ್ನಾಟಕ ಹಾಗೂ ಮಹಾರಾಷ್ಟ್ರ ಚುನಾವಣೆಗಳಲ್ಲಿ ಮತ ಕಳವು ಆಗಿರುವುದನ್ನು ಸಾಬೀತುಪಡಿಸಿದ್ದೇವೆ. ಮಧ್ಯಪ್ರದೇಶ, ಉತ್ತರ ಪ್ರದೇಶ, ಬಿಹಾರ, ದೇಶದಾದ್ಯಂತ ಚುನಾವಣೆಗಳನ್ನು ನೀವು ಹೇಗೆ ಗೆಲ್ಲುತ್ತೀರಿ ಎಂಬುದು ನಮಗೆ ಸ್ಪಷ್ಟವಾಗಿದೆ’ ಎಂದು ಅವರು ಹೇಳಿದರು.

ಆಯೋಗಕ್ಕೆ ಎಸ್‌ಐಆರ್ ನಡೆಸುವ ಅಧಿಕಾರ ಇಲ್ಲ: ಮನೀಶ್ ತಿವಾರಿ

ಪ್ರಜಾವಾಣಿ ವಾರ್ತೆ


ಮನೀಶ್ ತಿವಾರಿ

ನವದೆಹಲಿ: ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ನಡೆಸುವ ಅಧಿಕಾರವು ಚುನಾವಣಾ ಆಯೋಗಕ್ಕೆ ಇಲ್ಲ. ಅದನ್ನು ಕೂಡಲೇ ನಿಲ್ಲಿಸಬೇಕು ಎಂದು ಕಾಂಗ್ರೆಸ್ ಹಿರಿಯ ಸಂಸದ ಮನೀಶ್ ತಿವಾರಿ ಆಗ್ರಹಿಸಿದರು.

ಲೋಕಸಭೆಯಲ್ಲಿ ಚುನಾವಣಾ ಸುಧಾರಣೆ ಕುರಿತ ಚರ್ಚೆ ಆರಂಭಿಸಿದ ಅವರು, ‘ಚುನಾವಣೆಗೆ ಮುನ್ನ ಜನರಿಗೆ ನೇರ ನಗದು ವರ್ಗಾವಣೆಗೆ ಅವಕಾಶ ನೀಡಲೇಬಾರದು. ಬಿಹಾರ ವಿಧಾನಸಭಾ ಚುನಾವಣೆಗೆ ಮುನ್ನ ನೇರ ನಗದು ವರ್ಗಾವಣೆಗೆ ಆಯೋಗ ಅವಕಾಶ ನೀಡಿದ್ದು ಹೇಗೆ’ ಎಂದು ಪ್ರಶ್ನಿಸಿದರು.

‘ಯಾವುದೇ ಪಕ್ಷವು ರಾಷ್ಟ್ರೀಯ ಖಜಾನೆ ಅಥವಾ ರಾಜ್ಯ ಖಜಾನೆಯ ಹಣ ಬಳಸಿ ಚುನಾವಣೆಗಳನ್ನು ಗೆಲ್ಲುವುದು ಎಷ್ಟರ ಮಟ್ಟಿಗೆ ಸರಿ. ಇದು ನಮ್ಮ ಪ್ರಜಾಪ್ರಭುತ್ವ ಹಾಗೂ ನಮ್ಮ ದೇಶವನ್ನು ದಿವಾಳಿಯಾಗಿಸುತ್ತದೆ’ ಎಂದು ಅವರು ಅಭಿಪ್ರಾಯಪಟ್ಟರು.

1947ರಲ್ಲೇ ಮತ ಕಳವು: 1947ರಲ್ಲೇ ಮತ ಕಳವು ನಡೆದಿತ್ತು ಎಂಬುದನ್ನು ಕಾಂಗ್ರೆಸ್ ಅರ್ಥ ಮಾಡಿಕೊಳ್ಳಬೇಕು ಎಂದು ಬಿಜೆಪಿ ಸಂಸದ ಡಾ. ಸಂಜಯ್ ಜೈಸ್ವಾಲ್ ಹೇಳಿದರು.

‘ಚುನಾವಣೆಗಳಲ್ಲಿ ಸೋತ ಕೂಡಲೇ ವಿಪಕ್ಷದವರು ಎಸ್‌ಐಆರ್ ಹಾಗೂ ಇವಿಎಂ ಬಗ್ಗೆ ಟೀಕೆ ಮಾಡುತ್ತಾರೆ. ವಾಸ್ತವವೆಂದರೆ, ಚುನಾವಣಾ ಸಮಯದಲ್ಲಿ ಬಿಜೆಪಿಯವರು ತಳಮಟ್ಟದಲ್ಲಿ ಕೆಲಸ ಮಾಡುತ್ತಾರೆ. ಕಾಂಗ್ರೆಸ್ ನಾಯಕರು ಪ್ರವಾಸೋದ್ಯಮದಲ್ಲಿ ನಂಬಿಕೆ ಇಟ್ಟು ಚುನಾವಣಾ ಸಮಯದಲ್ಲಿ ವಿದೇಶದಲ್ಲಿ ಸಮಯ ಕಳೆಯುತ್ತಾರೆ. ವಿರೋಧ ಪಕ್ಷಗಳು ತಮ್ಮ ಕಾರ್ಯತಂತ್ರಗಳ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳಬೇಕು’ ಎಂದು ಅವರು ಕಿವಿಮಾತು ಹೇಳಿದರು.

ಮತ ದರೋಡೆ–ಅಖಿಲೇಶ್: ದೇಶದಲ್ಲಿ ಮತ ದರೋಡೆ ನಡೆಯುತ್ತಿದೆ. ನಿಷ್ಪಕ್ಷಪಾತವಾಗಿ ಚುನಾವಣೆ ನಡೆದರೆ ಬಿಜೆಪಿ ಒಂದೇ ಒಂದು ಸ್ಥಾನ ಗೆಲ್ಲಲು ಸಾಧ್ಯವಿಲ್ಲ ಎಂದು ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಅಭಿಪ್ರಾಯಪಟ್ಟರು.

‘ರಾಂಪುರ ಲೋಕಸಭಾ ಕ್ಷೇತ್ರದ ಉಪಚುನಾವಣೆಯ ಸಂದರ್ಭದಲ್ಲಿ ವ್ಯಾಪಕ ಅಕ್ರಮಗಳು ನಡೆದಿವೆ. ಮತದಾನದ ದಿನ ಜನರು ಮನೆಯಿಂದ ಹೊರಗೆ ಬರದಂತೆ ಪೊಲೀಸರು ಹಾಗೂ ಆಡಳಿತ ವ್ಯವಸ್ಥೆಯು ತಡೆಯಿತು. ಆ ಕ್ಷೇತ್ರದಲ್ಲಿ ಮೊದಲ ಬಾರಿಗೆ ಬಿಜೆಪಿ ಗೆದ್ದಿತು. ನಾವು ಅಂತಹ ಹಲವು ಅಕ್ರಮಗಳ ಬಗ್ಗೆ ದಾಖಲೆಗಳನ್ನು ಸಂಗ್ರಹಿಸಿ ಚುನಾವಣಾ ಆಯೋಗಕ್ಕೆ ಒದಗಿಸಿದ್ದೇವೆ. ಆದರೆ, ಆಯೋಗವು ಯಾವುದೇ ಕ್ರಮ ಕೈಗೊಂಡಿಲ್ಲ. ಆಯೋಗವು ನಿಷ್ಪಕ್ಷಪಾತವಾಗಿದ್ದರೆ ಮಾತ್ರ ಸುಧಾರಣೆ ಸಾಧ್ಯ’ ಎಂದು ಹೇಳಿದರು.

ಎಸ್‌ಐಆರ್ ಸಂದರ್ಭದಲ್ಲಿ ಕೆಲಸದ ಒತ್ತಡದಿಂದ ಅನೇಕ ಮಂದಿ ಬಿಎಲ್‌ಒಗಳು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಟಿಎಂಸಿ ಸಂಸದ ಕಲ್ಯಾಣ್ ಬ್ಯಾನರ್ಜಿ ಆರೋಪಿಸಿದರು. ‘ಪಶ್ಚಿಮ ಬಂಗಾಳದಲ್ಲಿ 20 ಜನರು ಆತ್ಮಹತ್ಯೆ ಮಾಡಿಕೊಂಡರು ಇದಕ್ಕೆ ಚುನಾವಣಾ ಆಯೋಗವೇ ಹೊಣೆ’ ಎಂದರು.

ಇಂದಿರಾ ಗೆದ್ದಿದ್ದೇ ಮತ ಕಳವಿನಿಂದ: ದುಬೆ

ಮಾಜಿ ಪ್ರಧಾನಿ ಇಂದಿರಾ ಗಾಂಧಿ ಅವರು ರಾಯ್‌ಬರೇಲಿ ಕ್ಷೇತ್ರದಲ್ಲಿ ಗೆದ್ದಿರುವುದೇ ಮತ ಕಳವಿನಿಂದ ಎಂದು ಬಿಜೆಪಿ ಸಂಸದ ನಿಶಿಕಾಂತ್ ದುಬೆ ಆರೋಪಿಸಿದರು. ‘ಕಾಂಗ್ರೆಸ್ ಪಕ್ಷವು ಭಾರತದ ಸಂವಿಧಾನವನ್ನು ಕಳಂಕಿತಗೊಳಿಸಿದೆ. ಇವಿಎಂ ವ್ಯವಸ್ಥೆ ಜಾರಿಗೆ ಬಂದಿದ್ದೇ ಕಾಂಗ್ರೆಸ್ ಕಾಲದಲ್ಲೇ. ಚುನಾವಣೆಗಳಲ್ಲಿ ಸತತ ಸೋಲಿನ ಹತಾಶೆಯಿಂದ ಆಯೋಗದ ವಿರುದ್ಧ ಕಾಂಗ್ರೆಸ್ ಆರೋಪ ಮಾಡುತ್ತಿದೆ’ ಎಂದರು. ಆರ್‌ಎಸ್‌ಎಸ್‌ನಿಂದ ಬಂದಿರುವುದಕ್ಕೆ ನಾವೆಲ್ಲ ಹೆಮ್ಮೆ ಪಡುತ್ತೇವೆ ಎಂದರು.

ಪರಿಸ್ಥಿತಿ ನಿಭಾಯಿಸದಿದ್ದರೆ ಅರಾಜಕತೆ: ಸುಪ್ರೀಂ

‘ವಾಸ್ತವಿಕ ನೆಲೆಗಟ್ಟಿನಲ್ಲಿ ಯಾವುದೇ ತೊಂದರೆಗಳಿಲ್ಲದೆ ಎಸ್‌ಐಆರ್ ನಡೆಸಲಾಗುತ್ತಿದೆಯಾ’ ಎಂಬುದನ್ನು ಖಚಿತಪಡಿಸಿಕೊಳ್ಳಲು ಪೀಠವು ಬಯಸಿದೆ’

ಬಿಎಲ್‌ಒಗಳಿಗೆ ಬೆದರಿಕೆ: ಕಳವಳ

ನವದೆಹಲಿ (ಪಿಟಿಐ): ಪಶ್ಚಿಮ ಬಂಗಾಳ ಮತ್ತು ಇತರ ರಾಜ್ಯಗಳಲ್ಲಿ ಬೂತ್ ಮಟ್ಟದ ಅಧಿಕಾರಿಗಳಿಗೆ (ಬಿಎಲ್‌ಒ) ಬೆದರಿಕೆ ಹಾಕುತ್ತಿರುವ ಪ್ರಕರಣಗಳ ಬಗ್ಗೆ ಸುಪ್ರೀಂ ಕೋರ್ಟ್ ಮಂಗಳವಾರ ಕಳವಳ ವ್ಯಕ್ತಪಡಿಸಿದೆ.

ಎಸ್‌ಐಆರ್–2 ರಾಜ್ಯ ಸರ್ಕಾರಗಳ ಸಹಕಾರದ ಕೊರತೆ ಬಗ್ಗೆಯೂ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಸೂರ್ಯಕಾಂತ್ ಮತ್ತು ಜಾಯ್‌ಮಾಲ್ಯ ಬಾಗ್ಚಿ ಅವರನ್ನೊಳಗೊಂಡ ಪೀಠವು ಕಳವಳ ವ್ಯಕ್ತಪಡಿಸಿತು. ‘ಸಹಕಾರದ ಕೊರತೆ, ಬಿಎಲ್‌ಒಗಳ ಕೆಲಸಕ್ಕೆ ಅಡ್ಡಿಯಾದಂತಹ ನಿದರ್ಶನಗಳನ್ನು ನ್ಯಾಯಪೀಠದ ಗಮನಕ್ಕೆ ತನ್ನಿ. ನಾವು ಸೂಕ್ತ ಆದೇಶ ನೀಡುತ್ತೇವೆ’ ಎಂದು ಆಯೋಗದ ಪರವಾಗಿ ಹಾಜರಾದ ಹಿರಿಯ ವಕೀಲ ರಾಕೇಶ್ ದ್ವಿವೇದಿ ಅವರಿಗೆ ತಿಳಿಸಿತು.

‘ರಾಜ್ಯ ಸರ್ಕಾರಗಳು ನಮ್ಮೊಂದಿಗೆ ಸಹಕರಿಸುವ ಜೊತೆಗೆ ರಕ್ಷಣೆ ನೀಡಬೇಕು. ಇದನ್ನು ನಿರಾಕರಿಸಿದರೆ, ಸ್ಥಳೀಯ ಪೊಲೀಸರನ್ನು ಆಯೋಗದ ವ್ಯಾಪ್ತಿಗೆ ತೆಗೆದುಕೊಳ್ಳುವುದನ್ನು ಬಿಟ್ಟು ನಮಗೆ ಬೇರೆ ಆಯ್ಕೆ ಇಲ್ಲ. ಪರಿಸ್ಥಿತಿ ಇನ್ನೂ ಸುಧಾರಿಸದಿದ್ದರೆ ಕೇಂದ್ರದ ಪಡೆಗಳನ್ನು ಕರೆಸಿಕೊಳ್ಳಬೇಕಾಗುತ್ತದೆ’ ಎಂದು ದ್ವಿವೇದಿ ಪೀಠದ ಗಮನಕ್ಕೆ ತಂದರು. ಚುನಾವಣಾ ಪ್ರಕ್ರಿಯೆ ಆರಂಭವಾಗುವವರೆಗೂ ಆಯೋಗವು ಪೊಲೀಸರನ್ನು ತನ್ನ ವ್ಯಾಪ್ತಿಗೆ ತೆಗೆದುಕೊಳ್ಳಲು ಸಾಧ್ಯವಿಲ್ಲ ಎಂದು ನ್ಯಾಯಮೂರ್ತಿ ಬಾಗ್ಚಿ ಹೇಳಿದರು.

ಸುಪ್ರೀಂ ಪ್ರಶ್ನೆ: ವ್ಯಕ್ತಿಯ ಪೌರತ್ವ ವಿಚಾರದಲ್ಲಿ ಸಂಶಯ ವ್ಯಕ್ತವಾದಾಗ ಆಯೋಗದಿಂದ ವಿಚಾರಣೆ ನಡೆಸಲು ಆಗುವುದಿಲ್ಲವೇ ಮತ್ತು ಈ ಕುರಿತು ತನಿಖೆ ನಡೆಸುವ ಸಾಂವಿಧಾನಿಕ ಅಧಿಕಾರ ಆಯೋಗಕ್ಕೆ ಇಲ್ಲವೇ ಎಂದು ಅದು ಪ್ರಶ್ನಿಸಿದೆ.


ಬಂಕಿಮ್‌ಚಂದ್ರ ಚಟರ್ಜಿ ಮತ್ತು ರವೀಂದ್ರನಾಥ ಟ್ಯಾಗೋರ್ ಅವರ ಫೋಟೊಗಳನ್ನು ಹಿಡಿದು ಸಂಸತ್ತಿನ ಎದುರು ಟಿಎಂಸಿ ಸಂಸದರು ಮಂಗಳವಾರ ಮೌನ ಪ್ರತಿಭಟನೆ ನಡೆಸಿದರು –ಪಿಟಿಐ ಚಿತ್ರ

ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ– ಆರೋಪ

‘ಬ್ರಿಟಿಷರಿಗೆ ಬಿಜೆಪಿ ನಾಯಕರಿಂದ ಸಹಾಯ’

ಪ್ರಜಾವಾಣಿ ವಾರ್ತೆ


ಮಲ್ಲಿಕಾರ್ಜುನ ಖರ್ಗೆ

ನವದೆಹಲಿ: ‘ವಂದೇ ಮಾತರಂ'ನ ಮೊದಲ ಎರಡು ಚರಣಗಳನ್ನು ಮಾತ್ರ ರಾಷ್ಟ್ರ ಗೀತೆಯಾಗಿ ಬಳಸುವ ನಿರ್ಧಾರವನ್ನು ಮಹಾತ್ಮಗಾಂಧಿ ಮತ್ತು ರವೀಂದ್ರನಾಥ ಟ್ಯಾಗೋರ್ ಅವರಂತಹ ನಾಯಕರು ಸಾಮೂಹಿಕವಾಗಿ ತೆಗೆದುಕೊಂಡಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಬಿಜೆಪಿ ನಾಯಕರು ಜವಾಹರಲಾಲ್ ನೆಹರೂ ಅವರನ್ನು ಅವಮಾನಿಸಿದ್ದಾರೆ’ ಎಂದು ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಆರೋಪಿಸಿದರು.

ವಂದೇ ಮಾತರಂ ಗೀತೆಗೆ 150 ವರ್ಷ ತುಂಬಿದ ನಿಮಿತ್ತ ರಾಜ್ಯಸಭೆಯಲ್ಲಿ ಮಂಗಳವಾರ ನಡೆದ ವಿಶೇಷ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಬಿಜೆಪಿ ವಿರುದ್ಧ ಟೀಕಾಪ್ರಹಾರ ನಡೆಸಿದರು. ‘ಕಾಂಗ್ರೆಸ್ ನಾಯಕರು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿಯಾಗಿದ್ದರೆ, ಬ್ರಿಟಿಷರಿಗಾಗಿ ಕೆಲಸ ಮಾಡಿದವರು ನೀವು’ ಎಂದು ಜರಿದರು.

ವಂದೇ ಮಾತರಂ ಘೋಷಣೆ ಕೂಗುತ್ತಾ ಭಾಷಣ ಆರಂಭಿಸಿದ ಅವರು, ‘ನಾವು ಯಾವಾಗಲೂ ವಂದೇ ಮಾತರಂ ಹಾಡುತ್ತಲೇ ಇದ್ದೇವೆ. ಆದರೆ, ಈ ಗೀತೆ ಹಾಡದವರು ಈಗ ಅದನ್ನು ಹಾಡಲು ಪ್ರಾರಂಭಿಸಿದ್ದಾರೆ. ಅದು ವಂದೇ ಮಾತರಂನ ಶಕ್ತಿ. ಇದು ರಾಷ್ಟ್ರೀಯ ಹಬ್ಬವೇ ಹೊರತು ಚರ್ಚೆಯಲ್ಲ’ ಎಂದೂ ವ್ಯಾಖ್ಯಾನಿಸಿದರು.


‘1921ರಲ್ಲಿ ಅಸಹಕಾರ ಚಳುವಳಿ ಪ್ರಾರಂಭವಾದಾಗ, ಕಾಂಗ್ರೆಸ್ ಸದಸ್ಯರು ವಂದೇ ಮಾತರಂ ಹಾಡುತ್ತಾ ಜೈಲಿಗೆ ಹೋದರು. ನೀವು ಏನು ಮಾಡುತ್ತಿದ್ದೀರಿ? ನೀವು ಬ್ರಿಟಿಷರಿಗಾಗಿ ಕೆಲಸ ಮಾಡುತ್ತಿದ್ದೀರಿ’ ಎಂದು ಖರ್ಗೆ ಅವರು ಬಿಜೆಪಿ ಸದಸ್ಯರನ್ನು ಉದ್ದೇಶಿಸಿ ಹೇಳಿದರು.

‘ನೀವು ನಮಗೆ ದೇಶಭಕ್ತಿ ಕಲಿಸುತ್ತಿದ್ದೀರಾ? ನೀವು ಹೆದರಿ ಬ್ರಿಟಿಷರಿಗೆ ಸೇವೆ ಸಲ್ಲಿಸಿದವರು. ನೆಹರೂ ಅವರನ್ನು ಅವಮಾನಿಸುವ ಯಾವುದೇ ಅವಕಾಶವನ್ನು ಪ್ರಧಾನಿ ಮೋದಿ ಬಿಡುವುದಿಲ್ಲ. ಗೃಹ ಸಚಿವರೂ ಸಹ... ಚರಣಗಳನ್ನು ತೆಗೆದುಹಾಕಿದ ಕಾರಣಕ್ಕೆ ನೆಹರೂ ಅವರನ್ನು ದೂಷಿಸುವುದನ್ನು ನಾನು ಕೇಳಿದೆ’ ಎಂದರು.

‘ಗೀತೆಯ ಎರಡು ಚರಣಗಳನ್ನು ಮಾತ್ರ ಹಾಡುವ ತೀರ್ಮಾನವನ್ನು ಕಾಂಗ್ರೆಸ್ ಕಾರ್ಯಕಾರಿ ಸಮಿತಿ ತೆಗೆದುಕೊಂಡಿತ್ತು. ಈ ನಿರ್ಣಯವನ್ನು ನೆಹರೂ ಒಬ್ಬಂಟಿಯಾಗಿ ಮಾಡಿರಲಿಲ್ಲ. ಮಹಾತ್ಮ ಗಾಂಧಿ, ಸುಭಾಷ್ ಚಂದ್ರ ಬೋಸ್, ಮದನ್ ಮೋಹನ್ ಮಾಳವಿಯಾ ಮತ್ತು ಆಚಾರ್ಯ ಜೆ.ಬಿ. ಕೃಪಲಾನಿ ಅವರಂತಹ ನಾಯಕರು ಉಪಸ್ಥಿತರಿದ್ದರು’ ಎಂದು ಖರ್ಗೆ ಹೇಳಿದರು.

ಟ್ಯಾಗೋರ್ ಅವರ ಮಾತುಗಳನ್ನು ಖರ್ಗೆ ಉಲ್ಲೇಖಿಸಿದರು. ಕವಿತೆಯ ಮೊದಲ ಎರಡು ಚರಣಗಳನ್ನು ಹಾಡಿ ಉಳಿದ ಭಾಗಗಳನ್ನು ಕೈಬಿಟ್ಟರೆ ಯಾವುದೇ ತೊಂದರೆ ಇಲ್ಲ ಎಂದೂ ಟ್ಯಾಗೋರ್ ಹೇಳಿದ್ದರು. ಆದರೆ, ಬಿಜೆಪಿ ನಾಯಕರು ನಮ್ಮ ಉನ್ನತ ನಾಯಕ ನೆಹರೂ ಅವರನ್ನು ಅವಮಾನಿಸುತ್ತಿದ್ದಾರೆ. ಎರಡು ಚರಣಗಳನ್ನಷ್ಟೇ ಹಾಡುವುದು ಸಾಮೂಹಿಕ ನಿರ್ಧಾರವಾಗಿತ್ತು. ನೀವು ನೆಹರೂ ಅವರನ್ನು ಮಾತ್ರ ಏಕೆ ಗುರಿ ಮಾಡುತ್ತಿದ್ದೀರಿ’ ಎಂದು ಅವರು ಪ್ರಶ್ನಿಸಿದರು.

‘ವಂದೇ ಮಾತರಂ ತುಂಡರಿಸದಿದ್ದರೆ, ದೇಶ ವಿಭಜನೆಯಾಗುತ್ತಿರಲಿಲ್ಲ’



ನವದೆಹಲಿ (ಪಿಟಿಐ): ‘ವಂದೇ ಮಾತರಂ ಗೀತೆಯನ್ನು ವಿಭಜಿಸಿದ್ದು, ದೇಶದ ಮೊದಲ ತುಷ್ಟೀಕರಣದ ಆರಂಭವಾಗಿದ್ದು, ದೇಶದ ವಿಭಜನೆಗೂ ಕಾರಣವಾಯಿತು’ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ತಿಳಿಸಿದ್ದಾರೆ.

ರಾಷ್ಟ್ರೀಯ ಗೀತೆಗೆ 150 ವರ್ಷದ ತುಂಬಿದ ಹಿನ್ನೆಲೆಯಲ್ಲಿ ಸಂಸತ್ತಿನಲ್ಲಿ ಆಯೋಜಿಸಿದ ಚರ್ಚೆಯನ್ನು ಮುಂಬರುವ ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಯೊಂದಿಗೆ ಜೋಡಿಸಿದಕ್ಕಾಗಿ ವಿರೋಧ ಪಕ್ಷಗಳ ವಿರುದ್ಧ ಅವರು ಟೀಕಿಸಿದ್ದಾರೆ.

‘ದೇಶದ ಮೊದಲ ಪ್ರಧಾನಿ ಜವಾಹರ್‌ಲಾಲ್ ನೆಹರೂ ಅವರು ‘ವಂದೇ ಮಾತರಂ’ ಹಾಡನ್ನು ವಿಭಜಿಸಿ, ಎರಡು ಚರಣಗಳಿಗೆ ಸೀಮಿತಗೊಳಿಸಿದ್ದಾರೆ. ಈಗ ಕಾಂಗ್ರೆಸ್ ಪಕ್ಷವು ಹಾಡಿನ ಮೇಲೆ ಚರ್ಚೆಯನ್ನೇ ಪ್ರಶ್ನಿಸುತ್ತಿದೆ. 1937ರಲ್ಲಿ ವಂದೇ ಮಾತರಂ ಗೀತೆ 50 ವರ್ಷ ಪೂರ್ಣಗೊಳಿಸಿದ ವೇಳೆ ನೆಹರೂ ಅವರು ಎರಡು ಚರಣಗಳಿಗೆ ಸೀಮಿತಗೊಳಿಸಿದ್ದರು. ಗೀತೆಯ ಸುವರ್ಣ ಮಹೋತ್ಸವದ ವೇಳೆ ಅವರು ಗೌರವಿಸಿದ್ದು ಹೀಗೆ’ ಎಂದು ವಿರೋಧ ಪಕ್ಷಗಳನ್ನು ತರಾಟೆಗೆ ತೆಗೆದುಕೊಂಡಿದ್ದಾರೆ.

ವಿರೋಧ ಪಕ್ಷಗಳ ವಿರುದ್ಧ ವಾಗ್ದಾಳಿ: ‘ಗೀತೆ ಹಾಡಿನ ವಿಚಾರವನ್ನು ಚರ್ಚೆಗೆ ನಿಗದಿಪಡಿಸಿರುವುದು ನೈಜ ವಿಚಾರಗಳನ್ನು ಮರೆಮಾಚಲು ನಡೆಸಿದ ರಾಜಕೀಯ ತಂತ್ರವಾಗಿದೆ ಎಂದು ಕಾಂಗ್ರೆಸ್ ಪಕ್ಷದ ಸದಸ್ಯರು ಆರೋಪಿಸುತ್ತಿದ್ದಾರೆ. ನಾವು ಯಾವುದೇ ವಿಚಾರಗಳ ಬಗ್ಗೆ ಚರ್ಚಿಸಲು ಭಯಪಡುವುದಿಲ್ಲ. ನಾವು ಸಂಸತ್ತನ್ನು ಬಹಿಷ್ಕರಿಸುವುದಿಲ್ಲ. ಸಂಸತ್ತನ್ನು ಬಹಿಷ್ಕರಿಸಿ, ಕಾರ್ಯನಿರ್ವಹಿಸಲು ಬಿಡದಿದ್ದರೆ, ಎಲ್ಲ ವಿಚಾರಗಳು ಚರ್ಚೆ ನಡೆಯುತ್ತವೆ. ನಾವು ಯಾವುದಕ್ಕೂ ಹೆದರಲ್ಲ, ಯಾವ ವಿಚಾರದಲ್ಲಿಯೂ ಮುಚ್ಚುಮರೆಯಿಲ್ಲ. ನಾವು ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಚರ್ಚೆಗೆ ಸಿದ್ಧವಿದ್ದೇವೆ’ ಎಂದು ಶಾ ತಿರುಗೇಟು ನೀಡಿದ್ದಾರೆ. ‘ಗೀತೆಯು ನೂರು ವರ್ಷದ ತುಂಬಿದ ವೇಳೆ ಇಡೀ ದೇಶವು ತುರ್ತು ಪರಿಸ್ಥಿತಿಯಲ್ಲಿತ್ತು’ ಎಂದು ಈ ವೇಳೆ ನೆನಪಿಸಿದ್ದಾರೆ.

‘ವಂದೇ ಮಾತರಂ ಕಡ್ಡಾಯಗೊಳಿಸಿ’



ನವದೆಹಲಿ(ಪಿಟಿಐ): ದೇಶದ ಎಲ್ಲ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ವಂದೇ ಮಾತರಂ ಹಾಡುವುದನ್ನು ಕಡ್ಡಾಯಗೊಳಿಸಬೇಕು ಎಂದು ರಾಜ್ಯಸಭಾ ಸದಸ್ಯೆ ಸುಧಾ ಮೂರ್ತಿ ಸರ್ಕಾರವನ್ನು ಒತ್ತಾಯಿಸಿದರು.

ಲೋಕಸಭೆಯಲ್ಲಿ ಮಾತನಾಡಿದ ಅವರು, ‘ಭಾರತದ ಪ್ರತಿ ರಾಜ್ಯ ಒಂದೊಂದು ಬಣ್ಣದ ಬಟ್ಟೆಯ ತುಂಡುಗಳಿದ್ದಂತೆ. ಆ ತುಂಡುಗಳನ್ನು ಸೇರಿಸಿ ಹೊಲಿಯುವ ದಾರ ಮತ್ತು ಸೂಜಿಯೇ ವಂದೇ ಮಾತರಂ ಗೀತೆ’ ಎಂದು ಅವರು ಬಣ್ಣಿಸಿದರು. ಶಾಲೆಗಳಲ್ಲಿ ವಂದೇ ಮಾತರಂ ಗೀತೆ ಕಲಿಸುವ ಕುರಿತು ಮಾತನಾಡಿದ ಅವರು, ‘ನಾವು ನಮ್ಮ ಮಕ್ಕಳಿಗೆ ಈಗ 'ಜನ ಗಣ ಮನ' ರಾಷ್ಟ್ರಗೀತೆಯನ್ನು ಕಲಿಸುತ್ತಿದ್ದೇವೆ. ವಂದೇ ಮಾತರಂ ಗೀತೆ ಕಲಿಸಲು ಇನ್ನೂ ಮೂರು ನಿಮಿಷಗಳು ಬೇಕಾಗುತ್ತವೆ. ಆದರೆ, ನಾವು ಅದನ್ನು ಕಲಿಸುತ್ತಿಲ್ಲ. ಹೀಗೇ ಆದರೆ, ನಮ್ಮ ಮಕ್ಕಳು ವಂದೇ ಮಾತರಂ ಗೀತೆಯ ಸಾಹಿತ್ಯವನ್ನೇ ಸಂಪೂರ್ಣ ಮರೆಯುತ್ತಾರೆ’ ಎಂದರು.



ಅನಂತ್ ಅಂಬಾನಿ ಅವರು ಅಮೆರಿಕದ ಗ್ಲೋಬಲ್ ಹ್ಯೂಮನ್ ಸೊಸೈಟಿಯ ಸಿಇಒ ಡಾ. ರಾಬಿನ್ ಗ್ಯಾನ್ಜೆರ್ಟ್ ಅವರಿಂದ ವಿಶ್ವ ಮಾನವೀಯ ಪ್ರಶಸ್ತಿ ಸ್ವೀಕರಿಸಿದರು

ಅನಂತ್ ಅಂಬಾನಿಗೆ ಗ್ಲೋಬಲ್ ಹ್ಯೂಮನ್ ಸೊಸೈಟಿ ಪ್ರಶಸ್ತಿ

ವಾಷಿಂಗ್ಟನ್: ರಿಲಯನ್ಸ್ ಫೌಂಡೇಷನ್ ವನ್ಯಜೀವಿ ಸಂರಕ್ಷಣೆ ಮತ್ತು ಪುನರ್ವಸತಿ ಕೇಂದ್ರ ವಂತಾರದ ಸ್ಥಾಪಕ ಅನಂತ್ ಅಂಬಾನಿ ಅವರಿಗೆ ಅಮೆರಿಕದ ಗ್ಲೋಬಲ್ ಹ್ಯೂಮನ್ ಸೊಸೈಟಿಯು ವಿಶ್ವ ಮಾನವೀಯ ಪ್ರಶಸ್ತಿ ಪ್ರದಾನ ಮಾಡಿದೆ.

ವನ್ಯಜೀವಿ ಸಂರಕ್ಷಣೆಯಲ್ಲಿ ಅನಂತ್ ಅಂಬಾನಿ ಅವರ ದೂರದೃಷ್ಟಿಯ ನಾಯಕತ್ವ, ವೈಜ್ಞಾನಿಕ ಕ್ರಮಗಳನ್ನು ಸಂಸ್ಥೆಯು ಶ್ಲಾಘಿಸಿದೆ. ಅಂತರ ರಾಷ್ಟ್ರೀಯ ಮಟ್ಟದ ಈ ಪುರಸ್ಕಾರ ಪಡೆದ ಏಷ್ಯಾದ ಮೊದಲಿಗ ಹಾಗೂ ಕಿರಿಯ ವ್ಯಕ್ತಿ ಎಂಬ ಹೆಗ್ಗಳಿಕೆಗೂ ಅನಂತ್ ಪಾತ್ರರಾಗಿದ್ದಾರೆ.

ಅಳಿವಿನಂಚಿನಲ್ಲಿರುವ ವನ್ಯಜೀವಿ ತಳಿಗಳನ್ನು ಸಂರಕ್ಷಿಸುವಲ್ಲಿ ಅಂಬಾನಿ ಅವರ ಸುಸ್ಥಿರ ಕ್ರಮಗಳು ನೆರವಾಗಿವೆ. ವನ್ಯಜೀವಿಗಳು ಮತ್ತು ಮನುಷ್ಯರ ಬದುಕಿನಲ್ಲಿ ಗಮನಾರ್ಹ ಬದಲಾವಣೆ ತರಲು ಅಜೀವ ಬದ್ಧತೆ ಪ್ರದರ್ಶಿಸುವ ವ್ಯಕ್ತಿಗಳಿಗೆ ಈ ಪ್ರಶಸ್ತಿಯನ್ನು ಮೀಸಲಿಡಲಾಗಿದೆ’ ಎಂದು ಗ್ಲೋಬಲ್ ಹ್ಯೂಮನ್ ಸೊಸೈಟಿಯ ಪ್ರಕಟಣೆ ತಿಳಿಸಿದೆ.

‘ಅತ್ಯುತ್ಕೃಷ್ಟ ಕಾಳಜಿ ಮೂಲಕ ಪ್ರತಿಯೊಂದು ಪ್ರಾಣಿಯ ಘನತೆಯನ್ನು ವಂತಾರ ಎತ್ತಿ ಹಿಡಿದಿದೆ’ ಎಂದು ಗ್ಲೋಬಲ್ ಹ್ಯೂಮನ್ ಸೊಸೈಟಿಯ ಅಧ್ಯಕ್ಷೆ ಮತ್ತು ಸಿಇಒ ಡಾ. ರಾಬಿನ್ ಗ್ಯಾನ್ಜೆರ್ಟ್ ಹೇಳಿದ್ದಾರೆ.

‘ಪ್ರಾಣಿಗಳು ನಮಗೆ ಮಾನವೀಯತೆ, ವಿಶ್ವಾಸ ಮತ್ತು ಬದುಕಿನ ಸಮತೋಲನವನ್ನು ಕಲಿಸುತ್ತವೆ. ಸೇವೆಯ ಮೂಲಕ ಪ್ರತಿಯೊಂದು ಪ್ರಾಣಿಯ ಘನತೆಯನ್ನು ಎತ್ತಿ ಹಿಡಿಯುವ ಕೆಲಸವನ್ನು ವಂತಾರ ಮಾಡುತ್ತಿದೆ’ ಎಂದು ಅನಂತ್ ಅಂಬಾನಿ ಹೇಳಿದ್ದಾರೆ.

ದೆಹಲಿ ಸ್ಫೋಟ: ಎಂಟನೇ ಆರೋಪಿ ಬಂಧನ



ನವದೆಹಲಿ (ಪಿಟಿಐ): ದೆಹಲಿ ಕೆಂಪುಕೋಟೆ ಬಳಿ ಸಂಭವಿಸಿದ್ದ ಕಾರು ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿ 8ನೇ ಆರೋಪಿಯನ್ನು ರಾಷ್ಟ್ರೀಯ ತನಿಖಾ ದಳ (ಎನ್‌ಐಎ) ಬಂಧಿಸಿದೆ.

‘ಜಮ್ಮು–ಕಾಶ್ಮೀರದ ಬಾರಾಮುಲ್ಲಾ ನಿವಾಸಿ ಡಾ.ಬಿಲಾಲ್ ನಾಸೀರ್ ಮಲ್ಲನನ್ನು ದೆಹಲಿಯಲ್ಲಿ ಬಂಧಿಸಲಾಗಿದೆ’ ಎಂದು ಎನ್‌ಐಎ ವಕ್ತಾರರು ತಿಳಿಸಿದ್ದಾರೆ.

‘ಕಾರು ಸ್ಫೋಟದಲ್ಲಿ ಮೃತಪಟ್ಟಿರುವ ಆರೋಪಿ ಉಮರ್ ನಬಿಗೆ ಬಿಲಾಲ್ ಆಶ್ರಯ ಮತ್ತು ಸಹಕಾರ ನೀಡಿದ್ದ. ಸ್ಫೋಟದ ಬಳಿಕ ಸಾಕ್ಷ್ಯ ಕೃತ್ಯದಲ್ಲಿಯೂ ಭಾಗಿಯಾಗಿದ್ದ’ ಎಂದು ಎನ್‌ಐಎ ತಿಳಿಸಿದೆ.

ಮುಟ್ಟಿನ ರಜೆ ನಿರಾಕರಿಸಿದರೆ ದಂಡ

ಒಂದನೇ ಪುಟದಿಂದ...

‘ಋತುಚಕ್ರ ಹೊಂದಿರುವ 18 ವರ್ಷದಿಂದ 52 ವರ್ಷ ವಯಸ್ಸಿನ ಮಹಿಳಾ ಸರ್ಕಾರಿ ನೌಕರರಿಗೆ ಈ ರಜೆ ಅನ್ವಯವಾಗಲಿದೆ. ತಿಂಗಳಿಗೆ ಒಂದರಂತೆ ವರ್ಷಕ್ಕೆ ಒಟ್ಟು 12 ಮುಟ್ಟಿನ ರಜೆ ಪಡೆಯಬಹುದು ಎಂದೂ ಈ ಆದೇಶದಲ್ಲಿ ವಿವರಿಸಿದೆ. ಈ ಆದೇಶಕ್ಕೆ ಕಾನೂನು ಬಲ ನೀಡಲು ಕಾಯ್ದೆ ರೂಪಿಸಲಾಗುತ್ತಿದೆ’ ಎಂದೂ ಮೂಲಗಳು ತಿಳಿಸಿವೆ.

ಮುಟ್ಟಿನ ಸಮಯದಲ್ಲಿ ಗಂಭೀರ ಸಮಸ್ಯೆಗಳನ್ನು ಎದುರಿಸಿದರೆ ಮಾತ್ರ ಮುಟ್ಟು ಆದವರು ಮುಟ್ಟಿನ ರಜೆ ಪಡೆಯಬಹುದು. ಆದರೆ, ಅದಕ್ಕೆ ವೈದ್ಯಕೀಯ ಪ್ರಮಾಣಪತ್ರ ಸಲ್ಲಿಸುವುದು ಕಡ್ಡಾಯವಲ್ಲ. ಏಕೆಂದರೆ, ಅದರಿಂದ ವಿಳಂಬ ಆಗಬಹುದು. ಸಂಬಂಧಪಟ್ಟ ಹಿರಿಯ ಅಧಿಕಾರಿಗಳಿಗೆ ರಜೆ ನೀಡುವಂತೆ ವಿನಂತಿ ಅಥವಾ ಇ–ಮೇಲ್ ಕಳುಹಿಸಿದರೆ ಸಾಕು. ಮುಟ್ಟಿನ ರಜೆ ಪಡೆಯುವುದನ್ನು ಉನ್ನತ ಅಧಿಕಾರಿಗಳು ಅನಗತ್ಯವಾಗಿ ಪ್ರಚಾರ ಮಾಡಬಾರದು. ಮುಟ್ಟು ಆದವರು ಅರ್ಧ ದಿನ ರಜೆ ಬೇಕಾದರೂ ಪಡೆಯಬಹುದು ಎಂದೂ ಮಸೂದೆಯಲ್ಲಿದೆ.

ಋತುಸ್ರಾವವನ್ನು ಸುರಕ್ಷಿತ, ಸುಭದ್ರ ಮತ್ತು ಸುಲಭವಾಗಿ ವಿಲೇವಾರಿ ಮಾಡಲು ತ್ಯಾಜ್ಯ ಡಸ್ಟ್‌ಬಿನ್‌ಗಳು, ಟಿಶ್ಯೂ ಪೇಪರ್, ಟಾಯ್ಲೆಟ್ ಪೇಪರ್‌ಗಳು, ಬ್ಯಾಗ್‌ಗಳು, ಲಕೋಟೆಗಳು, ಪತ್ರಿಕೆಗಳನ್ನು ಒದಗಿಸಬೇಕು. ಮುಟ್ಟಿನ ನೈರ್ಮಲ್ಯ ಕುರಿತು ಜಾಗೃತಿ ಮೂಡಿಸಲು ಮತ್ತು ಮುಟ್ಟಿನ ಆರೋಗ್ಯ ಶಿಕ್ಷಣ ಮತ್ತು ನೈರ್ಮಲ್ಯ ಉತ್ಪನ್ನಗಳು, ಋತುಚಕ್ರ ಸ್ನೇಹಿ ಶೌಚಾಲಯಗಳು ಇತ್ಯಾದಿಗಳ ಕುರಿತು ರಾಜ್ಯ, ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಕಾರ್ಯಾಗಾರಗಳು, ಸಾರ್ವಜನಿಕ ಭಾಷಣಗಳು, ಉಪನ್ಯಾಸಗಳು, ವಿಚಾರ ಸಂಕಿರಣಗಳು, ಚರ್ಚೆಗಳನ್ನು ಆಯೋಜಿಸಲು ಪ್ರತಿವರ್ಷ ಮೇ 28ರಂದು ‘ಮುಟ್ಟಿನ ನೈರ್ಮಲ್ಯ ದಿನ’ ಎಂದು ಅರ್ಥಪೂರ್ಣವಾಗಿ ಆಚರಿಸಲಾಗುವುದು ಎಂದೂ ಈ ಮಸೂದೆ ಹೇಳಿದೆ.

ಬೆಳಿಗ್ಗೆ ತಡೆ, ಮಧ್ಯಾಹ್ನ ತೆರವು

ಒಂದನೇ ಪುಟದಿಂದ...

ಈ ತಡೆ ಆದೇಶ ಹೊರಬೀಳುತ್ತಿದ್ದಂತೆಯೇ, ಕಲಾಪ ಕೊನೆಗೊಳ್ಳುವ ಸಮಯದಲ್ಲಿ ಅಡ್ವೊಕೇಟ್ ಜನರಲ್ ಶಶಿಕಿರಣ ಶೆಟ್ಟಿ, ಹೆಚ್ಚುವರಿ ಅಡ್ವೊಕೇಟ್ ಜನರಲ್ ಪ್ರತಿಮಾ ಹೊನ್ನಾಪುರ ಹಾಗೂ ಮಧ್ಯಂತರ ಅರ್ಜಿದಾರರ ಪರ ಪದಾಂಕಿತ ಹಿರಿಯ ವಕೀಲ ರವಿವರ್ಮ ಕುಮಾರ್ ನ್ಯಾಯಪೀಠದ ಮುಂದೆ ಹಾಜರಾಗಿ, ‘ಪ್ರತಿವಾದಿಗಳ ಆಕ್ಷೇಪಣೆ ಆಲಿಸದೇ ಅರ್ಜಿದಾರರ ಮಧ್ಯಂತರ ಮನವಿಯನ್ನು ಮಾನ್ಯ ಮಾಡಲಾಗಿದೆ’ ಎಂದು ಆದೇಶಕ್ಕೆ ತೀವ್ರ ತಕರಾರು ವ್ಯಕ್ತಪಡಿಸಿದರು.

ನ್ಯಾಯಪೀಠದ ಮಧ್ಯಂತರ ಆದೇಶಕ್ಕೆ ವಿರೋಧ ವ್ಯಕ್ತಪಡಿಸಿದ ಶಶಿಕಿರಣ ಶೆಟ್ಟಿ ಅವರು, ‘ಋತುಚಕ್ರದ ರಜೆಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ನೀತಿ ರೂಪಿಸಬೇಕು ಎಂದು ಸುಪ್ರೀಂ ಕೋರ್ಟ್ ಪ್ರಕರಣವೊಂದರಲ್ಲಿ ಆದೇಶಿಸಿದೆ. ಇದಕ್ಕೆ ಅನುಗುಣವಾಗಿಯೇ ರಾಜ್ಯ ಕಾನೂನು ಆಯೋಗ ಶಿಫಾರಸು ಮಾಡಿದೆ. ಇದನ್ನೆಲ್ಲಾ ಪರಿಗಣಿಸಿಯೇ, ರಾಜ್ಯ ಸರ್ಕಾರ ಸಾಂವಿಧಾನಿಕವಾಗಿ ಕೊಡಮಾಡಲಾಗಿರುವ 142ನೇ ವಿಧಿಯಡಿ ತನ್ನ ಅಧಿಕಾರ ಬಳಸಿ ಈ ಕ್ರಮ ಕೈಗೊಂಡಿದೆ. ಅಧಿಸೂಚನೆ ಕಾನೂನುಬದ್ಧವಾಗಿಯೇ ಇದೆ. ಹೀಗಿರುವಾಗ, ಸರ್ಕಾರದ ವಿಸ್ತೃತ ವಾದ ಆಲಿಸದೆಯೇ ಅಧಿಸೂಚನೆಗೆ ತಡೆ ನೀಡಿರುವುದು ಸಲ್ಲ’ ಎಂದು ಆಕ್ಷೇಪ ವ್ಯಕ್ತಪಡಿಸಿ ತಡೆ ತೆರವುಗೊಳಿಸುವಂತೆ ಮನವಿ ಮಾಡಿದರು.

ಇದನ್ನು ಪರಿಗಣಿಸಿದ ನ್ಯಾಯಪೀಠ ಬೆಳಿಗ್ಗೆಯಷ್ಟೇ ಸರ್ಕಾರದ ಅಧಿಸೂಚನೆಗೆ ನೀಡಿದ್ದ ತನ್ನದೇ ತಡೆಯಾಜ್ಞೆ ಆದೇಶವನ್ನು ಹಿಂಪಡೆಯಿತು. ಬುಧವಾರ (ಡಿ.10) ಉಭಯ ಪಕ್ಷಕಾರರ ವಾದ ಆಲಿಸಿ, ‘ಮಧ್ಯಂತರ ತಡೆ ಆದೇಶದ ಬಗ್ಗೆ ಸೂಕ್ತ ನಿರ್ಣಯ ಹೊರಡಿಸಲಾಗುವುದು’ ಎಂದು ತಿಳಿಸಿತು.

ಅರ್ಜಿಯಲ್ಲಿ ಏನಿದೆ?: ‘ಮಹಿಳಾ ನೌಕರರಿಗೆ ಋತುಚಕ್ರದ ಸಮಯದಲ್ಲಿ ತಿಂಗಳಲ್ಲಿ ಒಂದು ದಿನದ ಮಟ್ಟಿಗೆ ವೇತನ ಸಹಿತ ಮುಟ್ಟಿನ ರಜೆ ಒದಗಿಸಬೇಕು’ ಎಂದು ರಾಜ್ಯ ಸರ್ಕಾರದ ಕಾರ್ಮಿಕ ಇಲಾಖೆ 2025ರ ನವೆಂಬರ್ 20ರಂದು ಅಧಿಸೂಚನೆ ಹೊರಡಿಸಿತ್ತು. ‘ಇದು ಸಂವಿಧಾನದ 14ನೇ ವಿಧಿಗೆ ವಿರುದ್ಧವಾಗಿದ್ದು ರದ್ದುಗೊಳಿಸಬೇಕು’ ಎಂದು ಅರ್ಜಿದಾರರು ಕೋರಿದ್ದಾರೆ.

ನಿಯಮ ಜಾರಿಗೆ ಪ್ರಾಧಿಕಾರ

ಕಾಯ್ದೆಯಲ್ಲಿರುವ ನಿಯಮಗಳನ್ನು ಜಾರಿ ಮಾಡಲು ರಾಜ್ಯ ಸರ್ಕಾರ ಪ್ರಾಧಿಕಾರವೊಂದನ್ನು ರಚಿಸಲಿದೆ. ಈ ಪ್ರಾಧಿಕಾರದ ನಾಮನಿರ್ದೇಶಿತ ಸದಸ್ಯರ ಅವಧಿ ಮೂರು ವರ್ಷ ಮಾತ್ರ. ಆರೋಗ್ಯ, ಮಹಿಳಾ, ಶಿಕ್ಷಣ ಮತ್ತು ಕಾರ್ಮಿಕ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ಪ್ರಾಧಿಕಾರದ ಪದನಿಮಿತ್ತ ಸದಸ್ಯರಾಗಿರುತ್ತಾರೆ. ವಕೀಲರು, ವೈದ್ಯರು, ಕಾರ್ಮಿಕ ಸಂಘಗಳು, ಸಮಾಜ ಸೇವಾ ಕ್ಷೇತ್ರದ ಇಬ್ಬರು, ಮಹಿಳಾ ಕಾರ್ಯಕರ್ತೆಯರ, ಮಹಿಳೆಯರ ಪರವಾಗಿ ಹೋರಾಡುತ್ತಿರುವವರು ಪ್ರಾಧಿಕಾರದ ನಾಮನಿರ್ದೇಶಿತ ಸದಸ್ಯರಾಗಿರುತ್ತಾರೆ. ದೂರು, ಕುಂದುಕೊರತೆ ಪರಿಹಾರಕ್ಕೆ ಪ್ರಾಧಿಕಾರವು ಪ್ರತಿ ಮೂರು ತಿಂಗಳಿಗೊಮ್ಮೆ ಸಭೆ ಸೇರಬೇಕು. ನಿಯಮಗಳನ್ನು ಜಾರಿಗೊಳಿಸುವ ಉದ್ದೇಶಕ್ಕಾಗಿ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಯಾವುದೇ ಅಧಿಕಾರಿಯಿಂದ ಸಹಾಯ ಪಡೆಯಲು ಪ್ರಾಧಿಕಾರ ಮುಕ್ತವಾಗಿರುತ್ತದೆ. ನಿಯಮ ಉಲ್ಲಂಘಿಸಿದವರು ಈ ಪ್ರಾಧಿಕಾರವು ವಿಧಿಸುವ ದಂಡ ಪಾವತಿಸಲು ಹೊಣೆಗಾರರಾಗಿರುತ್ತಾರೆ.

ನ್ಯಾ.ಸ್ವಾಮಿನಾಥನ್ ಪದಚ್ಯುತಿ: ಸ್ಪೀಕರ್‌ಗೆ ನೋಟಿಸ್ ಸಲ್ಲಿಕೆ

ನವದೆಹಲಿ: ಮಧುರೈ ಬಳಿಯ ತಿರುಪರನ್‌ಕುಂಡ್ರಂ ಬೆಟ್ಟದ ಮೇಲೆ ಕಾರ್ತಿಕ ದೀಪ ಬೆಳಗಿಸಲು ಅವಕಾಶ ನೀಡಿರುವ ಮದ್ರಾಸ್ ಹೈಕೋರ್ಟ್‌ನ ಮಧುರೈ ಪೀಠದ ನ್ಯಾಯಮೂರ್ತಿ ಜಿ.ಆರ್. ಸ್ವಾಮಿನಾಥನ್ ಅವರನ್ನು ಪದಚ್ಯುತಿಗೊಳಿಸುವಂತೆ ಕೋರಿ ಮಂಗಳವಾರ 'ಇಂಡಿಯಾ' ಮೈತ್ರಿಕೂಟದ ಸಂಸದರು ಮಂಗಳವಾರ ಲೋಕಸಭೆ ಸ್ಪೀಕರ್‌ಗೆ ನೋಟಿಸ್ ಸಲ್ಲಿಸಿದ್ದಾರೆ.

ಮಧುರೈ ಬಳಿಯ ತಿರುಪರನ್‌ಕುಂಡ್ರಂ ಬೆಟ್ಟದ ಕಲ್ಲಿನ ದೀಪಸ್ತಂಭ ‘ದೀಪಥೋನ್’ನಲ್ಲಿ ಕಾರ್ತಿಕ ದೀಪ ಬೆಳಗಿಸಲು ನ್ಯಾಯಮೂರ್ತಿ ಜಿ.ಆರ್. ಸ್ವಾಮಿನಾಥನ್ ಅವರು ಭಕ್ತರಿಗೆ ಅವಕಾಶ ನೀಡಿ ಇತ್ತೀಚೆಗೆ ಆದೇಶ ಹೊರಡಿಸಿದ್ದರು. ಅದೇ ಬೆಟ್ಟದಲ್ಲಿ ಸಿಕಂದರ್ ಬಾದುಶಾ ದರ್ಗಾ ಇದ್ದು, ಈ ಆದೇಶದಿಂದ ಕೋಮು ಸೌಹಾರ್ದಕ್ಕೆ ಧಕ್ಕೆ ಉಂಟಾಗಲಿದೆ. ಸ್ವಾಮಿನಾಥನ್ ಅವರ ಈ ನಡವಳಿಕೆಯು ನ್ಯಾಯಾಂಗದ ನಿಷ್ಪಕ್ಷಪಾತ, ಪಾರದರ್ಶಕತೆ ಮತ್ತು ಜಾತ್ಯತೀತ ಕಾರ್ಯನಿರ್ವಹಣೆಯ ಬಗ್ಗೆ ‘ಗಂಭೀರ ಪ್ರಶ್ನೆಗಳನ್ನು’ ಹುಟ್ಟುಹಾಕುತ್ತದೆ ಎಂದು ಸಂಸದರು ಆರೋಪಿಸಿದ್ದಾರೆ.

ಡಿಎಂಕೆ ಸಂಸದರಾದ ಕನಿಮೋಳಿ ಮತ್ತು ಟಿ.ಆರ್. ಬಾಲು, ಕಾಂಗ್ರೆಸ್‌ನ ಪ್ರಿಯಾಂಕಾ ಗಾಂಧಿ ವಾದ್ರಾ, ಉಭಯ ಸದನಗಳಲ್ಲಿರುವ ಇಂಡಿಯಾ ಮೈತ್ರಿಕೂಟದ ಸದಸ್ಯರು ಸೇರಿದಂತೆ ಸೇರಿದಂತೆ 107 ಸಂಸದರು, ಡಜನ್‌ಗೂ ಹೆಚ್ಚು ಪಕ್ಷಗಳ ಸಂಸದರು ಸಹಿ ಹಾಕಿದ್ದಾರೆ.

‘ಇಂಡಿಗೊ ವಿಮಾನ ಹಾರಾಟ: ಶೇ 10 ಕಡಿತ’

ಒಂದನೇಪುಟದಿಂದ...

‘ವಿಮಾನ ಹಾರಾಟ ರದ್ದಾಗುವ ಪ್ರಮಾಣವನ್ನು ಕಡಿತ ಮಾಡಲು, ಇಂಡಿಗೊ ಕಾರ್ಯಾಚರಣೆಯನ್ನು ಸ್ಥಿರತೆಗೆ ತರಲು ಈ ಆದೇಶ ನೀಡಲಾಗಿದೆ’ ಎಂದು ಸಚಿವ ನಾಯ್ಡು ಅವರು ‘ಎಕ್ಸ್’ನಲ್ಲಿ ಪೋಸ್ಟ್ ಹಂಚಿಕೊಂಡಿದ್ದಾರೆ.

ಬಿಕ್ಕಟ್ಟಿನ ನಿರ್ವಹಣೆ ಕುರಿತು ಮಾಹಿತಿ ನೀಡುವಂತೆ ಇಂಡಿಗೊ ಸಂಸ್ಥೆಯ ಸಿಇಒ ಪೀಟರ್ ಎಲ್ಬರ್ಸ್ ಅವರಿಗೆ ಸಚಿವಾಲಯವು ನೋಟಿಸ್ ನೀಡಿತ್ತು. ಅದರಂತೆ ಮಂಗಳವಾರ ಪೀಟರ್ ಅವರು ಸಚಿವರು ಮತ್ತು ಸಚಿವಾಲಯದ ಇತರೆ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಮಾಹಿತಿ ನೀಡಿದರು.

‘ಟಿಕೆಟ್ ದರ ನಿಗದಿ, ಪ್ರಯಾಣಿಕರಿಗೆ ಅನುಕೂಲ ಒದಗಿಸುವುದು ಸೇರಿದಂತೆ ಸಚಿವಾಲಯವು ನೀಡುವ ಎಲ್ಲ ನಿರ್ದೇಶನಗಳನ್ನು ಪಾಲಿಸಬೇಕು. ಇದಕ್ಕೆ ವಿನಾಯಿತಿ ಇಲ್ಲ’ ಎಂದು ಸೂಚಿಸಲಾಗಿದೆ ಎಂದು ಸಚಿವ ನಾಯ್ಡು ತಿಳಿಸಿದರು.

> **ದೇಶದಲ್ಲಿ ಇಂಡಿಗೊದ ಏಕಸ್ವಾಮ್ಯವನ್ನು ತಪ್ಪಿಸುವುದಕ್ಕಾಗಿ ವಿಮಾನಗಳ ಹಾರಾಟವನ್ನು ಕಡಿತ ಮಾಡಲು ಸೂಚಿಸಲಾಗಿದೆ**
> **ಡಿಜಿಸಿಎ**

> **ಸಮಸ್ಯೆಗೆ ಒಳಗಾದ ಗ್ರಾಹಕರ ಅಗತ್ಯವನ್ನು ಪೂರೈಸಲಾಗುತ್ತಿದೆ**
> **ಪೀಟರ್ ಎಲ್ಬರ್ಸ್,** ಇಂಡಿಗೊ ಸಂಸ್ಥೆಯ ಸಿಇಒ (ವಿಡಿಯೊ ಸಂದೇಶದಲ್ಲಿ ಹೇಳಿದ್ದು)

ಡಿಜಿಸಿಎ ಹೇಳಿದ್ದೇನು?

2025–26ರ ಚಳಿಗಾಲದ ಅವಧಿಯಲ್ಲಿ ಪ್ರತಿ ವಾರ 15,014 ವಿಮಾನಗಳ ಹಾರಾಟದಂತೆಯೇ ನವೆಂಬರ್‌ನಲ್ಲಿ ಒಟ್ಟು 64,346 ವಿಮಾನಗಳ ಹಾರಾಟಕ್ಕೆ ಇಂಡಿಗೊ ಸಂಸ್ಥೆಗೆ ಡಿಜಿಸಿಎ ಅನುಮತಿ ನೀಡಿತ್ತು. ಆದರೆ, ನವೆಂಬರ್‌ನಲ್ಲಿಯೇ ಸುಮಾರು 951 ವಿಮಾನಗಳ ಹಾರಾಟವನ್ನು ಇಂಡಿಗೊ ರದ್ದು ಮಾಡಿತು.

ಇಂಡಿಗೊ ಸಂಸ್ಥೆಯು ಬಿಕ್ಕಟ್ಟಿನಲ್ಲಿ ಇರುವ ಕಾರಣ, ಇದಕ್ಕೆ ನೀಡಿದ್ದ ಅನುಮತಿಯನ್ನು ಡಿಜಿಸಿಎ ಪರಿಶೀಲಿಸಿತು. ಅನುಮತಿ ನೀಡಿದಷ್ಟು ವಿಮಾನ ಹಾರಾಟ ನಡೆಸುವ ಸಾಮರ್ಥ್ಯವನ್ನು ಇಂಡಿಗೊ ನಿರೂಪಿಸಿಲ್ಲ. ಆದ್ದರಿಂದ, ಶೇ 5ರಷ್ಟು ವಿಮಾನಗಳ ಹಾರಾಟವನ್ನು ಕಡಿತ ಮಾಡಲು ತಿಳಿಸಲಾಗಿದೆ’ ಎಂದು ಡಿಜಿಸಿಎ ಹೇಳಿತ್ತು. ‘500 ವಿಮಾನಗಳ ಹಾರಾಟವನ್ನು ರದ್ದು ಮಾಡಲಾಗಿದ್ದು, ಬುಧವಾರ ಸುಮಾರು 1,900 ವಿಮಾನಗಳ ಹಾರಾಟ ನಡೆಸಲು ಯೋಜಿಸಲಾಗಿದೆ’ ಇಂಡಿಗೊ ಹೇಳಿದೆ. 2024ರ ಚಳಿಗಾಲದ ಅವಧಿಗೆ ಹೋಲಿಸಿಕೊಂಡರೆ, 2025ರ ಚಳಿಗಾಲದ ಅವಧಿಯಲ್ಲಿ ಶೇ 9.66ರಷ್ಟು ಹೆಚ್ಚಿನ ವಿಮಾನಗಳ ಹಾರಾಟ ನಡೆಸಲು ಇಂಡಿಗೊ ಯೋಜಿಸಿತ್ತು.

‘ಇಂಡಿಗೊ ವಿರುದ್ಧ ಕಠಿಣ ಕ್ರಮ’

- ಎಷ್ಟೇ ದೊಡ್ಡ ವಿಮಾನಯಾನ ಸಂಸ್ಥೆಯಾಗಿರಲಿ. ತಮ್ಮ ಸೂಕ್ತ ಯೋಜನೆ ಇಲ್ಲದೆ, ನಿಯಮಗಳನ್ನು ಸರಿಯಾಗಿ ಪಾಲಿಸದೆ ಪ್ರಯಾಣಿಕರು ಸಂಕಷ್ಟ ಎದುರಿಸುವಂತೆ ಮಾಡಲು ಅವಕಾಶವಿಲ್ಲ. ಪ್ರಯಾಣಿಕರಿಗೆ ತೊಂದರೆ ನೀಡಿದ ಇಂಡಿಗೊ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು
- ಸದೃಢ ವಿಮಾನಯಾನ ವ್ಯವಸ್ಥೆಯನ್ನು ರೂಪಿಸಲು ಕೇಂದ್ರ ಸರ್ಕಾರ ಬದ್ಧವಾಗಿದೆ. ನಮ್ಮ ನೀತಿಗಳ ಮೂಲಕ ಹೊಸ ಹೊಸ ವಿಮಾನಯಾನ ಸಂಸ್ಥೆಗಳು ಹುಟ್ಟಿಕೊಳ್ಳಲು ಉತ್ತೇಜಿಸುತ್ತಿದ್ದೇವೆ. ಸುರಕ್ಷತೆಯು ವಿಚಾರದಲ್ಲಿ ವಿನಾಯಿತಿಯೇ ಇಲ್ಲ

– **ಕೆ. ರಾಮಮೋಹನ್ ನಾಯ್ಡು,** ಕೇಂದ್ರ ವಿಮಾನಯಾನ ಸಚಿವ
(ಲೋಕಸಭೆಯಲ್ಲಿ ನೀಡಿದ ಹೇಳಿಕೆ)

121 ವಿಮಾನ ಹಾರಾಟ ರದ್ದು (ದೇವನಹಳ್ಳಿ ವರದಿ): ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಇಂಡಿಗೊ ಸಂಸ್ಥೆಯ ಒಟ್ಟು 121 ವಿಮಾನಗಳ ಹಾರಾಟವು ಮಂಗಳವಾರ ರದ್ದಾಗಿದೆ.

ಬೆಂಗಳೂರಿಗೆ ಬರಬೇಕಿದ್ದ 58 ಮತ್ತು ಇಲ್ಲಿಂದ ಹೊರಡಬೇಕಿದ್ದ 63 ವಿಮಾನಗಳ ಕಾರ್ಯಾಚರಣೆ ರದ್ದು ಮಾಡಲಾಗಿದೆ. ಸಹಾಯ ಕೇಂದ್ರ ಬಳಿ ಪ್ರಯಾಣಿಕರು ಸಾಲುಗಟ್ಟಿ ನಿಂತಿದ್ದು ಕಂಡುಬಂತು.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in



ಸುಭಾಷಿತ

ಮನಸ್ಸೆಂಬ ಮದ್ದಾನೆಗೆ ಮತಿಯ ಅಂಕುಶ ಮಾತ್ರವೇ ಮದ್ದು.

–ಕೆ.ಎಸ್. ನಿಸಾರ್ ಅಹಮದ್

ಸಂಪಾದಕೀಯ

ವಂದೇ ಮಾತರಂ ಸ್ಫೂರ್ತಿಗೀತೆಗೆ ರಾಜಕೀಯದ ಕೊಳಕು ತಾಗದಿರಲಿ

ಭಾರತ ಸ್ವಾತಂತ್ರ್ಯ ಸಂಗ್ರಾಮದ ಸ್ಫೂರ್ತಿಚಿಲುಮೆಗಳಲ್ಲಿ ಒಂದಾಗಿದ್ದ 'ವಂದೇ ಮಾತರಂ' ಗೀತೆಯ ಬಗ್ಗೆ ಸಂಸತ್‌ನಲ್ಲಿ ನಡೆದಿರುವ ಚರ್ಚೆ, ಚಾರಿತ್ರಿಕ ಗೀತೆಯ ಮಹತ್ವವನ್ನು ಕುಗ್ಗಿಸುವ ರಾಜಕೀಯ ಪ್ರೇರಿತ ಗದ್ದಲವಾಗಿದೆ. ಈ ಗದ್ದಲದ ಕೇಂದ್ರದಲ್ಲಿ ಸ್ವತಃ ಪ್ರಧಾನಿ ಹಾಗೂ ಗೃಹ ಸಚಿವರು ಇರುವುದು ದುರದೃಷ್ಟಕರ. ಬಂಕಿಮಚಂದ್ರ ಚಟರ್ಜಿ ಅವರ 'ವಂದೇ ಮಾತರಂ' ರಚನೆಗೆ ಒಂದುನೂರಾ ಐವತ್ತು ವರ್ಷಗಳು ತುಂಬಿರುವ ಸಂಭ್ರಮಾಚರಣೆ ದೇಶದಲ್ಲಿ ನಡೆಯುತ್ತಿದೆ. ಈ ಸಂಭ್ರಮದಲ್ಲಿ ಕೇಂದ್ರ ಸರ್ಕಾರವೂ ಭಾಗಿಯಾಗಿದೆ. ಸ್ವಾತಂತ್ರ್ಯದ ಸ್ಫೂರ್ತಿ ಹಾಗೂ ದೇಶಪ್ರೇಮದ ಸಂಕೇತವಾಗಿದ್ದ ಗೀತೆಯನ್ನು ಗೌರವಿಸುವುದು ಹಾಗೂ ಸಂಭ್ರಮಿಸುವುದು ಸರಿಯಾದ ನಡೆಯೇ ಆಗಿದೆ. ಆದರೆ, ಇತಿಹಾಸದ ಸಂಗತಿಗಳನ್ನು ವರ್ತಮಾನದಲ್ಲಿ ರಾಜಕಾರಣದ ಅನುಕೂಲಕ್ಕೆ ತಕ್ಕಂತೆ ವಿಶ್ಲೇಷಿಸುವ ಪ್ರಯತ್ನ 'ವಂದೇ ಮಾತರಂ' ಬಗೆಗಿನ ಅಭಿಮಾನದ ಪ್ರಾಮಾಣಿಕತೆಯ ಬಗ್ಗೆ ಅನುಮಾನ ಮೂಡಿಸುವಂತಿದೆ. 'ಸಾಮಾಜಿಕ ಸಾಮರಸ್ಯದ ನೆಪದಲ್ಲಿ ಕಾಂಗ್ರೆಸ್ ಪಕ್ಷವು ವಂದೇ ಮಾತರಂ ಗೀತೆಯನ್ನು ತುಂಡು ತುಂಡಾಗಿಸಿದೆ. ಈಗಲೂ ಓಲೈಕೆಯ ರಾಜಕಾರಣದಲ್ಲಿ ತೊಡಗಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಆರೋಪಿಸಿದ್ದಾರೆ. ವಂದೇ ಮಾತರಂ ವಿರೋಧಿಸಿ ಮೊಹಮ್ಮದ್ ಅಲಿ ಜಿನ್ನಾ ನೇತೃತ್ವದ ಮುಸ್ಲಿಂ ಲೀಗ್ ಲಖನೌದಲ್ಲಿ 1937ರಲ್ಲಿ ಪ್ರತಿಭಟನೆ ನಡೆಸಿತ್ತು. ಆ ಪ್ರತಿಭಟನೆಯನ್ನು ವಿರೋಧಿಸುವ ಬದಲು, ಗೀತೆಯನ್ನು ಪರಿಶೀಲಿಸಲು ಕಾಂಗ್ರೆಸ್ ಹಾಗೂ ಜವಾಹರಲಾಲ್ ನೆಹರೂ ಮುಂದಾಗಿದ್ದರು ಎಂದೂ ದೂರಿದ್ದಾರೆ. 'ವಂದೇ ಮಾತರಂ' ಗೀತೆಗೆ ಮತೀಯ ರಾಜಕಾರಣದ ಸ್ಪರ್ಶ ನೀಡುವ ಈ ಪ್ರಯತ್ನ ದುರದೃಷ್ಟಕರ ಹಾಗೂ ಒಂಬತ್ತು ದಶಕಗಳ ಹಿಂದಿನ ವಿದ್ಯಮಾನಗಳು ಈಗ ಇದ್ದಕ್ಕಿದ್ದಂತೆ ಚಾರಿತ್ರಿಕ ಪ್ರಮಾದವಾಗಿ ಕಾಣಿಸುತ್ತಿರುವುದು ಆಶ್ಚರ್ಯಕರ.



'ವಂದೇ ಮಾತರಂ' ಗೀತೆ ನೆಪದಲ್ಲಿನ ಗದ್ದಲ, ಲೋಕಸಭೆಯ ಅಮೂಲ್ಯ ಸಮಯವನ್ನು ಹಾಳುಮಾಡುವ ನಡವಳಿಕೆ. ಚರಿತ್ರೆಯನ್ನು ರಾಜಕೀಯ ಉದ್ದೇಶಗಳಿಗಾಗಿ ಬಳಸುವ ಪ್ರಯತ್ನ ಸರಿಯಲ್ಲ.

'ವಂದೇ ಮಾತರಂ' ಗೀತೆಗೆ ಕಾಂಗ್ರೆಸ್ ಹಾಗೂ ಜವಾಹರಲಾಲ್ ನೆಹರೂ ಅವರು ಅನ್ಯಾಯ ಮಾಡಿದ್ದಾರೆ ಎನ್ನುವ ಆರೋಪದಲ್ಲಿ ಇತಿಹಾಸವನ್ನು ನಿರ್ಮಮಕಾರದಿಂದ ನೋಡುವ ಮನೋಧರ್ಮ ಕಾಣೆಯಾಗಿದೆ ಹಾಗೂ ಚರಿತ್ರೆಯ ಸಂಗತಿಗಳನ್ನು ಅನುಕೂಲಸಿಂಧು ರಾಜಕಾರಣಕ್ಕೆ ಬಳಸಿಕೊಳ್ಳುವ ತಂತ್ರಗಾರಿಕೆ ಸ್ಪಷ್ಟವಾಗಿದೆ. ಇತಿಹಾಸದ ಸಂಗತಿಗಳನ್ನು ಅಂದಿನ ಅಗತ್ಯಗಳ ಪರಿಪ್ರೇಕ್ಷ್ಯದಲ್ಲಿ ಗ್ರಹಿಸದೆ ವಿಶ್ಲೇಷಿಸುವ ಪ್ರಯತ್ನ ಸಾಮಾಜಿಕ ಹಿತಕ್ಕೆ ಅಪಾಯಕಾರಿ ಆಗಬಲ್ಲದು. ಗಾಂಧೀಜಿ, ನೆಹರೂ ಸೇರಿದಂತೆ ಸ್ವಾತಂತ್ರ್ಯ ಚಳವಳಿಯ ಅನೇಕ ನಾಯಕರು 'ವಂದೇ ಮಾತರಂ' ಗೀತೆಯ ಮಹತ್ವವನ್ನು ಗುರ್ತಿಸಿದ್ದರು ಹಾಗೂ ಗೌರವಿಸಿದ್ದರು. ಆದರೆ, ವಿಗ್ರಹಾರಾಧನೆಯನ್ನು ಪ್ರೋತ್ಸಾಹಿಸುತ್ತದೆ ಹಾಗೂ ದೇಶಪ್ರೇಮದ ಹೆಸರಿನಲ್ಲಿ ಹಿಂದೂ ರಾಷ್ಟ್ರೀಯತೆಯನ್ನು ಪ್ರತಿಪಾದಿಸುತ್ತದೆ ಎನ್ನುವ ಕಾರಣಕ್ಕಾಗಿ, ಮುಸ್ಲಿಮರು ಈ ಗೀತೆಯನ್ನು ಹಾಡಕೂಡದು ಎಂದು ಮುಸ್ಲಿಂ ಲೀಗ್ ಠರಾವು ಮಂಡಿಸಿತ್ತು. ಹಿಂದೂಗಳಲ್ಲದ ಸ್ವಾತಂತ್ರ್ಯ ಹೋರಾಟಗಾರರಿಗೆ ಸಾರ್ವಜನಿಕವಾಗಿ 'ವಂದೇ ಮಾತರಂ' ಹಾಡುವುದು ಮುಜುಗರ ಉಂಟುಮಾಡುತ್ತದೆ ಎನ್ನುವುದನ್ನು ಹಿಂದೂ ನಾಯಕರೂ ಒಪ್ಪಿಕೊಂಡಿದ್ದರ ಫಲಿತವಾಗಿಯೇ, ಸಾರ್ವಜನಿಕ ಸಭೆ–ಸಮಾರಂಭಗಳಲ್ಲಿ ಈ ಗೀತೆಯ ಮೊದಲ ಎರಡು ಭಾಗಗಳನ್ನು ಹಾಡಬೇಕು ಎಂಬ ನಿರ್ಣಯ ಕೈಗೊಳ್ಳಲಾಯಿತು. 'ವಂದೇ ಮಾತರಂ' ಗೀತೆಯನ್ನು ಕಡ್ಡಾಯ ಮಾಡುವ ಬಗ್ಗೆ ಗಾಂಧೀಜಿ ಆಕ್ಷೇಪ ವ್ಯಕ್ತಪಡಿಸಿದ್ದರು. ಆ ಘಟನೆಗಳನ್ನು, ಏಳೂವರೆ ದಶಕಗಳ ನಂತರ ಸರಿಯೋ ತಪ್ಪೋ ಎಂದು ಸ್ವಾತಂತ್ರ್ಯದ ಫಲಾನುಭವಿಗಳು ನಿರ್ಣಯಿಸಲು ಹೊರಡುವುದು ಹಾಗೂ ಗೀತೆಯೊಂದರ ಪರಿಷ್ಕರಣೆಯನ್ನು ದೇಶಪ್ರೇಮದ ಮಾನದಂಡವಾಗಿ ನೋಡುವುದು ಚೋದ್ಯದಂತೆ ಕಾಣಿಸುತ್ತದೆ. ಈ ಪ್ರಯತ್ನ, ಅಂದಿನ ಸೈರಣೆ ಹಾಗೂ ಬಹುತ್ವದ ಬಗೆಗಿನ ಗೌರವ ಈಗ ಅಪ್ರಸ್ತುತ ಆಗಿರುವುದನ್ನು ಸೂಚಿಸುವಂತಿದೆ.

ನಾಗರಿಕ ಸಮಸ್ಯೆಗಳ ಅರ್ಥಪೂರ್ಣ ಚರ್ಚೆಗೆ ವೇದಿಕೆಯಾಗಬೇಕಾದ ಸಂಸತ್‌ನ ಕಲಾಪಗಳು ಇತ್ತೀಚಿನ ವರ್ಷಗಳಲ್ಲಿ ಅನಗತ್ಯ ಗದ್ದಲಗಳಲ್ಲಿ ಕೊನೆಗೊಳ್ಳುತ್ತಿವೆ. ಚರ್ಚೆಗಳನ್ನು ರಚನಾತ್ಮಕವಾಗಿ ರೂಪಿಸುವಲ್ಲಿ ಮುಖ್ಯ ಪಾತ್ರ ವಹಿಸಬೇಕಾದ ಸರ್ಕಾರವೇ ಅನಗತ್ಯ ಚರ್ಚೆಗಳಲ್ಲಿ ಕಲಾಪವನ್ನು ವ್ಯರ್ಥಗೊಳಿಸುತ್ತಿದೆ; ಆ ಮೂಲಕ ನಾಗರಿಕರ ತೆರಿಗೆ ಹಣದ ದುರುಪಯೋಗಕ್ಕೆ ಅವಕಾಶ ಕಲ್ಪಿಸುತ್ತಿದೆ. ಪ್ರಸಕ್ತ ಅಧಿವೇಶನದಲ್ಲಿ ಮಹತ್ವದ ಮಸೂದೆಗಳ ಮಂಡನೆ ಆಗಬೇಕಾಗಿದೆ. ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ವಿವಾದದ ಬಗ್ಗೆ ಚರ್ಚೆ ನಡೆಯಬೇಕಾಗಿದೆ. ರೂಪಾಯಿ ಮೌಲ್ಯ ಕುಸಿತ, ದೆಹಲಿಯಲ್ಲಿನ ವಾಯುಮಾಲಿನ್ಯ, ರಾಷ್ಟ್ರೀಯ ಸುರಕ್ಷತೆ ಹಾಗೂ ವಿದೇಶಾಂಗ ನೀತಿ ಸೇರಿದಂತೆ ಹಲವು ಮಹತ್ವದ ವಿಷಯಗಳ ಬಗ್ಗೆ ಚರ್ಚೆ ನಡೆಯಬೇಕಾಗಿದೆ. ದೇಶ ಹಾಗೂ ದೇಶೀಯರ ಹಿತಕ್ಕೆ ಅಗತ್ಯವಾದ ಸಂಗತಿಗಳ ಚರ್ಚೆ ನಡೆಸಬೇಕಾದ ನಾಯಕರು, 'ವಂದೇ ಮಾತರಂ' ಗೀತೆಯನ್ನು ಜಗ್ಗಾಡುವ ಮೂಲಕ ಕಲಾಪದ ಅಮೂಲ್ಯ ಸಮಯವನ್ನು ಹಾಳುಮಾಡುತ್ತಿದ್ದಾರೆ; ಇದು ಮತದಾರರಿಗೆ ಉತ್ತರದಾಯಿಯಾದ ನಡವಳಿಕೆಯಲ್ಲ. ದೇಶದ ಹೆಮ್ಮೆಯ ಗೀತೆಯೊಂದನ್ನು ವಿಭಜಕ ರಾಜಕಾರಣಕ್ಕೆ ಬಳಸುವುದೂ ಸರಿಯಲ್ಲ.

ಚಾಟಿ



ಪ್ರಚೋದನೆಯ ಸರಕು

ಭಾರತದಲ್ಲಿ ಇಂದು ಇತಿಹಾಸವೆಂದರೆ ಗತಿಸಿಹೋದ ವ್ಯಕ್ತಿಗಳನ್ನೂ, ಘಟನೆಗಳನ್ನು ಬಳಸಿಕೊಂಡು ವರ್ತಮಾನದಲ್ಲಿ ತಮ್ಮ ವೈಫಲ್ಯಗಳನ್ನು ಮುಚ್ಚಿಕೊಳ್ಳಲು ಜನರನ್ನು ಭಾವನಾತ್ಮಕವಾಗಿ ಪ್ರಚೋದಿಸುವ ಪ್ರಬಲ ಸರಕು.

ಶಿವಪ್ರಕಾಶ ಎಂ., 'ಫೇಸ್‌ಬುಕ್'ನಿಂದ

ಕಿಡಿನುಡಿ



ಉತ್ತರ ಕರ್ನಾಟಕದ ಜ್ವಲಂತ ಸಮಸ್ಯೆಗಳ ಬಗ್ಗೆ ಚರ್ಚೆಗೆ ವೇದಿಕೆಯಾಗಬೇಕಿದ್ದ ಬೆಳಗಾವಿ ಅಧಿವೇಶನವು, ಕಾಂಗ್ರೆಸ್ ಪಕ್ಷದ ಕುರ್ಚಿ ಕಿತ್ತಾಟದಲ್ಲಿ ವ್ಯರ್ಥವಾಗುತ್ತಿರುವುದು ವಿಷಾದಕರ.

ಆರ್. ಅಶೋಕ, ವಿಧಾನಸಭೆ ವಿರೋಧ ಪಕ್ಷದ ನಾಯಕ

25 ವರ್ಷಗಳ ಹಿಂದೆ

ಭಾನುವಾರ, 10-12-2000

● **ಪ್ರಧಾನಿಯ ವಿವಾದಾತ್ಮಕ ಹೇಳಿಕೆ: ಸಂಸತ್‌ನಲ್ಲಿ ಚರ್ಚೆ**

ನವದೆಹಲಿ, ಡಿ. 9 (ಪಿಟಿಐ, ಯುಎನ್‌ಐ)– ಅಯೋಧ್ಯೆಯಲ್ಲಿ ಮಂದಿರ ನಿರ್ಮಾಣದ ಬಗ್ಗೆ ನೀಡಿದ ವಿವಾದಾತ್ಮಕ ಹೇಳಿಕೆಗಳಿಂದ ವಿರೋಧ ಪಕ್ಷಗಳಲ್ಲಿ ತೀವ್ರ ವಿರೋಧದ ಅಲೆಯನ್ನೇ ಎಬ್ಬಿಸಿರುವ ಪ್ರಧಾನಿ ವಾಜಪೇಯಿ ಅವರು, ಸಂಸತ್ತಿನಲ್ಲಿ ಈ ಕುರಿತು ತಮ್ಮ ನಿಲುವು ಸ್ಪಷ್ಟಪಡಿಸುವುದಾಗಿ ಹೇಳಿದ್ದಾರೆ.

'ಬುಧವಾರ ಮತ್ತು ಗುರುವಾರ ತಾವು ನೀಡಿದ ಹೇಳಿಕೆಗಳಿಂದ ಉಂಟಾಗಿರುವ ಎಲ್ಲಾ ಪ್ರಶ್ನೆಗಳಿಗೂ ಸರ್ಕಾರ ಸಂಸತ್ತಿನಲ್ಲಿ ಚರ್ಚೆ ನಡೆಸಲು ಸಿದ್ಧ' ಎಂದು ಅವರು ಸ್ಪಷ್ಟಪಡಿಸಿದರು.

● **ಬಿಗಿ ಭದ್ರತೆಯಲ್ಲಿ ಶೋಭಾಯಾತ್ರೆ**

ಚಿಕ್ಕಮಗಳೂರು, ಡಿ. 9– ಬಾಬಾ ಬುಡನ್‌ಗಿರಿಗೆ ಕೇಂದ್ರೀಕೃತವಾಗಿದ್ದ ದುಗುಡದ ಛಾಯೆ ಇಂದು ನಗರವನ್ನು ಆಚರಿಸಿತ್ತು. ಆದರೆ, ಬಿಗಿ ಭದ್ರತೆಯಲ್ಲಿ ಯಾವುದೇ ಅಹಿತಕರ ಘಟನೆಗೂ ಆಸ್ಪದ ಇಲ್ಲದೆ ಶೋಭಾಯಾತ್ರೆ ನಡೆಯಿತು. ದತ್ತ ಜಯಂತಿ ಅಂಗವಾಗಿ ಬಜರಂಗದಳ ಹಮ್ಮಿಕೊಂಡಿದ್ದ ಪಾಂಚಜನ್ಯ ರಥಯಾತ್ರೆಯ ಶೋಭಾ ಯಾತ್ರೆ ಮುಕ್ತಾಗೊಂಡು ಬಾಬಾ ಬುಡನ್‌ಗಿರಿಯತ್ತ ಹೊರಟು ನಿಂತಿತು.

75 ವರ್ಷಗಳ ಹಿಂದೆ

ಭಾನುವಾರ, 10-12-1950

● **ವಿಶ್ವವಿದ್ಯಾನಿಲಯ ಸಮಾಜದ ಸರ್ವಾಂಗ ಉನ್ನತಿ ಸಾಧಿಸಲಿ**

ನವದೆಹಲಿ, ಡಿ. 9– 'ವಿದ್ಯಾವಂತರಿಗೂ, ಸಾಮಾನ್ಯ ಜನತೆಗೂ ನಡುವೆ ಕೃತವಾಗಿ ಬೆಳೆದು ಬಂದ ಗೋಡೆಯನ್ನು ವಿನಾಶ ಮಾಡಿ ಸಮಾಜದ ಎಲ್ಲಾ ವರ್ಗಗಳ ಏಳಿಗೆಗೂ ಉಪಯೋಗವಾಗುವಂತೆ ವಿಶ್ವವಿದ್ಯಾನಿಲಯಗಳು ಕಾರ್ಯ ಸಾಧಿಸಬೇಕು' ಎಂದು ಭಾರತದ ಅಧ್ಯಕ್ಷ ಡಾ. ರಾಜೇಂದ್ರಪ್ರಸಾದ ಅವರು ಇಂದು ತಿಳಿಸಿದರು.

ನವದೆಹಲಿ ವಿಶ್ವವಿದ್ಯಾನಿಲಯದ 28ನೇ ಘಟಿಕೋತ್ಸವ ಭಾಷಣ ಮಾಡುತ್ತಾ ಡಾ. ರಾಜೇಂದ್ರ ಪ್ರಸಾದರು, ಭಾರತದಲ್ಲಿ ವ್ಯಕ್ತಿಗ್ರತವಾದ ಆಸೆ, ಆಕಾಂಕ್ಷೆಗಳಿಗೂ, ಸಮಾಜಕ್ಕೂ ಇರುವ ಭೇದಭಾವ ತೊಲಗಿಸಲು ನಾವು ಯತ್ನಿಸಬೇಕೆಂದು ಅವರು ಮನವಿ ಮಾಡಿದರು.

ಕಣ್ವರ ಮಕ್ಕಳಿಗೆ ನ್ಯಾಯ ಸಿಕ್ಕೀತೆ?



ವಿಶ್ಲೇಷಣೆ

ವೈ.ಎಸ್.ವಿ. ದತ್ತ

ಅಂತೂ ರಾಜ್ಯ ಸರ್ಕಾರ ಎಚ್ಚತ್ತಿದೆ. ಸುಪ್ರೀಂ ಕೋರ್ಟ್ ಆದೇಶ ಚುರುಕು ಮುಟ್ಟಿಸಿದೆ. ಹೊರಗುತ್ತಿಗೆ ನೌಕರರ ಬಹುದಿನಗಳ ಆಕ್ರಂದನಕ್ಕೆ ಪರಿಹಾರ ಸಿಗುವ ನಿರೀಕ್ಷೆ ಮೂಡಿದೆ. ಬೆಳಗಾವಿ ಅಧಿವೇಶನದಲ್ಲಿ ಈ ಸಂಬಂಧ ಮಸೂದೆ ಮಂಡಿಸಲು ಸರ್ಕಾರ ಮುಂದಾಗಿದೆ.

ಅಷ್ಟಕ್ಕೂ ಈ ಹೊರಗುತ್ತಿಗೆ ನೌಕರರು ಯಾರು? ಪೌರಾಣಿಕ ಭಾಷೆಯಲ್ಲಿ ಉತ್ತರಿಸುವುದಾದರೆ ಇವರು– ವಿಶ್ವಾಮಿತ್ರ–ಮೇನಕೆ ಸಂತಾನದವರು! ತಪೋನಿರತ ವಿಶ್ವಾಮಿತ್ರನ ಮುಂದೆ ಸುರಾಂಗನೆ ಮೇನಕೆ ಸುಳಿದಳು. ವಿಶ್ವಾಮಿತ್ರನಿಗೆ ಲಾಲಸೆಯಾಯಿತು. 'ಸಂಗ' ನಡೆದು, ಪ್ರಮಾದವಾಗಿಬಿಟ್ಟಿತು. ಪರಿತ್ಯಕ್ತಳಾದ ಮೇನಕೆ ಇಂದ್ರಲೋಕಕ್ಕೆ ಹಿಂತಿರುಗಿದಳು. ವಿಶ್ವಾಮಿತ್ರ ಮತ್ತೆ ತಪಸ್ಸಿಗೆ ಕುಳಿತ. ಇಬ್ಬರಿಗೂ ಬೇಡವಾದ ಮಗು ಬೀದಿಗೆ ಬಿದ್ದಿತು. ಮಗುವಿನ ಪುಣ್ಯ. ಕಣ್ವ ಮಹರ್ಷಿಗಳ ಕಣ್ಣಿಗೆ ಬಿದ್ದ ಆ ಮಗು, ಅವರ ಆಶ್ರಮದ ಆಶ್ರಯದಲ್ಲಿ ಬೆಳೆದು ಮುಂದೆ ಶಕುಂತಲೆಯಾದುದು ಪುರಾಣದ ಕಥೆ.

ಇಲ್ಲಿ ಆಗಿರುವುದೂ ಹೀಗೆಯೇ. ದುಡ್ಡಿಲ್ಲದ ಬೊಕ್ಕಸದ ಮುಂದೆ ಕುಳಿತ ಸರ್ಕಾರಗಳು ಖಾಲಿ ಹುದ್ದೆಗಳನ್ನು ತುಂಬಲಾಗಲಿಲ್ಲ. ಆದರೆ, ಸರ್ಕಾರದ ದೈನಂದಿನ ಕೆಲಸಗಳು ಸಾಗಬೇಕಲ್ಲ? 'ದುಡ್ಡೂ ಹೆಚ್ಚು ಖರ್ಚಾಗಬಾರದು. ಕೆಲಸಗಳೂ ನಿಲ್ಲಬಾರದು' ಎಂದು ಚಿಂತಿಸುತ್ತಿದ್ದ ಸರ್ಕಾರದ ಮುಂದೆ ಸುಳಿದವರು ಖಾಸಗಿ ಏಜೆನ್ಸಿಗಳು. 'ಅಗ್ಗದ ದರಕ್ಕೆ ಚಾಕರಿ ಮಾಡಲು ತಯಾರಿರುವ ನಿರುದ್ಯೋಗಿಗಳನ್ನು ಒದಗಿಸುತ್ತೇವೆ. ನಮಗಿಷ್ಟು ಸೇವಾ ಶುಲ್ಕ ಕೊಡಿ' ಎಂದರು. ಹೀಗೆ ಏರ್ಪಟ್ಟ ಸರ್ಕಾರ ಮತ್ತು ಏಜೆನ್ಸಿಗಳ 'ಸಂಗ'ದ ಫಲವಾಗಿ ಹುಟ್ಟಿಕೊಂಡವರೇ ಹೊರಗುತ್ತಿಗೆ ನೌಕರರು. ಇವರಿಗೆ ವಿಶ್ವಾಮಿತ್ರನೂ ಇಲ್ಲ. ಮೇನಕೆಯೂ ಇಲ್ಲ. ಹೀಗೆ ಬೀದಿಗೆ ಬಿದ್ದ ಹೊರಗುತ್ತಿಗೆ ನೌಕರರೆಂಬ 'ಅನಾಥ'ರಿಗೆ ಕಣ್ವನಾಗಿ ಬಂದದ್ದು ಸುಪ್ರೀಂ ಕೋರ್ಟ್.

ಕಳೆದ ಒಂದು ವರ್ಷದಿಂದ ಈಚೆಗೆ ಸತತವಾಗಿ ನಾಲ್ಕು ಮಹತ್ವದ ಆದೇಶಗಳನ್ನು ಸುಪ್ರೀಂ ಕೋರ್ಟ್ ನೀಡಿದೆ. ಸರ್ಕಾರಗಳಿಗೆ ಸಾಂವಿಧಾನಿಕ ಜವಾಬ್ದಾರಿಯನ್ನು ಜ್ಞಾಪಿಸಿದೆ. ನೈತಿಕ ಪಾಠ ಹೇಳಿದೆ. 'ಕಾಲಮಿತಿಯಲ್ಲಿ ವಿಳಂಬ ಮಾಡದೆ ನ್ಯಾಯ ಒದಗಿಸಿ' ಎಂದು ನಿಷ್ಠುರವಾಗಿ ಹೇಳಿದೆ. ಅದರ ಪರಿಣಾಮವೇ ಈಗ ನಮ್ಮ ಸರ್ಕಾರ ಬೆಳಗಾವಿ ಅಧಿವೇಶನದಲ್ಲಿ ಮಂಡಿಸಲು ಹೊರಟಿರುವ ಮಸೂದೆ.

ಸುಪ್ರೀಂ ಕೋರ್ಟ್‌ನ ಆ ನಾಲ್ಕು ಆದೇಶಗಳ ಪ್ರಕರಣಗಳು ಹೀಗಿವೆ: 2004ರ ನ. 29ರಂದು ನೀಡಿದ ಆದೇಶ. ಸಿವಿಲ್ ಅಪೀಲ್ ನಂ. 10800/2024 (ಹರಿಯಾಣ ಕೃಷಿ ವಿಶ್ವವಿದ್ಯಾನಿಲಯ ವರ್ಸಸ್ ಕೇಂದ್ರ ಸರ್ಕಾರ); 2024ರ ಡಿ. 20ರಂದು ನೀಡಿದ ಆದೇಶ. ಎಸ್‌ಎಲ್‌ಪಿ (ಸಿ) ನಂ. 5580/2024 (ಜಗ್ಗೂ ವರ್ಸಸ್ ಕೇಂದ್ರ ಸರ್ಕಾರ ಹಾಗೂ ಅನಿತಾ ವರ್ಸಸ್ ಕೇಂದ್ರ ಸರ್ಕಾರ); 2025ರ ಜ. 31ರಂದು ನೀಡಿದ ಆದೇಶ. ಸಿವಿಲ್ ಅಪೀಲ್ ನಂ. 8157/2024 (ಶ್ರೀಪಾಲ್ ವರ್ಸಸ್ ಗಾಜಿಯಾಬಾದ್ ನಗರ ನಿಗಮ); 2025ರ ಆ. 19ರಂದು ನೀಡಿದ ಆದೇಶ. ಸಿವಿಲ್ ಅಪೀಲ್ ನಂ. 8558 /2018 (ಧರಮ್ ಸಿಂಗ್ ವರ್ಸಸ್ ಉ.ಪ್ರ. ಸರ್ಕಾರ).

ಮೇಲ್ಕಂಡ ಆದೇಶಗಳಲ್ಲಿ ಕೋರ್ಟ್ ತಳೆದಿರುವ ನಿಲುವು, ಸರ್ಕಾರಗಳಿಗೆ ನೀಡಿರುವ ನಿರ್ದೇಶನ, ಬಳಸಿರುವ ಕಠಿಣ ಭಾಷೆ, ಬೀಸಿರುವ ಚಾಟಿ,– ಇವುಗಳ ಒಟ್ಟು ಸಾರಾಂಶ ಹೀಗಿದೆ:

ದೀರ್ಘಕಾಲ ರೆಗ್ಯುಲರ್ ನೌಕರರಂತೆಯೇ ಕೆಲಸ ಮಾಡುತ್ತಾ ಬಂದಿರುವ ನೌಕರರನ್ನು 'ಉಮಾದೇವಿ ಪ್ರಕರಣ' ಎಂಬ ಕಾರಣ ನೀಡಿ ಕಾಯಂ ಮಾಡಲಾಗದು ಎಂದು ಹೇಳುವ ಕಾರ್ಯಾಂಗದ ಮುಖ್ಯಸ್ಥರ ಮತ್ತು ಅಧಿಕಾರಿಗಳ ಧೋರಣೆಯ ಬಗ್ಗೆ ಕೋರ್ಟ್ ಹೀಗೆ ಅಭಿಪ್ರಾಯಪಟ್ಟಿದೆ: 'ದೀರ್ಘಕಾಲ ನೌಕರರ ನ್ಯಾಯಯುತ ಬೇಡಿಕೆಗಳನ್ನು

ಹೊರಗುತ್ತಿಗೆ ನೌಕರರ ಹಿತಾಸಕ್ತಿ ರಕ್ಷಣೆ ವಿಷಯದಲ್ಲಿ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪುಗಳಿಂದ ರಾಜ್ಯ ಸರ್ಕಾರ ಎಚ್ಚತ್ತಿರುವಂತಿದೆ. ಈ ನೌಕರರ ಹಿತರಕ್ಷಣೆಯ ಮಸೂದೆ ಬೆಳಗಾವಿ ಅಧಿವೇಶನದಲ್ಲಿ ಮಂಡನೆಯಾದರೆ, ರಾಜ್ಯ ಸರ್ಕಾರ ದೇಶಕ್ಕೇ ಮಾದರಿಯಾಗುತ್ತದೆ.

ತಿರಸ್ಕರಿಸಲು ಉಮಾದೇವಿ ಪ್ರಕರಣದ ತತ್ತ್ವ ಮತ್ತು ತಾತ್ಪರ್ಯವನ್ನು ತಪ್ಪಾಗಿ ಅರ್ಥೈಸಲಾಗುತ್ತಿದೆ, ಇಲ್ಲವೇ ತಪ್ಪಾಗಿ ಅನ್ವಯಿಸಲಾಗುತ್ತಿದೆ' ಎಂದು ವಿಷಾದಿಸಿರುವ ಕೋರ್ಟ್, 'ಹಂಗಾಮಿ/ ಹೊರಗುತ್ತಿಗೆ ನೇಮಕ ಕ್ರಮಬದ್ಧ ಅಲ್ಲವೇ ಹೊರತು ಕಾನೂನುಬಾಹಿರ ಅಲ್ಲ. ಆದುದರಿಂದ ಅವರು ರೆಗ್ಯುಲರೈಸೇಷನ್‌ಗೆ ಅರ್ಹರು' ಎಂದು ಹೇಳಿದೆ.

'ಹಂಗಾಮಿ' ಅಥವಾ 'ಹೊರಗುತ್ತಿಗೆ' ಲೇಬಲ್ ಹಚ್ಚುವುದನ್ನು ಕಟುವಾಗಿ ಆಕ್ಷೇಪಿಸಿರುವ ಕೋರ್ಟ್, 'ಅಗತ್ಯವೂ ನಿರಂತರವೂ ಮತ್ತು ಸರ್ಕಾರಿ ಇಲಾಖೆಯೊಂದರ ಕಾರ್ಯ ನಿರ್ವಹಣೆಗೆ ಅನಿವಾರ್ಯವೂ ಆದ ಕೆಲಸಗಳಿಗೆ ಬಳಸಿಕೊಳ್ಳಲಾಗಿರುವ ನೌಕರರನ್ನು 'ಹಂಗಾಮಿ', 'ಹೊರಗುತ್ತಿಗೆ', 'ದಿನಗೂಲಿ' ಮುಂತಾದ ಲೇಬಲ್‌ಗಳಿಂದ ಗುರುತಿಸಲಾಗುತ್ತಿದೆ. ಹಾಗೆ ನೋಡಿದರೆ ಈ ನೌಕರರು ರೆಗ್ಯುಲರ್ ನೌಕರರ ಕೆಲಸವನ್ನೇ ಮಾಡುತ್ತಿದ್ದಾರೆ. ಪಕ್ಷಪಾತ ಧೋರಣೆಯಿಂದಾಗಿ ಈ ನೌಕರರು ರೆಗ್ಯುಲರ್ ನೌಕರರಿಗೆ ಸಿಗುವ ಘನತೆ, ಭದ್ರತೆ ಮತ್ತು ಸರ್ಕಾರಿ ಸವಲತ್ತುಗಳಿಂದ ವಂಚಿತರಾಗಿದ್ದಾರೆ' ಎಂದು ಸ್ಪಷ್ಟವಾಗಿ ಹೇಳಿದೆ.

'ಹೊರಗುತ್ತಿಗೆ' ಎಂಬುದನ್ನು ಸರ್ಕಾರಗಳು ಬಳಸಿಕೊಳ್ಳುತ್ತಿರುವ ರೀತಿಯ ಬಗೆಗಂತೂ ನ್ಯಾಯಾಲಯ ಕಠಿಣ ಶಬ್ದಗಳಲ್ಲಿ ಹೀಗೆಂದಿದೆ. 'ಹೊರಗುತ್ತಿಗೆ ಎಂಬುದು ಸರ್ಕಾರಗಳಿಗೆ ಒಂದು ಗುರಾಣಿ. ಸರ್ಕಾರಗಳು ಹೊರಗುತ್ತಿಗೆ ಪದ್ಧತಿಯನ್ನು ದಿನೇ ದಿನೇ ಹೆಚ್ಚಿಸುತ್ತಲೇ ಇವೆ. ಶೋಷಣೆಗೆ ಒಳಗಾದ ನೌಕರರ ಒಂದು ತಂಡವನ್ನು ಬದಲಾಯಿಸಿ ಮತ್ತೊಂದು ತಂಡವನ್ನು ನೇಮಿಸಿಕೊಳ್ಳುವ ಪದ್ಧತಿ ಮುಂದುವರಿದಿದೆ. ಈ ವ್ಯವಸ್ಥೆಯಿಂದ ಹೊರಗುತ್ತಿಗೆ ಕಾರ್ಮಿಕರ ಶೋಷಣೆ ಮುಂದುವರಿಯುವುದಲ್ಲದೆ, ಕಾಯಂ ಉದ್ಯೋಗ ನೀಡುವ ಜವಾಬ್ದಾರಿಯಿಂದ ನುಣುಚಿಕೊಳ್ಳಲು ಸರ್ಕಾರಗಳು ಅನುಸರಿಸುತ್ತಿರುವ 'ಬೈಪಾಸ್' ಇದಾಗಿದೆ'.


ಬೊಕ್ಕಸದಲ್ಲಿ ಹಣವಿಲ್ಲ ಎಂಬ ಕಾರಣಕ್ಕೆ ಹಂಗಾಮಿ/ ಹೊರಗುತ್ತಿಗೆ ಕಾರ್ಮಿಕರಿಗೆ ನ್ಯಾಯ ಒದಗಿಸಲು ಮೀನಾಮೇಷ ಎಣಿಸುತ್ತಿರುವ ಸರ್ಕಾರಗಳಿಗೆ ಕೋರ್ಟ್ ಹೀಗೆ ಹೇಳಿದೆ: 'ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಬರೀ ಮಾರುಕಟ್ಟೆ ಭಾಗೀದಾರರಲ್ಲ. ಅವರು ಸಂವಿಧಾನದ ಮಾಲೀಕರು. ಹಾಗಾಗಿ, ಅತ್ಯಂತ ಅಗತ್ಯ ಮತ್ತು ಅನಿವಾರ್ಯವಾದ ಸರ್ಕಾರಿ ಕರ್ತವ್ಯಗಳನ್ನು ಸತತವಾಗಿ ನಿರ್ವಹಿಸುವ ನೌಕರರ ಮೇಲೆ ನಿಮ್ಮ ಆಯವ್ಯಯವನ್ನು ಹೊರಿಸಲು ಹೋಗಬೇಡಿ. ಹಂಗಾಮಿ/ ಹೊರಗುತ್ತಿಗೆ ಎಂಬ ತಾತ್ಕಾಲಿಕ ಲೇಬಲ್‌ಗಳನ್ನು ಹಚ್ಚಿ ಆ ನೌಕರರಿಂದ ದೀರ್ಘಕಾಲ ರೆಗ್ಯುಲರ್ ಕೆಲಸದ ದುಡಿತ ಪಡೆದುಕೊಂಡು ಅವರನ್ನು ಅಭದ್ರತೆಗೆ ದೂಡುವುದು ಸಾರ್ವಜನಿಕ ಆಡಳಿತ ವ್ಯವಸ್ಥೆಯ ಮೇಲಿನ ವಿಶ್ವಾಸವನ್ನು ಕುಂದಿಸುತ್ತದೆ. ನಿಜ ಸಾರ್ವಜನಿಕ ನೀತಿಯಲ್ಲಿ ಆರ್ಥಿಕ ಬಿಕ್ಕಟ್ಟಿಗೂ ಪಾತ್ರವಿದೆ. ಹಾಗೆಂದು ಅದು ವಿವೇಕ ಮತ್ತು ಕಾನೂನುಬದ್ಧ ಸೇವೆಯನ್ನು ಮೀರುವ 'ತಾಲಿಸ್ಮಾನ್' ಆಗಬಾರದು'.

ಅಂತಿಮವಾಗಿ, ದೇಶದ ಎಲ್ಲ ಸರ್ಕಾರಗಳಿಗೂ ಸ್ಪಷ್ಟ ನಿರ್ದೇಶನಗಳನ್ನೂ ಮಾನದಂಡಗಳನ್ನೂ ವಿಧಿಸುತ್ತಾ ಸುಪ್ರೀಂ ಕೋರ್ಟ್ ಹೀಗೆ ಹೇಳಿದೆ:

'ಈ ವಿಷಯದಲ್ಲಿ ಸರಳ ನಿರ್ದೇಶನಗಳನ್ನು ನೀಡುವುದರಿಂದ ನ್ಯಾಯ ಪರಿಪಾಲನೆಯಾಗುವುದಿಲ್ಲ. ಇದು ಸ್ಪಷ್ಟ ಹೊಣೆಗಾರಿಕೆಯ ನಿರ್ವಹಣೆ, ಕಾಲಮಿತಿ ನಿಗದಿ ಮತ್ತು ಅನುಷ್ಠಾನದ ಪರಿಶೀಲನೆಯನ್ನು ಬಯಸುತ್ತದೆ. ಸರ್ಕಾರಗಳು ಈ ನೌಕರರಿಗೆ ಪೂರ್ಣಪ್ರಮಾಣದ ರೆಗ್ಯುಲರೈಸೇಷನ್ ಒದಗಿಸಬೇಕು. ನ್ಯಾಯಾಂಗದ ಈ ನಿರ್ದೇಶನವನ್ನು ಕಡ್ಡಾಯವಾಗಿ ಪಾಲಿಸಬೇಕು. ಇದನ್ನು ಜಾರಿಗೆ ತರುವಲ್ಲಿ ವಿಳಂಬ ಮಾಡಿದಲ್ಲಿ ಅದು ಈ ನೌಕರರ ಬದುಕು ಮತ್ತು ಘನತೆಯನ್ನು ಉದ್ದೇಶಪೂರ್ವಕವಾಗಿ ಹಾಳುಗೆಡವಿದ ಕೃತ್ಯವೆಂದೇ ಭಾವಿಸಬೇಕಾಗುತ್ತದೆ' ಎಂದು ಒತ್ತಿ ಹೇಳಿದೆ.

ಮೇಲ್ಕಂಡ ತೀರ್ಪುಗಳ ಬಿಸಿ ಕಾರ್ಯಾಂಗಕ್ಕೆ ತಟ್ಟಿದಂತೆ ಅನ್ನಿಸುವುದಿಲ್ಲ. ಅಧಿಕಾರಿಗಳಿಗೆ ಕೋರ್ಟ್ ತೀರ್ಪುಗಳ ಗಂಭೀರತೆಯನ್ನು ಅರಿಯುವ ಅಥವಾ ಅವುಗಳನ್ನು ಓದುವಷ್ಟೂ ವ್ಯವಧಾನ ಇದ್ದಂತಿಲ್ಲ. ತಕ್ಷಣಕ್ಕೆ ಮಕ್ಕಿಕಾಮಕ್ಕಿ ಷರಾ ಬರೆದು ಕೈ ತೊಳೆದುಕೊಳ್ಳುತ್ತಾರೆ. ಕಾರ್ಯಾಂಗದ ಈ ನಿಸ್ಸೀಮ ನಿರ್ಲಕ್ಷ್ಯದ ಪರಿಣಾಮವಾಗಿಯೇ ಪ್ರಸ್ತುತ ರಾಜ್ಯದಲ್ಲಿ ಸುಮಾರು ಮೂರು ಲಕ್ಷ ಹೊರಗುತ್ತಿಗೆ ನೌಕರರು ಹತ್ತಾರು ವರ್ಷಗಳಿಂದ ಸರ್ಕಾರದ ಕೆಲಸ ನಿರ್ವಹಿಸುತ್ತಿದ್ದಾರೆ. ಇವರಲ್ಲಿ ಅನೇಕರನ್ನು ಹೇಳದೇ ಕೇಳದೇ ಕೆಲಸದಿಂದ ತೆಗೆದುಹಾಕಿ ಬೀದಿಪಾಲು ಮಾಡಲಾಗಿದೆ. ಅನೇಕರು ನಿವೃತ್ತಿಯ ಅಂಚಿನಲ್ಲಿದ್ದಾರೆ. ಅದರಲ್ಲೂ ಇಂಧನ ಇಲಾಖೆ, ಗಣಿ ಇಲಾಖೆ, ಆರೋಗ್ಯ ಇಲಾಖೆಗೆ ಹೊರಗುತ್ತಿಗೆ ಕಾರ್ಮಿಕರು ಮತ್ತು ಪೌರಕಾರ್ಮಿಕರು ಪ್ರಾಣಾಪಾಯದೊಂದಿಗೆ ಕೆಲಸ ಮಾಡುತ್ತಿದ್ದಾರೆ. ಅನೇಕರು ಕರ್ತವ್ಯ ನಿರತರಾಗಿದ್ದಾಗ ಅವಘಡದಿಂದ ಮೃತರಾಗಿದ್ದಾರೆ; ಶಾಶ್ವತ ಅಂಗವಿಕಲರೂ, ರೋಗಗ್ರಸ್ತರೂ ಆಗಿದ್ದಾರೆ. ಇವರಿಗೆ ಜೀವಭದ್ರತೆಯೂ ಇಲ್ಲ. ಜೀವನಭದ್ರತೆಯೂ ಇಲ್ಲ.

ಸಮಾಧಾನದ ಸಂಗತಿ ಎಂದರೆ, ಕಾರ್ಯಾಂಗವಲ್ಲದಿದ್ದರೂ ರಾಜ್ಯದ ಶಾಸಕಾಂಗವಾದರೂ ಈ ವಿಷಯದಲ್ಲಿ ಗಂಭೀರವಾಗಿ ಚಿಂತಿಸುತ್ತಿದೆ. ಸುಪ್ರೀಂ ಕೋರ್ಟ್ ತೀರ್ಪುಗಳು ಬಂದ ಮೇಲೆ ಮುಖ್ಯಮಂತ್ರಿಗಳು, ಶಾಸನ ಮತ್ತು ಸಂಸದೀಯ ಸಚಿವರ ಅಧ್ಯಕ್ಷತೆಯಲ್ಲಿ ಸಚಿವ ಸಂಪುಟದ ಉಪಸಮಿತಿ ರಚಿಸಿದ್ದು, ಆ ಉಪಸಮಿತಿ ಬೆಳಗಾವಿಯ ಅಧಿವೇಶನದಲ್ಲಿ ಮಸೂದೆ ಮಂಡಿಸಲು ಶಿಫಾರಸು ಮಾಡಿದೆ. ಇದೊಂದು ಉತ್ತಮ ಬೆಳವಣಿಗೆ. ಸರ್ಕಾರದ ರಾಜಕೀಯ ಇಚ್ಛಾಶಕ್ತಿ ಅಭಿನಂದನಾರ್ಹ. ಆದರೆ, ಸುಪ್ರೀಂ ಕೋರ್ಟ್ ಹೇಳಿರುವಂತೆ ವಿಳಂಬಕ್ಕೆ ಎಡೆಮಾಡಿಕೊಡದೆ, ಮಸೂದೆ ಮಂಡನೆ ಈ ಅಧಿವೇಶನದಲ್ಲಿಯೇ ಆಗಬೇಕು. ಆಗ ನಮ್ಮ ರಾಜ್ಯ ಸರ್ಕಾರ 'ಸಂವಿಧಾನ ಬದ್ಧ ಜೀವಪರ ಸರ್ಕಾರ' ಎಂದು ದೇಶಕ್ಕೇ ಮೊದಲ ಮಾದರಿಯಾಗುತ್ತದೆ.



ವಾಚಕರ ವಾಣಿ

ಯುವಜನರ ಹೋರಾಟ ಹತ್ತಿಕ್ಕುವ ತಂತ್ರ

ಅಧಿಕಾರದ ಗದ್ದುಗೆ ಏರಿದರೆ ರಾಜ್ಯದಲ್ಲಿ ಖಾಲಿ ಇರುವ ಸರ್ಕಾರಿ ಹುದ್ದೆಗಳ ಭರ್ತಿಗೆ ಕ್ರಮವಹಿಸುವುದಾಗಿ ಚುನಾವಣಾ ಪೂರ್ವದಲ್ಲಿ ಕಾಂಗ್ರೆಸ್ ಹೇಳಿತ್ತು. ಆದರೆ, ಅಧಿಕಾರಕ್ಕೇರಿ ಎರಡೂವರೆ ವರ್ಷ ಕಳೆದರೂ ಭರವಸೆ ಈಡೇರಿಸಿಲ್ಲ. ಈ ನಡುವೆ ಧಾರವಾಡದಲ್ಲಿ ಉದ್ಯೋಗಾಕಾಂಕ್ಷಿಗಳು ಬೃಹತ್ ಹೋರಾಟಕ್ಕೆ ಸಜ್ಜಾಗಿದ್ದರು. ಆಡಳಿತ ಯಂತ್ರವು ಈ ಹೋರಾಟ ಹತ್ತಿಕ್ಕುವ ದಮನಕಾರಿ ತಂತ್ರ ಅನುಸರಿಸಿದೆ. ಯುವಜನರ ಪ್ರಜಾಸತ್ತಾತ್ಮಕ ಹೋರಾಟದ ಹಕ್ಕನ್ನು ಮೊಟಕುಗೊಳಿಸಲು ಯತ್ನಿಸುವುದು ಬೆಂಕಿಯನ್ನು ಕಟ್ಟಿಹಾಕುವ ಪ್ರಯತ್ನದಂತೆ. ಅದರ ಫಲಶ್ರುತಿ ಶೂನ್ಯ; ಅಪಾಯವೇ ಹೆಚ್ಚು.

ಶರಣು ಗಡ್ಡಿ, ಕೊಪ್ಪಳ

ಉತ್ತರ ಕರ್ನಾಟಕದ ಸಮಸ್ಯೆ ಬಗ್ಗೆ ಚರ್ಚಿಸಿ

ಬೆಳಗಾವಿಯ ಸುವರ್ಣಸೌಧದಲ್ಲಿ ಚಳಿಗಾಲದ ವಿಧಾನಮಂಡಲ ಅಧಿವೇಶನ ನಡೆಯುತ್ತಿದೆ. ಆದರೆ, ಸದನದಲ್ಲಿ ಉತ್ತರ ಕರ್ನಾಟಕದ ಗಂಭೀರ ಸಮಸ್ಯೆಗಳು ಗಮನ ಸೆಳೆಯುತ್ತಿಲ್ಲ. ಅಂಗನವಾಡಿ ಕಾರ್ಯಕರ್ತೆಯರು, ಬಿಸಿಯೂಟದ ಕಾರ್ಯಕರ್ತೆಯರು ರಾಜ್ಯದಾದ್ಯಂತ ಪ್ರತಿಭಟಿಸುತ್ತಿದ್ದಾರೆ. ಈ ಬಗ್ಗೆ ಸರ್ಕಾರ ಮತ್ತು ವಿರೋಧ ಪಕ್ಷಗಳು ಗಮನಹರಿಸುತ್ತಿಲ್ಲ. ಇನ್ನಾದರೂ ಕುರ್ಚಿ ಕಿತ್ತಾಟದ ವಿಷಯ ಬದಿಗೊತ್ತಿ, ಸುವರ್ಣಸೌಧದಲ್ಲಿ ಉತ್ತರ ಕರ್ನಾಟಕದ ಜನತೆಗೂ ಒಂದಿಷ್ಟು ಸುವರ್ಣಯುಗ ತರುವ ಚರ್ಚೆ ಮಾಡಲಿ.

ನಾಗಾರ್ಜುನ್ ಸಿರಿವಂತ, ಬೆಂಗಳೂರು

ಇಂಗ್ಲಿಷ್ ಮೋಹ: ಸರ್ಕಾರಿ ಶಾಲೆಗೆ ಕುತ್ತು

'**ಪೋಷಕರ** ಆಯ್ಕೆ ಈಗಲೂ ಸರ್ಕಾರಿ ಶಾಲೆ' ವರದಿಯು (ಪ್ರ.ವಾ., ಡಿ. 9) ವರ್ತಮಾನಕ್ಕೆ ಕನ್ನಡಿ ಹಿಡಿದಿದೆ. ಆದರೂ, ಇಂದು ಎಲ್ಲಾ ವರ್ಗದ ಪೋಷಕರು ಇಂಗ್ಲಿಷ್ ವ್ಯಾಮೋಹದಿಂದ ತಮ್ಮ ಮಕ್ಕಳನ್ನು ಖಾಸಗಿ ಶಾಲೆಗಳಿಗೆ ಸೇರಿಸುತ್ತಿರುವುದು ಕಳವಳಕಾರಿ. ಇದು ಹೀಗೆಯೇ ಮುಂದುವರಿದರೆ ಕನ್ನಡ ಶಾಲೆಗಳು ಮುಚ್ಚುವ ಹಂತಕ್ಕೆ ಹೋಗುವುದರಲ್ಲಿ ಸಂದೇಹವೇ ಇಲ್ಲ. ಈ ಸಮಸ್ಯೆಗೆ, ಸರ್ಕಾರಿ ಶಾಲೆಗಳ ಗುಣಮಟ್ಟ ಹೆಚ್ಚಿದಲ್ಲಿ ಮಾತ್ರವೇ ಸ್ವಲ್ಪ ಪರಿಹಾರ ದೊರೆಯಬಹುದೇನೋ?

ಎಚ್.ಎಸ್. ಟಿ. ಸ್ವಾಮಿ, ಚಿತ್ರದುರ್ಗ

ಮತ ಮಾರಾಟದಿಂದ ಭ್ರಷ್ಟಾಚಾರ ಹೆಚ್ಚಳ

ಸಮಾಜದಲ್ಲಿ ಉಲ್ಬಣಿಸಿರುವ ಭ್ರಷ್ಟಾಚಾರಕ್ಕೆ ಜನರೇ ಅಂತ್ಯ ಹಾಡಬೇಕು. ರಾಜಕಾರಣಿಗಳು, ಅಧಿಕಾರಿಗಳು ಭ್ರಷ್ಟಾಚಾರ ನಿರ್ಮೂಲನೆ ಮಾಡುತ್ತಾರೆ ಎನ್ನುವುದು ಭ್ರಮೆಯಷ್ಟೆ! ಚುನಾವಣೆಗಳಲ್ಲಿ ಸಾವಿರಾರು ರೂಪಾಯಿಗೆ ಮತ ಮಾರಿಕೊಳ್ಳುತ್ತೇವೆ. ಇದರರ್ಥ ಮತದಾರರನ್ನು ಖರೀದಿಸಲು ರಾಜಕಾರಣಿಯು ಹಗರಣ ಮಾಡಿ ಹಣ ಗಳಿಸುತ್ತಾನೆ. ಹಾಗಾಗಿ, ಮತ ಮಾರಿಕೊಂಡವರಿಗೆ ಆಯ್ಕೆಗಳಿಲ್ಲ. ದೇಶದ ಚುನಾವಣಾ ಪ್ರಕ್ರಿಯೆಯು ಪಾರದರ್ಶಕವಾಗದೆ ಇಡೀ ವ್ಯವಸ್ಥೆಯನ್ನು ಸರಿಪಡಿಸುತ್ತೇವೆ ಎನ್ನುವುದು ಹಗಲುಗನಸು. ಜನಕೇಂದ್ರಿತವಾದ ಪ್ರಜಾಪ್ರಭುತ್ವದಲ್ಲಿ ಬದಲಾವಣೆ ಬಯಸುವವರು ಕೂಡ ಪ್ರಾಮಾಣಿಕ ವ್ಯಕ್ತಿತ್ವ ಹೊಂದಿರಬೇಕಲ್ಲವೆ?

ಸಿದ್ದಣ್ಣ ಪೂಜಾರಿ, ಯಕ್ಷಿಂತಿ

ನಿಂದನೆ

ಇಡೀ ಜಗತ್ತೇ
ಕೊಂಡಾಡುವವರನ್ನು
ನೀಚರಷ್ಟೇ
ನಿಂದಿಸುತ್ತಾರೆ.
ಎಲ್ಲಾ ಕಾಲಕ್ಕೂ
ಇತಿಹಾಸದಲ್ಲಿ
ಇಂಥವರು
ಇದ್ದೇ ಇರುತ್ತಾರೆ.

ಅ.ನಾ. ರಾವ್ ಜಾದವ್, ಬೆಂಗಳೂರು

ಬೀದಿನಾಯಿ ಹಾವಳಿ ತಡೆಯಲು ನಿರ್ಲಕ್ಷ್ಯ

ಇತ್ತೀಚೆಗೆ ಬೀದಿನಾಯಿಗಳ ಹಾವಳಿ ಮಿತಿಮೀರಿದ್ದು, ಸರ್ಕಾರ ಹಾಗೂ ಸ್ಥಳೀಯ ಆಡಳಿತಗಳು ಈ ವಿಚಾರವನ್ನು ಲಘುವಾಗಿ ಪರಿಗಣಿಸಿವೆ. ಬೀದಿನಾಯಿಗಳ ಹಾವಳಿ ತಡೆಯಲು ಹೈಕೋರ್ಟ್ ನಿರ್ದೇಶನ ನೀಡಿದೆ. ಆದರೆ, ಈ ಆದೇಶಕ್ಕೆ ಸರ್ಕಾರ ಹಾಗೂ ಸ್ಥಳೀಯ ಸರ್ಕಾರಗಳು ಕವಡೆಕಾಸಿನ ಕಿಮ್ಮತ್ತು ನೀಡದೆ ಬೇಜವಾಬ್ದಾರಿ ತೋರುತ್ತಿವೆ. ಇದರಿಂದ ಮಕ್ಕಳು, ಮಹಿಳೆಯರು, ವೃದ್ಧರು ತೊಂದರೆ ಅನುಭವಿಸುವಂತಾಗಿದೆ. ದಾವಣಗೆರೆ ಹೊರವಲಯದಲ್ಲಿ ರಾಟ್‌ವೀಲರ್ ತಳಿಯ ನಾಯಿಗಳು ಮಹಿಳೆ ದಾಳಿ ನಡೆಸಿ ಆಕೆಯ ಸಾವಿಗೆ ಕಾರಣವಾಗಿರುವ ಘಟನೆ ನಡೆದಿದೆ. ರಾಜ್ಯದಾದ್ಯಂತ ಹಲವೆಡೆ ಬೀದಿನಾಯಿ ದಾಳಿ ಬಗ್ಗೆ ಸುದ್ದಿಯಾಗುತ್ತಲೇ ಇದೆ. ಸರ್ಕಾರ ಕೈಕಟ್ಟಿ ಕೂರದೆ ಪರ್ಯಾಯ ವ್ಯವಸ್ಥೆ ರೂಪಿಸುವ ತುರ್ತಿದೆ.

ಮಂಜುನಾಥ್ ಜೈನ್ ಎಂ.ಪಿ., ಮಂಡ್ಯ

ಪಾಲುದಾರಿಕೆ

ಸರ್ಕಾರ ಬದಲಾದರೂ
ನಿಲ್ಲದ ಅಕ್ರಮ
ಮರಳು ಸಾಗಾಣಿಕೆ!
ಏಕೆಂದರೆ
ಈ ದಂಧೆಯಲ್ಲಿದೆ
ಎಲ್ಲಾ ಪಕ್ಷಗಳ
ಸಮಾನ ಪಾಲುದಾರಿಕೆ!

ವೈ. ಯಮುನೇಶ್, ಹೊಸಪೇಟೆ

ಜನರ ಜೀವ ಹಿಂಡುತಿದೆ ಹಾರುಬೂದಿ

ಕೊಪ್ಪಳದಲ್ಲಿ ಕಾರ್ಖಾನೆಗಳ ದೂಳು ಹಾಗೂ ಹಾರುಬೂದಿಯಿಂದ ಹಳ್ಳಿಗಳಲ್ಲಿನ ಜನರ ಬದುಕು ಮಸುಕಾಗುತ್ತಿದೆ. ನಾಗರಿಕರು ಹಲವು ರೋಗರುಜಿನಗಳಿಗೆ ತುತ್ತಾಗುತ್ತಿದ್ದಾರೆ. ಈ ಕಂಪನಿಗಳ ವಿರುದ್ಧ ನಾಗರಿಕರು ಹಾಗೂ ರೈತರು ಸುದೀರ್ಘ ಹೋರಾಟ ಮಾಡಿದರೂ ಸರ್ಕಾರ ಕಣ್ಣುಮುಚ್ಚಿಕೊಂಡು ಕುಳಿತಿದೆ. ಹಳ್ಳಿಗಳು ನಾಶವಾಗುವ ಮೊದಲು ಸರ್ಕಾರ ಎಚ್ಚತ್ತುಕೊಂಡು ಕಾರ್ಖಾನೆಗಳಿಂದ ಆಗುತ್ತಿರುವ ದುಷ್ಪರಿಣಾಮಗಳ ತಡೆಗೆ ಮಾರ್ಗೋಪಾಯ ರೂಪಿಸುವ ಅಗತ್ಯವಿದೆ.

ಖಾದರ್ ಬರಗೂರು, ಕೊಪ್ಪಳ

ಚುರುಮುರಿ



ಹೆಡ್‌ಲೈನ್ ಹೆಡ್ಡೇಕ್!

● ಮಣ್ಣೆ ರಾಜು

ಶಾಲಾ ಚಟುವಟಿಕೆ ಪರಿಶೀಲಿಸಲು ಶಿಕ್ಷಣಾಧಿಕಾರಿ ಬಂದಿದ್ದರು.

'ಪ್ರೇಯರ್ ಹಾಲ್‌ನಲ್ಲಿ ವಿದ್ಯಾರ್ಥಿಗಳ 'ನ್ಯೂಸ್ ಪೇಪರ್ ರೀಡಿಂಗ್' ಚಟುವಟಿಕೆಯನ್ನು ಈಗ ನಿಲ್ಲಿಸಿದ್ದೀರಂತೆ ಯಾಕೆ?' ಗರಂ ಆಗಿ ಕೇಳಿದರು.

'ಸಾರ್, ಪೇಪರ್ ಹೆಡ್‌ಲೈನ್ ಓದಿಸುವುದು ನಮಗೆ ಹೆಡ್ಡೇಕ್ ಆಗಿದೆ' ಎಂದರು ಹೆಡ್ ಮೇಷ್ಟ್ರು.

'ಅದೇ ಯಾಕೆಂತ? ನ್ಯೂಸ್ ಪೇಪರ್ ಓದಿದರೆ ಮಕ್ಕಳಲ್ಲಿ ಲೋಕಜ್ಞಾನ ಬೆಳೆಯುತ್ತೆ ಕಣ್ರೀ'.

'ಬಂಡೆಗೆ ಟಗರು ಡಿಚ್ಚಿ, ರಾಜಾ ಹುಲಿ ಅಖಾಡಕ್ಕೆ' ಎನ್ನುವ ಹೆಡ್‌ಲೈನ್‌ಗಳ ಬಗ್ಗೆ ಮಕ್ಕಳು ಕೇಳಿದರೆ ಏನು ವಿವರಣೆ ಕೊಡೋದು ಸಾರ್?' ವಿಜ್ಞಾನ ಮೇಷ್ಟ್ರು ಕೇಳಿದರು.

'60 ಪರ್ಸೆಂಟ್ ಸರ್ಕಾರ: ವಿಪಕ್ಷ ಆರೋಪ' ಎಂಬ ಹೆಡ್‌ಲೈನ್ ಓದಿದ ಮಕ್ಕಳು, 'ಇನ್ನೂ ಹಾರ್ಡ್ ವರ್ಕ್ ಮಾಡಿ ಪರ್ಸೆಂಟೇಜ್ ಹೆಚ್ಚಿಸಿಕೊಂಡರೆ ಸರ್ಕಾರ ಡಿಸ್ಟಿಂಕ್ಷನ್‌ನಲ್ಲಿ ಪಾಸಾಗಬಹುದು ಅಲ್ವಾ ಸಾರ್?' ಎಂದು ಕೇಳಿದರೆ ಏನು ಹೇಳೋದು?' ಗಣಿತ ಮೇಷ್ಟ್ರಿಗೆ ಕಳವಳ.

'ವಿದ್ಯಾರ್ಥಿ ನೇಣಿಗೆ ಶರಣು, ಮೊಬೈಲ್ ಕೊಡಲಿಲ್ಲವೆಂದು ಮನೆ ಬಿಟ್ಟುಹೋದ ಬಾಲಕ' ಈ ರೀತಿ ಹೆಡ್‌ಲೈನ್‌ಗಳನ್ನು ಮಕ್ಕಳಿಂದ ಓದಿಸಬೇಕೆ ಸಾರ್?' ಸಮಾಜ ಶಿಕ್ಷಕರು ಕೇಳಿದರು.

'ಸಮಾಜದಲ್ಲಿ ನಡೆಯುವಂಥ ಪ್ರಕರಣಗಳನ್ನೇ ಪತ್ರಿಕೆಗಳು ವರದಿ ಮಾಡುತ್ತವೆ ಕಣ್ರೀ' ಅಂದ್ರು ಶಿಕ್ಷಣಾಧಿಕಾರಿ.

'ಸಾರ್, 'ನಾಟಿ ಕೋಳಿ ಟಿಫನ್ ತಿಂದ ಸಿಎಂ–ಡಿಸಿಎಂ' ಎಂಬ ನ್ಯೂಸ್ ಓದಿದ ಮೇಲೆ ಮಕ್ಕಳು ಸ್ಕೂಲ್‌ನಲ್ಲಿ ಮೊಟ್ಟೆ ತಿನ್ನೋದಿಲ್ಲ ಎನ್ನುತ್ತಿವೆ' ಹೆಡ್ ಮೇಷ್ಟ್ರು ವಿಚಾರ ಹೇಳಿದರು.

'ಯಾಕಂತೆ?'

'ಮೊಟ್ಟೆ ಬೇಡ, ಬಿಸಿಯೂಟಕ್ಕೆ ನಾಟಿ ಕೋಳಿ ಸಾಂಬಾರ್ ಬೇಕೆಂದು ಕೇಳುತ್ತಿದ್ದಾರೆ!'

'ಕೋಳಿ ಕೇಳಿ ಮಸಾಲೆ ಅರೆಯಬಾರದು, ಮಕ್ಕಳನ್ನು ಕೇಳಿ ಸಾಂಬಾರ್ ಮಾಡಬಾರದು ಕಣ್ರೀ...' ಎಂದು ಸಣ್ಣದಾಗಿ ರೇಗಿ ಶಿಕ್ಷಣಾಧಿಕಾರಿ ಹೊರಟರು.

ಸಂಗತ

ಅಂಬೇಡ್ಕರ್ ಪುಸ್ತಕಪ್ರೀತಿ, ಎಳೆಯರಿಗೆ ಸ್ಫೂರ್ತಿ

ಜೀವಪರ ಸಮಾಜದ ಹಂಬಲ ಸಾಕಾರಗೊಳ್ಳಬೇಕಾದರೆ 'ಪುಸ್ತಕ ಸಂಸ್ಕೃತಿ' ಬಲಗೊಳ್ಳಬೇಕು. ಎಳೆಯ ಮನಸ್ಸುಗಳಲ್ಲಿ ಪುಸ್ತಕಪ್ರೀತಿಯ ಬೀಜ ಬಿತ್ತಬೇಕು.

● ಪ್ರೊ. ಎಚ್.ಟಿ. ಪೋತೆ

ಪುಸ್ತಕ ಸಂಸ್ಕೃತಿಯನ್ನು ಎಳೆಯರಿಗೆ ಮುಟ್ಟಿಸುವ ನಿಟ್ಟಿನಲ್ಲಿ ಸಂವಿಧಾನದ ನಿರ್ಮಾತೃ ಅಂಬೇಡ್ಕರ್ ಅವರ ಪುಸ್ತಕಪ್ರೀತಿ ಬಹುದೊಡ್ಡ ಪ್ರೇರಣೆಯಾಗಿ ಒದಗಿಬರುವಂತಹದ್ದು. ಜ್ಞಾನ, ವಿವೇಕ, ವಿಮರ್ಶಾಶಕ್ತಿ ಇವೆಲ್ಲವೂ ಪುಸ್ತಕಗಳ ಓದಿನ ಮೂಲಕವೇ ಮನುಷ್ಯನಲ್ಲಿ ಅರಳುವ ಗುಣಗಳು ಎನ್ನುವ ನಂಬಿಕೆಯನ್ನು ತಮ್ಮ ಜೀವನದ ಮೂಲಕವೇ ಸಾಬೀತುಪಡಿಸಿದ ಮಹನೀಯರಲ್ಲಿ ಅಂಬೇಡ್ಕರ್ ಪ್ರಮುಖರು.

ಅಂಬೇಡ್ಕರ್ ಅವರ ಜೀವನಗಾಥೆಯಲ್ಲಿ ಪುಸ್ತಕಪ್ರೀತಿಯೇ ಕೇಂದ್ರಬಿಂದು. ಬಾಲ್ಯದಿಂದ ಅಂತ್ಯದವರೆಗೆ ಬಾಬಾ ಸಾಹೇಬರು ಪುಸ್ತಕಗಳನ್ನು ಕೈಬಿಡಲಿಲ್ಲ; ಪುಸ್ತಕಗಳು ಅವರ ಕೈಬಿಡಲಿಲ್ಲ.

ಬಡತನ, ಜಾತಿ ಆಧಾರಿತ ಅವಮಾನ, ಸಾಮಾಜಿಕ ನಿರಾಕರಣೆಗಳಂತಹ ಕಠಿಣ ಸಂದರ್ಭಗಳಲ್ಲೂ ಅಂಬೇಡ್ಕರ್ ಓದನ್ನು ನಿಲ್ಲಿಸಿರಲಿಲ್ಲ. ಪುಸ್ತಕಗಳನ್ನು ಖರೀದಿಸಲು ಆಗದಿದ್ದಾಗ ಗ್ರಂಥಾಲಯವೇ ಅವರಿಗೆ ಓದಿನಮನೆಯಾಗಿತ್ತು. ಅಂಬೇಡ್ಕರ್ ಅವರಿಗೆ ಓದುವುದಕ್ಕೆ ವಿರಾಮ ಬೇಕಿರಲಿಲ್ಲ; ಓದು ಎನ್ನುವುದೇ ಅವರ ಪಾಲಿಗೆ ವಿರಾಮವಾಗಿತ್ತು; ಬದುಕಿನ ಅನುದಿನದ ಸಂಕಟಗಳಿಗೆ ಉತ್ತರವಾಗಿತ್ತು. ಕೊಲಂಬಿಯಾ ವಿಶ್ವವಿದ್ಯಾಲಯದಲ್ಲಿ ಅವರು ದಿನಕ್ಕೆ 18 ತಾಸು ಓದುವ ಅಭ್ಯಾಸ ಹೊಂದಿದ್ದರು. ಅವರ ಓದನ್ನು ನೋಡಿದ ಗ್ರಂಥಾಲಯದ ಅಧಿಕಾರಿ– 'ಈ ವಿದ್ಯಾರ್ಥಿ ಓದುತ್ತಿಲ್ಲ, ಪುಸ್ತಕಗಳನ್ನು ಅರಗಿಸಿ ಕುಡಿಯುತ್ತಿದ್ದಾನೆ' ಎಂದು ಹೇಳಿರುವುದು ಅವರ ಜ್ಞಾನಾಸಕ್ತಿ ಎಷ್ಟು ತೀವ್ರವಾಗಿತ್ತು ಎನ್ನುವುದಕ್ಕೆ ಉದಾಹರಣೆ. ಓದನ್ನು ಅವರು ಸಂಶೋಧನೆಗಾಗಿ ಮಾತ್ರವಲ್ಲದೆ, ಜೀವನಕ್ಕೆ ಅರ್ಥ ಕೊಡುವ ಸಾಧನವಾಗಿಯೂ ಬಳಸಿಕೊಂಡರು.



ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್‌ನಲ್ಲಿ ಇದ್ದಾಗ ತಿಂಗಳಿಗೊಮ್ಮೆ 20–25 ಪುಸ್ತಕಗಳನ್ನು ಖರೀದಿಸಿ ಸಂಗ್ರಹಿಸುತ್ತಿದ್ದರು. ಇಂಗ್ಲೆಂಡ್ ತೊರೆದು ಭಾರತಕ್ಕೆ ಮರಳುವಾಗ ಅವರಲ್ಲಿದ್ದ ಪುಸ್ತಕಗಳು 32 ದೊಡ್ಡ ಪೆಟ್ಟಿಗೆಗಳಲ್ಲಿ ತುಂಬುವಷ್ಟಿದ್ದವು. ಅಷ್ಟೂ ಪುಸ್ತಕಗಳ ಸಾಗಣೆಯ ವೆಚ್ಚ ಭರಿಸುವುದು ಅವರಿದ್ದ ಸ್ಥಿತಿಯಲ್ಲಿ ಕಷ್ಟವಾಗಿತ್ತು. ಆದರೆ, ಅವುಗಳನ್ನು ಬಿಟ್ಟು ಬರಲು ಅವರಿಗೆ ಮನಸ್ಸಾಗಲಿಲ್ಲ. ಜೀವನದಲ್ಲಿ ಏನನ್ನು ಬೇಕಾದರೂ ಕಳೆದುಕೊಳ್ಳಬಹುದು, ಪುಸ್ತಕಗಳನ್ನು ಕಳೆದುಕೊಳ್ಳಲು ಸಾಧ್ಯವಿಲ್ಲ ಎನ್ನುವುದು ಅವರ ನಂಬಿಕೆಯಾಗಿತ್ತು. ಅಂಬೇಡ್ಕರ್ ಅವರ ವೈಚಾರಿಕ, ರಾಜಕೀಯ ಮತ್ತು ಸಾಮಾಜಿಕ ಕ್ರಾಂತಿಗೆ ಪುಸ್ತಕಗಳೇ ಅಡಿಪಾಯವಾದವು. ಅವರು ಓದಿದ ವಿಶ್ವಸಂವಿಧಾನಗಳು, ಕಾನೂನುಗ್ರಂಥಗಳು ಮತ್ತು ಐತಿಹಾಸಿಕ ದಾಖಲೆಗಳು ಭಾರತದ ಸಂವಿಧಾನ ರಚನೆಗೆ ದ್ರವ್ಯವಾಗಿ ಪರಿಣಮಿಸಿದವು. ಅಂಬೇಡ್ಕರ್ ಅವರ ಜ್ಞಾನಾರ್ಜನೆ ಭಾರತದ ಪ್ರಜಾಪ್ರಭುತ್ವದ ಮೂಲಸ್ತಂಭವನ್ನೇ ರೂಪಿಸಿತು. ಬಹುಶಃ, ಓದಿನ ಬಹುದೊಡ್ಡ ಪ್ರಯೋಜನಕ್ಕೆ 'ಭಾರತದ ಸಂವಿಧಾನ'ಕ್ಕಿಂತ ಅತ್ಯುತ್ತಮ ಉದಾಹರಣೆ ಇರಲಾರದು.

ಅಂಬೇಡ್ಕರ್ ಅವರ ಓದಿನ ಮೂಲ ಉದ್ದೇಶ, ಜ್ಞಾನವನ್ನು ಮಾನವದಾಸ್ಯದ ಮುಕ್ತಿಗಾಗಿ ಉಪಯೋಗಿಸುವುದೇ ಆಗಿತ್ತು. ಬೌದ್ಧಧಮ್ಮ ದೀಕ್ಷೆ ಸ್ವೀಕರಿಸುವ ಮುನ್ನ ಅವರು ವರ್ಷಗಳ ಕಾಲ ಬೌದ್ಧಧರ್ಮದ ಮೂಲಗ್ರಂಥಗಳನ್ನು ಅಧ್ಯಯನ ಮಾಡಿದ್ದರು. ಪುಸ್ತಕಗಳು ಅವರ ಆಧ್ಯಾತ್ಮಿಕ ನವೋತ್ಥಾನದ ಮೂಲಸೆಲೆ ಆಗಿದ್ದವು. ಅಂಬೇಡ್ಕರ್ ಬರೀ ಅತ್ಯುತ್ತಮ ಓದುಗರಷ್ಟೇ ಆಗಿರಲಿಲ್ಲ; ಪುಸ್ತಕಗಳ ಬಹುದೊಡ್ಡ ಸಂಗ್ರಹಕರ್ತರೂ ಹೌದು. ಐವತ್ತು ಸಾವಿರಕ್ಕೂ ಹೆಚ್ಚು ಪುಸ್ತಕಗಳು ಅವರ ಸಂಗ್ರಹದಲ್ಲಿದ್ದವು ಹಾಗೂ ಆ ಸಂಗ್ರಹ ವಿಶ್ವದ ಬಹು ಅಮೂಲ್ಯ ಪುಸ್ತಕಸಂಗ್ರಹಗಳಲ್ಲಿ ಒಂದಾಗಿದೆ. ಬಾಬಾಸಾಹೇಬರ ಪುಸ್ತಕಸಂಗ್ರಹ ನಿಧಿಯನ್ನು ಈಗಲೂ ಮುಂಬೈಯಲ್ಲಿನ 'ರಾಜಗೃಹ'ದಲ್ಲಿ ನೋಡಬಹುದು. 'ನನ್ನ ನಿಜವಾದ ಆಸ್ತಿ ನನ್ನ ಪುಸ್ತಕಗಳು' ಎನ್ನುವುದು ಅವರ ಹೃದಯದ ಮಾತು ಹಾಗೂ ಪುಸ್ತಕ ಸಂಸ್ಕೃತಿಯ ಮಹತ್ವವನ್ನು ಮನಗಾಣಿಸುವ ಹೇಳಿಕೆ.

ಇತಿಹಾಸ, ರಾಜಕೀಯ, ಆರ್ಥಿಕತೆಯ ಜೊತೆಗೆ ಮನೋವಿಜ್ಞಾನ, ಧರ್ಮ, ಕಾನೂನು ಹಾಗೂ ಸಮಾಜಶಾಸ್ತ್ರ ಸೇರಿದಂತೆ ಜೀವನಕ್ಕೆ ಸಂಬಂಧಿಸಿದ ಅನೇಕ ಕ್ಷೇತ್ರಗಳನ್ನು ಅಂಬೇಡ್ಕರ್ ಅವರ ಓದು ಒಳಗೊಂಡಿತ್ತು. ವ್ಯಾಪಕ ಓದಿನ ಪರಿಣಾಮವಾಗಿಯೇ ಅವರ ಚಿಂತನೆಗಳಲ್ಲಿ ಭಾವುಕತೆ ಹಿಂದೆಸರಿದು, ವೈಜ್ಞಾನಿಕತೆ ಮತ್ತು ನೈತಿಕತೆಯೇ ಪ್ರಧಾನವಾಗಿದೆ. 'ಜ್ಞಾನವಿಲ್ಲದೇ ಸಮಾಜದ ಪರಿವರ್ತನೆ ಸಾಧ್ಯವಿಲ್ಲ' ಹಾಗೂ 'ಎಲ್ಲಕ್ಕಿಂತ ದೊಡ್ಡ ಕ್ರಾಂತಿಯೇ ವಿದ್ಯೆಯ ಕ್ರಾಂತಿ' ಎನ್ನುವ ಅವರ ಮಾತುಗಳ ಓದಿನ ಮಹತ್ವವನ್ನು ಸಾರುವಂತಿವೆ.

ಇಂದಿನ ತಂತ್ರಜ್ಞಾನಯುಗದಲ್ಲೂ ಅಂಬೇಡ್ಕರ್ ಅವರ ಪುಸ್ತಕಪ್ರೀತಿ ನಮಗೆ ದಿಕ್ಕು ತೋರಿಸುವಂತಿದೆ. ಮಾಹಿತಿಯ ಅತಿರೇಕದ ಕಾಲದಲ್ಲೂ ನಿಖರವಾದ ಓದು, ತತ್ತ್ವಪರ ವಿಶ್ಲೇಷಣೆ ಮತ್ತು ವಿಮರ್ಶಾತ್ಮಕ ಚಿಂತನೆ ಅತ್ಯಗತ್ಯ ಎಂಬ ಸಂದೇಶವನ್ನು ಅವರ ಜೀವನವೇ ಸಾರುತ್ತದೆ. ಓದಿನಿಂದ ವ್ಯಕ್ತಿ ಬದಲಾಗುತ್ತಾನೆ; ವ್ಯಕ್ತಿಯ ಬದಲಾವಣೆ ಸಮಾಜದ ಬದಲಾವಣೆಗೆ ಬೀಜವಾಗುತ್ತದೆ ಎನ್ನುವ ಬಾಬಾಸಾಹೇಬರ ನಿಲುವು ಇಂದಿನ ಯುವತಲೆಮಾರಿಗೆ ಅತ್ಯಂತ ಪ್ರಸ್ತುತವಾಗಿದೆ. ಅಂಬೇಡ್ಕರ್‌ಪ್ರಣೀತ 'ಪುಸ್ತಕಪ್ರೀತಿ' ವೈಯಕ್ತಿಕ ಆಸಕ್ತಿ ಮಾತ್ರವಲ್ಲ; ಅದು ಮಾನವ ದಾಸ್ಯದ ಮುಕ್ತಿಯನ್ನು ಗುರಿಯನ್ನಾಗಿಸಿಕೊಂಡ ಜ್ಞಾನಯೋಗದ ವಿಶಿಷ್ಟ ಪಥ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ವಂದೇ ಮಾತರಂ ಸ್ಫೂರ್ತಿಗೀತೆಯ ಸುತ್ತ ವಿವಾದದ ಜ್ವಾಲೆ



ಬಂಗಾಳಿ ಸಾಹಿತಿ ಬಂಕಿಮಚಂದ್ರ ಚಟರ್ಜಿ ಅವರು 'ವಂದೇ ಮಾತರಂ' ಅನ್ನು ಮೊದಲು ಬರೆದಾಗ ಇದ್ದದ್ದು ಎರಡೇ ಪ್ಯಾರಾ. ಹಲವು ವರ್ಷಗಳ ನಂತರ ಅದು 'ಆನಂದಮಠ' ಕಾದಂಬರಿಯ ಭಾಗವಾಗಿ ಪ್ರಕಟವಾದಾಗ ಅದರ ಸ್ವರೂಪ ಬದಲಾಗಿತ್ತು; ಮತ್ತಷ್ಟು ಪ್ಯಾರಾಗಳು ಅದಕ್ಕೆ ಸೇರ್ಪಡೆಯಾಗಿದ್ದವು. ತಾಯ್ನೆಲವನ್ನು ದೇವಿ ದುರ್ಗೆಯೊಂದಿಗೆ ಮೂರ್ತೀಕರಿಸಲಾಗಿತ್ತು. ಕಾದಂಬರಿಯ ಸ್ತುತಿಗೀತೆಯು ಸ್ವಾತಂತ್ರ್ಯ ಹೋರಾಟದ ಘೋಷಣೆಯಾಯಿತು; ಹೋರಾಟದ ಹಾಡಾಗಿ ಜನಪ್ರಿಯವಾಯಿತು. ಪಶ್ಚಿಮ ಬಂಗಾಳದ ರಾಜಕಾರಣ ಮತ್ತು ದೇಶದ ರಾಜಕಾರಣ ಬದಲಾದಂತೆ ವಿವಿಧ ಅರ್ಥಗಳನ್ನು, ನಿರ್ದಿಷ್ಟ ಸಾಂಸ್ಕೃತಿಕ ಸ್ವರೂಪವನ್ನು ಪಡೆಯುತ್ತಾ ಸಾಗಿತು. ಚರಿತ್ರೆಯ ವಸ್ತುವೊಂದು ರಾಜಕಾರಣದ ಹುದಲಿನಲ್ಲಿ ಸಿಲುಕಿ ವರ್ತಮಾನದಲ್ಲಿಯೂ ವಿವಾದದ ಜ್ವಾಲೆ ಹೊಮ್ಮಿಸುತ್ತಲೇ ಇದೆ

• ಸೂರ್ಯನಾರಾಯಣ ವಿ., ಬಿ.ವಿ.ಶ್ರೀನಾಥ್

ಖ್ಯಾತ ಬಂಗಾಳಿ ಲೇಖಕರಾಗಿದ್ದ ಬಂಕಿಮಚಂದ್ರ ಚಟರ್ಜಿ ಅವರು 1874ರಲ್ಲಿ 'ಬಂಗದರ್ಶನ್' ಎನ್ನುವ ಸಾಹಿತ್ಯ ಪತ್ರಿಕೆಯಲ್ಲಿ ವಿಗ್ರಹಾರಾಧನೆಯ ಬಗ್ಗೆ ಲೇಖನವೊಂದನ್ನು ಬರೆದಿದ್ದರು. ವಿಗ್ರಹಾರಾಧನೆಯು ಜ್ಞಾನ–ವಿಜ್ಞಾನದ ವಿರೋಧಿ ಎಂದು ಪ್ರತಿಪಾದಿಸಿದ್ದ ಅವರು, ಜ್ಞಾನದ ಬೆಳವಣಿಗೆಯನ್ನು ಉತ್ತೇಜಿಸಿದ ಗ್ರೀಕ್ ತತ್ವಜ್ಞಾನಿಗಳಾಗಲೀ, ವಿಜ್ಞಾನಿಗಳಾಗಲೀ, ಆರ್ಯನ್ ಸಾಧುಗಳಾಗಲೀ ವಿಗ್ರಹಾರಾಧನೆಯ ಪರವಾಗಿರಲಿಲ್ಲ ಎಂದು ಲೇಖನದಲ್ಲಿ ಉಲ್ಲೇಖಿಸಿದ್ದರು. ಸುಮಾರು ಅದೇ ಅವಧಿಯಲ್ಲಿಯೇ (1875) ಅವರು 'ವಂದೇ ಮಾತರಂ' (ನಮಿಸುವೆ ಮಾತೆ) ಗೀತೆಯ ಮೊದಲ ಎರಡು ಪ್ಯಾರಾಗಳನ್ನು ಬರೆದರು. ಅವುಗಳಲ್ಲಿ ಮೂರ್ತಿಪೂಜೆಯ ಉಲ್ಲೇಖ ಇರಲಿಲ್ಲ. ಅದನ್ನು ಅವರು ಎಲ್ಲಿಯೂ ಪ್ರಕಟಿಸಲಿಲ್ಲ.

ಬಂಕಿಮಚಂದ್ರರ 'ಆನಂದಮಠ' ಕಾದಂಬರಿಯು 1881ರಲ್ಲಿ 'ಬಂಗದರ್ಶನ್' ಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟವಾಗಿ, ಅಪಾರ ಜನಪ್ರಿಯತೆ ಪಡೆಯಿತು. ಬಂಗಾಳದಲ್ಲಿ ತೀವ್ರ ಬರಗಾಲ, ರೈತರ ಸಂಕಷ್ಟ ಇದ್ದ ಕಾಲದ (1770) ಕಥಾವಸ್ತುವನ್ನು ಹೊಂದಿದ್ದ ಕಾದಂಬರಿಯು, ಫಕೀರರು–ಸನ್ಯಾಸಿಗಳು ಈಸ್ಟ್ ಇಂಡಿಯಾ ಕಂಪನಿಯ ಗುಲಾಮನಂತಿದ್ದ ನವಾಬನ ವಿರುದ್ಧ ಹೋರಾಡುವುದರ ಕಥನವಾಗಿತ್ತು. ವಿಶೇಷ ಏನೆಂದರೆ, ಅವರು ಈ ಹಿಂದೆ ಬರೆದಿದ್ದ 'ವಂದೇ ಮಾತರಂ' ಹಾಡು ಕಾದಂಬರಿಯಲ್ಲಿ ಸ್ಥಾನ ಪಡೆದಿತ್ತು. ಅವರ ಗೀತೆಯಲ್ಲಿ ಮೂಲದ ಎರಡು ಪ್ಯಾರಾಗಳ ಜತೆಗೆ ಹೊಸದಾಗಿ ಎರಡು ಪ್ಯಾರಾ ಸೇರಿದ್ದವು ಮತ್ತು ಮುಖ್ಯವಾಗಿ, ವಿಗ್ರಹಾರಾಧನೆಯ ಉಲ್ಲೇಖವಿತ್ತು. ಕಾದಂಬರಿಯ ಕೊನೆಯಲ್ಲಿ ಸನ್ಯಾಸಿಗಳು ಗೀತೆಯನ್ನು ಹಾಡುತ್ತಾರೆ. ಗದ್ಯ–ಪದ್ಯ ಮಿಶ್ರಿತ ಶೈಲಿಯಲ್ಲಿ, ದೇವಿ ದುರ್ಗೆಯನ್ನು ತಾಯಿಯೊಂದಿಗೆ (ದೇಶ) ಸಮೀಕರಿಸಿ, ಆ ತಾಯಿಯ ಪ್ರಾಕೃತಿಕ ವೈಭವ ಮತ್ತು ಶಕ್ತಿ ಸಾಮರ್ಥ್ಯಗಳನ್ನು ಅವರು ಚಿತ್ರಿಸಿದ್ದರು. ತಾಯಿಯ ಉಗ್ರರೂಪವನ್ನೂ ಗೀತೆಯಲ್ಲಿ ವರ್ಣಿಸಿದ್ದರು. ಬಂಕಿಮಚಂದ್ರರು ತಮ್ಮ ಸ್ವಾತಂತ್ರ್ಯ ಹೋರಾಟದ ಕಥಾವಸ್ತುವಿನ ಕೃತಿಯಲ್ಲಿ ಹಿಂದೂ ಧಾರ್ಮಿಕ ಪ್ರತಿಮೆಗಳಿರುವ ಗೀತೆಯನ್ನು ಬಳಸಿದ್ದರು.

ಬ್ರಿಟಿಷರ ವಿರುದ್ಧ ಜನಾಭಿಪ್ರಾಯ ರೂಪುಗೊಳ್ಳುತ್ತಿದ್ದ, ಸ್ವಾತಂತ್ರ್ಯ ಹೋರಾಟವು ಹಬ್ಬುತ್ತಿದ್ದ ಕಾಲ ಅದು. ಈ ಚಾರಿತ್ರಿಕ ಸಂದರ್ಭದಲ್ಲಿ ಸಹಜವಾಗಿಯೇ 'ವಂದೇ ಮಾತರಂ' ಗೀತೆಯೂ ನಿಧಾನಕ್ಕೆ ಜನಪ್ರಿಯವಾಗತೊಡಗಿತ್ತು. 1896ರ ಕಾಂಗ್ರೆಸ್ ಸಮಾವೇಶದಲ್ಲಿ ಗೀತೆಯನ್ನು ಮೊದಲ ಬಾರಿಗೆ ಹಾಡಲಾಯಿತು. ಬ್ರಿಟಿಷರು 1905ರಲ್ಲಿ ಹಿಂದೂ–ಮುಸ್ಲಿಂ ಜನಸಂಖ್ಯಾ ಬಾಹುಳ್ಯದ ಆಧಾರದಲ್ಲಿ ಬಂಗಾಳವನ್ನು ವಿಭಜಿಸಲು ಮುಂದಾದರು. ಈ ಸಂದರ್ಭದಲ್ಲಿ 'ವಂದೇ ಮಾತರಂ' ಮತ್ತಷ್ಟು ಜನಪ್ರಿಯತೆ ಪಡೆಯಿತು. ಜನ ಅದನ್ನು ವ್ಯಾಪಕವಾಗಿ ಹಾಡತೊಡಗಿದರು. 1920ರ ಹೊತ್ತಿಗೆ ಬಹುತೇಕ ಭಾಷೆಗಳಿಗೆ ಅನುವಾದಗೊಂಡಿದ್ದ ಅದು, ರಾಷ್ಟ್ರೀಯವಾದಿಗಳ ನೆಚ್ಚಿನ ಹಾಡಾಗಿ ಬದಲಾಗಿತ್ತು.

> 'ವಂದೇ ಮಾತರಂ' ಗೀತೆ 19ನೇ ಶತಮಾನದ ಕೊನೆ–20ನೇ ಶತಮಾನದ ಆರಂಭದಲ್ಲಿ ದೇಶದಾದ್ಯಂತ ಪಸರಿಸಿತು. ಅದೆಷ್ಟು ಖ್ಯಾತಿ ಗಳಿಸಿತು ಎಂದರೆ, 1906 ಆಗಸ್ಟ್ 6ರಂದು ಕಲ್ಕತ್ತದಲ್ಲಿ 'ವಂದೇ ಮಾತರಂ' ಹೆಸರಿನಲ್ಲಿ ಇಂಗ್ಲಿಷ್ ಪತ್ರಿಕೆ ಆರಂಭಗೊಂಡಿತು. ವಿಪಿನ್ ಚಂದ್ರಪಾಲ್ (ಲಾಲ್–ಬಾಲ್–ಪಾಲ್ ಎಂದು ಖ್ಯಾತಿ ಗಳಿಸಿದ ಮೂವರಲ್ಲಿ ಒಬ್ಬರು) ಇದರ ಸಂಸ್ಥಾಪಕರು. ಈ ಪತ್ರಿಕೆಯ ವಿರುದ್ಧ ಬ್ರಿಟಿಷ್ ಆಡಳಿತ ದೇಶದ್ರೋಹ ಪ್ರಕರಣವನ್ನೂ ದಾಖಲಿಸಿತ್ತು

ಮುಸ್ಲಿಂ ವಿರೋಧ: ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ 'ವಂದೇ ಮಾತರಂ' ಅನ್ನು ಸ್ವಾತಂತ್ರ್ಯ ಹೋರಾಟದ ಸ್ಫೂರ್ತಿಗೀತೆಯಾಗಿ ಬಳಸುತ್ತಿತ್ತು. ಹಿಂದೂಗಳು ಕೋಮು ಹಿಂಸಾಚಾರದ ಸಂದರ್ಭದಲ್ಲಿ ಈ ಹಾಡನ್ನು ಬಳಸುತ್ತಿದ್ದರು. ಈ ದಿಸೆಯಲ್ಲಿ ಬಂಕಿಮಚಂದ್ರರ ಜೀವಿತಾವಧಿಯಲ್ಲಿಯೇ ಗೀತೆಗೆ ಮುಸ್ಲಿಂ ಸಮುದಾಯದ ಕೆಲವರಿಂದ ವಿರೋಧ ವ್ಯಕ್ತವಾಗಿತ್ತು. ಮುಸ್ಲಿಂ ಅರಸರ ವಿರುದ್ಧ ಹಿಂದೂಗಳ ಹೋರಾಟವನ್ನು 'ಆನಂದಮಠ' ಕಾದಂಬರಿಯಲ್ಲಿ ವೈಭವೀಕರಿಸಲಾಗಿದೆ ಎನ್ನುವ ವಿಶ್ಲೇಷಣೆಯೂ ಕೇಳಿಬಂದಿತ್ತು. ಜತೆಗೆ, ಹಿಂದೂ ದೇವತೆಯ ಪ್ರಸ್ತಾಪ, ವರ್ಣನೆ ಇರುವ ಗೀತೆಯಲ್ಲಿ ತಾಯ್ನಾಡನ್ನು ದೈವೀಕರಿಸಿರುವುದರ ಬಗ್ಗೆ ಮುಸ್ಲಿಮರಿಂದ ವಿರೋಧದ ಧ್ವನಿಗಳು ಕೇಳಿಬಂದವು. ಸ್ವಾತಂತ್ರ್ಯ ಹೋರಾಟವು ಎಲ್ಲ ಸಮುದಾಯಗಳ ಹೋರಾಟವಾಗಿದ್ದು, ಅಂಥ ಹೋರಾಟದಲ್ಲಿ ಈ ಗೀತೆ ಹಾಡುವುದು ಮುಸ್ಲಿಮರಿಗೆ ಇರಿಸುಮುರುಸು ಉಂಟುಮಾಡುತ್ತದೆ, ಅವರನ್ನು ಹೋರಾಟದಿಂದ ಹೊರಗಿಡುತ್ತದೆ ಎನ್ನುವ ಅಭಿಪ್ರಾಯಗಳು ವ್ಯಕ್ತವಾದವು. ಆದರೆ, ಶಾಲೆಗಳಲ್ಲಿ ಎಲ್ಲ ಧರ್ಮದ ಮಕ್ಕಳೂ 'ವಂದೇ ಮಾತರಂ' ಹಾಡುವುದನ್ನು ಕಾಂಗ್ರೆಸ್ ಕಡ್ಡಾಯ ಮಾಡಿತು. ಇದರಿಂದ ಮುಸ್ಲಿಮರ ಅಸಮಾಧಾನ ಹೆಚ್ಚಾಗುತ್ತಾ ಸಾಗಿ, ಮುಸ್ಲಿಂ ಲೀಗ್ ಪ್ರವೇಶದೊಂದಿಗೆ ಅದು ಮತ್ತಷ್ಟು ಸಂಕೀರ್ಣ ಸ್ವರೂಪ ಪಡೆಯಿತು.

ರಾಜಕೀಯ ಲೇಪ: 'ವಂದೇ ಮಾತರಂ' ಗೀತೆಯು 'ಆನಂದಮಠ' ಕಾದಂಬರಿಯಲ್ಲಿ ಸ್ಥಾನ ಪಡೆದ ದಿನದಿಂದಲೂ ಆಯಾ ಕಾಲಮಾನದ ರಾಜಕೀಯ, ಆಡಳಿತ ವ್ಯವಸ್ಥೆಗೆ ತಕ್ಕಂತೆ ಹಲವು ಸ್ವರೂಪಗಳನ್ನು ಪಡೆಯುತ್ತಲೇ ಬಂದಿದೆ. ಬಂಕಿಮಚಂದ್ರರು ತಮ್ಮ ಹಿಂದೂ ಧಾರ್ಮಿಕ ಹಿನ್ನೆಲೆಗನುಗುಣವಾಗಿ ಬರೆದ ಸ್ತುತಿಗೀತೆಯು ತನ್ನ ಗೇಯಗುಣ, ಭಾವತೀವ್ರತೆ, ಆಕರ್ಷಕ ಶೈಲಿಯಿಂದ ಸ್ವಾತಂತ್ರ್ಯ ಹೋರಾಟದಲ್ಲಿ ಜನರನ್ನು ಸೆಳೆಯಲು ಬಳಕೆಯಾಯಿತು. ಹಿಂದೂ ಮಹಾಸಭಾ ಮತ್ತು ಮುಸ್ಲಿಂ ಲೀಗ್ ಹುಟ್ಟು ಪಡೆದ ನಂತರ ಅದರ ಕೋಮು ಆಯಾಮಕ್ಕೆ ಹೆಚ್ಚು ಒತ್ತು ಸಿಕ್ಕಿತು.

ಸ್ವಾತಂತ್ರ್ಯಪೂರ್ವದಲ್ಲಿ ಅದನ್ನು ರಾಷ್ಟ್ರ ಗೀತೆಯನ್ನಾಗಿ ಮಾಡುವ ಚಿಂತನೆ ಕೆಲವರಲ್ಲಿತ್ತು. ಐದು ಪ್ಯಾರಾಗಳ ಹಾಡನ್ನು ಎರಡು ಪ್ಯಾರಾಗಳಿಗೆ ಇಳಿಸುವ ನಿರ್ಧಾರವನ್ನು ನೆಹರೂ ಅವರನ್ನೊಳಗೊಂಡತೆ ಅಂದಿನ ನಾಯಕರು ಕೈಗೊಂಡಿದ್ದರು. ಅದರ ಜನಪ್ರಿಯತೆ, ಸ್ಫೂರ್ತಿಗುಣವನ್ನು ಅರಿತಿದ್ದ ನೆಹರೂ ಅವರು, ಸ್ವಾತಂತ್ರ್ಯಾನಂತರ ಅದನ್ನು ರಾಷ್ಟ್ರೀಯ ಹಾಡನ್ನಾಗಿ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸಿದರು.

ಮುಂದೆ, ಹಾಡಿನ ಸುತ್ತ ಚರ್ಚೆಗಳು ಚಾಲ್ತಿಯಲ್ಲಿದ್ದರೂ, ಅದು ತೀವ್ರಗೊಂಡದ್ದು ರಾಷ್ಟ್ರೀಯವಾದಿ ಬಿಜೆಪಿ ಅಧಿಕಾರಕ್ಕೆ ಬಂದ ನಂತರ. 2026ರ ಮಾರ್ಚ್–ಏಪ್ರಿಲ್‌ನಲ್ಲಿ ಪಶ್ಚಿಮ ಬಂಗಾಳದ ವಿಧಾನಸಭೆಗೆ ಚುನಾವಣೆ ನಡೆಯುತ್ತಿರುವ ಹಿನ್ನೆಲೆಯಲ್ಲಿ ಬಿಜೆಪಿ ಈಗಿನಿಂದಲೇ ನೆಲ ಹದಗೊಳಿಸುವ ಪ್ರಯತ್ನವಾಗಿ ಬಂಕಿಮಚಂದ್ರ ಮತ್ತು 'ವಂದೇ ಮಾತರಂ' ಮೂಲಕ ಹಿಂದೂ ಕಾರ್ಯಸೂಚಿಯನ್ನು ಮುನ್ನೆಲೆಗೆ ತರುತ್ತಿದೆ ಎನ್ನುವ ವಿಶ್ಲೇಷಣೆಗಳಿವೆ.

ಮುಸ್ಲಿಂ ಲೀಗ್ ತೀವ್ರ ವಿರೋಧ

ಕಲ್ಕತ್ತದಲ್ಲಿ 1896ರಲ್ಲಿ ನಡೆದ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ 12ನೇ ಸಮಾವೇಶದಲ್ಲಿ ರವೀಂದ್ರನಾಥ ಟ್ಯಾಗೋರ್ ಅವರು ಮೊದಲ ಬಾರಿಗೆ ಈ ಗೀತೆಯನ್ನು ಹಾಡಿದಾಗ, ರಹೀಮುತುಲ್ಲಾ ಸಯಾನಿ ಅವರು ಆ ಸಮಾವೇಶದ ಅಧ್ಯಕ್ಷರಾಗಿದ್ದರು. 1905ರ ನಂತರ 'ವಂದೇ ಮಾತರಂ' ಸ್ವಾತಂತ್ರ್ಯ ಹೋರಾಟದ ಭಾಗವಾಗಿ ಬದಲಾಯಿತು. ಆದರೆ, ಹಾಡಿನಲ್ಲಿರುವ ದೇವತೆಗಳ ಪ್ರಸ್ತಾಪ ಮತ್ತು ಹಿಂದೂ ಪರವಾದ ಧ್ವನಿ ಮುಸ್ಲಿಮರ ಆಕ್ಷೇಪಕ್ಕೆ ಕಾರಣವಾಯಿತು.

ಬಂಗಾಳ ವಿಭಜನೆಯ ನಂತರ ಜಮಾಲ್‌ಪುರ (1907) ಸೇರಿದಂತೆ ಬಂಗಾಳದ ಹಲವು ಕಡೆಗಳಲ್ಲಿ ಕೋಮು ಘರ್ಷಣೆಗಳು ನಡೆದವು.

1908ರ ಡಿ.30ರಂದು ಅಮೃತಸರದಲ್ಲಿ ನಡೆದಿದ್ದ ಅಖಿಲ ಭಾರತ ಮುಸ್ಲಿಂ ಲೀಗ್‌ನ ಎರಡನೇ ಸಮಾವೇಶದಲ್ಲಿ ಅಧ್ಯಕ್ಷರಾಗಿದ್ದ ಸೈಯದ್ ಅಲಿ ಇಮಾಮ್ ಅವರು 'ವಂದೇ ಮಾತರಂ' ಹಿಂದೂ ರಾಷ್ಟ್ರೀಯವಾದದ ಭಾವನಾತ್ಮಕತೆ ಎಂದು ಅಭಿಪ್ರಾಯಪಟ್ಟಿದ್ದರು. ಸೈಭಾರತೀಯ ರಾಷ್ಟ್ರೀಯವಾದದ ಆಶ್ರಯವಿದೆ ಎಂದು ಪ್ರತಿಪಾದಿಸಿದ್ದರು. ಈ ಗೀತೆ ಮುಸ್ಲಿಮರ ಸಂಪ್ರದಾಯಕ್ಕೆ ವಿರೋಧವಾದುದು ಎಂದೂ ಹೇಳಿದ್ದರು.

1937ರ ಅಕ್ಟೋಬರ್‌ನಲ್ಲಿ ಮಹಮ್ಮದ್ ಅಲಿ ಜಿನ್ನಾ ಅವರ ನೇತೃತ್ವದಲ್ಲಿ ನಡೆದಿದ್ದ ಮುಸ್ಲಿಂ ಲೀಗ್‌ನ 25ನೇ ವಾರ್ಷಿಕ ಸಮಾವೇಶವು 'ವಂದೇ ಮಾತರಂ' ವಿರುದ್ಧವಾಗಿ ನಿರ್ಣಯ ಕೈಗೊಂಡಿತ್ತು. ಇದನ್ನು ರಾಷ್ಟ್ರ ಗೀತೆ ಎಂದು ಘೋಷಿಸುವ ಭಾರತೀಯ ಕಾಂಗ್ರೆಸ್‌ನ ನಿರ್ಧಾರವನ್ನು ಖಂಡಿಸಿತ್ತು. ಅಲ್ಲದೇ, 'ಇದು ಸಂವೇದನಾರಹಿತ, ಮುಸ್ಲಿಂ ವಿರೋಧಿ. ಕಾಂಗ್ರೆಸ್‌ನ ನಿಲುವು, ಯೋಚನೆಗಳು ವಿಗ್ರಹಾರಾಧನೆಯ ಪರವಾಗಿವೆ. ಇದು ಭಾರತದಲ್ಲಿ ನೈಜ ರಾಷ್ಟ್ರೀಯವಾದದ ಬೆಳವಣಿಗೆಯನ್ನು ಬುಡಮೇಲು ಮಾಡಲಿದೆ' ಎಂದು ನಿರ್ಣಯದಲ್ಲಿ ಹೇಳಲಾಗಿತ್ತು.

ಎರಡು ಪ್ಯಾರಾ ಬಳಸುವ ನಿರ್ಧಾರ

ಮುಸ್ಲಿಂ ಸಮುದಾಯದಿಂದ ತೀವ್ರ ವಿರೋಧ ಬಂದ ನಂತರ ಕಲ್ಕತ್ತದಲ್ಲಿ ಜವಾಹರಲಾಲ್ ನೆಹರೂ ಅವರ ಅಧ್ಯಕ್ಷತೆಯಲ್ಲಿ 1937ರ ಅ.26ರಂದು ಸಭೆ ಸೇರಿದ್ದ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಐದು ಪ್ಯಾರಾಗಳನ್ನು ಹೊಂದಿದ್ದ 'ವಂದೇ ಮಾತರಂ' ಗೀತೆಯಲ್ಲಿ ಮೊದಲ ಎರಡು ಪ್ಯಾರಾಗಳನ್ನು ಮಾತ್ರ ಬಳಸುವ ಬಗ್ಗೆ ಚರ್ಚೆ ನಡೆಸಿತ್ತಲ್ಲದೇ, ಈ ಬಗ್ಗೆ ಸುದೀರ್ಘ ಹೇಳಿಕೆಯನ್ನೂ ಬಿಡುಗಡೆ ಮಾಡಿತ್ತು.

'ಕಳೆದ 30 ವರ್ಷಗಳಲ್ಲಿ ದೇಶದಾದ್ಯಂತ ಕಂಡುಬಂದಿರುವ ಜನರ ತ್ಯಾಗ ಮತ್ತು ನರಳಾಟದೊಂದಿಗೆ 'ವಂದೇ ಮಾತರಂ' ಬೆಸೆದುಕೊಂಡಿದೆ. ಈ ಗೀತೆ ಮತ್ತು ಅದರಲ್ಲಿನ ಪದಗಳು ಬಂಗಾಳ ಮತ್ತು ದೇಶದ ಇತರ ಕಡೆಗಳಲ್ಲಿ ಬ್ರಿಟಿಷ್ ಸಾಮ್ರಾಜ್ಯಶಾಹಿ ವಿರುದ್ಧದ ರಾಷ್ಟ್ರೀಯ ಸಂಕೇತವಾಗಿ ರೂಪುಗೊಂಡಿವೆ. ಕ್ರಮೇಣ ಹಾಡಿನ ಮೊದಲೆರಡು ಪ್ಯಾರಾಗಳ ಬಳಕೆಯು ದೇಶದ ಇತರ ಪ್ರಾಂತ್ಯಗಳಿಗೆ ಹರಡಿದೆ ಮತ್ತು ಅವುಗಳಿಗೆ ರಾಷ್ಟ್ರೀಯ ಪ್ರಾಮುಖ್ಯವೂ ಸಿಕ್ಕಿದೆ. ಹಾಡಿನ ಉಳಿದ ಸಾಲುಗಳ ಬಳಕೆ ಅಪರೂಪವಾಗಿದೆ. ಮೊದಲ ಎರಡು ಪ್ಯಾರಾಗಳು ನಮ್ಮ ತಾಯಿನೆಲದ ಸೌಂದರ್ಯ ಮತ್ತು ಆಕೆಯ ಕೊಡುಗೆಗಳನ್ನು ಕೋಮಲವಾದ ಭಾಷೆಯಲ್ಲಿ ಕಟ್ಟಿಕೊಟ್ಟಿದೆ. ಧಾರ್ಮಿಕವಾಗಿ ಅಥವಾ ಬೇರೆ ಯಾವುದೇ ದೃಷ್ಟಿಕೋನದಿಂದ ಆಕ್ಷೇಪಿಸಬಹುದಾದ ಯಾವ ಸಂಗತಿಗಳು ಇವುಗಳಲ್ಲಿ ಇಲ್ಲ' ಎಂದು ಹೇಳಿಕೆಯಲ್ಲಿ ವಿವರಿಸಲಾಗಿತ್ತು.

ಮುಸ್ಲಿಮರು ವ್ಯಕ್ತಪಡಿಸಿದ್ದ ಆಕ್ಷೇಪವನ್ನು ಅದರಲ್ಲಿ ಪ್ರಸ್ತಾಪಿಸಲಾಗಿತ್ತು. ಈ ಹೇಳಿಕೆಯನ್ನು ಸಿದ್ಧಪಡಿಸುವಲ್ಲಿ ನೆಹರೂ ಅವರ ಪಾತ್ರವಿತ್ತು. ರವೀಂದ್ರನಾಥ ಟ್ಯಾಗೋರ್ ಅವರು ಇದಕ್ಕೆ ಸಮ್ಮತಿಸಿದ್ದರು. ಕಾಂಗ್ರೆಸ್ ಸಮಿತಿಯು ಮೊದಲೆರಡು ಪ್ಯಾರಾಗಳನ್ನು ಹೊಂದಿದ 'ವಂದೇ ಮಾತರಂ' ಅನ್ನು ರಾಷ್ಟ್ರೀಯ ಗೀತೆಯನ್ನಾಗಿ ಘೋಷಿಸಲು ಸಮ್ಮತಿಸಿತ್ತು. ದೇಶದ ಸ್ವಾತಂತ್ರ್ಯ ಸಂಗ್ರಾಮದ ಭಾಗವಾಗಿದ್ದ ಈ ಗೀತೆಯನ್ನು ಎಲ್ಲರೂ ಒಪ್ಪಬೇಕು ಎಂದು ಮಹಾತ್ಮ ಗಾಂಧೀಜಿ ಅವರು ಬಯಸಿದ್ದರು. ಆದರೆ, ಅದರ ಹೇರಿಕೆಯನ್ನು ವಿರೋಧಿಸಿದ್ದರು.

ರಾಷ್ಟ್ರಗೀತೆಗೆ ಸಮನಾದ ಸ್ಥಾನಮಾನ

ಸ್ವಾತಂತ್ರ್ಯಾನಂತರ ರಾಷ್ಟ್ರ ಗೀತೆಯನ್ನಾಗಿ ಯಾವ ಹಾಡನ್ನು ಆಯ್ಕೆ ಮಾಡಬೇಕು ಎಂಬ ಚರ್ಚೆ ಸಂವಿಧಾನ ರಚನಾ ಸಭೆಯಲ್ಲಿ ನಡೆದಿತ್ತು.


1948ರ ಆಗಸ್ಟ್ 25ರಂದು ನಡೆದಿದ್ದ ಸಂವಿಧಾನ ರಚನಾ ಸಭೆಯಲ್ಲಿ ಮಾತನಾಡಿದ್ದ ಪ್ರಧಾನಿ ನೆಹರೂ ಅವರು ರವೀಂದ್ರನಾಥ್ ಟ್ಯಾಗೋರ್ ವಿರಚಿತ 'ಜನ ಗಣ ಮನ'ದ ಪರವಾಗಿ ಮಾತನಾಡಿದ್ದರು. 'ನೈರುತ್ಯ ಏಷ್ಯಾದಲ್ಲಿ ಭಾರತೀಯ ರಾಷ್ಟ್ರೀಯ ಸೇನೆಯು ಈ ಹಾಡನ್ನು ರಾಷ್ಟ್ರ ಗೀತೆಯನ್ನಾಗಿ ಅಳವಡಿಸಿಕೊಂಡಿತ್ತು. ಭಾರತದಲ್ಲೂ ಇದು ಜನಪ್ರಿಯವಾಗಿದೆ. ಜನ ಗಣ ಮನವನ್ನು ಅಥವಾ ಬೇರೆ ಹಾಡನ್ನು ರಾಷ್ಟ್ರ ಗೀತೆಯನ್ನಾಗಿ ಆಯ್ಕೆ ಮಾಡುವ ಬಗ್ಗೆ ಎಲ್ಲ ಪ್ರಾಂತ್ಯಗಳ ರಾಜ್ಯಪಾಲರ ಅಭಿಪ್ರಾಯವನ್ನು ಕೇಳಿದ್ದೆ. ಒಬ್ಬರನ್ನು ಬಿಟ್ಟು ಉಳಿದೆಲ್ಲರೂ 'ಜನ ಗಣ ಮನ'ಕ್ಕೆ ಒಪ್ಪಿಗೆ ಸೂಚಿಸಿದ್ದಾರೆ. ಈ ಅಭಿಪ್ರಾಯವನ್ನು ಸಂಪುಟ ಪರಿಗಣಿಸಿದ್ದು, ಸಂವಿಧಾನ ರಚನಾ ಸಭೆಯು ಅಂತಿಮ ನಿರ್ಧಾರ ಕೈಗೊಳ್ಳುವವರೆಗೂ ಜನ ಗಣ ಮನವನ್ನು ತಾತ್ಕಾಲಿಕವಾಗಿ ರಾಷ್ಟ್ರ ಗೀತೆಯನ್ನಾಗಿ ಬಳಸಲು ನಿರ್ಧರಿಸಲಾಗಿದೆ' ಎಂದು ಹೇಳಿದ್ದರು.

ತಮ್ಮ ಭಾಷಣದಲ್ಲಿ 'ವಂದೇ ಮಾತರಂ'ನ ಬಗ್ಗೆಯೂ ಪ್ರಸ್ತಾಪಿಸಿದ್ದ ಅವರು, 'ನಿಜಕ್ಕೂ ಅದು ಪ್ರಮುಖವಾದ ರಾಷ್ಟ್ರೀಯ ಹಾಡು. ನಮ್ಮ ದೇಶ ಮತ್ತು ಸ್ವಾತಂತ್ರ್ಯ ಹೋರಾಟದೊಂದಿಗೆ ಗುರುತಿಸಿಕೊಂಡಿದೆ. ಅದರ ಸ್ಥಾನವನ್ನು ಬೇರೆ ಯಾವ ಹಾಡು ಕೂಡ ತುಂಬಲು ಸಾಧ್ಯವಿಲ್ಲ. ರಾಷ್ಟ್ರ ಗೀತೆಯ ವಿಚಾರಕ್ಕೆ ಬಂದಾಗ ಪದಗಳಿಗಿಂತಲೂ ರಾಗ/ಧಾಟಿ (ಟ್ಯೂನ್) ಮುಖ್ಯ' ಎಂದು ಪ್ರತಿಪಾದಿಸಿದ್ದರು.


1950ರ ಜನವರಿ 24ರಂದು ಸಂವಿಧಾನ ರಚನಾ ಸಭೆಯಲ್ಲಿ ಮಾತನಾಡಿದ್ದ ಅಧ್ಯಕ್ಷ ಡಾ.ರಾಜೇಂದ್ರ ಪ್ರಸಾದ್ ಅವರು, 'ಪದಗಳು ಮತ್ತು ಸಂಗೀತವನ್ನೊಳಗೊಂಡ ಜನ ಗಣ ಮನವು ದೇಶದ ರಾಷ್ಟ್ರ ಗೀತೆಯಾಗಿದ್ದು, ಸಂದರ್ಭ ಬಂದಾಗ ಸರ್ಕಾರ ಅನುಮತಿಸಿದರೆ ಗೀತೆಯಲ್ಲಿನ ಪದಗಳನ್ನು ಬದಲಾಯಿಸುವುದಕ್ಕೆ ಅವಕಾಶ ಇರುತ್ತದೆ. ಭಾರತದ ಸ್ವಾತಂತ್ರ್ಯದಲ್ಲಿ ಪ್ರಮುಖ ಪಾತ್ರವಹಿಸಿದ 'ವಂದೇ ಮಾತರಂ'ಗೆ ಕೂಡ 'ಜನ ಗಣ ಮನ'ಕ್ಕೆ ಸಮನಾದ ಗೌರವ, ಅದಕ್ಕೆ ಸರಿಸಮಾನದ ಸ್ಥಾನಮಾನವನ್ನೇ ನೀಡಬೇಕು' ಎಂದು ಹೇಳಿದ್ದರು.

ಇಡೀ ಸಭೆಯು ಕರತಾಡನದ ಮೂಲಕ ಈ ಹೇಳಿಕೆಯನ್ನು ಅನುಮೋದಿಸಿತ್ತು.

ಆಧಾರ: ಜ್ಯೂಲಿಯಸ್ ಜೆ.ಲೈಪ್ಸರ್ ಭಾಷಾಂತರಿಸಿದ 'ಆನಂದಮಠ, ಆರ್ ದಿ ಸೇಕ್ರೆಡ್ ಬ್ರದರ್‌ಹುಡ್' ಕೃತಿ, ಅಮರೇಂದ್ರ ಲಕ್ಷ್ಮಣ್ ಗಾಡ್ಗೀಳ್ ಅವರ 'ವಂದೇ ಮಾತರಂ' ಕೃತಿ, ಪಿಐಬಿ, ತಜ್ಞರ ಲೇಖನಗಳು



ಜವಾಹರಲಾಲ್ ನೆಹರೂ



ರಾಜೇಂದ್ರ ಪ್ರಸಾದ್

ರಾಷ್ಟ್ರೀಯ

ಗೋವಾ: ನೈಟ್ ಕ್ಲಬ್ ಕಟ್ಟಡ ನೆಲಸಮ



ಅರ್ಪೋರಾ ಗ್ರಾಮದಲ್ಲಿ ಅಕ್ರಮವಾಗಿ ನಿರ್ಮಿಸಿದ್ದ ಬರ್ಚ್ ಬೈ ರೋಮಿಯೊ ಲೇನ್ ನೈಟ್ ಕ್ಲಬ್ ಕಟ್ಟಡವನ್ನು ಮಂಗಳವಾರ ತೆರವುಗೊಳಿಸಲಾಯಿತು

ಪಣಜಿ(ಪಿಟಿಐ): ಬೆಂಕಿ ದುರಂತದಲ್ಲಿ ಇಪ್ಪತ್ತೈದು ಜೀವಗಳನ್ನು ಬಲಿಪಡೆದ ಉತ್ತರ ಗೋವಾದ ಅರ್ಪೋರಾ ಗ್ರಾಮದಲ್ಲಿ ಅಕ್ರಮವಾಗಿ ನಿರ್ಮಿಸಿದ್ದ 'ಬರ್ಚ್ ಬೈ ರೋಮಿಯೊ ಲೇನ್ ನೈಟ್ ಕ್ಲಬ್' ಕಟ್ಟಡವನ್ನು ಗೋವಾ ಪ್ರವಾಸೋದ್ಯಮ ಇಲಾಖೆ ಮಂಗಳವಾರ ನೆಲಸಮಗೊಳಿಸದೆ.

ಅಕ್ರಮವಾಗಿ ನಿರ್ಮಿಸಿರುವ ನೈಟ್ ಕ್ಲಬ್ ಕಟ್ಟಡವನ್ನು ಕೆಡವುವಂತೆ ಗೋವಾ ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಅಧಿಕಾರಿಗಳಿಗೆ ಮಂಗಳವಾರ ನಿರ್ದೇಶನ ನೀಡಿದ್ದರು. 'ಕ್ಲಬ್‌ನ ಮಾಲೀಕ ಸೌರಭ್ ಮತ್ತು ಗೌರವ್ ಲುತ್ರಾ ಕಟ್ಟಡವನ್ನು ನಿರ್ಮಿಸಿದ್ದರು' ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಈ ನೈಟ್‌ಕ್ಲಬ್ ಸೌರಭ್ ಹಾಗೂ ಗೌರವ್ ಲೂಥ್ರಾ ಒಡೆತನಕ್ಕೆ ಸೇರಿದ ಮೂರನೇ ಆಸ್ತಿಯಾಗಿದೆ. ಶನಿವಾರ ಬೆಂಕಿ ಅವಘಡ ಸಂಭವಿಸಿದ ಕೆಲವೇ ಗಂಟೆಗಳ ನಂತರ ಇವರಿಬ್ಬರೂ ಥಾಯ್ಲೆಂಡ್‌ಗೆ ಪರಾರಿಯಾಗಿದ್ದಾರೆ. ಇವರನ್ನು ವಶಕ್ಕೆ ಪಡೆಯಲು ಇಂಟರ್‌ಪೋಲ್, ಬ್ಲ್ಯೂಕಾರ್ನರ್ ನೋಟಿಸ್ ಜಾರಿ ಮಾಡಿದೆ' ಎಂದು ಮುಖ್ಯಮಂತ್ರಿ ಕಚೇರಿಯ ಮೂಲಗಳು ತಿಳಿಸಿವೆ.

ಮತ್ತೊಬ್ಬನ ಸೆರೆ: ಗೋವಾ ನೈಟ್‌ಕ್ಲಬ್ ಬೆಂಕಿ ಅವಘಡ ಪ್ರಕರಣದಲ್ಲಿ ಗೋವಾ ಪೊಲೀಸರು ಕ್ಲಬ್‌ನ ಉದ್ಯೋಗಿ ಭರತ್ ಕೊಯ್ಲಿಯನ್ನು ದೆಹಲಿಯಲ್ಲಿ ಬಂಧಿಸಿ ಗೋವಾಕ್ಕೆ ಕರೆತಂದಿದ್ದಾರೆ. ಈ ಮೂಲಕ ಪ್ರಕರಣದಲ್ಲಿ ಬಂಧಿತರ ಸಂಖ್ಯೆ ಐದಕ್ಕೆ ಏರಿದೆ. ಶನಿವಾರ ಬೆಂಕಿ ದುರಂತದ ನಂತರ ಉತ್ತರ ಗೋವಾದ ಅಂಜುನಾ ಪೊಲೀಸರು ನಾಲ್ವರನ್ನು ಬಂಧಿಸಿದ್ದರು.

'ಭರತ್ ಕೊಯ್ಲಿಯನ್ನು ಸೋಮವಾರ ನವದೆಹಲಿಯಲ್ಲಿ ವಶಕ್ಕೆ ಪಡೆದು, ಮಂಗಳವಾರ ವಿಮಾನದ ಮೂಲಕ ಗೋವಾಕ್ಕೆ ಕರೆತರಲಾಯಿತು. ನಂತರ ಅವರನ್ನು ಸ್ಥಳೀಯ ನ್ಯಾಯಾಲಯಕ್ಕೆ ಹಾಜರುಪಡಿಸಲಾಗುವುದು' ಎಂದು ಪೊಲೀಸರು ತಿಳಿಸಿದ್ದಾರೆ.

ದೆಹಲಿಯ ಸಬ್ಜಿ ಮಂಡಿ ಪ್ರದೇಶದ ನಿವಾಸಿ ಭರತ್, ನೈಟ್‌ಕ್ಲಬ್‌ನ ನಿತ್ಯದ ಕಾರ್ಯಾಚರಣೆಗಳನ್ನು ನೋಡಿಕೊಳ್ಳುವ ಜವಾಬ್ದಾರಿ ಹೊಂದಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಚಿರತೆ ದಾಳಿ ತಡೆಯಲು ಕಾಡಿಗೆ ಆಡು ಬಿಡಿ: ಅರಣ್ಯ ಸಚಿವ

ನಾಗಪುರ(ಪಿಟಿಐ): 'ಚಿರತೆಗಳು ಆಹಾರ ಅರಸುತ್ತಾ ವಸತಿ ಪ್ರದೇಶಗಳಿಗೆ ಬರುವುದನ್ನು ನಿಯಂತ್ರಿಸಲು ಅರಣ್ಯ ಪ್ರದೇಶಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಆಡುಗಳನ್ನು ಬಿಡುವಂತೆ ಅರಣ್ಯ ಅಧಿಕಾರಿಗಳಿಗೆ ಸೂಚಿಸಿದ್ದೇನೆ' ಎಂದು ಮಹಾರಾಷ್ಟ್ರ ಅರಣ್ಯ ಸಚಿವ ಗಣೇಶ್ ನಾಯಕ್ ತಿಳಿಸಿದ್ದಾರೆ.'

ಮಹಾರಾಷ್ಟ್ರ ವಿಧಾನಸಭೆಯ ಅಧಿವೇಶನದಲ್ಲಿ ಎನ್‌ಸಿಪಿ (ಎಸ್‌ಪಿ) ಶಾಸಕ ಜಿತೇಂದ್ರ ಅವಾದ್ ಅವರು ರಾಜ್ಯದಲ್ಲಿ ಚಿರತೆ ದಾಳಿ ಪ್ರಕರಣಗಳು ಹೆಚ್ಚಿರುವ ಕುರಿತು ಎತ್ತಿದ ಗಮನ ಸೆಳೆಯುವ ನಿಲುವಳಿ ಸೂಚನೆಗೆ ಗಣೇಶ್ ನಾಯಕ್ ಈ ರೀತಿ ಪ್ರತಿಕ್ರಿಯಿಸಿದರು.

'ಚಿರತೆ ದಾಳಿಯಲ್ಲಿ ನಾಲ್ವರು ಸಾವಿಗೀಡಾದರೆ ಸರ್ಕಾರ ₹ 1 ಕೋಟಿ ಪರಿಹಾರ ನೀಡಬೇಕು. ಪರಿಹಾರ ನೀಡುವ ಬದಲು ಇಷ್ಟೇ ಹಣದಲ್ಲಿ ಆಡುಗಳನ್ನು ಖರೀದಿಸಿ ಅರಣ್ಯಕ್ಕೆ ಬಿಡಿ ಎಂದು ಅಧಿಕಾರಿಗಳಿಗೆ ಸೂಚಿಸಿದ್ದೇನೆ. ಸಾವಿನ ನಂತರ ಪರಿಹಾರ ನೀಡುವ ಬದಲು, ಚಿರತೆಗಳು ವಸತಿ ಪ್ರದೇಶಕ್ಕೆ ಬರದಂತೆ ತಡೆಯಲು ₹ 1 ಕೋಟಿ ಮೌಲ್ಯದ ಮೇಕೆಗಳನ್ನು ಕಾಡಿಗೆ ಬಿಡಿ' ಎಂದು ಹೇಳಿರುವುದಾಗಿ ಸಚಿವರು ತಿಳಿಸಿದರು.


'ಚಿರತೆಗಳ ನಡವಳಿಕೆ ಮತ್ತು ಜೀವನ ವಿಧಾನ ಬದಲಾಗಿದೆ. ಮೊದಲು ಚಿರತೆಗಳನ್ನು ಅರಣ್ಯ ಪ್ರಾಣಿಗಳೆಂದು ಹೇಳಲಾಗುತ್ತಿತ್ತು. ಆದರೆ, ಈಗ ಅವುಗಳ ಆವಾಸಸ್ಥಾನವು ಕಬ್ಬು ಬೆಳೆಯುವಂತಹ ಹೊಲಗಳಿಗೆ ಸ್ಥಳಾಂತರಗೊಂಡಿದೆ. ರಾಜ್ಯದಲ್ಲಿ ಅಹಲ್ಯಾನಗರ, ಪುಣೆ ಮತ್ತು ನಾಸಿಕ್ ಜಿಲ್ಲೆಗಳಲ್ಲಿ ಅತಿ ಹೆಚ್ಚು ಚಿರತೆ ದಾಳಿಗೆ ಸಂಬಂಧಿಸಿದ ಘಟನೆಗಳು ವರದಿಯಾಗುತ್ತಿವೆ' ಎಂದು ಸಚಿವರು ತಿಳಿಸಿದರು.

ಪದಬಂಧ 6249

ವಿದ್ಯಾ ವಿನಯ್

ಎಡದಿಂದ ಬಲಕ್ಕೆ
3.ಪದ ಹೇಳಿಬಹುಮಾನವಾಗಿ ಪಡೆದಿರುವ ಬಿಲ್ಲೆ (3)
5.ಮಾತಾಡದಿರುವಿಕೆ ಅಥವಾ ನೀರವತೆ (2)
7.ಆ ಮನೆ ಮುಂದೆ ನಿಂತಿರುವ ಗಜ (2)
8.ಮಯನ ಹತ್ತಿರ ಕಳೆದ ವೇಳೆ (3)
9.ವನದ ಹತ್ತಿರ ಕಾಣಿಸಿದ ಬೇಡರ ಹೆಂಗಸು (4)
11.ನಿರುಪಯುಕ್ತವಾದುದನ್ನು ಹೀಗೆನ್ನಿ (2)
13.ಏಳು ದಿನಗಳ ಅವಧಿ (2)
14.ಪಂಚಾಯಿತರ ಸಮ್ಮುಖದಲ್ಲಿ ಸಿದ್ಧಗೊಳಿಸಿದ ವರದಿ (4)
17.ಉತ್ತರದವರ ಮಂಚ (3)
18.ಪತ್ರ ಬರೆದಿರುವ ಸ್ನೇಹಿತ (2)
19.ವಸ್ತುಗಳನ್ನಿಡುವ ತಗಡಿನ ಪೆಟ್ಟಿಗೆ (2)
20.ಪಚನಾಂಗವಿಲ್ಲಿ ಉಲ್ಟಾ ಕಾಣುತ್ತಿದೆ (3)

ಮೇಲಿಂದ ಕೆಳಕ್ಕೆ
1.ಅವಶ್ಯವಿಲ್ಲದ ಖರ್ಚು (4)
2.ಮನದನ್ನೆ ಇರುವ ಗೃಹ (2)
4.ಕಕ್ಕಾವಿಕ್ಕಿಯಾಗಿ ನೋಡುತ್ತಿರುವವ ಪೆದ್ದ (3)
6.ಉತ್ತಮ ಜಾತಿಯ ಜೇನುತುಪ್ಪ ನರಿಯಲ್ಲಿ ಸಿಗುವುದೇ? (3)
7.ಆದಾಯ ಮತ್ತು ಖರ್ಚು (4)
10.ಇದು ಕನ್ನಡಿಗನ ಸ್ಪೂನ್! (3)
12.ಕೈಯಲ್ಲಿರುವ ಪ್ರಚಾರದ ಚೀಟಿ (4)
14.ಪ್ರತ್ಯೇಕವಾದ ಗುಂಪು (3)
15.ಮಸ್ತಿಷ್ಕ ಇಲ್ಲಿದೆ (3)
16.ಕರಿಯ ಹತ್ತಿರ ಹಾರಾಡುತ್ತಿರುವ ಹೆಣ್ಣುದುಂಬಿ (4)
18.ಮಿಟಕಲಾಡಿ ಹಿಡಿದಿರುವ ಹೀಚು! (2)



6248ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ತೆನೆ 3.ವಿದೂಷಕ
5.ಪುರುಷ 7.ನಡುಮನೆ
9.ಬಯಲು 10.ಸರಳು
11.ದಿನಕರ 13.ಕಂಪನ
15.ಕಡವರ 16.ಗ್ರಹ

ಮೇಲಿಂದ ಕೆಳಕ್ಕೆ:
2.ನೆನಪು 3.ವಿಶೇಷ
4.ಕರಡು 6.ರುಮಾಲು
8.ನೆರಳು 9.ಬಸದಿ
10.ಸಮೀಪ 12.ಕನಕ
13.ಕಂಧರ 14.ನಖಾಗ್ರ

ಸುಡೊಕು 6633

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4			9		1		3	
								4
8		3	4		5	9		
7								8
	8		1	6	2		9	
		9	7			2		
		8		1			4	
9	6	4	8		7	1		5
	1			9			8	

6632 ಸುಡೊಕು

6	2	4	9	1	7	3	5	8
5	1	3	8	4	6	9	2	7
9	7	8	2	5	3	4	1	6
7	4	9	5	3	8	1	6	2
1	8	6	4	2	9	7	3	5
2	3	5	6	7	1	8	4	9
4	9	2	3	8	5	6	7	1
3	6	1	7	9	2	5	8	4
8	5	7	1	6	4	2	9	3

ನುಡಿ ಬೆಳಗು

ಕಲ್ಲನ್ನೂ ಸವೆಸುವ ಹಗ್ಗ



ವಾಸುದೇವ ನಾಡಿಗ್

ಆ ಗುರುಕುಲದ ಕಟ್ಟುನಿಟ್ಟಿನ ಎಲ್ಲ ನಿಯಮಗಳನ್ನೂ ಆ ಬಾಲಕ ಸಹಿಸಬಲ್ಲ. ಹತ್ತು ಹಲವು ಶಾಸ್ತ್ರಗ್ರಂಥಗಳ ಬಗ್ಗೆ ಪಾಠವನ್ನು ಕೇಳುತ್ತ ಅಭ್ಯಾಸ ಮಾಡುತ್ತಿದ್ದ, ಆದರೆ ಉಳಿದ ಸರೀಕರ ಹಾಗೆ ಅವು ತಲೆಗೆ ಹತ್ತುತ್ತಿರಲಿಲ್ಲ. ಬುದ್ಧಿಗೆ ದಕ್ಕುತ್ತಿರಲಿಲ್ಲ. ಗುರುವಿಗೂ ಕಲಿಸಿ ಕಲಿಸಿ ಸಾಕಾಗಿಹೋಗಿತ್ತು. ಅದೆಷ್ಟು ಬಾರಿ ಪುನರಾವರ್ತನೆ ಮಾಡಿದರೂ ಅರಿವಿಗೇ ಬಾರದಂತಿದ್ದ ಆ ಹುಡುಗನನ್ನು ಗುರುಕುಲದಿಂದ 'ನಿನಗೆ ಈ ವಿದ್ಯೆ ಹತ್ತುವುದಿಲ್ಲ ಕಂದ. ಮನೆಗೆ ಹೋಗಿಬಿಡು. ನಿನ್ನ ತಂದೆಯ ಕೃಷಿ ಇತ್ಯಾದಿ ಕೆಲಸಗಳಿಗೆ ಸಹಾಯ ಮಾಡು' ಎಂದು ಗುರುಗಳು ನಯವಾಗೇ ಹೊರಗೆ ಕಳಿಸಿದರು. ಸಹಪಾಠಿಗಳ ಜೋರಾದ ನಗೆಗೆ ಮನಸ್ಸು ಘಾಸಿಗೊಂಡಿತು. ಬಾಲಕ ಊರಿಗೆ ಹಿಂದಿರುಗಲು ಗುರುಕುಲದಾಚೆ ಹೊರಟೇಬಿಟ್ಟ. ಮನಸ್ಸು, ಹೃದಯ ಭಾರವಾಗಿತ್ತು. ತಾನು ಸೋತೆನೇ ಎಂದು ಕಣ್ಣೀರಿಡುತ್ತ ಭಾರವಾದ ಹೆಜ್ಜೆ ಹಾಕುತ್ತ ನಡೆದ. ಹಾದಿಯಲ್ಲಿ ಬಹಳ ನೀರಡಿಕೆಯಾಗಿ ಎದುರಾದ ಹಳ್ಳಿಯ ಒಳಗೆ ಹೋದ. ಮಧ್ಯವಯಸ್ಕ ಮಹಿಳೆಯೊಬ್ಬಳು ಬಾವಿಯಿಂದ ನೀರು ಸೇದುತ್ತಾ ಇದ್ದಳು. ಸುಡು ಬಿಸಿಲಿತ್ತು. ಬಾಲಕ ನೀರಿಗಾಗಿ ಬೊಗಸೆ ಒಡ್ಡಿದ್ದ. ಮಹಿಳೆ ಬಹಳ ಅಕ್ಕರೆಯಿಂದಲೇ ನೀರನ್ನು ಊಡಿಸಿದಳು.

ಆ ಹಳೆಯ ಬಾವಿಯನ್ನು ಒಮ್ಮೆ ಸುತ್ತುಹಾಕಿ ನೋಡಿದ ಬಾಲಕ ಆಶ್ಚರ್ಯಪಟ್ಟ ಮತ್ತು ಆ ಮಹಿಳೆಗೆ ಕೇಳಿದ. 'ಅಮ್ಮ ಇಷ್ಟು ಒರಟಾದ ಈ ಬಾವಿ ಕಟ್ಟೆಯ ಕಲ್ಲಿನ ಮೇಲೆ ಇಷ್ಟು ಗೆರೆಗಳನ್ನು ಯಾರು ಕೊರೆದರು? ಇಷ್ಟು ಕಲೆಗಳು ಹೇಗೆ ಉಳಿದವು ಇಲ್ಲಿ' ಎಂದು ಕೇಳಿದ. ಆ ಬಾಲಕನ ಮಾತಿಗೆ ನಕ್ಕು ಉತ್ತರಿಸುತ್ತ ಆ ಮಹಿಳೆ 'ಅಯ್ಯೋ ಕಂದ, ಇದು ಯಾರೂ ಕೊರೆದದ್ದೂ ಅಲ್ಲ ಎಳೆದದ್ದೂ ಅಲ್ಲ. ನೀರು ಸೇದುವಾಗ ಕೊಡಕ್ಕೆ ಕಟ್ಟಿದ್ದ ಹಗ್ಗಗಳು ಮೂಡಿಸಿದ್ದ ಗೆರೆಗಳು' ಅಂದಳು. ಒಂದು ಹಗ್ಗ ಇಷ್ಟು ಬಲಿಷ್ಟವಾದ ಕರ್ಗಲ್ಲನು ಹೀಗೆ ಸವೆಸಿ ಗುರುತು ಬೀಳಿಸಬಲ್ಲದೇ?' ಎಂದೆಲ್ಲ ಆಲೋಚಿಸಿದ.

'ಒಂದು ಮೃದು ಮೈಯ ಹಗ್ಗ ಪದೇ ಪದೇ ತಾಕುತ್ತ ತೀಡುತ್ತ ಕಲ್ಲಿನ ಮೇಲೆ ಗುರುತು ಉಳಿಸಬಲ್ಲುದಾದರೆ, ಸತತವಾದ ಅಭ್ಯಾಸವು ನನ್ನ ಮೇಲೆ ಜ್ಞಾನದ ಗುರುತು ಏಕೆ ಉಳಿಸಲಾರದು' ಎಂದೆಲ್ಲ ಯೋಚಿಸುತ್ತ ಪುನಃ ಗುರುಕುಲಕ್ಕೆ ಹೋಗಿ ಗುರುವಿನ ಎದುರು ನಿಂತ. ಮತ್ತೆ ಇವನು ಹಿಂದುರುಗಿ ಬಂದದ್ದಕ್ಕೆ ಗುರುವಿಗೆ ಗಾಬರಿ ಮತ್ತು ಬೆರಗು ಒಟ್ಟಿಗೆ. ಬಾಲಕ ದಾರಿಯಲ್ಲಿ ಕಂಡ ಆ ಬಾವಿ ಅದರ ಮೇಲೆ ಹಗ್ಗಗಳು ಮೂಡಿಸಿದ್ದ ಗೆರೆಗಳ ಕತೆ ಹೇಳಿದ. ತಾನು ಏಕೆ ಬೇಗ ಸೋಲನ್ನು ಒಪ್ಪಿಕೊಳ್ಳಬೇಕು? ಸತತ ಅಧ್ಯಯನ ಪರಿಶ್ರಮದಲ್ಲಿ ತೊಡಗುವ ಬಗ್ಗೆ ನಿರ್ಧಾರ ಕೈಗೊಂಡ. ಒಂದು ಮೆದುವಾದ ಹಗ್ಗ ಆ ಬಂಡೆಯ ಮೇಲೆ ಅಚ್ಚಳಿಯದ ಗುರುತು ಉಳಿಸಬಲ್ಲುದಾದರೆ ಓದು ಬರಹ ಪ್ರಯತ್ನ ನನ್ನ ಮೇಲೆ ಪ್ರಭಾವ ಬೀರರಲಾರದೇ ಎಂಬ ಹಟದ ಪ್ರಶ್ನೆಯೊಂದಿಗೆ ಕೂತ.

ಅಸಾಮಾನ್ಯವನ್ನು ಸಾಧಿಸುವ ಸಾಮಾನ್ಯ ಸಂಗತಿಗಳು ಹೇಗಾದರೂ ಯಾವ ಮೂಲೆಯಿಂದಲಾದರೂ ನಮ್ಮ ಮನೋಧರ್ಮವನ್ನು ಬದಲಾಯಿಸುವುದಾದರೆ ಅಂತಹುದಕ್ಕೆ ಎದೆಗೊಡಬೇಕು.

(ಲಘು ಸಿದ್ಧಾಂತ ಕೌಮುದಿ, ಮಧ್ಯ ಸಿದ್ಧಾಂತ ಕೌಮುದಿ ಎಂಬ ಸಂಸ್ಕೃತ ವ್ಯಾಕರಣ ಕೃತಿಗಳನ್ನು ರಚಿಸಿದ 17ನೇ ಶತಮಾನದ ವರದರಾಜಾಚಾರ್ಯರ ಬಾಲ್ಯದ ಪ್ರಸಂಗ). ❖

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

10 ಡಿಸೆಂಬರ್ 2025 ಬುಧವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಮಾರ್ಗಶಿರ ಷಷ್ಠಿ ಗಂ. 13-47 ನಕ್ಷತ್ರ: ಮಘ ಗಂ. 26-45 ಯೋಗ: ವೈಧೃತಿ ಗಂ. 12-46 ಕರಣ: ವಣಿಜ ಗಂ. 13-47 ವೃಶ್ಚಿಕ ಮಾಸದ 24 ನೇ ದಿನ. ಮಳೆ ನಕ್ಷತ್ರ : ಜ್ಯೇಷ್ಠ 3 ನೇ ಪಾದ. ರಾಹುಕಾಲ : ಮಧ್ಯಾಹ್ನ 12-00 - 01-30 ,ಸೂರ್ಯೋದಯ : 06-46 ಸೂರ್ಯಾಸ್ತ : 06-00,ಮುಸ್ಲಿಂ ದಿನಾಂಕ : 18 ಜುಮಾದುಸ್ಸಾನಿ,ಅದೃಷ್ಟ ಸಂಖ್ಯೆ : 3, 9.

ಮೇಷ: ಕಾಳಜಿ ಹೊಂದಿದವರ ಸಲಹೆಗಳಿಗೆ ಕಿವಿಗೊಡಿ, ಅದರಿಂದಾಗಿ ಅನುಕೂಲವಾಗುವುದು. ಆಕಾಶ ವೀಕ್ಷಣೆಯನ್ನು ನಿಯಮಬದ್ಧವಾಗಿ ಮಾಡುವವರಿಗೆ ಉತ್ತಮ ಜತೆಗಾರರೊಬ್ಬರು ದೊರೆಯಲಿದ್ದಾರೆ.

ವೃಷಭ: ಅಕ್ಕ ಪಕ್ಕದವರಲ್ಲಿ ಅನವಶ್ಯಕವಾಗಿ ಸಂಬಂಧವಿರದ ವಿಚಾರಕ್ಕೆ ಸಲಹೆ ಹೇಳಿದರೆ ನಿಷ್ಠುರವಾಗುವುದು ಖಚಿತ. ಮೃದು ಮಾತುಗಳಿಂದ ಸಮಸ್ಯೆಗಳು ಪರಿಹಾರವಾಗುವುದಿಲ್ಲ. ಮೀನು ಮಾರಾಟಗಾರರು ಲಾಭ ಪಡೆಯುವಿರಿ.

ಮಿಥುನ: ತಾಂತ್ರಿಕ ವಿದ್ಯಾರ್ಥಿಗಳು ವಿನೂತನ ಯೋಜನೆಯನ್ನು ಮಂಡಿಸುವಲ್ಲಿ ಯಶಸ್ವಿಯಾಗುವಿರಿ. ಅಕ್ಕ ತಂಗಿಯರ ಆಸೆ ಈಡೇರಿಸಲಿದ್ದೀರಿ. ಇಂದಿನ ದಿನಚರಿಯಿಂದ ಆತ್ಮವಿಶ್ವಾಸ ಹೆಚ್ಚಲಿದೆ.

ಕರ್ಕಾಟಕ: ಕರ್ತವ್ಯ ಕೊರತೆಯಿಂದ ಉಲ್ಲಾಸ ಕಳೆದುಕೊಳ್ಳುವ ಸಮಯ ಎದುರಾಗಲಿದೆ. ಕೃತಜ್ಞತೆಯನ್ನು ವ್ಯಕ್ತಪಡಿಸದ ವ್ಯಕ್ತಿಗಳ ಜೊತೆ ವ್ಯವಹಾರ ನಡೆಸುವುದು ಬೇಡ. ನಿವೇಶನ ಖರೀದಿಸುವ ಯೋಚನೆಗಳು ಬರಲಿವೆ.

ಸಿಂಹ: ಸಾಹಸಿ ಕಾರ್ಯವನ್ನು ಮಾಡುವ ಮನಸ್ಥಿತಿ ಹೊಂದಿದವರಿಗೆ ದಾಖಲೆಯನ್ನು ಸೃಷ್ಟಿಸುವ ಅವಕಾಶ ಸಿಗುವುದು. ವ್ಯವಹಾರದಲ್ಲಿ ಎದುರಾಗಿರುವ ಸಮಸ್ಯೆ ಬಗೆಹರಿಸಿಕೊಂಡು ಹೆಜ್ಜೆ ಹಾಕುವುದು ಉತ್ತಮ.

ಕನ್ಯಾ: ದೇವರ ಆಭರಣ ತಯಾರಿಕೆ ಅಥವಾ ದೇವಾಲಯದ ಕೆಲಸದ ಗುತ್ತಿಗೆದಾರರಿಗೆ ಹೊಸ ಗುತ್ತಿಗೆ ಸಿಗುವ ಸಂಭವಗಳಿವೆ. ತಿಳಿವಳಿಕೆಯ ಮಾತು ಒಬ್ಬರ ಜೀವನವನ್ನು ಉದ್ಧರಿಸುತ್ತದೆ. ಮಿತ್ರರಲ್ಲಿ ವರ್ತನೆ ಉತ್ತಮವಾಗಿರಲಿ.

ತುಲಾ: ಕೈಗೆತ್ತಿಕೊಂಡಿರುವ ಕೆಲಸಗಳು ಖರ್ಚಿಗೆ ಕಾರಣವಾದರೂ ಮುಂದಿನ ದಿನಗಳಲ್ಲಿ ಲಾಭದಾಯಕ. ಎಂಜಿನಿಯರ್‌ಗಳಿಗೆ ಬಿಡುವಿಲ್ಲದ ಗಡಿಬಿಡಿಯ ದಿನವಾಗಿ ಪರಿಣಮಿಸುತ್ತದೆ.


ವೃಶ್ಚಿಕ: ಪತ್ರಿಕಾ ವರದಿಗಾರರಿಗೆ ವಿಶೇಷ ದಿನವಾಗಿ ಸದಾಕಾಲ ನೆನಪಿರುವಂತೆ ಆಗಬಹುದು. ಕಾರ್ಯಕಲಾಪಗಳ ಒತ್ತಡದಲ್ಲಿಯು ಸ್ನೇಹಿತರ ವರ್ಗಕ್ಕೆ ಸಮಯ ನೀಡಬೇಕಾಗುತ್ತದೆ. ಮನೆಯಲ್ಲಿ ನೆಮ್ಮದಿ ಕಂಡುಬರಲಿದೆ.

ಧನು: ಈಗಿನ ಉದ್ಯೋಗವನ್ನು ಬಿಟ್ಟು ಹೊಸ ಸ್ವ ಉದ್ಯೋಗ ಒಂದನ್ನು ಶುರು ಮಾಡುವ ಯೋಜನೆಯನ್ನು ನಿರೂಪಿಸುವಿರಿ. ಮನೆಯಲ್ಲಿ ಮಾಡುವ ಅಡುಗೆ ಹೊರತುಪಡಿಸಿ ಬೇರೆಯ ಆಹಾರವನ್ನು ತಿನ್ನುವ ಮನಸ್ಸಾಗುತ್ತದೆ.

ಮಕರ: ನೀವೇ ವಿಮರ್ಶಿಕೊಂಡಲ್ಲಿ ನಡವಳಿಕೆಯಲ್ಲಿನ ತಪ್ಪುಗಳು ಅರಿವಾಗುವುದು. ಸಾಂಸಾರಿಕವಾಗಿ ಅಥವಾ ವೈಯಕ್ತಿಕವಾಗಿ ಕೆಲವು ಮುಖ್ಯವಾದ ನಿರ್ಧಾರಗಳನ್ನು ಕೈಗೊಳ್ಳುವಿರಿ. ಅಶ್ವತ್ಥ ವೃಕ್ಷಕ್ಕೆ ಪ್ರದಕ್ಷಿಣೆ ಹಾಕಿ.

ಕುಂಭ: ಕೆಲವು ಸಮಸ್ಯೆಗಳನ್ನು ವಯಸ್ಕರಲ್ಲಿಯೇ ಹೇಳುವುದಕ್ಕಿಂತ ಹಿರಿಯರಲ್ಲಿ ಹೇಳುವುದರಿಂದಾಗಿ ಸಮಾಧಾನವಾಗುವುದು. ತೋಟದ ಫಸಲಿನಲ್ಲಿ ಮಹತ್ತರ ಬದಲಾವಣೆ ತರುವ ಉಪಾಯ ಮಾಡುವಿರಿ.

ಮೀನ: ವೈಯಕ್ತಿಕ ಅಭಿವೃದ್ಧಿಗೂ ಸಾಮಾಜಿಕ ಏಳಿಗೆಗೂ ಅನುಕೂಲ ಆಗಲಿದೆ. ತಮ್ಮನ ಮಕ್ಕಳ ಮದುವೆಯಲ್ಲಿ ಓಡಾಟ ನಡೆಸುವಿರಿ. ಸಮಯ ಪ್ರಜ್ಞೆಯಿಂದ ಕಾರ್ಯ ನಿರ್ವಹಿಸಿ, ಗೆಲುವು ನಿಮ್ಮದಾಗುವುದು.



ಎನ್‌ಎಸ್‌ಇ ನಿಫ್ಟಿ	
ಹಿಂದಿನ ಅಂತ್ಯ:	25,960
ಇಂದಿನ ಅಂತ್ಯ:	25,839
ದಿನದ ಕನಿಷ್ಠ:	25,728
	▼ 120

ಮೊಟ್ಟೆ ಧಾರಣೆ (ಎನ್‌ಇಸಿಸಿ) ಬೆಂಗಳೂರು	
100 ಕ್ಕೆ	₹675
12 ಕ್ಕೆ	₹96
ಮೈಸೂರು: 100 ಕ್ಕೆ	₹675

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)	
ಆರ್‌ಎಸ್‌ಎಸ್-4	₹180
ಆರ್‌ಎಸ್‌ಎಸ್-5	₹175
ಗುಡ್ ಲಾಟ್	₹163

ರಾಮನಗರ ರೇಷ್ಮೆಗೂಡು	
ಮಿಶ್ರತಳಿ(ಸಿ.ಬಿ)	₹445-709
ದ್ವಿತಳಿ (ಬಿ.ವಿ)	₹266-889

ಮುದ್ರೆಮನೆ ಕಾಫಿ	
ಎಪಿ	₹28400
ಎಸಿ	₹15400
ಆರ್‌ಪಿ	₹18800
ಆರ್‌ಸಿ	₹10270

ಭಾರತದ ಅಕ್ಕಿಗೆ ಹೆಚ್ಚಿನ ತೆರಿಗೆ: ಟ್ರಂಪ್

ಆಮದು ನಿಯಂತ್ರಣಕ್ಕೆ ಕ್ರಮ: ಅಮೆರಿಕದ ಕೃಷಿಕರಿಗೆ ವಿಶೇಷ ಪರಿಹಾರ ಪ್ಯಾಕೇಜ್ ಘೋಷಣೆ



ನ್ಯೂಯಾರ್ಕ್/ವಾಷಿಂಗ್ಟನ್ (ಪಿಟಿಐ): ಭಾರತವು, ಬಾಸ್ಮತಿ, ಸೋನಾ ಮಸೂರಿ ಸೇರಿದಂತೆ ವಿವಿಧ ತಳಿಗಳ ಅಕ್ಕಿಯನ್ನು ತಂದು ಅಮೆರಿಕದ ಮಾರುಕಟ್ಟೆಗೆ ಸುರಿಯುತ್ತಿದ್ದು, ಆಮದು ನಿಯಂತ್ರಿಸಲು ಅಕ್ಕಿ ಮೇಲೆ ಹೆಚ್ಚಿನ ತೆರಿಗೆ ವಿಧಿಸುವುದಾಗಿ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎಚ್ಚರಿಕೆ ನೀಡಿದ್ದಾರೆ.

ಸೋಮವಾರ ವೈಟ್‌ಹೌಸ್‌ನಲ್ಲಿ ಕೃಷಿ ವಲಯದ ಪ್ರತಿನಿಧಿಗಳೊಂದಿಗೆ ನಡೆದ ಸಭೆಯಲ್ಲಿ, ಲೂಸಿಯಾನದ ಕೆನಡಿ ಅಕ್ಕಿ ಗಿರಣಿಯ ಮೆರಿಲ್ ಕೆನಡಿ ಅವರು, 'ಭಾರತ, ಥಾಯ್ಲೆಂಡ್ ಮತ್ತು ಚೀನಾ ಅಮೆರಿಕದ ಮಾರುಕಟ್ಟೆಗೆ ದೊಡ್ಡ ಪ್ರಮಾಣದಲ್ಲಿ ಅಕ್ಕಿಯನ್ನು ತಂದು ಸುರಿಯುತ್ತಿವೆ. ಇದರಿಂದ ಅಮೆರಿಕದ ಅಕ್ಕಿ ಉತ್ಪಾದಕರು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದಾರೆ. ಇದರಲ್ಲಿ ಭಾರತದ ಪಾಲು ಗರಿಷ್ಠಮಟ್ಟದಲ್ಲಿದೆ' ಎಂದು ದೂರಿದರು.

'ಯಾಕೆ, ಭಾರತ ಅಮೆರಿಕದ ಮಾರುಕಟ್ಟೆಗೆ ದೊಡ್ಡ ಪ್ರಮಾಣದಲ್ಲಿ ಅಕ್ಕಿ ತಂದು ಸುರಿಯುತ್ತಿದೆ. ಭಾರತದ ಅಕ್ಕಿಗೆ ತೆರಿಗೆಯಿಂದ ವಿನಾಯಿತಿ ನೀಡಲಾಗಿದೆಯೆ' ಎಂದು ಟ್ರಂಪ್, ಸಭೆಯಲ್ಲಿ ಹಾಜರಿದ್ದ ಖಜಾನೆ ಕಾರ್ಯದರ್ಶಿ ಸ್ಕಾಟ್ ಬೆಸೆಂಟ್ ಅವರನ್ನು ಪ್ರಶ್ನಿಸಿದರು. 'ಇಲ್ಲ, ನಾವು ಈ ಬಗ್ಗೆ ಶೀಘ್ರದಲ್ಲೇ ಹೊಸ ಒಪ್ಪಂದ ಮಾಡಿ ಕೊಳ್ಳುತ್ತೇವೆ' ಎಂದು ಬೆಸೆಂಟ್ ಹೇಳಿದರು.

'ಅಮೆರಿಕನ್ನರಿಗೆ ಬೇಕಾಗುವಷ್ಟು ಭತ್ತವನ್ನು ಅಮೆರಿಕದ ರೈತರೇ ಬೆಳೆಯುತ್ತಾರೆ. ನಮಗೆ ಬೇರೆ ದೇಶಗಳೊಂದಿಗೆ ನ್ಯಾಯಯುತ ವ್ಯಾಪಾರ ಬೇಕೇ ಹೊರತು, ಉಚಿತ ವ್ಯಾಪಾರವಲ್ಲ. ಅಕ್ಕಿ ಆಮದಿನ ಮೇಲೆ ನಿಯಂತ್ರಣ ಹೇರಬೇಕು' ಎಂದು ಕೆನಡಿ, ಟ್ರಂಪ್ ಅವರನ್ನು ಒತ್ತಾಯಿಸಿದರು.

'ಭಾರತವು ಅಮೆರಿಕದ ಮಾರುಕಟ್ಟೆಗೆ ಅಕ್ಕಿಯನ್ನು ತಂದು ಸುರಿಯಬಾರದು. 'ತೆರಿಗೆ' ವಿಧಿಸುವ ಮೂಲಕ ಈ ಸಮಸ್ಯೆಯನ್ನು ನಾವು ಸರಳವಾಗಿ ಬಗೆಹರಿಸಿಕೊಳ್ಳಬಹುದು' ಎಂದು ಟ್ರಂಪ್ ಹೇಳಿದರು.

ಭಾರತದಿಂದ ಆಮದು ಮಾಡಿಕೊಳ್ಳುವ ಅಕ್ಕಿಯ ಮೇಲೆ ಅಮೆರಿಕವು ಮೊದಲು ಶೇ 10ರಷ್ಟು ತೆರಿಗೆ ವಿಧಿಸಿತ್ತು. ಟ್ರಂಪ್ ಆಡಳಿತವು ಇತ್ತೀಚೆಗೆ ತೆರಿಗೆ ಪರಿಷ್ಕರಣೆ ಮಾಡಿದ ಬಳಿಕ ಇದು ಶೇ 40ಕ್ಕೆ ಏರಿಕೆಯಾಗಿದೆ.

ಸಭೆ ಮುಗಿದ ಬಳಿಕ ಟ್ರಂಪ್, ಅಮೆರಿಕದ ಕೃಷಿಕರಿಗಾಗಿ ನಾಲ್ಕು ವರ್ಷಗಳ ಅವಧಿಗೆ 12 ಶತಕೋಟಿ ಡಾಲರ್ (₹1.07 ಲಕ್ಷ ಕೋಟಿ) ಕೃಷಿ ಪರಿಹಾರ ಪ್ಯಾಕೇಜ್ ಪ್ರಕಟಿಸಿದರು. ಕೃಷಿ ಕಾರ್ಯದರ್ಶಿ ಬ್ರೂಕ್ ರೋಲಿನ್ಸ್, ಕೃಷಿ ವಲಯದ ಪ್ರತಿನಿಧಿಗಳು, ಟ್ರಂಪ್ ಸಂಪುಟದ ಸದಸ್ಯರು ಭಾಗವಹಿಸಿದ್ದರು.

ಅಂಕಿ ಅಂಶಗಳು

150 ದಶಲಕ್ಷ ಟನ್ — ಭಾರತದ ವಾರ್ಷಿಕ ಅಕ್ಕಿ ಉತ್ಪಾದನೆ

28% — ಜಾಗತಿಕ ಅಕ್ಕಿ ಮಾರುಕಟ್ಟೆಯಲ್ಲಿ ಭಾರತದ ಪಾಲು

30.03% — ಜಾಗತಿಕ ಅಕ್ಕಿ ರಫ್ತಿನಲ್ಲಿ ಭಾರತದ ಪಾಲು

(ಏಐಆರ್‌ಇಎ ಮಾಹಿತಿ)

> ತೆರಿಗೆ ಹೇರಿಕೆಯು ಭಾರತದ ಅಕ್ಕಿ ರಫ್ತಿನ ಮೇಲೆ ತಾತ್ಕಾಲಿಕ ಪರಿಣಾಮ ಬೀರಬಹುದಷ್ಟೇ. ಹೊಸ ಕಾರ್ಯತಂತ್ರ ಅಳವಡಿಸಿಕೊಂಡರೆ ಅಮೆರಿಕದಲ್ಲಿ ಅಕ್ಕಿ ಮಾರುಕಟ್ಟೆ ವಿಸ್ತರಿಸಿಕೊಳ್ಳಲು ನಮಗೆ ಇನ್ನೂ ಹೆಚ್ಚಿನ ಅವಕಾಶಗಳಿವೆ
>
> **ಪ್ರೇಮ್ ಗಾರ್ಗ್**, ಭಾರತೀಯ ಅಕ್ಕಿ ರಫ್ತುದಾರರ ಒಕ್ಕೂಟದ ಅಧ್ಯಕ್ಷ


> ಅಮೆರಿಕ ಆಮದು ಸುಂಕವನ್ನು ಎಷ್ಟೇ ಹೆಚ್ಚಿಸಿದರೂ, ಅಲ್ಲಿನ ಮಾರುಕಟ್ಟೆಯಲ್ಲಿ ಬಾಸ್ಮತಿ ಅಕ್ಕಿಯ ಬೇಡಿಕೆ ಕುಸಿಯುವುದಿಲ್ಲ. ಭಾರತದ ಅಕ್ಕಿ ರಫ್ತುದಾರರಿಗೆ ಇದರಿಂದ ಯಾವುದೇ ನಷ್ಟವಿಲ್ಲ
>
> **ಸತೀಶ್ ಗೋಯೆಲ್**, ಅಖಿಲ ಭಾರತ ಅಕ್ಕಿ ರಫ್ತುದಾರರ ಒಕ್ಕೂಟದ ಅಧ್ಯಕ್ಷ

ಅಮೆರಿಕಕ್ಕೆ 2.74 ಲಕ್ಷ ಟನ್ ಬಾಸ್ಮತಿ ಅಕ್ಕಿ

ಬಾಸ್ಮತಿ ಅಕ್ಕಿ ರಫ್ತಿನಲ್ಲಿ ಅಮೆರಿಕವು ಭಾರತಕ್ಕೆ ವಿಶ್ವದಲ್ಲೇ ನಾಲ್ಕನೇ ಅತಿ ದೊಡ್ಡ ಮಾರುಕಟ್ಟೆ. 2024–25ನೇ ಸಾಲಿನ ಹಣಕಾಸು ವರ್ಷದಲ್ಲಿ ಭಾರತವು ಅಮೆರಿಕಕ್ಕೆ 337 ದಶಲಕ್ಷ ಡಾಲರ್ (₹3,028 ಕೋಟಿ) ಮೌಲ್ಯದ 2.74 ಲಕ್ಷ ಟನ್‌ನಷ್ಟು ಅಕ್ಕಿಯನ್ನು ರಫ್ತು ಮಾಡಿದೆ. ಇದೇ ಅವಧಿಯಲ್ಲಿ 61 ಸಾವಿರ ಟನ್‌ನಷ್ಟು ಬಾಸ್ಮತಿಯೇತರ ಅಕ್ಕಿಯನ್ನೂ ಅಮೆರಿಕಕ್ಕೆ ರಫ್ತು ಮಾಡಲಾಗಿದೆ.

₹1.58 ಲಕ್ಷ ಕೋಟಿ ಹೂಡಿಕೆ: ಮೈಕ್ರೊಸಾಫ್ಟ್

ನವದೆಹಲಿ (ಪಿಟಿಐ): ಮುಂದಿನ ನಾಲ್ಕು ವರ್ಷದಲ್ಲಿ (2026ರಿಂದ 2029) ದೇಶದ ಕೃತಕ ಬುದ್ಧಿಮತ್ತೆ (ಎ.ಐ) ತಂತ್ರಜ್ಞಾನ ಕ್ಷೇತ್ರದಲ್ಲಿ ₹1.58 ಲಕ್ಷ ಕೋಟಿ ಹೂಡಿಕೆ ಮಾಡಲು ಯೋಜಿಸಿರುವುದಾಗಿ ಮೈಕ್ರೊಸಾಫ್ಟ್‌ನ ಸಿಇಒ ಸತ್ಯ ನಾದೆಲ್ಲಾ ತಿಳಿಸಿದ್ದಾರೆ.


ಸತ್ಯ ನಾದೆಲ್ಲಾ

ಕೃತಕ ಬುದ್ಧಿಮತ್ತೆ ಕ್ಷೇತ್ರದ ಭವಿಷ್ಯಕ್ಕೆ ಅಗತ್ಯವಾದ ಮೂಲಸೌಕರ್ಯ, ಕೌಶಲಕ್ಕಾಗಿ ಈ ಹೂಡಿಕೆ ಮಾಡಲಾಗುತ್ತಿದೆ. ಇದು ಏಷ್ಯಾದಲ್ಲಿನ ಅತಿದೊಡ್ಡ ಹೂಡಿಕೆ ಆಗಿದೆ ಎಂದು 'ಎಕ್ಸ್'ನಲ್ಲಿ ತಿಳಿಸಿದ್ದಾರೆ. ದೇಶದ ಮಹತ್ವಾಕಾಂಕ್ಷೆಯ ಗುರಿಯಾದ ಎ.ಐ ತಂತ್ರಜ್ಞಾನದ ಮೂಲಸೌಕರ್ಯ ನಿರ್ಮಾಣಕ್ಕೆ ನೆರವಾಗಲು ಈ ಹೂಡಿಕೆ ಮಾಡಲು ಮುಂದಾಗುತ್ತಿದ್ದೇವೆ ಎಂದಿದ್ದಾರೆ. 2025ರ ಜನವರಿಯಲ್ಲಿ ಮೈಕ್ರೊಸಾಫ್ಟ್ ₹26,951 ಕೋಟಿ ಹೂಡಿಕೆ ಮಾಡುವುದಾಗಿ ಘೋಷಿಸಿತ್ತು.

ಅಡಿಕೆ ಧಾರಣೆ


ಪುತ್ತೂರು		ಚಾಲಿ	42199-49411	ಹಳೆಚಾಲಿ	33299-48589
ಕೋಕ	20000-35000	ಕೆಂಪುಗೋಟು	22599-45699	ಹೊಸಚಾಲಿ	33899-48589
ಹೊಸತು	26000-41000	ರಾಶಿ	53699-58698	ಕೆಂಪುಗೋಟು	12109-37699
ಹಳತು	45000-54000	ಯಲ್ಲಾಪುರ		ರಾಶಿ	50661-65889
ಶಿರಸಿ		ಎಪಿ	66919-77175	ತಟ್ಟಿಬೆಟ್ಟೆ	32100-54921
ಬೆಟ್ಟೆ	41509-53299	ಬಿಳಿಗೋಟು	11669-35501	ಕುಮಟಾ	
ಬಿಳಿಗೋಟು	25099-39699	ಕೋಕ	9609-32989	ಚಾಲಿ	42306-45693


ಮುಂಬೈ ಖಾದ್ಯ ತೈಲ


(ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)


ಶೇಂಗಾ (ರಿಫೈನ್ಡ್)	₹1520 (1490)
ಸೋಯಾ (ರಿಫೈನ್ಡ್)	₹1275 (1280)
ಸೂರ್ಯಕಾಂತಿ (ರಿಫೈನ್ಡ್)	₹1485 (1480)
ಪಾಮೋಲಿನ್	₹1245 (1248)


ಸುದ್ದಿವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ











ಪ್ರಶ್ನೋತ್ತರ



ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಕರುಣಾಕರ್, ಬೆಂಗಳೂರು

• **ಪ್ರಶ್ನೆ: 'ನಾವು 2022ರ ಏಪ್ರಿಲ್‌ನಲ್ಲಿ ನಿರ್ಮಾಣವಾಗುತ್ತಿರುವ ಫ್ಲ್ಯಾಟ್ ಒಂದನ್ನು ಖರೀದಿಸಲು ಒಪ್ಪಂದ ಮಾಡಿಕೊಂಡಿದ್ದೆವು. ಪ್ರಸ್ತುತ ಆ ಭಾಗದಲ್ಲಿ ರಿಯಲ್ ಎಸ್ಟೇಟ್ ಮಾರುಕಟ್ಟೆ ಏರಿಕೆಯಲ್ಲಿ ಇದೆ. ನಾವು ಖರೀದಿಸಿದ ಮೂಲ ಉದ್ದೇಶ ಹೂಡಿಕೆಗಾಗಿ ಇರುವುದರಿಂದ ಪ್ರಸ್ತುತ ಮಾರುಕಟ್ಟೆಯೂ ಉತ್ತಮ ಸ್ಥಿತಿಯಲ್ಲಿರುವ ಕಾರಣ ಈ ಆಸ್ತಿಯನ್ನು ಮಾರಾಟ ಮಾಡುವ ಯೋಜನೆಯಲ್ಲಿದ್ದೇವೆ. ಆಸ್ತಿ ಖರೀದಿಗೆ ಸಂಬಂಧಿಸಿ ಈಗಾಗಲೇ ಕರಾರು ಮಾಡಿಕೊಂಡಿದ್ದು ನಮ್ಮ ಹೆಸರಲ್ಲಿ ಫ್ಲ್ಯಾಟ್ ನೋಂದಣಿ ಆಗಬೇಕಾಗಿದೆ'. ನಮಗಿರುವ ಪ್ರಶ್ನೆ ಏನೆಂದರೆ, ನಮ್ಮ ಹೆಸರಿಗೆ ಇನ್ನೂ ನೋಂದಣಿಯಾಗದ ಆಸ್ತಿ ಮಾರಾಟ ಮಾಡುವಾಗ ಯಾವ ವರ್ಗದ ತೆರಿಗೆ ಅನ್ವಯಿಸುತ್ತದೆ. ಇದಲ್ಲದೆ, ನಾವು ಪಾವತಿಸಿರುವ ಇಎಂಐ ಮೇಲಿನ ಬಡ್ಡಿಯನ್ನು ನಿರ್ಮಾಣ ವೆಚ್ಚದಲ್ಲಿ ಸೇರಿಸಬಹುದೇ. ಒಂದು ವೇಳೆ ತೆರಿಗೆ ಅನ್ವಯಿಸುವುದಿದ್ದರೆ, ಉಳಿತಾಯ ಸಾಧ್ಯವೇ?**

ಉತ್ತರ: ನೀವು 2022ರ ಏಪ್ರಿಲ್‌ನಲ್ಲಿ ನಿರ್ಮಾಣದ ಹಂತದಲ್ಲಿರುವ ಫ್ಲ್ಯಾಟ್ ಖರೀದಿಸುವ ಒಪ್ಪಂದ ಹೊಂದಿರುವ ಬಗ್ಗೆ ಖಚಿತಪಡಿಸಿದ್ದೀರಿ. ಪ್ರಸ್ತುತ ಮಾರುಕಟ್ಟೆ ದರ ಏರಿಕೆಯಲ್ಲಿ ಇರುವುದರಿಂದ ಆಸ್ತಿ ನಿಮ್ಮ ಹೆಸರಲ್ಲಿ ನೋಂದಣಿ ಮಾಡುವ ಮೊದಲೇ ನೀವು ಹೂಡಿರುವ ಬಂಡವಾಳ ಮೊತ್ತವನ್ನು ಲಾಭದಾಯಕ ಸ್ಥಿತಿಯಲ್ಲಿ ಮರಳಿ ಪಡೆಯುವ ನಿರ್ಧಾರ ಮಾಡಿದ್ದೀರಿ.

ಈ ಹಿನ್ನೆಲೆಯಲ್ಲಿ ತೆರಿಗೆಯ ವಿಚಾರವಾಗಿ ಹೇಳುವುದಾದರೆ, ನೀವು ಈಗಾಗಲೇ ಮನೆ ನಿರ್ಮಾಣ ಮಾಡುವ ಕಂಪನಿಯೊಡನೆ ಫ್ಲ್ಯಾಟ್ ಖರೀದಿ ಮಾಡುವ ಹಕ್ಕುವುಳ್ಳ ಕರಾರು ಮಾಡಿಕೊಂಡಿದ್ದೀರಿ. ಪ್ರಸ್ತುತ ಆ ಖರೀದಿಯ ಹಕ್ಕನ್ನು ನೀವು ಇತರರಿಗೆ ವರ್ಗಾಯಿಸುವ ಯೋಜನೆ ಮಾಡಿದ್ದೀರಿ. ಈ ಆಸ್ತಿ ನಿಮ್ಮ ಹೆಸರಿಗೆ ನೋಂದಣಿ ಆಗಿರದಿದ್ದರೂ, ಈ ಸಂಬಂಧ ನಿಮ್ಮ ಎಲ್ಲಾ ಪಾವತಿಗಳು ಕೂಡ ಸಂದಿವೆ ಹಾಗೂ ಆ ಆಸ್ತಿಯನ್ನು ಪಡೆಯುವ ಸಂಪೂರ್ಣ ಹಕ್ಕು ನಿಮಗಿದೆ. ಹೀಗಾಗಿ ಈ ಸ್ಥಿರಾಸ್ತಿಯ ಮೇಲಿನ ಹಕ್ಕು ಬದಲಾವಣೆಯೂ ವರ್ಗಾವಣೆಯೇ ಆಗುತ್ತದೆ ಹಾಗೂ ಬಂಡವಾಳ ತೆರಿಗೆಗೊಳಪಡುವ ಪರಿಧಿಯಲ್ಲಿ ಬರುತ್ತದೆ.

ಯಾವುದೇ ಸ್ಥಿರಾಸ್ತಿಯಲ್ಲಿ 24 ತಿಂಗಳಿಗಿಂತ ಅಧಿಕ ಸಮಯ ನಿಮ್ಮ ಹಕ್ಕು ಅದರ ಮೇಲಿದ್ದಾಗ, ಮಾರಾಟ ಮಾಡುವುದಿದ್ದರೆ ಅದು ದೀರ್ಘಾವಧಿ ಬಂಡವಾಳ ತೆರಿಗೆಗೆ ಒಳಪಡುವ ವ್ಯವಹಾರವಾಗುತ್ತದೆ. ಈ ಸಂಬಂಧ ದಲ್ಲಾಳಿ ವೆಚ್ಚ ಏನಾದರೂ ಪಾವತಿಸಿದ್ದರೆ, ಮಾರಾಟ ಮೌಲ್ಯದಿಂದ ಅದನ್ನು ಕಳೆದು, ಉಳಿದ ಮೊತ್ತವನ್ನು ನಿವ್ವಳ ಮಾರಾಟ ಮೌಲ್ಯ ಎಂದು ಪರಿಗಣಿಸಲಾಗುತ್ತದೆ. ಇದರ ನಂತರ ಆಸ್ತಿ ಮೌಲ್ಯ ಕಳೆದು ಸಂಬಂಧಿತ ಕಾನೂನಿನನ್ವಯ ತೆರಿಗೆ ನಿರ್ಧಾರವಾಗುತ್ತದೆ.

ತೆರಿಗೆ ಪಾವತಿಯ ಉದ್ದೇಶಕ್ಕೆ ಲಾಭ ಲೆಕ್ಕ ಹಾಕಲು ಆಸ್ತಿಯ ಅಸಲು ನಿರ್ಣಯಿಸಬೇಕಾಗುತ್ತದೆ. ಮೂಲ ಖರೀದಿ ಮೌಲ್ಯವಲ್ಲದೆ ನೀವು ಈ ಕೆಲವು ವರ್ಷಗಳಲ್ಲಿ ಇಎಂಐ ಮೇಲೆ ಬಡ್ಡಿ ಪಾವತಿಸಿರುವ ಬಗ್ಗೆ ಹೇಳಿದ್ದೀರಿ. ಆದಾಯ ತೆರಿಗೆಯ ಯಾವುದೇ ನಿರ್ದಿಷ್ಟ ಸೆಕ್ಷನ್‌ಗಳಡಿ ಬಡ್ಡಿ ಪಾವತಿ ಕೂಡ ಅಸಲಿನ ಭಾಗ ಎನ್ನುವ ಸ್ಪಷ್ಟ ಉಲ್ಲೇಖ ಇಲ್ಲದಿದ್ದರೂ, ಅನೇಕ ಸಂದರ್ಭಗಳಲ್ಲಿ ನ್ಯಾಯಾಲಯಗಳ ತೀರ್ಪು ಖರೀದಿಯ ಸಂದರ್ಭದಲ್ಲಿ ಕಟ್ಟಿರುವ ಬ್ಯಾಂಕ್ ಬಡ್ಡಿಯನ್ನು ಕೂಡ ಅಸಲಿನ ಭಾಗವಾಗಿ ಪರಿಗಣಿಸಬಹುದೆಂದು ತೀರ್ಪುಕೊಟ್ಟಿವೆ. ಈ ವಿಚಾರ ಗಮನದಲ್ಲಿಟ್ಟುಕೊಂಡು ನೀವು ಬಡ್ಡಿ ಮೊತ್ತ ಕೂಡ ಅಸಲಿನ ಭಾಗವಾಗಿ ಪರಿಗಣಿಸಬಹುದು. ನಿಮ್ಮ ವಿಚಾರದಲ್ಲಿ ಬಡ್ಡಿ ಮೊತ್ತವನ್ನು ಹೌಸ್ ಪ್ರಾಪರ್ಟಿ ಆದಾಯ ಶೀರ್ಷಿಕೆಯಡಿಯಲ್ಲಿ ನೀವು ಪರಿಗಣಿಸಲು ಸಾಧ್ಯವಿಲ್ಲ, ಕಾರಣ ನೀವು ನಿರ್ಮಾಣದ ಹಂತದಲ್ಲಿರುವ ಆಸ್ತಿಯನ್ನು ಮಾರಾಟ ಮಾಡುವ ನಿರ್ಧಾರ ಮಾಡಿದ್ದೀರಿ.

ನಿಮ್ಮ ಫ್ಲ್ಯಾಟ್ ಖರೀದಿಯ ಕರಾರು 2024ರ ಜುಲೈ 23ರ ಹಿಂದೆಯೇ ಆಗಿರುವ ಕಾರಣ ನಿಮಗೆ ಇಂಡೆಕ್ಸೇಷನ್ ಸಹಿತ ಶೇಕಡ 20ರ ತೆರಿಗೆ ಅಥವಾ ಇಂಡೆಕ್ಸೇಷನ್ ರಹಿತ ಶೇಕಡ 12.5ರ ದರದಲ್ಲಿ ಯಾವುದು ನಿಮಗೆ ಲಾಭದಾಯಕವೋ ಅದನ್ನು ಆಯ್ಕೆ ಮಾಡಿಕೊಳ್ಳುವ ಅವಕಾಶ ಇದೆ. ಅಗತ್ಯ ಬಿದ್ದಲ್ಲಿ ಈ ವಿಚಾರವಾಗಿ ಮೊದಲೇ ತೆರಿಗೆ ಲೆಕ್ಕ ಹಾಕಲು ತೆರಿಗೆ ಸಲಹೆಗಾರರನ್ನು ಸಂಪರ್ಕಿಸಿ.

ಇನ್ನು ನಿಮ್ಮ ತೆರಿಗೆ ತಗ್ಗಿಸಲು ಕಾನೂನಿನನ್ವಯ ಇರುವ ಅವಕಾಶಗಳೆಂದರೆ, ನೀವು ಮೂರು ವರ್ಷದೊಳಗೆ ಇನ್ನೂ ಒಂದು ಮನೆ ಕಟ್ಟಿಸಬಹುದು ಅಥವಾ ಎರಡು ವರ್ಷದೊಳಗೆ ಮನೆ ಖರೀದಿಸಬಹುದು. ಈ ನಿರ್ಧಾರ ತ್ವರಿತವಾಗಿ ಕೈಗೊಳ್ಳಲು ಸಾಧ್ಯವಿಲ್ಲದಿದ್ದರೆ, ಮೂರು ವರ್ಷ ನಿಮ್ಮ ಲಾಭವನ್ನು ಯಾವುದೇ ಸ್ಥಳೀಯ ಬ್ಯಾಂಕ್‌ಗಳಲ್ಲಿ 'ಕ್ಯಾಪಿಟಲ್ ಗೈನ್ಸ್' ಖಾತೆಗೆ ವರ್ಗಾಯಿಸಿ ತೆರಿಗೆಯನ್ನು ತಾತ್ಕಾಲಿಕವಾಗಿ ತಗ್ಗಿಸಬಹುದು. ಈ ಮೊತ್ತ ಉಪಯೋಗಿಸದಿದ್ದರೆ, ಅಂತಹ ಮೊತ್ತ ತೆರಿಗೆಗೊಳಪಡುತ್ತದೆ.

ರಘು ಎಂ., ಬೆಂಗಳೂರು

• **ಪ್ರಶ್ನೆ: 'ನಾನು ನಿವೃತ್ತಿಯ ಅಂಚಿನಲ್ಲಿದ್ದೇನೆ. ಸಾಮಾನ್ಯವಾಗಿ ನಮ್ಮ ಸಂಸ್ಥೆಯಲ್ಲಿ ಸಂಪೂರ್ಣ ಅವಧಿ ಪೂರೈಸಿ ನಿವೃತ್ತಿಯಾದ ಸಂದರ್ಭದಲ್ಲಿ 8 ಗ್ರಾಂ ಚಿನ್ನದ ನಾಣ್ಯವನ್ನು ಉಡುಗೊರೆಯಾಗಿ ನೀಡಲಾಗುತ್ತದೆ. ನನ್ನ ಪ್ರಶ್ನೆ ಏನೆಂದರೆ, ಈಗಿನ ಇದರ ಮೌಲ್ಯ ಸುಮಾರು ₹1 ಲಕ್ಷಕ್ಕೂ ಅಧಿಕ ಆಗಿರುತ್ತದೆ. ಇದಕ್ಕೆ ತೆರಿಗೆ ಅನ್ವಯಿಸುತ್ತದೆಯೇ?**

ಉತ್ತರ: ನೀವು ಉದ್ಯೋಗದಲ್ಲಿದ್ದು ನಿಮ್ಮ ಸಂಸ್ಥೆ ನಿವೃತ್ತಿಯ ಸಂದರ್ಭದಲ್ಲಿ ನೀಡುವ ಈ ರೀತಿಯ ಉಡುಗೊರೆ ಪರ್ಕ್ವಿಸಿಟ್ ಭಾಗವಾಗಿ ಪರಿಗಣಿಸಲಾಗುತ್ತದೆ. ಉದ್ಯೋಗಿಗಳಿಗೆ ನೀಡುವ ಇಂತಹ ವಸ್ತು ರೂಪದ ಉಡುಗೊರೆ ವರ್ಷಕ್ಕೆ ₹5 ಸಾವಿರಕ್ಕಿಂತ ಅಧಿಕ ಮೌಲ್ಯದ್ದಾಗಿದ್ದರೆ, ಅಂತಹ ಉಡುಗೊರೆಗಳನ್ನು ಆದಾಯ ತೆರಿಗೆಯ ಸೆಕ್ಷನ್ 17(2)ರ ಪ್ರಕಾರ ತೆರಿಗೆಗೆ ಪರಿಗಣಿಸಬೇಕಾಗುತ್ತದೆ. ಈ ಮೊತ್ತವನ್ನು ನಿಮಗೆ ವಾರ್ಷಿಕವಾಗಿ ನೀಡಲಾಗುವ 'ಫಾರಂ 12ಬಿಎ' ಯಲ್ಲಿ ದಾಖಲಿಸಿ ವೇತನದ ಒಟ್ಟಾರೆ ತೆರಿಗೆ ನಿರ್ಣಯಿಸಬೇಕಾಗುತ್ತದೆ. ಇಂತಹ ನಗದೇತರ ಉಡುಗೊರೆಗಳನ್ನು ಆಯಾ ಸಮಯದ ಮಾರುಕಟ್ಟೆ ಮೌಲ್ಯ ಪರಿಗಣಿಸಿ ನಿಮ್ಮ ಸಂಸ್ಥೆಯವರು ನಿರ್ಧರಿಸಬೇಕಾಗುತ್ತದೆ. ಹೀಗಾಗಿ ಇದು ಪರ್ಕ್ವಿಸಿಟ್ ಭಾಗವಾಗಿ ತೆರಿಗೆಗೊಳಪಡುವ ಆದಾಯವಾಗಿದೆ.

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001.
ಇ–ಮೇಲ್: businessdesk@prajavani.co.in

ಎಂ.ಎಫ್: ₹300 ಲಕ್ಷ ಕೋಟಿ ದಾಟುವ ನಿರೀಕ್ಷೆ

ನವದೆಹಲಿ (ಪಿಟಿಐ): 2034–35ರ ಆರ್ಥಿಕ ವರ್ಷದ ವೇಳೆಗೆ ದೇಶದ ಮ್ಯೂಚುವಲ್ ಫಂಡ್ ಉದ್ಯಮದ ಒಟ್ಟಾರೆ ಸಂಪತ್ತಿನ ನಿರ್ವಹಣಾ ಮೌಲ್ಯವು (ಎಯುಎಂ) ₹300 ಲಕ್ಷ ಕೋಟಿ ದಾಟಬಹುದು ಎಂದು ಜಂಟಿ ವರದಿಯೊಂದು ಮಂಗಳವಾರ ತಿಳಿಸಿದೆ.



ಇದೇ ಅವಧಿಯಲ್ಲಿ ಈಕ್ವಿಟಿ ಆಧಾರಿತ ಹೂಡಿಕೆಯು ₹250 ಲಕ್ಷ ಕೋಟಿಯಷ್ಟಾಗುವ ನಿರೀಕ್ಷೆ ಇದೆ ಎಂದು ಸಲಹಾ ಸಂಸ್ಥೆ ಬೈನ್ ಆ್ಯಂಡ್ ಕಂಪನಿ ಮತ್ತು ಆನ್‌ಲೈನ್ ಹೂಡಿಕೆ ವೇದಿಕೆ 'ಗ್ರೋವ್' ತಿಳಿಸಿದೆ.


ಹೂಡಿಕೆದಾರರ ಭಾಗವಹಿಸುವಿಕೆಯಲ್ಲಿನ ಹೆಚ್ಚಳ ಮತ್ತು ಡಿಜಿಟಲ್ ಅಳವಡಿಕೆಯಿಂದ ಈ ಬೆಳವಣಿಗೆ ಆಗುತ್ತಿದೆ ಎಂದು ತಿಳಿಸಿದೆ.

ವರದಿ ಪ್ರಕಾರ, ಪ್ರಸ್ತುತ ದೇಶದಲ್ಲಿ ಮ್ಯೂಚುವಲ್ ಫಂಡ್ (ಎಂ.ಎಫ್) ಉದ್ಯಮದಲ್ಲಿ ಕುಟುಂಬಗಳ ಪಾಲ್ಗೊಳ್ಳುವಿಕೆ ಮುಂದಿನ ದಶಕದ ವೇಳೆಗೆ ಶೇ 10ರಿಂದ ಶೇ 20ಕ್ಕೆ ಹೆಚ್ಚಳವಾಗುವ ನಿರೀಕ್ಷೆ ಇದೆ ಎಂದು ತಿಳಿಸಿದೆ.

ಷೇರುಗಳ ಖರೀದಿ ಮತ್ತು ಮಾರಾಟವಲ್ಲದೆ, ದೀರ್ಘಾವಧಿ ಹೂಡಿಕೆ ಮಾಡಲು ಹೂಡಿಕೆದಾರರು ಮುಂದಾಗುತ್ತಿದ್ದಾರೆ. ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯು (ಸೆಬಿ) ಷೇರುಪೇಟೆಯಲ್ಲಿ ಊಹಾಪೋಹ ಮತ್ತು ರಿಸ್ಕ್ ತಡೆಗಟ್ಟಲು ಹಲವಾರು ಕ್ರಮ ಕೈಗೊಂಡಿದೆ. ಇದು ಹೂಡಿಕೆದಾರರಿಗೆ ಉತ್ತೇಜನ ನೀಡಿದೆ ಎಂದು ತಿಳಿಸಿದೆ.

2.23 ಕೋಟಿ ಟನ್‌ನಷ್ಟು ಆಮದು: ಎಫ್‌ಎಐ ಅಂದಾಜು

ರಸಗೊಬ್ಬರ ಆಮದು ಹೆಚ್ಚಳ ನಿರೀಕ್ಷೆ



ನವದೆಹಲಿ (ಪಿಟಿಐ): 'ಪ್ರಸಕ್ತ ಆರ್ಥಿಕ ವರ್ಷದಲ್ಲಿ ದೇಶದ ರಸಗೊಬ್ಬರ ಆಮದು 2.23 ಕೋಟಿ ಟನ್‌ಗೆ ಹೆಚ್ಚಳವಾಗುವ ನಿರೀಕ್ಷೆ ಇದೆ' ಎಂದು ಭಾರತೀಯ ರಸಗೊಬ್ಬರ ಸಂಘ (ಎಫ್‌ಎಐ) ಮಂಗಳವಾರ ತಿಳಿಸಿದೆ.

ಇದು ಹಿಂದಿನ ಆರ್ಥಿಕ ವರ್ಷದ ಇದೇ ಅವಧಿಗೆ ಹೋಲಿಸಿದರೆ ಶೇ 41ರಷ್ಟು ಹೆಚ್ಚು ಎಂದು ತಿಳಿಸಿದೆ. ದೇಶದಲ್ಲಿ ಸುರಿದ ಉತ್ತಮ ಮುಂಗಾರು, ಬೇಡಿಕೆ ಹೆಚ್ಚಳಕ್ಕೆ ಕಾರಣ ಎಂದು ತಿಳಿಸಿದೆ.

ಭಾರತವು ಜಗತ್ತಿನಲ್ಲಿ ಅತಿಹೆಚ್ಚು ರಸಗೊಬ್ಬರ ಬಳಸುವ ದೇಶಗಳ ಪೈಕಿ 2ನೇ ಸ್ಥಾನದಲ್ಲಿದೆ. ಚೀನಾ ಮೊದಲ ಸ್ಥಾನದಲ್ಲಿದೆ. ಪ್ರಸಕ್ತ ಆರ್ಥಿಕ ವರ್ಷದ ಏಪ್ರಿಲ್‌ನಿಂದ ಅಕ್ಟೋಬರ್ ಅವಧಿಯಲ್ಲಿ ದೇಶದಲ್ಲಿ 1.44 ಕೋಟಿ ಟನ್‌ನಷ್ಟು ರಸಗೊಬ್ಬರ ಆಮದಾಗಿದೆ. ಕಳೆದ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ 85.6 ಲಕ್ಷ ಟನ್ ಆಮದಾಗಿತ್ತು. ಇದಕ್ಕೆ ಹೋಲಿಸಿದರೆ ಆಮದು ಪ್ರಮಾಣ ಈ ಅವಧಿಯಲ್ಲಿ ಶೇ 69ರಷ್ಟು ಹೆಚ್ಚಳವಾಗಿದೆ.

'ದೇಶದಲ್ಲಿ ಸುರಿದ ಉತ್ತಮ ಮಳೆಯಿಂದಾಗಿ ರಸಗೊಬ್ಬರದ ಆಮದು ಪ್ರಮಾಣ ಹೆಚ್ಚಳವಾಗಿದೆ' ಎಂದು ಎಫ್‌ಎಐ ಅಧ್ಯಕ್ಷ ಎಸ್. ಶಂಕರ್‌ಸುಬ್ರಮಣಿಯನ್ ಹೇಳಿದ್ದಾರೆ.

ನವೆಂಬರ್ ಅಂತ್ಯದ ವೇಳೆಗೆ ರಸಗೊಬ್ಬರ ದಾಸ್ತಾನು 1.02 ಕೋಟಿ ಟನ್‌ನಷ್ಟಿದೆ. ಈ ದಾಸ್ತಾನಿನಲ್ಲಿ 50 ಲಕ್ಷ ಟನ್ ಯೂರಿಯಾ, 17 ಲಕ್ಷ ಟನ್ ಡಿಎಪಿ ಮತ್ತು 35 ಲಕ್ಷ ಟನ್ ಎನ್‌ಪಿಕೆ ರಸಗೊಬ್ಬರ ಸೇರಿದೆ ಎಂದು ಹೇಳಿದ್ದಾರೆ.

ಕೋರಮಂಡಲ್ ಇಂಟರ್‌ನ್ಯಾಷನಲ್‌ನ ವ್ಯವಸ್ಥಾಪಕ ನಿರ್ದೇಶಕರೂ ಆಗಿರುವ ಶಂಕರ್‌ಸುಬ್ರಮಣಿಯನ್ ಅವರು, ಕಳೆದ ಎರಡು ತಿಂಗಳಿನಲ್ಲಿ ಭಾರತವು ದೊಡ್ಡ ಪ್ರಮಾಣದಲ್ಲಿ ಒಪ್ಪಂದ ಮಾಡಿಕೊಂಡಿದ್ದು, ಯಾವುದೇ ಪೂರೈಕೆ ನಿರ್ಬಂಧಗಳಿಲ್ಲ ಎಂದು ಹೇಳಿದ್ದಾರೆ.

ದೇಶದಲ್ಲಿ ರಸಗೊಬ್ಬರ ಉತ್ಪಾದನೆ ಕಳೆದ ಏಪ್ರಿಲ್‌ನಿಂದ ಅಕ್ಟೋಬರ್ ಅವಧಿಯಲ್ಲಿ 2.97 ಕೋಟಿ ಟನ್‌ನಷ್ಟಿತ್ತು. ಅದು ಈ ಬಾರಿ 2.99 ಕೋಟಿ ಟನ್‌ಗೆ ಹೆಚ್ಚಳವಾಗಿದೆ.

ಈ ಪೈಕಿ 1.71 ಕೋಟಿ ಟನ್ ಯೂರಿಯಾ, 23.2 ಲಕ್ಷ ಟನ್ ಡಿಎಪಿ, 70.4 ಲಕ್ಷ ಟನ್ ಎನ್‌ಪಿಕೆ ರಸಗೊಬ್ಬರ ಮತ್ತು 34.8 ಲಕ್ಷ ಟನ್ ಎಸ್‌ಎಸ್‌ಪಿ ಇದೆ. ವಾರ್ಷಿಕವಾಗಿ ದೇಶದಲ್ಲಿ 7 ಕೋಟಿ ಟನ್‌ನಷ್ಟು ರಸಗೊಬ್ಬರ ಬಳಕೆ ಆಗುತ್ತದೆ.

ಉಡಾನ್ 10 ವರ್ಷಕ್ಕೆ ವಿಸ್ತರಣೆ: ಕೇಂದ್ರಕ್ಕೆ ಪ್ರಸ್ತಾವ

ಪ್ರಜಾವಾಣಿ ವಾರ್ತೆ

ಸುವರ್ಣ ವಿಧಾನಸೌಧ (ಬೆಳಗಾವಿ): ಪ್ರಾದೇಶಿಕ ವಿಮಾನಯಾನ ಸೇವೆಗೆ ಉಡಾನ್ ಯೋಜನೆ ಮೂಲಕ ನೀಡುತ್ತಿರುವ ಆರ್ಥಿಕ ನೆರವನ್ನು 10 ವರ್ಷಗಳವರೆಗೆ ವಿಸ್ತರಿಸುವಂತೆ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗಿದೆ ಎಂದು ಮೂಲಸೌಕರ್ಯ ಅಭಿವೃದ್ಧಿ ಸಚಿವ ಎಂ.ಬಿ.ಪಾಟೀಲ ಹೇಳಿದರು.

ಕಲಬುರಗಿಯಲ್ಲಿ ವಿಮಾನ ಹಾರಾಟ ಸ್ಥಗಿತ ಕುರಿತಂತೆ ಬಿಜೆಪಿಯ ಶಶೀಲ್ ನಮೋಶಿ ಶೂನ್ಯವೇಳೆಯಲ್ಲಿ ಮಾಡಿದ ಪ್ರಸ್ತಾಪಕ್ಕೆ ಉತ್ತರಿಸಿದ ಅವರು, 'ದೇಶದ ವಿಮಾನಯಾನ ಕ್ಷೇತ್ರದಲ್ಲಿ ಸುಧಾರಣೆ ತರಲು ಕೇಂದ್ರ ಸರ್ಕಾರ ಉಡಾನ್ ಯೋಜನೆ ಜಾರಿಗೆ ತಂದಿದೆ. ಈ ಯೋಜನೆಯಡಿ ಮೂರು ವರ್ಷ ಮಾತ್ರ ಪ್ರಾದೇಶಿಕ ವಿಮಾನಯಾನದ ಅಭಿವೃದ್ಧಿ, ಪುನಶ್ಚೇತನಕ್ಕೆ ಆರ್ಥಿಕ ನೆರವನ್ನು ನೀಡುತ್ತಿದೆ. ಇದನ್ನು 10 ವರ್ಷಕ್ಕೆ ವಿಸ್ತರಿಸಿ, ಐದು ವರ್ಷ ಪೂರ್ತಿ ನಿಲ್ದಾಣಗಳ ಅಭಿವೃದ್ಧಿಗೆ ನೆರವು ಒದಗಿಸಬೇಕು. ಉಳಿದ ಐದು ವರ್ಷದ ಅವಧಿಗೆ ರಾಜ್ಯ ಸರ್ಕಾರ ಶೇ 50ರ ಅನುಪಾತದಲ್ಲಿ ಅನುದಾನ ಒದಗಿಸಲು ಸಿದ್ಧವಿದೆ' ಎಂದು ಹೇಳಿದರು.

ಕೇಂದ್ರ ಸರ್ಕಾರದ ಪ್ರಾದೇಶಿಕ ಸಂಪರ್ಕ ಯೋಜನೆಯಡಿ ಕಲಬುರಗಿ ವಿಮಾನ ನಿಲ್ದಾಣ 2022ರಿಂದ ಕಾರ್ಯಾಚರಣೆ ಆರಂಭಗೊಂಡಿತ್ತು. ವಿಮಾನಯಾನ ಸಂಸ್ಥೆಗಳು ಕೇಂದ್ರದ ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರದ ಜೊತೆ ಉಡಾನ್ ಯೋಜನೆಯಡಿ ಒಪ್ಪಂದ ಮಾಡಿಕೊಂಡಿವೆ. ಅದರಂತೆ ಮೂರು ವರ್ಷ ಸೇವೆ ಒದಗಿಸಿವೆ. ಅವಧಿ ಪೂರ್ಣಗೊಂಡ ಕಾರಣ ಸೇವೆ ಸ್ಥಗಿತಗೊಳಿಸಿವೆ. ಅವಧಿ ವಿಸ್ತರಿಸದಿದ್ದರೆ ಉಡಾನ್ ಯೋಜನೆಯಡಿ ವಿಮಾನಯಾನ ಸೌಲಭ್ಯ ಪಡೆದ ನಿಲ್ದಾಣಗಳು ಬಂದ್ ಆಗಲಿವೆ ಎಂದು ಹೇಳಿದರು.

ಮುಂಬೈ ಧಾರಣೆ (ಶೇಂಗಾ)

09-12-2025

ಜಾವಾ 70/80(ಹೊಸ)	10600-10700
ಜಾವಾ 80/90(ಹೊಸ)	9900-10000
ದಪ್ಪ ಮಧ್ಯಪ್ರದೇಶ (ಹೊಸ)	7600-7700
ದಪ್ಪ ಗುಜರಾತ್ (ಹೊಸ)	8900-9000
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1530 (1500)
ಒಂದು ವಾರದ ಡೆಲಿವರಿ	1425 (1495)
ಪಾಮ್ ವಾರದ ಡೆಲಿವರಿ	1243 (1248)
ಸೂರ್ಯಕಾಂತಿ ಎಣ್ಣೆ ಕಚ್ಚಾ	1415 (1420)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,27,300 (1,27,600)
ಬೆಳ್ಳಿ ಕೆ.ಜಿಗೆ	1,79,000 (1,78,800)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಸೆನ್ಸೆಕ್ಸ್, ನಿಫ್ಟಿ ಇಳಿಕೆ

ಮುಂಬೈ (ಪಿಟಿಐ): ಲಾಭದ ಗಳಿಕೆಗಾಗಿ ಹೂಡಿಕೆದಾರರು ಷೇರುಗಳ ಮಾರಾಟಕ್ಕೆ ಮುಂದಾಗಿದ್ದರಿಂದ ದೇಶದ ಷೇರುಪೇಟೆ ಸೂಚ್ಯಂಕಗಳು ಮಂಗಳವಾರದ ವಹಿವಾಟಿನಲ್ಲಿ ಇಳಿಕೆ ಕಂಡಿವೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 436 ಅಂಶ ಇಳಿಕೆಯಾಗಿ, 84,666ಕ್ಕೆ ವಹಿವಾಟು ಅಂತ್ಯಗೊಂಡಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 120 ಅಂಶ ಕಡಿಮೆಯಾಗಿ, 25,839ಕ್ಕೆ ಕೊನೆಗೊಂಡಿದೆ.

ವಿದೇಶಿ ಬಂಡವಾಳದ ಹೊರ ಹರಿವು, ಅಮೆರಿಕ– ಭಾರತದ ನಡುವಿನ ವ್ಯಾಪಾರ ಒಪ್ಪಂದದ ಅನಿಶ್ಚಿತತೆಯು ಮುಂದುವರಿದಿರುವುದು ಸಹ ಸೂಚ್ಯಂಕಗಳ ಇಳಿಕೆಗೆ ಕಾರಣವಾದವು ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ಕಾರ್ಮಿಕ ಸಂಹಿತೆ ವಾಪಸ್‌ಗೆ ಒತ್ತಾಯಿಸಿ ಮುಷ್ಕರ


ನವದೆಹಲಿ (ಪಿಟಿಐ): ಕಾರ್ಮಿಕ ಸಂಹಿತೆಗಳನ್ನು ವಾಪಸ್ ಪಡೆಯುವಂತೆ ಒತ್ತಾಯಿಸಿ, ಫೆಬ್ರುವರಿ ತಿಂಗಳಿನಲ್ಲಿ ದೇಶದಾದ್ಯಂತ ಸಾರ್ವತ್ರಿಕ ಮುಷ್ಕರ ನಡೆಸಲು ಕಾರ್ಮಿಕ ಒಕ್ಕೂಟಗಳು ನಿರ್ಧರಿಸಿವೆ.

ಮುಷ್ಕರ ನಡೆಸುವ ದಿನಾಂಕವನ್ನು ಡಿಸೆಂಬರ್ 22ರಂದು ಪ್ರಕಟಿಸಲಾಗುವುದು ಎಂದು ಒಕ್ಕೂಟ ಮಂಗಳವಾರ ತಿಳಿಸಿದೆ.

ಸಂಯುಕ್ತ ಕಿಸಾನ್ ಮೋರ್ಚಾ ಸಹ ತಮ್ಮ ಬೇಡಿಕೆಗಳ ಜೊತೆಗೆ ಬೀಜ ಮಸೂದೆ ಮತ್ತು ಕಾರ್ಮಿಕ ಸಂಹಿತೆಗಳನ್ನು ವಿರೋಧಿಸಿ ಗ್ರಾಮಗಳು ಸೇರಿದಂತೆ ದೊಡ್ಡ ಮಟ್ಟದಲ್ಲಿ ಪ್ರತಿಭಟನೆ ನಡೆಸಲು ಸಜ್ಜುಗೊಂಡಿದೆ ಎಂದು ತಿಳಿಸಿದೆ.

ಕಾರ್ಮಿಕ ಸಂಹಿತೆಗಳನ್ನು ಹಿಂತೆಗೆದುಕೊಳ್ಳುವವರೆಗೆ ಹಂತಹಂತವಾಗಿ ಹೋರಾಟವನ್ನು ನಡೆಸಲು ನಿರ್ಧರಿಸಲಾಗಿದೆ ಎಂದು ತಿಳಿಸಿದೆ.

‘ಫಾರ್ಗಾ’ದ ಹಾಡು ಬಿಡುಗಡೆ


ಅರುಣ್


ರೆಹಾನ


‘ಜೋಗಿ’, ‘ಪ್ರೀತಿ ಏಕೆ ಭೂಮಿ ಮೇಲಿದೆ’ ಸಿನಿಮಾಗಳನ್ನು ನಿರ್ಮಿಸಿದ ಅಶ್ವಿನಿ ರಾಮ್‌ಪ್ರಸಾದ್ ತಮ್ಮ ಪುತ್ರ ಅರುಣ್ ರಾಮ್‌ಪ್ರಸಾದ್ ಅವರನ್ನು ನಾಯಕನಾಗಿ ಚಿತ್ರರಂಗಕ್ಕೆ ಪರಿಚಯಿಸುತ್ತಿದ್ದಾರೆ.

‘ಫಾರ್ಗಾ’ ಎಂಬ ಶೀರ್ಷಿಕೆ ಹೊತ್ತ ಈ ಸಿನಿಮಾ ಅಡ್ವೆಂಚರಸ್ ಡ್ರಾಮಾ ಜಾನರ್‌ನಲ್ಲಿದೆ. ಚಿತ್ರದಲ್ಲಿ ಅರುಣ್ ಒಬ್ಬ ಬರಹಗಾರ, ಸಂಶೋಧಕನ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಎಂ. ಶಶಿಧರ್ ಈ ಚಿತ್ರಕ್ಕೆ ಕಥೆ, ಚಿತ್ರಕಥೆ ಬರೆದು ಆ್ಯಕ್ಷನ್ ಕಟ್ ಹೇಳಿದ್ದಾರೆ. ಈ ಚಿತ್ರದಲ್ಲಿ ‘ಫಾರ್ಗಾ’ ಒಂದು ಊರಿನ ಹೆಸರು. ನಾಯಕಿ ಪಾತ್ರದಲ್ಲಿ ರೆಹಾನ ಅಭಿನಯಿಸಿದ್ದಾರೆ. ಇತ್ತೀಚೆಗೆ ಚಿತ್ರದ ‘ನೀನು ನನಗೆ’ ಎಂಬ ರೊಮ್ಯಾಂಟಿಕ್ ಹಾಡು ಬಿಡುಗಡೆಯಾಯಿತು.

‘ಚಿತ್ರರಂಗದಲ್ಲಿ 40 ವರ್ಷ ಆಡಿಯೊ ಕಂಪನಿ ಮಾಲೀಕ, ನಿರ್ಮಾಪಕನಾಗಿ ಕೆಲಸ ಮಾಡಿದ್ದೇನೆ. ಇದೀಗ ಮಗನನ್ನು ಲಾಂಚ್ ಮಾಡುತ್ತಿದ್ದೇನೆ. ಈ ಚಿತ್ರವನ್ನು ನಾಲ್ಕು ವರ್ಷಗಳ ಹಿಂದೆಯೇ ಶುರು ಮಾಡಿದ್ದೆವು. ನಾನಾ ಕಾರಣಗಳಿಂದ ತಡವಾಯಿತು. ನಾಯಕ ಇಲ್ಲಿ ಮೂರು ಗೆಟಪ್‌ಗಳಲ್ಲಿ ಕಾಣಿಸಿಕೊಳ್ಳಲಿದ್ದಾನೆ. ಚಿಕ್ಕಮಗಳೂರಿನಲ್ಲಿ ಸೆಟ್ ಹಾಕಿ ಶೂಟಿಂಗ್ ಮಾಡಿದ್ದೇವೆ. ಶೂಟಿಂಗ್ ಸಂದರ್ಭದಲ್ಲೂ ಕೊಂಚ ಅಡಚಣೆಗಳಾದವು. ಚಿತ್ರವೀಗ ಬಿಡುಗಡೆಗೆ ಸಿದ್ಧವಿದ್ದು, ಸೆನ್ಸಾರ್‌ಗೆ ಹೋಗಲು ಅಣಿಯಾಗಿದೆ. ಜನವರಿ ವೇಳೆಗೆ ರಿಲೀಸ್ ಮಾಡುವ ಯೋಜನೆಯಿದೆ’ ಎಂದರು ನಿರ್ಮಾಪಕ ರಾಮ್‌ಪ್ರಸಾದ್.

ನಿರ್ದೇಶಕ ಶಶಿಧರ್ ಮಾತನಾಡಿ, ‘ಹಾರರ್, ಸಸ್ಪೆನ್ಸ್, ಥ್ರಿಲ್ಲರ್, ಆ್ಯಕ್ಷನ್ ಹೀಗೆ ಎಲ್ಲ ರೀತಿಯ ಮನರಂಜನಾತ್ಮಕ ಅಂಶಗಳೂ ಚಿತ್ರದಲ್ಲಿವೆ. ಮಂಗಳೂರು, ಚಿಕ್ಕಮಗಳೂರು, ದಾಂಡೇಲಿ, ಆಗುಂಬೆ ಹಾಗೂ ಬೆಂಗಳೂರಲ್ಲಿ ಚಿತ್ರೀಕರಿಸಿದ್ದೇವೆ. ‘ಜೀ’ ಸಂಸ್ಥೆಯು ಒಳ್ಳೆಯ ಮೊತ್ತ ಕೊಟ್ಟು ಹಕ್ಕುಗಳನ್ನು ಖರೀದಿಸಿದ್ದಾರೆ’ ಎಂದರು.

ಆಪರೇಷನ್ ಸೆಟ್‌ನಿಂದ...


ಶಿವರಾಜ್‌ಕುಮಾರ್


ಧನಂಜಯ


‘ಸಪ್ತಸಾಗರದಾಚೆ ಎಲ್ಲೋ’ ಸಿನಿಮಾ ನಿರ್ದೇಶಕ ಹೇಮಂತ್ ಎಂ.ರಾವ್ ನಿರ್ದೇಶನದ ‘666 ಆಪರೇಷನ್ ಡ್ರೀಮ್ ಥಿಯೇಟರ್’ ಸಿನಿಮಾದ ಶೂಟಿಂಗ್ ಬೆಂಗಳೂರಿನಲ್ಲಿ ಭರದಿಂದ ಸಾಗುತ್ತಿದೆ. ಇತ್ತೀಚೆಗೆ ಪೂರ್ಣಗೊಂಡ ಒಂದು ಹಂತದ ಶೂಟಿಂಗ್‌ನ ಫೋಟೊಗಳನ್ನು ಹೇಮಂತ್ ಹಂಚಿಕೊಂಡಿದ್ದಾರೆ.

ಇವುಗಳಲ್ಲಿ ನಟರಾದ ಶಿವರಾಜ್‌ಕುಮಾರ್ ಹಾಗೂ ಧನಂಜಯ ಭಿನ್ನ ಲುಕ್‌ನಲ್ಲಿ ಮಿಂಚಿದ್ದಾರೆ. ಶೀಘ್ರದಲ್ಲೇ ಮತ್ತೊಂದು ಹಂತದ ಶೂಟಿಂಗ್ ಆರಂಭವಾಗಲಿದೆ ಎಂದು ಹೇಮಂತ್ ತಿಳಿಸಿದ್ದಾರೆ. ಬೆಂಗಳೂರಿನ ಕಂಠೀರವ ಸ್ಟುಡಿಯೊದಲ್ಲಿ ಹಾಕಲಾಗಿರುವ ಸೆಟ್‌ನಲ್ಲಿ ಚಿತ್ರೀಕರಣ ನಡೆಯುತ್ತಿದೆ. ಚಿತ್ರದಲ್ಲಿ ನಾಯಕಿಯಾಗಿ ಬಹುಭಾಷಾ ನಟಿ ಪ್ರಿಯಾಂಕಾ ಮೋಹನ್ ಬಣ್ಣ ಹಚ್ಚಿದ್ದಾರೆ.

ಚಿತ್ರಕ್ಕಾಗಿ 70ರ ದಶಕದ ಸಿನಿಮಾಗಳಲ್ಲಿ ಬಳಸುತ್ತಿದ್ದ ವಸ್ತ್ರವಿನ್ಯಾಸದಿಂದ ಹಿಡಿದು ಆ ಕಾಲದ ಲೆನ್ಸ್‌ಗಳನ್ನೂ ಚಿತ್ರತಂಡ ಶೂಟಿಂಗ್‌ಗೆ ಬಳಸಿಕೊಂಡಿದೆ. ಧನಂಜಯ ಮುಖ್ಯಪಾತ್ರದಲ್ಲಿ ನಟಿಸಿರುವ ಈ ಚಿತ್ರವನ್ನು ವೈಶಾಖ್ ಜೆ.ಗೌಡ ಅವರ ವೈಶಾಖ್ ಜೆ. ಫಿಲ್ಮ್ಸ್ ನಿರ್ಮಿಸಿದ್ದು, ಕನ್ನಡ ಮತ್ತು ತೆಲುಗು ಭಾಷೆಗಳಲ್ಲಿ ಏಕಕಾಲದಲ್ಲಿ ಸಿನಿಮಾ ಬಿಡುಗಡೆ ಮಾಡಲು ಚಿತ್ರತಂಡ ಯೋಚಿಸುತ್ತಿದೆ.

> ಮೂರು ಹಂತದ ಚಿತ್ರೀಕರಣ ಪೂರ್ಣಗೊಂಡಿದೆ. ನಾಲ್ಕನೇ ಹಂತದ ಚಿತ್ರೀಕರಣ ಜನವರಿಯಲ್ಲಿ ಆರಂಭವಾಗಲಿದೆ. ಫೆಬ್ರುವರಿ–ಮಾರ್ಚ್‌ನಲ್ಲಿ ಶೂಟಿಂಗ್ ಮುಕ್ತಾಯಗೊಳ್ಳಲಿದೆ. ಬಿಡುಗಡೆ ಬಗ್ಗೆ ನಿರ್ಮಾಪಕರು ನಿರ್ಧಾರ ತೆಗೆದುಕೊಳ್ಳಲಿದ್ದಾರೆ. ಇಡೀ ಸಿನಿಮಾದಲ್ಲಿ ಶಿವರಾಜ್‌ಕುಮಾರ್ ಹಾಗೂ ಧನಂಜಯ ಅವರು ಇದೇ ಲುಕ್‌ನಲ್ಲಿ ಇರಲಿದ್ದಾರೆ.
> –ಹೇಮಂತ್ ಎಂ.ರಾವ್, ನಿರ್ದೇಶಕ

ಪಿಯೊಟು ಟ್ರೇಲರ್ ಬಿಡುಗಡೆ


ಅಶ್ವಿನಿ ಚಾವರೆ

ಕುಡುಕನೊಬ್ಬನ ಕುರಿತಾದ ಕಥೆ ಹೊಂದಿರುವ ‘ಪಿಯೊಟು’ ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಚಿತ್ರಕ್ಕೆ ಕಾರ್ತಿಕ್ ರಾಜ್ ನಿರ್ದೇಶನವಿದೆ.

‘ಕುಡಿಯುವುದಕ್ಕೆ ಅವರಿಗೆ ಸಮಯವೇ ಬೇಕಿಲ್ಲ, ಸದಾ ಕುಡಿಯುವುದರ ಕಡೆಗೆ ಗಮನ ಹರಿಸುವವರನ್ನು ಪಿಯೊಟ್ ಎನ್ನುತ್ತಾರೆ. ಆ ರೀತಿ ಕುಡಿಯುವುದರಿಂದ ಏನೆಲ್ಲಾ ಸಮಸ್ಯೆಗಳಾಗುತ್ತವೆ, ಅವರು ಕುಡಿತ ಬಿಡುವುದಕ್ಕೆ ಮನಸು ಮಾಡಿದಾಗ ಏಷ್ಟೆಲ್ಲಾ ಕಷ್ಟವಾಗುತ್ತದೆ ಎಂಬುದರ ಸುತ್ತ ಸಾಗುವ ಕಥೆಯಿದು. ಕೆಲವರು ಚಿಕ್ಕ ವಯಸ್ಸಿನಿಂದ ಕುಡಿತದ ಚಟಕ್ಕೆ ಒಳಗಾಗಿರುತ್ತಾರೆ. ಯಾಕೆ ಕುಡಿಯುತ್ತಾರೆ?, ಅವರಲ್ಲಿ ಏನು ನೋವಿದೆ? ಎಂಬುದನ್ನು ಚಿತ್ರದಲ್ಲಿ ತೋರಿಸಿದ್ದೇವೆ’ ಎಂದರು ನಿರ್ದೇಶಕ.

ಲಿಖಿತ್ ಚಿತ್ರದ ನಾಯಕ. ಈಗಾಗಲೇ ಮರಾಠಿ, ಮಲಯಾಳ, ಹಿಂದಿ ಸಿನಿಮಾಗಳಲ್ಲಿ ನಟಿಸಿರುವ ಅಶ್ವಿನಿ ಚಾವರೆ ನಾಯಕಿ. ಗ್ರೇಸ್ ಫಿಲ್ಮ್ ಕಂಪನಿ ಬಂಡವಾಳ ಹೂಡಿದೆ.

ಬಿಡುಗಡೆಗೆ ಸಜ್ಜಾದ ‘ಸರ್ಕಾರಿ ಶಾಲೆ’


ಗುಣ ಹರಿಯಬ್ಬೆ, ಮೇಘಶ್ರೀ

ಗಿಲ್ಲಿ ನಟ ಸದ್ಯ ಬಿಗ್‌ಬಾಸ್ ಮೂಲಕ ಸಾಕಷ್ಟು ಪ್ರಚಾರದಲ್ಲಿದ್ದಾರೆ. ಅದರ ಬೆನ್ನಲ್ಲೇ ಅವರ ಒಂದೊಂದೇ ಸಿನಿಮಾಗಳು ತೆರೆಗೆ ಬರಲು ಸಜ್ಜಾಗುತ್ತಿವೆ. ಗಿಲ್ಲಿ ನಾಯಕನಾಗಿ ನಟಿಸಿರುವ ‘ಸರ್ಕಾರಿ ಶಾಲೆ-H 8’ ಚಿತ್ರದ ಪೋಸ್ಟರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಸಸ್ಪೆನ್ಸ್, ಥ್ರಿಲ್ಲರ್ ಕಥಾಹಂದರ ಹೊಂದಿರುವ ಚಿತ್ರಕ್ಕೆ ಗುಣ ಹರಿಯಬ್ಬೆ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದಾರೆ.

‘ಆರಂಭದಲ್ಲಿ ಕುತೂಹಲ ಕೆರಳಿಸುತ್ತ ಸಾಗುವ ಈ ಚಿತ್ರದ ಕಥೆ ಒಂದು ವಿಗ್ರಹದ ಮೇಲೆ ಸಾಗುತ್ತದೆ. ಬೆಂಗಳೂರು, ಚಿತ್ರದುರ್ಗ, ಶಿರಾ, ಶಿವಮೊಗ್ಗ ಸುತ್ತಮುತ್ತ ಚಿತ್ರೀಕರಣ ನಡೆಸಲಾಗಿದೆ. ಪೋಸ್ಟ್ ಪ್ರೊಡಕ್ಷನ್ ಹಾಗೂ ಸೆನ್ಸಾರ್ ಪ್ರಕ್ರಿಯೆ ಕೂಡ ಮುಗಿದಿದೆ. 2026ರ ಪ್ರಾರಂಭದಲ್ಲಿ ಚಿತ್ರವನ್ನು ಬಿಡುಗಡೆ ಮಾಡುವ ಯೋಜನೆಯಿದೆ’ ಎಂದಿದ್ದಾರೆ ನಿರ್ದೇಶಕ.

ಗಿರಿಚಂದ್ರ ಪ್ರೊಡಕ್ಷನ್ಸ್ ಮೂಲಕ ತೇಜಸ್ವಿನಿ ಎಸ್. ಬಂಡವಾಳ ಹೂಡಿದ್ದಾರೆ. ವಿಜೇತ್ ಮಂಜಯ್ಯ ಅವರ ಸಂಗೀತ ಸಂಯೋಜನೆಯಲ್ಲಿ ಮೂರು ಹಾಡುಗಳಿದ್ದು, ನಟ ಶರಣ್ ಹಾಗೂ ಮೆಹಬೂಬ್ ಸಾಬ್ ಒಂದೊಂದು ಹಾಡನ್ನು ಹಾಡಿದ್ದಾರೆ. ನಾಗೇಂದ್ರ ಪ್ರಸಾದ್ ಸಾಹಿತ್ಯವಿದೆ. ರವಿ ರಾಮದುರ್ಗ ಹಾಗೂ ವೀನಸ್ ಮೂರ್ತಿ ಅವರ ಛಾಯಾಚಿತ್ರಗ್ರಹಣ, ರವಿತೇಜ ಸಿ.ಹೆಚ್. ಅವರ ಸಂಕಲನ ಈ ಚಿತ್ರಕ್ಕಿದೆ. ಗುಣ ಹರಿಯಬ್ಬೆಗೆ ಮೇಘಶ್ರೀ ಜೋಡಿಯಾಗಿದ್ದಾರೆ . ರಾಘವೇಂದ್ರ ರಾಜ್‌ಕುಮಾರ್, ಸುಚೇಂದ್ರ ಪ್ರಸಾದ್, ಜಗಪ್ಪ, ನವಾಜ್, ಸುಶ್ಮಿತ ಜಗಪ್ಪ ಮುಂತಾದವರು ಪ್ರಮುಖ ಪಾತ್ರಗಳಲ್ಲಿದ್ದಾರೆ.

ಕಂಚಿನ ಪದಕಕ್ಕೆ ಭಾರತ–ಅರ್ಜೆಂಟೀನಾ ಸೆಣಸು

ಎಫ್‌ಐಎಚ್ ಜೂನಿಯರ್ ಪುರುಷರ ಹಾಕಿ ವಿಶ್ವಕಪ್ ಸೆಮಿಯಲ್ಲಿ ಜರ್ಮನಿಗೆ ಮಣಿದಿದ್ದ ಆತಿಥೇಯ ತಂಡ


ಭಾರತ ಜೂನಿಯರ್ ಪುರುಷರ ಹಾಕಿ ತಂಡದ ಆಟಗಾರರು ಪಿಟಿಐ ಸಂಗ್ರಹ ಚಿತ್ರ

ಚೆನ್ನೈ (ಪಿಟಿಐ): ಎಫ್‌ಐಎಚ್ ಪುರುಷರ ಜೂನಿಯರ್ ವಿಶ್ವಕಪ್ ಕಿರೀಟವನ್ನು ಮರಳಿ ಪಡೆಯುವ ಭಾರತ ಹಾಕಿ ತಂಡದ ಕನಸು ಕಮರಿರಬಹುದು. ಆದರೆ, ಆತಿಥೇಯ ತಂಡವು ಬುಧವಾರ ನಡೆಯುವ ಕಂಚಿನ ಪದಕದ ಪಂದ್ಯದಲ್ಲಿ ಅರ್ಜೆಂಟೀನಾ ವಿರುದ್ಧ ಉತ್ತಮ ಆಟ ಪ್ರದರ್ಶಿಸಿ ‘ಪೋಡಿಯಂ ಫಿನಿಷ್’ ಮಾಡುವ ಛಲದಲ್ಲಿದೆ.

ಒಂಬತ್ತು ವರ್ಷಗಳ ಹಿಂದೆ (2016) ಲಖನೌದಲ್ಲಿ ಕೊನೆಯ ಬಾರಿಗೆ ಪ್ರಶಸ್ತಿ ಗೆದ್ದಿದ್ದ ಭಾರತ ತಂಡವು ಭಾನುವಾರ ನಡೆದ ಸೆಮಿಫೈನಲ್‌ನಲ್ಲಿ ಏಳು ಬಾರಿಯ ಚಾಂಪಿಯನ್ ಜರ್ಮನಿಯ ಎದುರು 1-5 ಅಂತರದಿಂದ ಪರಾಭವಗೊಂಡಿತ್ತು. ಇದರೊಂದಿಗೆ ಮೂರನೇ ಬಾರಿ ಪ್ರಶಸ್ತಿ ಗೆಲ್ಲುವ ಭಾರತದ ಪ್ರಯತ್ನಕ್ಕೆ ತೆರೆಬಿತ್ತು.

ಜರ್ಮನಿ ವಿರುದ್ಧ ಆಘಾತಕಾರಿ ಸೋಲಿನಿಂದ ಎದೆಗುಂದಿರುವ ಭಾರತ ತಂಡವು ತವರಿನಲ್ಲಿ ನಡೆಯುವ ಟೂರ್ನಿಯಲ್ಲಿ ಕನಿಷ್ಠ ಕಂಚಿನ ಪದಕ ಗೆಲ್ಲುವತ್ತ ಚಿತ್ತ ಹರಿಸಿದೆ. ಹೀಗಾಗಿ, ದಿಗ್ಗಜ ಗೋಲ್‌ಕೀಪರ್ ಪಿ.ಆರ್.ಶ್ರೀಜೇಶ್ ಮಾರ್ಗದರ್ಶನದ ತಂಡವು ಹಿಂದಿನ ಪಂದ್ಯಗಳ ಲೋಪಗಳನ್ನು ಸರಿಪಡಿಸಿಕೊಳ್ಳುವುದು ಅನಿವಾರ್ಯವಾಗಿದೆ.

ಎರಡು ಬಾರಿಯ ಚಾಂಪಿಯನ್ ಅರ್ಜೆಂಟೀನಾ ತಂಡವು ಭಾರತಕ್ಕೆ ಕಠಿಣ ಸವಾಲೊಡ್ಡುವ ಸಾಧ್ಯತೆಯಿದೆ. ಟೂರ್ನಿಯಲ್ಲಿ ಈಗಾಗಲೇ ತನ್ನ ಪರಾಕ್ರಮ ಪ್ರದರ್ಶಿಸಿದೆ. 2005 ಮತ್ತು 2021ರ ಚಾಂಪಿಯನ್ ಅರ್ಜೆಂಟೀನಾ ನಾಲ್ಕರ ಘಟ್ಟದಲ್ಲಿ ಸ್ಪೇನ್ ತಂಡಕ್ಕೆ ಮಣಿದಿತ್ತು. ಆ ತಂಡವೂ ಉನ್ನತ ಮಟ್ಟದಲ್ಲಿ ಅಭಿಯಾನ ಮುಗಿಸುವ ಹುಮ್ಮಸ್ಸಿನಲ್ಲಿದೆ.

ಗುಂಪು ಹಂತದ ಪಂದ್ಯಗಳಲ್ಲಿ ದುರ್ಬಲ ತಂಡಗಳ ವಿರುದ್ಧ ಉತ್ತಮ ಪ್ರದರ್ಶನ ನೀಡಿದ್ದ ಭಾರತದ ಫಾರ್ವರ್ಡ್‌ಗಳು ಜರ್ಮನಿ ವಿರುದ್ಧ ಸತತ ವೈಫಲ್ಯ ಕಂಡರು. ದಿಲ್‌ರಾಜ್ ಸಿಂಗ್, ಅರ್ಷದೀಪ್ ಸಿಂಗ್, ಸೌರಭ್ ಆನಂದ್ ಕುಶ್ವಾಹ, ಗುರ್ಜೋತ್ ಸಿಂಗ್ ಮತ್ತು ಅಜಿತ್ ಯಾದವ್ ಅವರು ಜರ್ಮನಿ ಎದುರು ಹಲವು ಅವಕಾಶಗಳನ್ನು ಸೃಷ್ಟಿಸಿದರು. ಆದರೆ ಅವುಗಳು ಗೋಲುಗಳಾಗಿ ಪರಿವರ್ತನೆಯಾಗದಿರುವುದು ತಂಡವನ್ನು ಚಿಂತೆಗೀಡು ಮಾಡಿದೆ.

ನಾಯಕ ರೋಹಿತ್ ಯಾದವ್ ನೇತೃತ್ವದ ಡಿಫೆಂಡಿಂಗ್ ವಿಭಾಗವು ಅರ್ಜೆಂಟೀನಾ ತಂಡವನ್ನು ನಿಯಂತ್ರಿಸಲು ನೈಜ ಆಟವನ್ನು ಪ್ರದರ್ಶಿಸಬೇಕಿದೆ. ಜರ್ಮನಿ ವಿರುದ್ಧದ ಪಂದ್ಯದಲ್ಲಿ ಮಿಡ್ ಫೀಲ್ಡ್‌ನಲ್ಲಿಯೂ ಒಗ್ಗಟ್ಟಿನ ಕೊರತೆ ಎದ್ದು ಕಾಣುತ್ತಿತ್ತು.

ಮತ್ತೊಂದು ಗಂಭೀರ ವಿಷಯವೆಂದರೆ ಭಾರತದ ಆಟಗಾರರು ‘ಪೆನಾಲ್ಟಿ ಕಾರ್ನರ್’ ಪರಿವರ್ತನೆಯ ಪ್ರಮಾಣ ಹೆಚ್ಚಿಸುವತ್ತ ಗಮನ ಹರಿಸಬೇಕಿದೆ.

ಭಾರತ ತಂಡವು ಕಳೆದೆರಡು ಆವೃತ್ತಿಗಳಲ್ಲಿ ನಾಲ್ಕನೇ ಸ್ಥಾನದೊಂದಿಗೆ ಅಭಿಯಾನ ಮುಗಿಸಿತ್ತು. 2021ರಲ್ಲಿ ಫ್ರಾನ್ಸ್ ವಿರುದ್ಧ 1–3 ರಲ್ಲಿ; 2023ರಲ್ಲಿ ಸ್ಪೇನ್ ವಿರುದ್ಧವೂ ಇದೇ ಅಂತರದಿಂದ ಕಂಚಿನ ಪದಕದ ಸುತ್ತಿನಲ್ಲಿ ಮುಗ್ಗರಿಸಿತ್ತು.

ಕಂಚಿನ ಪದಕದ ಪಂದ್ಯ
ಭಾರತ– ಅರ್ಜೆಂಟೀನಾ (ಸಂಜೆ 5.30)
ಫೈನಲ್ ಪಂದ್ಯ
ಜರ್ಮನಿ– ಸ್ಪೇನ್ (ರಾತ್ರಿ 8)
ಸ್ಥಳ: ಮೇಯರ್ ರಾಧಾಕೃಷ್ಣನ್ ಹಾಕಿ ಕ್ರೀಡಾಂಗಣ, ಚೆನ್ನೈ
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೊ ಹಾಟ್‌ಸ್ಟಾರ್

ಪ್ರಶಸ್ತಿಗೆ ಜರ್ಮನಿ–ಸ್ಪೇನ್ ಹೋರಾಟ ಇಂದು



ಹಾಲಿ ಚಾಂಪಿಯನ್ ಜರ್ಮನಿ ತಂಡವು ಬುಧವಾರ ಪ್ರಶಸ್ತಿ ಸುತ್ತಿನ ಹಣಾಹಣಿಯಲ್ಲಿ ಸ್ಪೇನ್ ತಂಡವನ್ನು ಮಣಿಸಿ ಎಂಟನೇ ಬಾರಿ ಕಿರೀಟ ಮುಡಿಗೇರಿಸಿಕೊಳ್ಳುವ ಉತ್ಸಾಹದಲ್ಲಿದೆ.

ವಿಶ್ವ ಕ್ರಮಾಂಕದಲ್ಲಿ ಅಗ್ರಸ್ಥಾನದಲ್ಲಿರುವ ಜರ್ಮನಿಗೆ ಇದು 10ನೇ ಫೈನಲ್ ಪಂದ್ಯವಾಗಿದೆ. ನಾಲ್ಕನೇ ಕ್ರಮಾಂಕದ ಸ್ಪೇನ್ ತಂಡಕ್ಕೆ ಇದು ಮೊದಲ ಫೈನಲ್. 2023ರಲ್ಲಿ ಸೇರಿ ಎರಡು ಬಾರಿ ಕಂಚಿನ ಪದಕ ಗೆದ್ದಿರುವುದು ಸ್ಪೇನ್ ತಂಡದ ಈವರೆಗಿನ ಉತ್ತಮ ಸಾಧನೆ.

ಸೆಮಿಫೈನಲ್‌ನಲ್ಲಿ ಎರಡನೇ ಕ್ರಮಾಂಕದ ಭಾರತದ ವಿರುದ್ಧ ಪಾರಮ್ಯ ಸಾಧಿಸಿದ್ದ ಜರ್ಮನಿ ಮೇಲ್ನೋಟಕ್ಕೆ ಪ್ರಶಸ್ತಿ ಗೆಲ್ಲುವ ನೆಚ್ಚಿನ ತಂಡ ಎನಿಸಿದೆ. ಸ್ಪೇನ್ ತಂಡವೂ ಟೂರ್ನಿಯಲ್ಲಿ ಅಜೇಯವಾಗಿ ಪ್ರಶಸ್ತಿ ಸುತ್ತಿಗೆ ಮುನ್ನಡೆದಿದೆ. ಕ್ವಾರ್ಟರ್ ಫೈನಲ್‌ನಲ್ಲಿ 4–3ರಿಂದ ನ್ಯೂಜಿಲೆಂಡ್ ವಿರುದ್ಧ; ಸೆಮಿಫೈನಲ್‌ನಲ್ಲಿ 2–1ರಿಂದ ಮೂರನೇ ಕ್ರಮಾಂಕದ ಅರ್ಜೆಂಟೀನಾ ವಿರುದ್ಧ ಪಾರಮ್ಯ ಮೆರೆದಿದೆ. ತನ್ನ ಚೊಚ್ಚಲ ಪ್ರಶಸ್ತಿಯನ್ನು ಎದುರು ನೋಡುತ್ತಿರುವ ತಂಡವು ಜರ್ಮನಿಗೂ ಆಘಾತ ನೀಡುವ ಗುರಿ ಹೊಂದಿದೆ.

ಕರ್ನಾಟಕ–ಮಧ್ಯಪ್ರದೇಶ ಪಂದ್ಯ ಡ್ರಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಲ್‌ರೌಂಡರ್ ಸುವೀಕ್ ಗಿಲ್ (35) ಅವರ ಬ್ಯಾಟಿಂಗ್ ಬಲದಿಂದ ಕರ್ನಾಟಕ ತಂಡವು ವಿಜಯ್ ಮರ್ಚೆಂಟ್ ಟ್ರೋಫಿ (16 ವರ್ಷದೊಳಗಿನವರ) ಎಲೀಟ್ ಡಿ ಗುಂಪಿನ ಪಂದ್ಯದಲ್ಲಿ ಮಧ್ಯಪ್ರದೇಶ ವಿರುದ್ಧ ಮೊದಲ ಇನಿಂಗ್ಸ್ ಮುನ್ನಡೆ ಪಡೆಯಿತು. ಅಂತಿಮ ದಿನವಾದ ಮಂಗಳವಾರ ಪಂದ್ಯ ಡ್ರಾನಲ್ಲಿ ಅಂತ್ಯಗೊಂಡಿತು.

ರಾಯಪುರದ ಶಹೀದ್ ವೀರ ನಾರಾಯಣ ಸಿಂಗ್ ಕ್ರೀಡಾಂಗಣದಲ್ಲಿ ಸೋಮವಾರ 5 ವಿಕೆಟ್‌ಗೆ 243 ರನ್ ಗಳಿಸಿದ್ದ ಕರ್ನಾಟಕ ತಂಡವು 105.1 ಓವರ್‌ಗಳಲ್ಲಿ 314 ರನ್‌ಗಳಿಗೆ ಆಲೌಟ್ ಆಯಿತು. ಅದರೊಂದಿಗೆ, ಮೊದಲ ಇನಿಂಗ್ಸ್‌ನಲ್ಲಿ ಮಹತ್ವದ 22 ರನ್ ಮುನ್ನಡೆ ಪಡೆಯಿತು.

ಬಳಿಕ, ಎರಡನೇ ಇನಿಂಗ್ಸ್‌ನಲ್ಲಿ ಬಿರುಸಿನ ಆಟವಾಡಿದ ಮಧ್ಯಪ್ರದೇಶ ತಂಡವು 31 ಓವರ್‌ಗಳಲ್ಲಿ 4 ವಿಕೆಟ್‌ಗೆ 149 ರನ್ ಗಳಿಸಿ ಡಿಕ್ಲೇರ್ ಮಾಡಿಕೊಂಡಿತು. ನಾಯಕ ಕುಶಾಗ್ರ ನಗರ್ 75 ಎಸೆತಗಳಲ್ಲಿ 79 ರನ್ ಸಿಡಿಸಿದರು. ಗೆಲುವಿಗೆ 128 ರನ್ ಗುರಿ ಪಡೆದ ಆರುಷ್ ಜೈನ್ ಪಡೆಯು ಅಂತ್ಯಕ್ಕೆ 22 ಓವರ್‌ಗಳಲ್ಲಿ 1 ವಿಕೆಟ್‌ಗೆ 65 ರನ್ ಗಳಿಸಿ ಪಂದ್ಯ ಮುಗಿಸಿತು. ಮೊದಲ ಇನಿಂಗ್ಸ್ ಮುನ್ನಡೆ ಪಡೆದ ಕರ್ನಾಟಕ 3 ಅಂಕ ತನ್ನದಾಗಿಸಿಕೊಂಡಿತು. ಮಧ್ಯಪ್ರದೇಶ ತಂಡಕ್ಕೆ 1 ಅಂಕ ಸಿಕ್ಕಿತು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಮಧ್ಯಪ್ರದೇಶ: 292; ಕರ್ನಾಟಕ: 105.1 ಓವರುಗಳಲ್ಲಿ 314 (ಆರ್ಯಸಿಂಹ್ ಚಾವ್ಡಾ 67, ಸುವಿಕ್ ಗಿಲ್ 35; ರಿತೀಕ್ ಪರಬ್ 87ಕ್ಕೆ3, ನೈತಿಕ್ ಜೈನ್ 100ಕ್ಕೆ3); ಎರಡನೇ ಇನಿಂಗ್ಸ್: ಮಧ್ಯಪ್ರದೇಶ: 31 ಓವರುಗಳಲ್ಲಿ 4ಕ್ಕೆ 149 ಡಿ. (ಕುಶಾಗ್ರ ನಗರ್ 79, ಆರ್ಣವ್ ಮಸೀಹ ಔಟಾಗದೇ 33, ಆರುಷ್ ಜೈನ್ 32ಕ್ಕೆ2); ಕರ್ನಾಟಕ: 22 ಓವರುಗಳಲ್ಲಿ 1ಕ್ಕೆ 65 (ಆರ್.ರೋಹಿತ್ ರೆಡ್ಡಿ ಔಟಾಗದೇ 27, ಆರುಷ್ ಜೈನ್ ಔಟಾಗದೇ 30). ಫಲಿತಾಂಶ: ಪಂದ್ಯ ಡ್ರಾ.

ದೆಹಲಿಗೆ ಮಣಿದ ಕರ್ನಾಟಕ ವನಿತೆಯರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಲೋನಿ ಪಿ. ಅವರ ಅಜೇಯ ಅರ್ಧಶತಕದ ಹೊರತಾಗಿಯೂ ಕರ್ನಾಟಕ ತಂಡವು ಬಿಸಿಸಿಐ 23 ವರ್ಷದೊಳಗಿನವರ ಮಹಿಳಾ ಟಿ20 ಟ್ರೋಫಿ ಕ್ರಿಕೆಟ್ ಟೂರ್ನಿಯ ಸೆಮಿಫೈನಲ್‌ನಲ್ಲಿ ದೆಹಲಿ ತಂಡಕ್ಕೆ 10 ರನ್‌ಗಳಿಂದ ಮಣಿಯಿತು.

ಅಹಮದಾಬಾದ್‌ನ ಗುಜರಾತ್ ಕಾಲೇಜ್ ಕ್ರಿಕೆಟ್ ಮೈದಾನದಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ಸಾಂಘಿಕ ಪ್ರದರ್ಶನ ನೀಡಿದ ದೆಹಲಿ ತಂಡವು ಫೈನಲ್ ಪ್ರವೇಶಿಸಿತು. ಗುರುವಾರ ಪ್ರಶಸ್ತಿ ಸುತ್ತಿನ ಪಂದ್ಯದಲ್ಲಿ ಹರಿಯಾಣ ತಂಡವನ್ನು ಎದುರಿಸಲಿದೆ. ಎರಡನೇ ಸೆಮಿಫೈನಲ್‌ನಲ್ಲಿ ಹರಿಯಾಣ ಐದು ವಿಕೆಟ್‌ಗಳಿಂದ ಮುಂಬೈ ತಂಡವನ್ನು ಸೋಲಿಸಿತು.

ಬ್ಯಾಟಿಂಗ್‌ಗೆ ಇಳಿಸಲ್ಪಟ್ಟ ದೆಹಲಿ ತಂಡವು 8 ವಿಕೆಟ್‌ಗೆ 143 ರನ್ ಗಳಿಸಿತು. ವಂಶಿಕಾ ಲೀಲಾ (38;19ಎ), ಶಿವಿ ಶರ್ಮಾ (29;33ಎ), ನಾಯಕಿ ತನಿಶಾ ಸಿಂಗ್ (22;24ಎ) ಉಪಯುಕ್ತ ಕಾಣಿಕೆ ನೀಡಿದರು. ಕರ್ನಾಟಕದ ಬಿ.ಜಿ. ತೇಜಸ್ವಿನಿ (4–0–9–3) ಯಶಸ್ವಿ ಬೌಲರ್ ಎನಿಸಿದರು.

ಸಾಧಾರಣ ಮೊತ್ತದ ಗುರಿ ಪಡೆದ ಕರ್ನಾಟಕ ತಂಡದ ಆರಂಭ ಉತ್ತಮವಾಗಿರಲಿಲ್ಲ. ಈ ಹಿಂದಿನ ಪಂದ್ಯಗಳ ಗೆಲುವಿನಲ್ಲಿ ಮಿಂಚಿದ್ದ ನಿಕಿ ಪ್ರಸಾದ್ (4) ಮೊದಲ ಓವರ್‌ನಲ್ಲೇ ವಿಕೆಟ್ ಒಪ್ಪಿಸಿದರು. ನಾಯಕಿ ರೋಶನಿ ಕಿರಣ್ (27; 23ಎ) ಮತ್ತು ಸಲೋನಿ ಹೊರತುಪಡಿಸಿ ಉಳಿದ ಬ್ಯಾಟರ್‌ಗಳು ನಿರಾಸೆ ಮೂಡಿಸಿದರು. ಏಳು ಆಟಗಾರ್ತಿಯರು ಒಂದಂಕಿ ಮೊತ್ತಕ್ಕೇ ನಿರ್ಗಮಿಸಿದರು. ತಂಡವು 19.3 ಓವರ್‌ಗಳಲ್ಲಿ 133 ರನ್ ಗಳಿಸಿ ಹೋರಾಟ ಮುಗಿಸಿತು.

ಸಂಕ್ಷಿಪ್ತ ಸ್ಕೋರ್: ದೆಹಲಿ: 20 ಓವರ್‌ಗಳಲ್ಲಿ 8 ವಿಕೆಟ್‌ಗೆ 143 (ಶಿವಿ ಶರ್ಮಾ 29, ತನಿಶಾ ಸಿಂಗ್ 22, ಶ್ವೇತಾ ಸೆಹ್ರಾವತ್ 20, ವಂಶಿಕಾ ಲೀಲಾ 38; ಬಿ.ಜಿ.ತೇಜಸ್ವಿನಿ 9ಕ್ಕೆ 3, ಸಲೋನಿ 22ಕ್ಕೆ 1, ನಮಿತಾ ಡಿಸೋಜ 23ಕ್ಕೆ 1); ಕರ್ನಾಟಕ: 19.3 ಓವರ್‌ಗಳಲ್ಲಿ 133 (ರೋಶನಿ ಕಿರಣ್ 27, ಸಲೋನಿ ಪಿ. ಔಟಾಗದೇ 51; ದೀಕ್ಷಾ 17ಕ್ಕೆ 1, ಪ್ರಿಯಾ ಮಿಶ್ರಾ 24ಕ್ಕೆ 2, ಮಧು 26ಕ್ಕೆ 2, ತನಿಶಾ ಸಿಂಗ್ 11ಕ್ಕೆ 1). ಫಲಿತಾಂಶ: ದೆಹಲಿಗೆ 10 ರನ್‌ಗಳ ಜಯ. ಪಂದ್ಯದ ಆಟಗಾರ್ತಿ: ತನಿಶಾ ಸಿಂಗ್

ರಾಷ್ಟ್ರೀಯ ಶಾಲಾ ಚೆಸ್: ಸಿಬಿಎಸ್‌ಇಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಸಿಬಿಎಸ್‌ಇ ಮತ್ತು ಮಹಾರಾಷ್ಟ್ರ ತಂಡಗಳು, ಸರ್ಜಾಪುರದ ಗ್ರೀನ್‌ವುಡ್ ಹೈ ಇಂಟರ್‌ನ್ಯಾಷನಲ್ ಸ್ಕೂಲ್‌ನಲ್ಲಿ ಸೋಮವಾರ ಮುಕ್ತಾಯಗೊಂಡ 69ನೇ ರಾಷ್ಟ್ರೀಯ ಶಾಲಾ ಕ್ರೀಡೆಗಳ ಚೆಸ್ ಟೂರ್ನಿಯಲ್ಲಿ ಕ್ರಮವಾಗಿ ಬಾಲಕರ ಮತ್ತು ಬಾಲಕಿಯರ ವಿಭಾಗದಲ್ಲಿ ಪ್ರಶಸ್ತಿ ಗೆದ್ದುಕೊಂಡವು.

ಸಿಐಎಸ್‌ಸಿಇ ಆಶ್ರಯದಲ್ಲಿ ಟೂರ್ನಿ ನಡೆಯಿತು. ಒಟ್ಟು 64 ತಂಡಗಳು ಭಾಗವಹಿಸಿದ್ದವು. ಸಿಬಿಎಸ್‌ಇ ತಂಡವು 19 ವರ್ಷದೊಳಗಿನ ಬಾಲಕರ ವಿಭಾಗದಲ್ಲಿ ಆರು ಸುತ್ತುಗಳಿಂದ 10 ಮ್ಯಾಚ್ ಪಾಯಿಂಟ್ಸ್ ಪಡೆಯಿತು. ಮಹಾರಾಷ್ಟ್ರ ಸಹ ಇಷ್ಟೇ ಅಂಕ ಪಡೆದರೂ ಟೈಬ್ರೇಕರ್‌ನಲ್ಲಿ ಎರಡನೇ ಸ್ಥಾನ ಪಡೆಯಬೇಕಾಯಿತು. ತಮಿಳುನಾಡು ತಂಡ (9 ಪಾಯಿಂಟ್) ಮೂರನೇ ಸ್ಥಾನ ಗಳಿಸಿತು.

ಬಾಲಕಿಯರ ವಿಭಾಗದಲ್ಲಿ ಮಹಾರಾಷ್ಟ್ರ ತಂಡವು 12 ಮ್ಯಾಚ್ ಪಾಯಿಂಟ್ಸ್ ಗಳಿಸಿ ಚಾಂಪಿಯನ್ ಎನಿಸಿತು. ಸಿಬಿಎಸ್‌ಇ ತಂಡ ಎರಡನೇ ಸ್ಥಾನ ಪಡೆದರೆ, ಸಿಐಎಸ್‌ಸಿಇ ತಂಡವು ಮೂರನೇ ಸ್ಥಾನ ಗಳಿಸಿತು.

ಬಾಲಕರ ವಿಭಾಗದಲ್ಲಿ ಭಾಗವಹಿಸಿದ್ದ 155 ಆಟಗಾರರಲ್ಲಿ 114 ಮಂದಿ ರೇಟಿಂಗ್ ಪಡೆದಿದ್ದು ಕಣ ಪ್ರಬಲವಾಗಿತ್ತು. ಬಾಲಕಿಯರ ವಿಭಾಗದಲ್ಲಿ ಆಡಿದ್ದ 157 ಮಂದಿಯಲ್ಲಿ 81 ಮಂದಿ ರೇಟಿಂಗ್ ಗಳಿಸಿದ್ದರು. ಐಎಂ ದೇವಿಕ್ ವಾಧ್ವಾನ್ (2409), ಸಾಹಿಬ್ ಸಿಂಗ್ (2376) ಬಾಲಕರ ವಿಭಾಗದ ಸ್ಪರ್ಧಿಗಳಲ್ಲಿ ಒಳಗೊಂಡಿದ್ದರು.

ಬಹುಮಾನ ವಿತರಣೆ ಸಮಾರಂಭದಲ್ಲಿ ಗ್ರ್ಯಾಂಡ್‌ಮಾಸ್ಟರ್ ತೇಜ್‌ಕುಮಾರ್, ಸಿಐಎಸ್‌ಸಿಇ ಸ್ಪೋರ್ಟ್ಸ್ ಅಂಡ್ ಗೇಮ್ಸ್ ಮ್ಯಾನೇಜರ್ ಆರ್ನವ್ ಕುಮಾರ್ ಶಾ, ಎಸ್‌ಜಿಎಫ್‌ಐ ಕ್ಷೇತ್ರ ಅಧಿಕಾರಿ ತೃಪ್ತಿ ಅಗರವಾಲ್ ಅತಿಥಿಗಳಾಗಿದ್ದರು.

ಕ್ಯಾಂಡಿಡೇಟ್ಸ್ ಚೆಸ್ ಟೂರ್ನಿಗೆ ಪ್ರಜ್ಞಾನಂದ


ಭಾರತದ ಗ್ರ್ಯಾಂಡ್‌ಮಾಸ್ಟರ್ ಆರ್. ಪ್ರಜ್ಞಾನಂದ

ಬೆಂಗಳೂರು: ಭಾರತದ ಗ್ರ್ಯಾಂಡ್ ಮಾಸ್ಟರ್ ಆರ್. ಪ್ರಜ್ಞಾನಂದ ಅವರು ಮುಂದಿನ ಮಾರ್ಚ್– ಏಪ್ರಿಲ್‌ನಲ್ಲಿ ನಡೆಯಲಿರುವ ಫಿಡೆ ಕ್ಯಾಂಡಿಡೇಟ್ಸ್ ಟೂರ್ನಿಗೆ ಅರ್ಹತೆ ಪಡೆದಿದ್ದಾರೆ. ಚೆನ್ನೈನ ಆಟಗಾರ ಓಪನ್ ವಿಭಾಗದಲ್ಲಿ 2026ರ ಟೂರ್ನಿಗೆ ಅರ್ಹತೆ ಪಡೆದ ಭಾರತದ ಏಕಮಾತ್ರ ಆಟಗಾರ ಎನಿಸಿದ್ದಾರೆ.

2025ರ ಫಿಡೆ ಸರ್ಕೀಟ್ ಟೂರ್ನಿಗಳಲ್ಲಿ ತೋರಿದ ಉತ್ತಮ ಸಾಧನೆಯಿಂದಾಗಿ 20 ವರ್ಷ ವಯಸ್ಸಿನ ಪ್ರಜ್ಞಾನಂದ ಅವರು ಸೈಪ್ರಸ್‌ನಲ್ಲಿ ನಡೆಯಲಿರುವ ಕ್ಯಾಂಡಿಡೇಟ್ಸ್‌ನಲ್ಲಿ ಸ್ಥಾನ ಪಡೆದಿದ್ದಾರೆ. ವಿವಿಧ ಮಾನದಂಡಗಳಿಂದ ಆಯ್ಕೆಯಾಗುವ ಎಂಟು ಮಂದಿ ಮಾತ್ರ ಈ ಟೂರ್ನಿಯಲ್ಲಿ ಆಡುವ ಅವಕಾಶ ಪಡೆಯುತ್ತಾರೆ.

ಈ ವರ್ಷ ನಾಲ್ಕು ಪ್ರಮುಖ ಟೂರ್ನಿಗಳಲ್ಲಿ (ಟಾಟಾ ಸ್ಟೀಲ್ ಮಾಸ್ಟರ್ಸ್, ಸೂಪರ್‌ಬೆಟ್, ಉಝ್‌ಚೆಸ್ ಕಪ್, ಲಂಡನ್ ಚೆಸ್ ಕ್ಲಾಸಿಕ್) ಗೆದ್ದಿರುವ ಪ್ರಜ್ಞಾನಂದ ಎರಡರಲ್ಲಿ (ಸ್ಟೆಪಾನ್ ಅವಗ್ಯಾನ್ ಮೆಮೋರಿಯಲ್ ಮತ್ತು 12ನೇ ಸಿಂಕ್‌ಫೀಲ್ಡ್ ಕಪ್ ಟೂರ್ನಿ) ರನ್ನರ್ ಅಪ್ ಆಗಿದ್ದರು. ಅವರು 115.17 ಫಿಡೆ ಸರ್ಕೀಟ್ ಪಾಯಿಂಟ್ಸ್ ಪಡೆದಿದ್ದಾರೆ. ಅವರ ಸಮೀಪದ ಎದುರಾಳಿಯಾದ ಉಜ್ಬೇಕಿಸ್ತಾನದ ನಾದಿರ್ಬೆಕ್ ಅಬ್ದುಸತ್ತಾರೋವ್ 71.61 ಪಾಯಿಂಟ್ಸ್ ಗಳಿಸಿದ್ದು, ಪ್ರಜ್ಞಾನಂದ ಅವರನ್ನು ಹಿಂದೆಹಾಕುವುದು ಸಾಧ್ಯವಿರಲಿಲ್ಲ. ಹೀಗಾಗಿ ಕ್ಯಾಂಡಿಡೇಟ್ಸ್‌ಗೆ ಏಳನೇಯವರಾಗಿ ಅರ್ಹತೆ ಪಡೆದರು.

ಮಾರ್ಚ್ 28 ರಿಂದ ಏಪ್ರಿಲ್ 16ರವರೆಗೆ ನಿಗದಿಯಾಗಿರುವ ಕ್ಯಾಂಡಿಡೇಟ್ಸ್ ಟೂರ್ನಿಯು ದಾಖಲೆಯ 10 ಲಕ್ಷ ಯುರೊ (ಸುಮಾರು ₹10.50 ಕೋಟಿ) ಬಹುಮಾನ ಹಣ ಹೊಂದಿದೆ. ಓಪನ್ ಮತ್ತು ಮಹಿಳೆಯರ ವಿಭಾಗದ ಟೂರ್ನಿ ಮೊದಲ ಬಾರಿ ಏಕಕಾಲದಲ್ಲಿ ನಡೆಯಲಿದೆ.

ಆಯ್ಕೆಯಾಗಿರುವ ಏಳು ಮಂದಿಯ ಹೆಸರನ್ನು ಫಿಡೆ ಎಕ್ಸ್‌ನಲ್ಲಿ ಪ್ರಕಟಿಸಿದೆ

ಆಯ್ಕೆಯಾಗಿರುವ ಆಟಗಾರರ ವಿವರ: 1. ಅಮೆರಿಕದ ಫ್ಯಾಬಿಯಾನೊ ಕರುವಾನ (2024ರ ಫಿಡೆ ಸರ್ಕೀಟ್‌ನಲ್ಲಿ ಅಗ್ರಸ್ಥಾನ), 2. ನೆದರ್ಲೆಂಡ್ಸ್‌ನ ಅನೀಶ್ ಗಿರಿ (ಫಿಡೆ ಗ್ರ್ಯಾಂಡ್‌ಸ್ವಿಸ್ ವಿಜೇತ), 3. ಜರ್ಮನಿಯ ಮಥಾಯಸ್ ಬ್ಲೂಬಮ್ (ಫಿಡೆ ಗ್ರ್ಯಾಂಡ್ ಸ್ವಿಸ್ ರನ್ನರ್ ಅಪ್). 4. ಉಜ್ಬೇಕಿಸ್ತಾನದ ಜಾವೊಖಿರ್ ಸಿಂಧರೋವ್ (ವಿಶ್ವಕಪ್ ಓಪನ್ ವಿಭಾಗ ವಿಜೇತ), 5. ಚೀನಾದ ವೀ ಯಿ (ವಿಶ್ವಕಪ್ ರನ್ನರ್ ಅಪ್), 6. ರಷ್ಯಾದ ಆ್ಯಂಡ್ರಿ ಇಸಿಪೆಂಕೊ (ವಿಶ್ವಕಪ್ ಮೂರನೇ ಸ್ಥಾನ) ಮತ್ತು 7. ಭಾರತದ ಪ್ರಜ್ಞಾನಂದ (2025ರ ಫಿಡೆ ಸರ್ಕೀಟ್ ಅಗ್ರಸ್ಥಾನ).

2025ರ ಆಗಸ್ಟ್ 1 ರಿಂದ 2026ರ ಜನವರಿ 1ರವರೆಗಿನ ಆರು ತಿಂಗಳ ಅವಧಿಯಲ್ಲಿ ಗರಿಷ್ಠ ಸರಾಸರಿ ರೇಟಿಂಗ್ ಗಳಿಸುವ ಆಟಗಾರ ಎಂಟನೇ ಆಟಗಾರನಾಗಿ ಅರ್ಹತೆ ಪಡೆಯಲಿದ್ದಾರೆ.

ಭಾರತದ ಮೂವರು: ಮಹಿಳೆಯರ ಕ್ಯಾಂಡಿಡೇಟ್ಸ್ ಮಹಿಳೆಯರ ವಿಭಾಗದಲ್ಲಿ ಈ ಬಾರಿ ಭಾರತದಿಂದ ಮೂವರು ಕಣಕ್ಕಿಳಿಯಲಿದ್ದಾರೆ.

ವಿಶ್ವಕಪ್ ಗೆದ್ದ ಆಧಾರದಲ್ಲಿ ದಿವ್ಯಾ ದೇಶಮುಖ್ ಮತ್ತು ರನ್ನರ್ ಅಪ್ ಆಗಿದ್ದ ಕೋನೇರು ಹಂಪಿ ಅರ್ಹತೆ ಪಡೆದಿದ್ದಾರೆ. ಇವರ ಜೊತೆಗೆ ಫಿಡೆ ಮಹಿಳಾ ಗ್ರ್ಯಾಂಡ್ ಸ್ವಿಸ್ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದ ಆಧಾರದಲ್ಲಿ ವೈಶಾಲಿ ಆರ್. (ಪ್ರಜ್ಞಾನಂದ ಅವರ ಅಕ್ಕ) ಕೂಡ ಅರ್ಹತೆ ಪಡೆದಿದ್ದಾರೆ.


ಶ್ರೀವಲ್ಲಿ ಭಮಿಡಿಪಾಟಿ

ಎಸ್‌ಜಿ ಪೈಪರ್ಸ್ ಬೆಂಗಳೂರು ತಂಡ ಶುಭಾರಂಭ

ಅಹಮದಾಬಾದ್ (ಪಿಟಿಐ): ಎಸ್‌ಜಿ ಪೈಪರ್ಸ್ ಬೆಂಗಳೂರು ಮತ್ತು ರಾಜಸ್ಥಾನ್ ರೇಂಜರ್ಸ್ ತಂಡಗಳು, ಮಂಗಳವಾರ ಇಲ್ಲಿನ ಗುಜರಾತ್ ವಿ.ವಿ. ಕ್ರೀಡಾಂಗಣದಲ್ಲಿ ಆರಂಭವಾದ ಟೆನಿಸ್ ಪ್ರೀಮಿಯರ್ ಲೀಗ್‌ನ ಏಳನೇ ಆವೃತ್ತಿಯಲ್ಲಿ ಶುಭಾರಂಭ ಮಾಡಿದವು.

ಎಸ್‌ಜಿ ಪೈಪರ್ಸ್ ತಂಡದ ಶ್ರೀವಲ್ಲಿ ಭಮಿಡಿಪಾಟಿ ಮೊದಲ ಸಿಂಗಲ್ಸ್‌ನಲ್ಲಿ 18–7 ರಿಂದ ಗುರ್ಗಾಂವ್ ಗ್ರ್ಯಾಂಡ್‌ಸ್ಲಾಮರ್ಸ್ ತಂಡದ ಸಹಜಾ ಯಮಲಪಲ್ಲಿ ವಿರುದ್ಧ 18–7ರಲ್ಲಿ ಜಯಗಳಿಸಿದರು. ನಂತರ ಅವರು ರೋಹನ್ ಬೋಪಣ್ಣ ಜೊತೆಗೂಡಿ ಮಿಶ್ರ ಡಬಲ್ಸ್‌ನಲ್ಲಿ 14–11 ರಿಂದ ಸಹಜಾ– ಶ್ರೀರಾಮ್ ಬಾಲಾಜಿ ಜೋಡಿ ವಿರುದ್ಧ ಪ್ರಯಾಸದ ಗೆಲುವು ಪಡೆದರು.

ಪುರುಷರ ಸಿಂಗಲ್ಸ್‌ನಲ್ಲಿ ಡಾನ್ ಇವಾನ್ಸ್ 16–9 ರಿಂದ ಎಸ್‌ಜಿ ಪೈಪರ್ಸ್ ತಂಡದ ರಾಮಕುಮಾರ್ ರಾಮನಾಥನ್ ವಿರುದ್ಧ ಜಯಗಳಿಸಿ ಅಂತರ ಕಡಿಮೆ ಮಾಡಿದರು. ಪುರುಷರ ಡಬಲ್ಸ್‌ನಲ್ಲಿ ಬೋಪಣ್ಣ–ರಾಮನಾಥನ್ ಜೋಡಿ 15–10 ರಿಂದ ಬಾಲಾಜಿ–ಇವಾನ್ಸ್ ಜೋಡಿಯನ್ನು ಮಣಿಸಿತು. ಇದರೊಂದಿಗೆ ಬೆಂಗಳೂರು ತಂಡ 56–44 ರಲ್ಲಿ ಜಯಗಳಿಸಿತು.

ಇನ್ನೊಂದು ಪಂದ್ಯದಲ್ಲಿ ರಾಜಸ್ಥಾನ್ ರೇಂಜರ್ಸ್, ಹಾಲಿ ಚಾಂಪಿಯನ್ ಹೈದರಾಬಾದ್ ಸ್ಟ್ರೈಕರ್ಸ್ ವಿರುದ್ಧ 52–48 ಪಾಯಿಂಟ್‌ಗಳಿಂದ ಜಯಗಳಿಸಿತು.

ಕಾಂಬೋಡಿಯಾ–ಥಾಯ್ಲೆಂಡ್ ಸಂಘರ್ಷ ತೀವ್ರ


ಕಾಂಬೋಡಿಯಾ–ಥಾಯ್ಲೆಂಡ್ ಸಂಘರ್ಷದಿಂದಾಗಿ ಗಡಿ ಪ್ರದೇಶಗಳಿಂದ ಸ್ಥಳಾಂತರಗೊಂಡಿರುವ ಜನರು ದೇವಸ್ಥಾನವೊಂದರಲ್ಲಿ ಆಶ್ರಯ ಪಡೆದರು –ಎಎಫ್‌ಪಿ ಚಿತ್ರ

ಸುರಿನ್ (ಥಾಯ್ಲೆಂಡ್) (ಎಪಿ): ಕಾಂಬೋಡಿಯಾ ಹಾಗೂ ಥಾಯ್ಲೆಂಡ್ ನಡುವೆ ನಡೆಯುತ್ತಿರುವ ಸಂಘರ್ಷ ಮಂಗಳವಾರ ಮತ್ತಷ್ಟು ತೀವ್ರಗೊಂಡಿದೆ. ಎರಡೂ ರಾಷ್ಟ್ರಗಳು ಒಂದರ ವಿರುದ್ಧ ಮತ್ತೊಂದು ತೀವ್ರವಾಗಿ ಹೋರಾಡುವ ಶಪಥ ಮಾಡಿವೆ.

ಗಡಿ ವಿವಾದಕ್ಕೆ ಸಂಬಂಧಿಸಿದಂತೆ ಉಭಯ ರಾಷ್ಟ್ರಗಳ ನಡುವೆ ನಡೆದಿದ್ದ ಕದನವಿರಾಮ ಒಪ್ಪಂದವನ್ನು ಭಾನುವಾರ ಉಲ್ಲಂಘಿಸಲಾಗಿದೆ ಎಂದು ಈ ರಾಷ್ಟ್ರಗಳು ಪರಸ್ಪರ ದೂರಿಕೊಂಡಿದ್ದವು.

ತನ್ನ ಗಡಿ ಪ್ರದೇಶಗಳನ್ನು ಗುರಿಯಾಗಿಸಿ ಕಾಂಬೋಡಿಯಾ ಸೇನೆ ಮೊದಲು ದಾಳಿ ನಡೆಸಿದೆ ಎಂದು ಆರೋಪಿಸಿದ್ದ ಥಾಯ್ಲೆಂಡ್, ಪ್ರತಿಯಾಗಿ ಯುದ್ಧವಿಮಾನಗಳ ಮೂಲಕ ಗಡಿಯಲ್ಲಿ ಸೋಮವಾರ ದಾಳಿ ನಡೆಸಿತ್ತು.

ಯುದ್ಧ ಬಯಸದ ಕಾರಣಕ್ಕೆ ಪ್ರತಿ ದಾಳಿ ನಡೆಸಲಿಲ್ಲ ಎಂದು ಹೇಳಿಕೊಂಡಿದ್ದ ಕಾಂಬೋಡಿಯಾ, ಮಂಗಳವಾರ ತಾನೂ ರಣರಂಗಕ್ಕೆ ಕಾಲಿಟ್ಟಿರುವುದಾಗಿ ಘೋಷಿಸಿದೆ. ‘ಕಾಂಬೋಡಿಯಾ ಶಾಂತಿಯನ್ನು ಬಯಸುತ್ತಿದೆ. ಆದರೆ, ನಮ್ಮ ರಾಷ್ಟ್ರದ ರಕ್ಷಣೆಗೆ ನಾವು ಹೋರಾಟ ಮಾಡಲೇಬೇಕಾದ ಪರಿಸ್ಥಿತಿಯನ್ನು ಸೃಷ್ಟಿಸಲಾಗಿದೆ’ ಎಂದು ಕಾಂಬೋಡಿಯಾದ ಪ್ರಧಾನಿ ಹುನ್ ಸೇನ್ ಹೇಳಿದ್ದಾರೆ.

ಮಂಗಳವಾರ ಎರಡೂ ಕಡೆಯ ಸೇನೆಗಳು ಗಡಿ ಪ್ರದೇಶಗಳನ್ನು ಗುರಿಯಾಗಿಸಿ ದಾಳಿ ನಡೆಸಿವೆ. ಈ ವೇಳೆ ಕಾಂಬೋಡಿಯಾದ 7 ಮಂದಿ ನಾಗರಿಕರು ಮೃತಪಟ್ಟಿದ್ದು, 20 ಮಂದಿ ಗಾಯಗೊಂಡಿದ್ದಾರೆ. ಥಾಯ್ಲೆಂಡ್‌ನಲ್ಲಿ ಒಬ್ಬ ಯೋಧ ಮೃತಪಟ್ಟಿದ್ದು, 29 ಮಂದಿ ಗಾಯಗೊಂಡಿದ್ದಾರೆ ಎಂದು ಆಯಾ ರಾಷ್ಟ್ರಗಳ ಆಡಳಿತಾಧಿಕಾರಿಗಳು ತಿಳಿಸಿದ್ದಾರೆ.

ಕಾಂಬೋಡಿಯಾ ರಾಕೆಟ್ ಮತ್ತು ಡ್ರೋನ್‌ಗಳ ಮೂಲಕ ದಾಳಿ ನಡೆಸುತ್ತಿದೆ ಎಂದು ದೂರಿರುವ ಥಾಯ್ಲೆಂಡ್, ತನ್ನ ನೌಕಾಪಡೆಯೂ ಹೋರಾಟಕ್ಕೆ ಸಜ್ಜುಗೊಳ್ಳುತ್ತಿದೆ ಎಂದು ತಿಳಿಸಿದೆ. ಅಲ್ಲದೇ, ಗಡಿ ಭಾಗದಲ್ಲಿ ಉದ್ವಿಗ್ನತೆ ಹೆಚ್ಚಿರುವ ಕಾರಣ ಅಲ್ಲಿನ ನಿವಾಸಿಗಳನ್ನು ಸ್ಥಳಾಂತರಿಸಲಾಗಿದೆ. 1.25 ಲಕ್ಷ ಜನರಿಗೆ ಆಶ್ರಯ ಒದಗಿಸಬಲ್ಲ 500ಕ್ಕೂ ಅಧಿಕ ತಾತ್ಕಾಲಿಕ ಶಿಬಿರಗಳನ್ನು ಸ್ಥಾಪಿಸಲಾಗಿದೆ ಎಂದೂ ತಿಳಿಸಿದೆ.

ಆಸ್ಟ್ರೇಲಿಯಾ: 16 ವರ್ಷದೊಳಗಿನ ಮಕ್ಕಳಿಗೆ ಸಾಮಾಜಿಕ ಜಾಲತಾಣ ಬಳಕೆ ನಿಷೇಧ

ಮೆಲ್ಬರ್ನ್ (ಎಪಿ): ಆಸ್ಟ್ರೇಲಿಯಾದಲ್ಲಿ 16 ವರ್ಷದೊಳಗಿನ ಮಕ್ಕಳು ಸಾಮಾಜಿಕ ಜಾಲತಾಣಗಳನ್ನು ಬಳಸುವುದನ್ನು ನಿಷೇಧಿಸುವ ಕಾನೂನು ಬುಧವಾರದಿಂದ ಜಾರಿಗೆ ಬರಲಿದೆ.

ಮಕ್ಕಳ ಸಾಮಾಜಿಕ ಜಾಲತಾಣಗಳ ಬಳಕೆಗೆ ಸಂಬಂಧಿಸಿದಂತೆ ಸಮಗ್ರವಾದ ಕಾನೂನು ರೂಪಿಸಿರುವ ಮೊದಲ ದೇಶ ಆಸ್ಟ್ರೇಲಿಯಾ. ಈ ಕಾನೂನಿನ ಮೂಲಕ ಸಾಮಾಜಿಕ ಜಾಲತಾಣ ವೇದಿಕೆಗಳು ಬಳಕೆದಾರರ ವಯಸ್ಸನ್ನು ಖಚಿತಪಡಿಸಿಕೊಳ್ಳುವುದು ಕಡ್ಡಾಯವಾಗಿದೆ. ಇಲ್ಲದಿದ್ದರೆ ಭಾರಿ ದಂಡ ತೆರಬೇಕಾಗುತ್ತದೆ.

‘ಮಕ್ಕಳ ಸುರಕ್ಷತೆಯನ್ನು ಖಾತರಿಪಡಿಸಲು ಸಾಮಾಜಿಕ ಹೊಣೆಗಾರಿಕೆಯನ್ನು ನಿಗದಿಪಡಿಸುವ ಉದ್ದೇಶ ಈ ಕಾನೂನಿಗೆ ಇದೆ’ ಎಂದು ಅಲ್ಲಿನ ಸರ್ಕಾರ ಹೇಳಿದೆ.

ಆದರೆ, ಫೇಸ್‌ಬುಕ್, ಇನ್‌ಸ್ಟಾಗ್ರಾಂ, ಕಿಕ್, ಸ್ನಾಪ್‌ಚಾಟ್, ಟಿಕ್‌ಟಾಕ್, ಯೂಟ್ಯೂಬ್, ಥ್ರೆಡ್ಸ್ ಸೇರಿದಂತೆ ಸಾಮಾಜಿಕ ಜಾಲತಾಣಗಳನ್ನು ಬಳಸದೆ ತಮ್ಮ ಸ್ನೇಹಿತರ ಜತೆಗೆ ಸಂಪರ್ಕದಲ್ಲಿರುವುದು ಹೇಗೆ ಎಂಬ ಚಿಂತೆ ಮಕ್ಕಳನ್ನು ಕಾಡುತ್ತಿದೆ.

‘ಈ ನಿಷೇಧವು ನಮ್ಮ ಮೇಲೆ ಸಕಾರಾತ್ಮಕ ಪರಿಣಾಮ ಬೀರುವುದಿಲ್ಲ. ನಾವು ಸ್ನೇಹಿತರು ಪರಸ್ಪರ ಸಂಪರ್ಕದಲ್ಲಿರಲು ಪರ್ಯಾಯ ಆಯ್ಕೆಗಳು ಸಾಕಷ್ಟಿಲ್ಲ’ ಎಂದು ಮೆಲ್ಬರ್ನ್‌ನ 15 ವರ್ಷದ ಬಾಲಕ ರಿಲೆ ಅಲೆನ್ ಹೇಳಿದ್ದಾರೆ.

ಹಾರ್ದಿಕ್ ಆಲ್‌ರೌಂಡ್ ಆಟಕ್ಕೆ ಜಯದ ರಂಗು

ಟಿ20 ಕ್ರಿಕೆಟ್: ಭಾರತಕ್ಕೆ ದಕ್ಷಿಣ ಆಫ್ರಿಕಾ ಎದುರು 1–0 ಮುನ್ನಡೆ • 100 ವಿಕೆಟ್ ಪೂರೈಸಿದ ಬೂಮ್ರಾ

ಕಟಕ್ (ಪಿಟಿಐ): ಗಾಯದಿಂದಾಗಿ ದೀರ್ಘ ಕಾಲ ವಿಶ್ರಾಂತಿಯಲ್ಲಿದ್ದ ಹಾರ್ದಿಕ್ ಪಾಂಡ್ಯ ಮಂಗಳವಾರ ದಕ್ಷಿಣ ಆಫ್ರಿಕಾ ಎದುರು ತಮ್ಮ ಆಲ್‌ರೌಂಡ್ ಆಟದ ಸಾಮರ್ಥ್ಯವನ್ನು ಮೆರೆದರು. ಆ ಮೂಲಕ ತಾವು ಫಿಟ್ ಆಗಿರುವ ಸಂದೇಶವನ್ನು ರವಾನಿಸಿದರು.

ಅವರ ಅಮೋಘ ಅರ್ಧಶತಕ ಮತ್ತು ಶಿಸ್ತಿನ ದಾಳಿಯಿಂದಾಗಿ ಭಾರತ ತಂಡವು ದಕ್ಷಿಣ ಆಫ್ರಿಕಾ ಎದುರಿನ ಮೊದಲ ಟಿ20 ಪಂದ್ಯದಲ್ಲಿ 101 ರನ್‌ಗಳ ಭಾರಿ ಜಯವನ್ನು ಸಾಧಿಸಿತು. ಐದು ಪಂದ್ಯಗಳ ಸರಣಿಯಲ್ಲಿ 1–0 ಮುನ್ನಡೆ ಸಾಧಿಸಿತು.

ಮೊದಲು ಬ್ಯಾಟಿಂಗ್ ಮಾಡಿದ್ದ ಭಾರತ ತಂಡವು 12 ಓವರ್‌ಗಳಾಗುವಷ್ಟರಲ್ಲಿ 78 ರನ್‌ಗಳಿಗೆ 4 ವಿಕೆಟ್ ಕಳೆದುಕೊಂಡಿತ್ತು. ಈ ಹಂತದಲ್ಲಿ ಹಾರ್ದಿಕ್ ಆರು ಬೌಂಡರಿ ಮತ್ತು ನಾಲ್ಕು ಸಿಕ್ಸರ್‌ಗಳಿದ್ದ 59 ರನ್‌ಗಳನ್ನು 28 ಎಸೆತಗಳಲ್ಲಿ ಗಳಿಸಿದರು. ಇದರಿಂದಾಗಿ ಆತಿಥೇಯ ತಂಡಕ್ಕೆ 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 175 ರನ್‌ಗಳ ಸ್ಪರ್ಧಾತ್ಮಕ ಮೊತ್ತ ಗಳಿಸಲು ಸಾಧ್ಯವಾಯಿತು.

ಗುರಿ ಬೆನ್ನಟ್ಟಿದ ದಕ್ಷಿಣ ಆಫ್ರಿಕಾ ಬಳಗವನ್ನು ಕಟ್ಟಿಹಾಕುವಲ್ಲಿಯೂ ಹಾರ್ದಿಕ್ (16ಕ್ಕೆ1) ತಮ್ಮ ಕಾಣಿಕೆ ನೀಡಿದರು. ಅವರಲ್ಲದೇ ಉಳಿದ ಬೌಲರ್‌ಗಳ ಸಂಘಟಿತ ಆಟವು ಭಾರತ ತಂಡಕ್ಕೆ ಜಯವನ್ನು ಬೇಗನೆ ತಂದುಕೊಟ್ಟಿತು. ಇನಿಂಗ್ಸ್‌ನ ಎರಡನೇ ಎಸೆತದಲ್ಲಿಯೇ ಕ್ವಿಂಟನ್ ಡಿ ಕಾಕ್ ವಿಕೆಟ್ ಗಳಿಸಿದ ಎಡಗೈ ವೇಗಿ ಅರ್ಷದೀಪ್ ಸಿಂಗ್ ಅಮೋಘ ಆರಂಭ ನೀಡಿದರು. ತಮ್ಮ ಇನ್ನೊಂದು ಓವರ್‌ನಲ್ಲಿ ಟ್ರಿಸ್ಟನ್ ಸ್ಟಬ್ಸ್ ವಿಕೆಟ್ ಕೂಡ ಪಡೆದರು.

ಇದೇ ಹಾದಿಯಲ್ಲಿ ಸಾಗಿದ ಜಸ್‌ಪ್ರೀತ್ ಬೂಮ್ರಾ (17ಕ್ಕೆ2), ವರುಣ್ ಚಕ್ರವರ್ತಿ (19ಕ್ಕೆ 2), ಅಕ್ಷರ್ ಪಟೇಲ್ (7ಕ್ಕೆ2) ಮತ್ತು ಶಿವಂ ದುಬೆ (1ಕ್ಕೆ1) ತಂಡವನ್ನು ಗೆಲುವಿನತ್ತ ಮುನ್ನಡೆಸಿದರು. ದಕ್ಷಿಣ ಆಫ್ರಿಕಾ 12.3 ಓವರ್‌ಗಳಲ್ಲಿ 74 ರನ್ ಗಳಿಸಿ ಎಲ್ಲ ವಿಕೆಟ್ ಕಳೆದುಕೊಂಡಿತು. ಟಿ20 ಕ್ರಿಕೆಟ್‌ನಲ್ಲಿ ದಕ್ಷಿಣ ಆಫ್ರಿಕಾ ತಂಡಕ್ಕೆ ಇದು ಅತ್ಯಂತ ಕನಿಷ್ಠ ಮೊತ್ತವಾಗಿದೆ.

ಹಾರ್ದಿಕ್ ಬೀಸಾಟ: ತಂಡವು ಸಂಕಷ್ಟದಲ್ಲಿದ್ದಾಗ ಕ್ರೀಸ್‌ಗೆ ಬಂದ ಹಾರ್ದಿಕ್ ಅವರು ಅಕ್ಷರ್ ಪಟೇಲ್ (10 ರನ್) ಜೊತೆಗೆ 26 ರನ್ ಸೇರಿಸಿದರು. ಅಕ್ಷರ್ ಔಟಾದ ನಂತರ ಹಾರ್ದಿಕ್ ಮತ್ತಷ್ಟು ವೇಗವಾಗಿ ಆಡಿದರು. ಅವರ ಬೀಸಾಟಕ್ಕೆ ಎದುರಾಳಿ ಬೌಲರ್‌ಗಳು ಲೈನ್ ಮತ್ತು ಲೆಂಗ್ತ್ ನಿರ್ವಹಿಸಲು ಪರದಾಡಿದರು. ಹಾರ್ದಿಕ್ ಮತ್ತು ಶಿವಂ ದುಬೆ ಸೇರಿ 6ನೇ ವಿಕೆಟ್ ಜತೆಯಾಟದಲ್ಲಿ 33 ರನ್ ಸೇರಿಸಿದರು.

ಆಫ್‌ಬ್ರೇಕ್ ಬೌಲರ್ ಡೊನವಾನ್ ಫೆರೀರಾ ಅವರ ಎಸೆತದಲ್ಲಿ ಶಿವಂ ದುಬೆ ಕ್ಲೀನ್‌ಬೌಲ್ಡ್ ಆದರು. ಜತೆಯಾಟ ಮುರಿಯಿತು. ಆದರೆ ಹಾರ್ದಿಕ್ ಅವರ ಆಟಕ್ಕೆ ಕಡಿವಾಣ ಹಾಕಲು ಬೌಲರ್‌ಗಳಿಗೆ ಸಾಧ್ಯವಾಗಲಿಲ್ಲ. 25 ಎಸೆತಗಳಲ್ಲಿ ಅರ್ಧಶತಕದ ಗಡಿ ಮುಟ್ಟಿದರು. ಅವರೊಂದಿಗೆ ಜಿತೇಶ್ ಶರ್ಮಾ (ಔಟಾಗದೇ 10) ಕೂಡ ಬೀಸಾಟವಾಡಿದರು. ಮುರಿಯದ ಏಳನೇ ವಿಕೆಟ್ ಜತೆಯಾಟದಲ್ಲಿ 38 ರನ್ ಸೇರಿಸಿದರು. ಹಾರ್ದಿಕ್ ಅವರು ತೊಡೆಸ್ನಾಯುವಿನ ಗಾಯದಿಂದ ಕಳೆದ ಕೆಲವು ತಿಂಗಳುಗಳಿಂದ ಚಿಕಿತ್ಸೆಯಲ್ಲಿದ್ದರು.

ಆರಂಭಿಕ ಆಘಾತ ನೀಡಿದ ಲುಂಗಿ: ಟಾಸ್ ಗೆದ್ದ ದಕ್ಷಿಣ ಆಫ್ರಿಕಾ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಅನುಭವಿ ವೇಗಿ ಲುಂಗಿ ಎನ್‌ಗಿಡಿ (31ಕ್ಕೆ3) ಆರಂಭಿಕ ಆಘಾತ ನೀಡಿದರು. ಲುಂಗಿ ಅವರು ಇನಿಂಗ್ಸ್‌ನ ಮೊದಲ ಓವರ್‌ನ 3ನೇ ಎಸೆತದಲ್ಲಿಯೇ ಶುಭಮನ್ ಗಿಲ್ ವಿಕೆಟ್ ಗಳಿಸಿದರು. ಮೂರನೇ ಓವರ್‌ನಲ್ಲಿ ನಾಯಕ ಸೂರ್ಯಕುಮಾರ್ ಯಾದವ್ (12 ರನ್) ವಿಕೆಟ್ ಕೂಡ ಲುಂಗಿ ಪಾಲಾಯಿತು.

ಆದರೆ ಸಿಡಿಲಮರಿ ಅಭಿಷೇಕ್ ಶರ್ಮಾ (17; 12ಎ) ತಮ್ಮ ಎಂದಿನ ಹೊಡಿಬಡಿ ಆಟವಾಡುತ್ತ ಇನ್ನೊಂದು ಬದಿಯಲ್ಲಿದ್ದರು. ಆದ್ದರಿಂದ ಭರವಸೆ ಬಾಕಿ ಇತ್ತು. ಪವರ್‌ಪ್ಲೇ ಮುಗಿದ ನಂತರ ವೇಗಿ ಲುಥೋ ಸಿಪಾಮ್ಲಾ ಅವರ ಬೌಲಿಂಗ್‌ನಲ್ಲಿ ಅಭಿಷೇಕ್ ಔಟಾದರು.

ಈ ಹಂತದಲ್ಲಿ ತಿಲಕ್ ವರ್ಮಾ (26; 32ಎ) ಮತ್ತು ಅಕ್ಷರ್ ಪಟೇಲ್ (23 ರನ್) ಅವರು ಇನಿಂಗ್ಸ್‌ಗೆ ಸ್ಥಿರತೆ ಒದಗಿಸುವ ಪ್ರಯತ್ನ ಮಾಡಿದರು. ವಿಕೆಟ್ ಉಳಿಸಿಕೊಳ್ಳಲು ಯತ್ನಿಸಿದರು. ಆಗ ಮತ್ತೆ ಚುರುಕಿನ ದಾಳಿ ನಡೆಸಿದ ಲುಂಗಿ ಎಸೆತದಲ್ಲಿ ವರ್ಮಾ ಅವರು ಯಾನ್ಸೆನ್‌ಗೆ ಕ್ಯಾಚಿತ್ತರು.



ಆಕರ್ಷಕ ಅರ್ಧಶತಕ ಸಿಡಿಸಿದ ಹಾರ್ದಿಕ್ ಪಾಂಡ್ಯ

ಎಎಫ್‌ಪಿ ಚಿತ್ರಗಳು

ಸ್ಕೋರ್ ಕಾರ್ಡ್

ಭಾರತ: 6ಕ್ಕೆ 175 (20 ಓವರ್‌ಗಳಲ್ಲಿ)

ಅಭಿಷೇಕ್ ಸಿ ಯಾನ್ಸೆನ್ ಬಿ ಸಿಪಾಮ್ಲಾ 17 (12ಎ, 4x2, 6x1)
ಶುಭಮನ್ ಸಿ ಯಾನ್ಸೆನ್ ಬಿ ಎನ್‌ಗಿಡಿ 4 (2ಎ, 4x1)
ಸೂರ್ಯಕುಮಾರ್ ಸಿ ಮರ್ಕರಂ ಬಿ ಎನ್‌ಗಿಡಿ 12 (11ಎ, 4x1, 6x1)
ತಿಲಕ್ ಸಿ ಯಾನ್ಸೆನ್ ಬಿ ಎನ್‌ಗಿಡಿ 26 (32ಎ, 4x2, 6x1)
ಅಕ್ಷರ್ ಸಿ ಫೆರೀರಾ ಬಿ ಸಿಪಾಮ್ಲಾ 23 (21ಎ, 6x1)
ಹಾರ್ದಿಕ್ ಪಾಂಡ್ಯ ಔಟಾಗದೇ 59 (28ಎ, 4x6, 6x4)
ಶಿವಂ ಬಿ ಫೆರೀರಾ 11 (9ಎ, 4x2)
ಜಿತೇಶ್ ಶರ್ಮಾ ಔಟಾಗದೇ 10 (5ಎ, 6x1)
ಇತರೆ: 13 (ಬೈ 4, ವೈಡ್ 9)
ವಿಕೆಟ್ ಪತನ: 1-5 (ಶುಭಮನ್ ಗಿಲ್, 0.3), 2-17 (ಸೂರ್ಯಕುಮಾರ್ ಯಾದವ್, 2.4), 3-48 (ಅಭಿಷೇಕ್ ಶರ್ಮಾ, 6.3), 4-78 (ತಿಲಕ್ ವರ್ಮಾ, 11.4), 5-104 (ಅಕ್ಷರ್ ಪಟೇಲ್, 13.6), 6-137 (ಶಿವಂ ದುಬೆ, 17.1)
ಬೌಲಿಂಗ್: ಲುಂಗಿ ಎನ್‌ಗಿಡಿ 4–0–31–3, ಮಾರ್ಕೊ ಯಾನ್ಸೆನ್ 4–0–23–0, ಲುಥೊ ಸಿಪಾಮ್ಲಾ 4–0–38–2, ಆ್ಯನ್ರಿಚ್ ನಾಕಿಯಾ 4–0–41–0, ಕೇಶವ್ ಮಹಾರಾಜ್ 2–0–25–0, ಡೊನವಾನ್ ಫೆರೀರಾ 2–0–13–1.

ದಕ್ಷಿಣ ಆಫ್ರಿಕಾ: 74 (12.3 ಓವರ್‌ಗಳಲ್ಲಿ)

ಡಿ ಕಾಕ್ ಸಿ ಅಭಿಷೇಕ್ ಬಿ ಅರ್ಷದೀಪ್ 0 (2ಎ)
ಮರ್ಕರಂ ಸಿ ಪಟೇಲ್ 14 (14ಎ, 4x1, 6x1)
ಸ್ಟಬ್ಸ್ ಸಿ ಜಿತೇಶ್ ಬಿ ಅರ್ಷದೀಪ್ 14 (9ಎ, 4x2)
ಬ್ರೆವಿಸ್ ಸಿ ಯಾದವ್ ಬಿ ಬೂಮ್ರಾ 22 (14ಎ, 4x3, 6x1)
ಮಿಲ್ಲರ್ ಸಿ ಜಿತೇಶ್ ಬಿ ಪಾಂಡ್ಯ 1 (3ಎ)
ಫೆರೀರಾ ಸಿ ಜಿತೇಶ್ ಬಿ ವರುಣ್ 5 (7ಎ)
ಯಾನ್ಸೆನ್ ಬಿ ವರುಣ್ 12 (12ಎ, 6x2)
ಕೇಶವ್ ಸಿ ಜಿತೇಶ್ ಬಿ ಬೂಮ್ರಾ 0 (2ಎ)
ನಾಕಿಯಾ ಬಿ ಪಟೇಲ್ 1 (3ಎ)
ಸಿಪಾಮ್ಲಾ ಸಿ ಅಭಿಷೇಕ್ ಬಿ ದುಬೆ 2 (5ಎ)
ಎನ್‌ಗಿಡಿ ಔಟಾಗದೇ 2 (4ಎ)
ಇತರೆ: 1 (ವೈಡ್ 1)
ವಿಕೆಟ್ ಪತನ: 1-0 (ಕ್ವಿಂಟನ್ ಡಿ ಕಾಕ್, 0.2), 2-16 (ಟ್ರಿಸ್ಟನ್ ಸ್ಟಬ್ಸ್, 2.3), 3-40 (ಏಡೆನ್ ಮರ್ಕರಂ, 5.1), 4-45 (ಡೇವಿಡ್ ಮಿಲ್ಲರ್, 6.1), 5-50 (ಡೊನವಾನ್ ಫೆರೀರಾ, 7.2), 6-68 (ಮಾರ್ಕೊ ಯಾನ್ಸೆನ್, 9.5), 7-68 (ಡೆವಾಲ್ಡ್ ಬ್ರೆವಿಸ್, 10.2), 8-70 (ಕೇಶವ್ ಮಹಾರಾಜ್, 10.5), 9-72 (ಆ್ಯನ್ರಿಚ್ ನಾಕಿಯಾ, 11.2), 10-74 (ಲುಥೋ ಸಿಪಾಮ್ಲಾ, 12.3)
ಬೌಲಿಂಗ್: ಅರ್ಷದೀಪ್ ಸಿಂಗ್ 2–0–14–2, ಜಸ್‌ಪ್ರೀತ್ ಬೂಮ್ರಾ 3–0–17–2, ವರುಣ್ ಚಕ್ರವರ್ತಿ 3–1–19–2, ಅಕ್ಷರ್ ಪಟೇಲ್ 2–0–7–2, ಹಾರ್ದಿಕ್ ಪಾಂಡ್ಯ 2–0–16–1, ಶಿವಂ ದುಬೆ 0.3–0–1–1

ಫಲಿತಾಂಶ: ಭಾರತಕ್ಕೆ 101 ರನ್‌ಗಳ ಗೆಲುವು; 5 ಪಂದ್ಯಗಳ ಸರಣಿಯಲ್ಲಿ 1–0 ಮುನ್ನಡೆ

ಅಕ್ಷತ್‌ಗೆ 5 ವಿಕೆಟ್; ಕರ್ನಾಟಕ ತಂಡಕ್ಕೆ ಮೊದಲ ದಿನದ ಗೌರವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಕ್ಷತ್ ಪ್ರಭಾಕರ್ ಅವರ ಐದು ವಿಕೆಟ್ ಗೊಂಚಲಿನ ನೆರವಿನಿಂದ ಕರ್ನಾಟಕ ತಂಡವು ಕೂಚ್ ಬಿಹಾರ್ ಟ್ರೋಫಿ (19 ವರ್ಷದೊಳಗಿನವರ) ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಒಡಿಶಾ ತಂಡವನ್ನು 170 ರನ್‌ಗಳಿಗೆ ಆಲೌಟ್ ಮಾಡಿ ಮೇಲುಗೈ ಸಾಧಿಸಿತು.



ಅಕ್ಷತ್ ಪ್ರಭಾಕರ್

ಒಡಿಶಾದ ಬಲಾಂಗಿರ್‌ನಲ್ಲಿ ನಡೆಯುತ್ತಿರುವ ಸಿ ಗುಂಪಿನ ಪಂದ್ಯದಲ್ಲಿ ಟಾಸ್ ಗೆದ್ದ ಆತಿಥೇಯ ತಂಡವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಆದರೆ, ಅಕ್ಷತ್ (35ಕ್ಕೆ5) ಹಾಗೂ ಈಶ ಪುತ್ತಿಗೆ (52ಕ್ಕೆ3) ಅವರು ಬಿಗುವಿನ ಬೌಲಿಂಗ್ ಮೂಲಕ ಎದುರಾಳಿ ತಂಡದ ಯೋಜನೆಯನ್ನು ವಿಫಲಗೊಳಿಸಿದರು. ಆರಂಭ ಆಟಗಾರ ಅಭಿರೂಪ್ ದಾಸ್ (39; 109ಎ) ಹೊರತುಪಡಿಸಿ, ಉಳಿದ್ಯಾವ ಬ್ಯಾಟರ್‌ಗಳೂ ಕ್ರೀಸ್‌ನಲ್ಲಿ ಹೆಚ್ಚು ಹೊತ್ತು ನಿಲ್ಲಲಿಲ್ಲ.

ಬಳಿಕ, ಬ್ಯಾಟಿಂಗ್ ಆರಂಭಿಸಿದ ಅನ್ವಯ್ ದ್ರಾವಿಡ್ ಪಡೆಯು, ದಿನದಾಟದ ಅಂತ್ಯಕ್ಕೆ 17 ಓವರ್‌ಗಳಲ್ಲಿ 1 ವಿಕೆಟ್‌ಗೆ 50 ರನ್ ಗಳಿಸಿದೆ. ಧ್ರುವ್ ಕೃಷ್ಣನ್ (ಔಟಾಗದೇ 31) ಹಾಗೂ ಮಣಿಕಂಠ ಶಿವಾನಂದ (ಔಟಾಗದೇ 9) ಬುಧವಾರಕ್ಕೆ ಬ್ಯಾಟಿಂಗ್ ಕಾಯ್ದುಕೊಂಡಿದ್ದಾರೆ.

ಸಂಕ್ಷಿಪ್ತ ಸ್ಕೋರು: ಒಡಿಶಾ: 58.4 ಓವರ್‌ಗಳಲ್ಲಿ 170 (ಅಭಿರೂಪ್ ದಾಸ್ 39, ಆದಿತ್ಯ ರಂಜನ್ ರೈ 31; ಅಕ್ಷತ್ ಪ್ರಭಾಕರ್ 35ಕ್ಕೆ5), ಈಶ ಪುತ್ತಿಗೆ 52ಕ್ಕೆ3. ಕರ್ನಾಟಕ: 17 ಓವರ್‌ಗಳಲ್ಲಿ 1 ವಿಕೆಟ್‌ಗೆ 50 (ಧ್ರುವ್ ಕೃಷ್ಣನ್ ಔಟಾಗದೇ 31, ಮಣಿಕಂಠ ಶಿವಾನಂದ ಔಟಾಗದೇ 9; ಸಿಬುನ್ ನಂದಾ 27ಕ್ಕೆ1).

ಐಪಿಎಲ್ ಬಿಡ್: ಕಣದಲ್ಲಿ 350 ಆಟಗಾರರು

ಮುಂಬೈ (ಪಿಟಿಐ): ಅಬುಧಾಬಿಯಲ್ಲಿ ಇದೇ 16ರಂದು ನಡೆಯಲಿರುವ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ಬಿಡ್ ಪ್ರಕ್ರಿಯೆಯಲ್ಲಿ 350 ಆಟಗಾರರು ಸ್ಥಾನ ಪಡೆದಿದ್ದಾರೆ. ಇವರಲ್ಲಿ 240 ಮಂದಿ ಭಾರತೀಯ ಆಟಗಾರರು.

ಏಕದಿನ ಕ್ರಿಕೆಟ್ ನಿವೃತ್ತಿಯನ್ನು ವಾಪಸ್ ಪಡೆದು ಕಣಕ್ಕೆ ಮರಳಿರುವ ದಕ್ಷಿಣ ಆಫ್ರಿಕಾದ ವಿಕೆಟ್‌ಕೀಪರ್ ಕ್ವಿಂಟನ್ ಡಿ ಕಾಕ್ ಅವರೂ ಈ ಪಟ್ಟಿಯಲ್ಲಿದ್ದಾರೆ. ಅವರಿಗೆ ಮೂಲಬೆಲೆ ಒಂದು ಕೋಟಿ ರೂಪಾಯಿ ನಿಗದಿಪಡಿಸಲಾಗಿದೆ. ಆಸ್ಟ್ರೇಲಿಯಾ ಬ್ಯಾಟರ್ ಸ್ಟೀವ್ ಸ್ಮಿತ್ ಅವರ ಮೂಲಬೆಲೆಯನ್ನು ಎರಡು ಕೋಟಿ ರೂಪಾಯಿಗೆ ನಿಗದಿ ಮಾಡಲಾಗಿದೆ. ಸ್ಮಿತ್ ಅವರು 2021ರಲ್ಲಿ ಕೊನೆಯ ಸಲ ಐಪಿಎಲ್ ಆಡಿದ್ದರು.

ಆಟಗಾರರ ಬಿಡ್ ಪ್ರಕ್ರಿಯೆಗೆ 1,390 ಆಟಗಾರರು ನೋಂದಾಯಿಸಿದ್ದರು. ನಂತರ ಅದು 1005ಕ್ಕೆ ಇಳಿಯಿತು. ಅಂತಿಮ ಪಟ್ಟಿಯಲ್ಲಿ 350 ಆಟಗಾರರು ಉಳಿದಿದ್ದಾರೆ. ಒಟ್ಟು 10 ತಂಡಗಳು 77 ಸ್ಥಾನಗಳಿಗಾಗಿ ಆಟಗಾರರನ್ನು ಖರೀದಿಸಲಿವೆ.

ಹರಾಜು ಪ್ರಕ್ರಿಯೆಯ ಮೊದಲ ಸೆಟ್‌ನಲ್ಲಿ ಭಾರತದ ಪೃಥ್ವಿ ಶಾ, ಸರ್ಫರಾಜ್ ಖಾನ್ ಅವರು ತಲಾ ₹75 ಲಕ್ಷ ಮೂಲಬೆಲೆಯೊಂದಿಗೆ ಇದ್ದಾರೆ. ಆಸ್ಟ್ರೇಲಿಯಾದ ಕ್ಯಾಮರಾನ್ ಗ್ರೀನ್ ಮತ್ತು ಜೇಕ್ ಫ್ರೆಸರ್ ಮೆಕ್‌ಗುರ್ಕ್ ಅವರೂ ಈ ಸಾಲಿನಲ್ಲಿದ್ದಾರೆ. ನ್ಯೂಜಿಲೆಂಡ್‌ನ ಡೆವೊನ್ ಕಾನ್ವೆ, ದಕ್ಷಿಣ ಆಫ್ರಿಕಾದ ಡೇವಿಡ್ ಮಿಲ್ಲರ್ ಅವರು (ಮೂಲಬೆಲೆ ತಲಾ ₹2 ಕೋಟಿ) ಕಣದಲ್ಲಿದ್ದಾರೆ. ಈ ಮೊದಲು ಕೋಲ್ಕತ್ತ ನೈಟ್ ರೈಡರ್ಸ್‌ನಲ್ಲಿದ್ದ ವೆಂಕಟೇಶ್ ಅಯ್ಯರ್ (₹ 2 ಕೋಟಿ) ಅವರಿಗೆ ಬೇಡಿಕೆ ಹೆಚ್ಚುವ ನಿರೀಕ್ಷೆ ಇದೆ.

ಮೂರು ಬಾರಿಯ ಚಾಂಪಿಯನ್ ಕೋಲ್ಕತ್ತ ನೈಟ್ ರೈಡರ್ಸ್ ತಂಡವು ₹64.3 ಕೋಟಿ ಪರ್ಸ್ ಮೌಲ್ಯದೊಂದಿಗೆ ಬಿಡ್‌ನಲ್ಲಿ ಭಾಗವಹಿಸುವುದು. ಐದು ಸಲದ ಚಾಂಪಿಯನ್ ಚೆನ್ನೈ ಸೂಪರ್ ಕಿಂಗ್ಸ್ (₹43.4 ಕೋಟಿ) ಮತ್ತು ಸನ್‌ರೈಸರ್ಸ್ ಹೈದರಾಬಾದ್ (₹25.5 ಕೋಟಿ) ನಂತರದ ಸ್ಥಾನಗಳಲ್ಲಿವೆ.

ಹಾಕಿ: ಡಿವೈಇಎಸ್ ಎ ತಂಡಕ್ಕೆ ಗೆಲುವು

ಬೆಂಗಳೂರು: ಹರೀಶ್ ಎಂ. (19ನೇ ನಿ., 24ನೇ ನಿ. ಹಾಗೂ 48ನೇ ನಿ.) ಅವರ ಹ್ಯಾಟ್ರಿಕ್ ಗೋಲಿನ ನೆರವಿನಿಂದ ಡಿವೈಇಎಸ್ ಎ ತಂಡ ನಾಮಧಾರಿ ಕಪ್ ಹಾಕಿ ಟೂರ್ನಿಯ ಪಂದ್ಯದಲ್ಲಿ ಮಂಗಳವಾರ 5–0ಯಿಂದ ಪೋಸ್ಟಲ್ ತಂಡವನ್ನು ಸುಲಭವಾಗಿ ಮಣಿಸಿತು.

ಡಿವೈಇಎಸ್ ಎ ತಂಡದ ಉತ್ತಪ್ಪ ಎಂ.ಟಿ. (8ನೇ ನಿ.) ಹಾಗೂ ಪೂವಯ್ಯ ಎ.ಎ. (34ನೇ ನಿ.) ಅವರು ತಲಾ ಒಂದು ಗೋಲು ಗಳಿಸಿದರು.

ಇನ್ನೊಂದು ಪಂದ್ಯದಲ್ಲಿ ಆರಂಭಿಕ ಹಿನ್ನಡೆಯಿಂದ ಚೇತರಿಸಿಕೊಂಡ ಕೆನರಾ ಬ್ಯಾಂಕ್ ತಂಡವು 2–1ರಿಂದ ಸಾಯ್ ಎಸ್‌ಟಿಸಿ ಬಿ ತಂಡದ ವಿರುದ್ಧ ರೋಚಕ ಗೆಲುವು ಸಾಧಿಸಿತು. ಕೆನರಾ ಬ್ಯಾಂಕ್ ತಂಡದ ಲಿಖಿತ್ ಬಿ.ಎಂ. (40ನೇ ನಿ.) ಹಾಗೂ ನಿತೇಶ್ ಶರ್ಮಾ (45ನೇ ನಿ.) ತಲಾ ಒಂದು ಗೋಲು ಹೊಡೆದರು. ಸಾಯ್ ಎಸ್‌ಟಿಸಿ ಬಿ ತಂಡದ ಪವನ್ ಡಿ.ಆರ್. (16ನೇ ನಿ.) ಏಕೈಕ ಗೋಲು ಹೊಡೆದರು.

ಮಹಿಳಾ ಕ್ರಿಕೆಟ್: ಭಾರತ ತಂಡಕ್ಕೆ ಕಮಲಿನಿ, ವೈಷ್ಣವಿ ಆಯ್ಕೆ

ನವದೆಹಲಿ (ಪಿಟಿಐ): ಉದಯೋನ್ಮುಖ ಆಟಗಾರ್ತಿಯರಾದ ಗುಣಲನ್ ಕಮಲಿನಿ ಮತ್ತು ವೈಷ್ಣವಿ ಶರ್ಮಾ ಅವರು ಭಾರತ ಮಹಿಳಾ ಟಿ20 ಕ್ರಿಕೆಟ್ ತಂಡದಲ್ಲಿ ಇದೇ ಮೊದಲ ಬಾರಿ ಸ್ಥಾನ ಗಳಿಸಿದ್ದಾರೆ.



ಜಿ. ಕಮಲಿನಿ

ಶ್ರೀಲಂಕಾ ಎದುರು ಇದೇ 21 ರಿಂದ 30ರವರೆಗೆ ನಡೆಯಲಿರುವ ಟಿ20 ಸರಣಿಯಲ್ಲಿ ಆಡಲಿರುವ ತಂಡದಲ್ಲಿ ಅವರಿಬ್ಬರೂ ಸ್ಥಾನ ಗಿಟ್ಟಿಸಿದ್ದಾರೆ. ಸರಣಿಯ ಮೊದಲೆರಡು ಪಂದ್ಯಗಳು ವಿಶಾಖಪಟ್ಟಣದಲ್ಲಿ ನಡೆಯಲಿವೆ. ನಂತರದ ಮೂರು ಪಂದ್ಯಗಳು ತಿರುವನಂತಪುರದಲ್ಲಿ ಆಯೋಜನೆಯಾಗಿವೆ. ಮಂಗಳವಾರ 15 ಆಟಗಾರ್ತಿಯರ ತಂಡ ಪ್ರಕಟಿಸಲಾಗಿದ್ದು, ಹರ್ಮನ್‌ಪ್ರೀತ್ ಕೌರ್ ನಾಯಕಿಯಾಗಿದ್ದಾರೆ. ಸ್ಮೃತಿ ಮಂದಾನ ಉಪನಾಯಕಿಯಾಗಿದ್ದಾರೆ. ವಿಶ್ವಕಪ್ ಫೈನಲ್ ವಿಜಯದ ರೂವಾರಿ ಶಫಾಲಿ ವರ್ಮಾ ಕೂಡ ತಂಡದಲ್ಲಿದ್ದಾರೆ.

17 ವರ್ಷದ ವಿಕೆಟ್‌ಕೀಪರ್–ಬ್ಯಾಟರ್ ಕಮಲಿನಿ ಅವರು ಮಹಿಳಾ ಪ್ರೀಮಿಯರ್ ಲೀಗ್ (ಡಬ್ಲ್ಯುಪಿಎಲ್)ನಲ್ಲಿ ಮುಂಬೈ ಇಂಡಿಯನ್ಸ್ ಪರವಾಗಿ ಒಂಬತ್ತು ಪಂದ್ಯಗಳನ್ನು ಆಡಿದ್ದಾರೆ. 19 ವರ್ಷದ ವೈಷ್ಣವಿ ಅವರು ಡಬ್ಲ್ಯುಪಿಎಲ್ ಹರಾಜು ಪ್ರಕ್ರಿಯೆಯಲ್ಲಿ ಇರಲಿಲ್ಲ.

ಕಮಲಿನಿ ಮತ್ತು ವೈಷ್ಣವಿ ಅವರು ತಂಡದಲ್ಲಿ ಕ್ರಮವಾಗಿ ರಾಧಾ ಯಾದವ್ ಮತ್ತು ಉಮಾ ಚೆಟ್ರಿ ಅವರ ಬದಲಿಗೆ ಸ್ಥಾನ ಪಡೆದಿದ್ದಾರೆ.

ತಂಡ: ಹರ್ಮನ್‌ಪ್ರೀತ್ ಕೌರ್ (ನಾಯಕಿ), ಸ್ಮೃತಿ ಮಂದಾನ (ಉಪನಾಯಕಿ), ದೀಪ್ತಿ ಶರ್ಮಾ, ಸ್ನೇಹ ರಾಣಾ, ಜೆಮಿಮಾ ರಾಡ್ರಿಗಸ್, ಶಫಾಲಿ ವರ್ಮಾ, ಹರ್ಲೀನ್ ಡಿಯೊಲ್, ಅಮನ್ಜೋತ್ ಕೌರ್, ಅರುಂಧತಿ ರೆಡ್ಡಿ, ಕ್ರಾಂತಿ ಗೌಡ, ರೇಣುಕಾ ಸಿಂಗ್ ಠಾಕೂರ್, ರಿಚಾ ಘೋಷ್ (ವಿಕೆಟ್‌ಕೀಪರ್), ಜಿ. ಕಮಲಿನಿ (ವಿಕೆಟ್‌ಕೀಪರ್), ಶ್ರೀಚರಣಿ, ವೈಷ್ಣವಿ ಶರ್ಮಾ.

ಎಫ್‌ಸಿ ಮಂಗಳೂರು ತಂಡಕ್ಕೆ ಜಯ

ಬೆಂಗಳೂರು: ಹಫೀಸ್ ಪಿ.ಎ. ಅವರ ಆಟದ ನೆರವಿನಿಂದ ಎಫ್‌ಸಿ ಮಂಗಳೂರು ತಂಡವು ಬಿಡಿಎಫ್‌ಎ ಬಿ ಡಿವಿಷನ್ ಲೀಗ್ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ ಮಂಗಳವಾರ 2–0 ಗೋಲುಗಳಿಂದ ರಿವೀವ್ ಎಫ್‌ಸಿ ತಂಡವನ್ನು ಮಣಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಬಿ ಗುಂಪಿನ ಪಂದ್ಯದಲ್ಲಿ ಮಂಗಳೂರು ತಂಡದ ಪರ ಹಫೀಸ್ (57ನೇ ಮತ್ತು 80 + 4ನೇ ನಿಮಿಷ) ಎರಡು ಗೋಲು ದಾಖಲಿಸಿದರು.

ಇದೇ ಗುಂಪಿನ ಮತ್ತೊಂದು ಪಂದ್ಯದಲ್ಲಿ ಜುನೊ ಎಫ್‌ಸಿ ತಂಡವು 1–1ರಿಂದ ವಿಲಿಯಂ ಎಫ್‌ಸಿ ತಂಡದೊಂದಿಗೆ ಡ್ರಾ ಸಾಧಿಸಿತು. ಜುನೊ ಪರ ಪೃಥ್ವಿ ಜಿ (16ನೇ) ಮತ್ತು ವಿಲಿಯಂ ಪರ ಧನಂಜಯ ಎ. (23ನೇ) ಗೋಲು ಗಳಿಸಿದರು.